ಭಾನುವಾರ, ಮೇ 18, 2025 | ₹ 7.00
www.prajavani.net
prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಓದುಗರ ಗಮನಕ್ಕೆ
ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ.


93ನೇ
ಜನ್ಮದಿನ
18.05.2025 ಭಾನುವಾರ
ಡಾ|| ಸಿ.ಎನ್.ಮಂಜುನಾಥ್
ಸಂಸದರು
ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ
ಎಂ. ಕೃಷ್ಣಪ್ಪ
ಶಾಸಕರು
ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ
ಭಾರತದ ಹೆಮ್ಮೆಯ ಮಣ್ಣಿನಮಗ, ರಾಷ್ಟ್ರಕಂಡ ಮಹಾನ್ ಮುತ್ಸದ್ದಿ
ಸನ್ಮಾನ್ಯ ಶ್ರೀ
ಹೆಚ್.ಡಿ ದೇವೇಗೌಡ
ಅಪ್ಪಾಜಿ ಅವರಿಗೆ
ಜನ್ಮದಿನದ ಹಾರ್ದಿಕ ಶುಭಾಶಯಗಳು
ಇಳಿ ವಯಸ್ಸಿನಲ್ಲೂ ಹೋರಾಟ ಎಂದರೆ ಪುಟಿದೇಳುವ ಹೆಚ್.ಡಿ. ದೇವೇಗೌಡ ಅಪ್ಪಾಜಿ ಅವರು ಭಾರತದ ಮುತ್ಸದ್ದಿ ರಾಜಕಾರಣಿ. ಪ್ರಧಾನಿ ಹುದ್ದೆ ಅಲಂಕರಿಸಿದ ಮೊದಲ ಕನ್ನಡಿಗ. ಸುದೀರ್ಘ ರಾಜಕೀಯ ಜೀವನದಲ್ಲಿ ಅವರು ಚಳವಳಿ, ಹೋರಾಟ, ಅಧಿಕಾರ- ಈ ಎಲ್ಲದರ ಮೂಲಕ ಶ್ರಮಿಸಿದ್ದು ಈ ದೇಶವಾಸಿಗಳ ಕಲ್ಯಾಣಕ್ಕಾಗಿ, ಅವರ ನಾಡು, ನುಡಿಯೆಡೆಗಿನ ಬದ್ಧತೆ; ರೈತರು, ಬಡವರ ಬದುಕು ಹಸನುಗೊಳಿಸಲು ಅವರು ನೀಡಿದ ಕೊಡುಗೆ ಅನನ್ಯ, ಅನುಪಮ; ನಿಜಾರ್ಥದಲ್ಲಿ ಅವರು ದೇಶ ಕಂಡ ಏಕೈಕ 'ಮಣ್ಣಿನ ಮಗ'. ಇನ್ನೂ ದೀರ್ಘಕಾಲ ಆಯುರಾರೋಗ್ಯದಿಂದ ಬಾಳಿಬದುಕಿ, ನಮ್ಮೆಲ್ಲರ ಶ್ರೇಯೋಭಿವೃದ್ಧಿಗೆ ಮಾರ್ಗದರ್ಶನ ನೀಡಲಿ. ಅವರ ಆಶೀರ್ವಾದ ಎಂದೆಂದಿಗೂ ನಮ್ಮ ಮೇಲಿರಲಿ ಎಂದು ಹೃದಯಪೂರ್ವಕವಾಗಿ ಪ್ರಾರ್ಥಿಸುತ್ತೇವೆ.
ಶ್ರೀ ಗೊಟ್ಟಿಗೆರೆ ಮಂಜಣ್ಣ
ಪ್ರಧಾನ ಕಾರ್ಯದರ್ಶಿ
ರಾಜ್ಯ ಯುವ ಜನತಾದಳ, ಜೆಡಿಎಸ್
ಶ್ರೀ ಜಿ.ಆರ್. ಸುನಿಲ್ ಕುಮಾರ್
ಬಿಬಿಎಂಪಿ, ಗ್ರಾಪಂ ಮತ್ತು ತಾಪಂ
ಮಾಜಿ ಸದಸ್ಯರು, ಉತ್ತರಹಳ್ಳಿ
ವಿಧಾನಸಭಾ ಕ್ಷೇತ್ರ
ಶ್ರೀ ಬಿ.ಎನ್. ಕುಮಾರ್
ಬಸವನಪುರ
ಶುಭ ಕೋರುವವರು: ಗೊಟ್ಟಿಗೆರೆ ಮಂಜಣ್ಣ ಅಭಿಮಾನಿಗಳ ಬಳಗ

ಭಾನುವಾರ, ಮೇ 18, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 137 | ಪುಟ 28
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಶಸ್ತ್ರ ಪಡೆಗಳಿಗೆ ಬೆಂಬಲ

ಭಾರತೀಯ ಸಶಸ್ತ್ರ ಪಡೆಗಳಿಗೆ ಬೆಂಬಲ ಸೂಚಿಸಲು ಅಸ್ಸಾಂನ ಶಿವಸಾಗರ ನಗರದಲ್ಲಿ ಶನಿವಾರ ಬೃಹತ್ 'ತಿರಂಗಾ ಯಾತ್ರೆ' ಹಮ್ಮಿಕೊಳ್ಳಲಾಗಿತ್ತು



ತರೂರ್‌ಗೆ ನೇತೃತ್ವ: ಕಾಂಗ್ರೆಸ್ ಕಿಡಿ

ಉಗ್ರವಾದ ಕುರಿತ ಭಾರತದ ನಿಲುವು ವಿವರಿಸಲು ವಿದೇಶಗಳಿಗೆ ಸರ್ವಪಕ್ಷಗಳ ನಿಯೋಗ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಾಕಿಸ್ತಾನದೊಂದಿಗಿನ ಸಂಘರ್ಷದ ಬೆನ್ನಲ್ಲೇ, ಉಗ್ರವಾದ ಕುರಿತ ತನ್ನ ನಿಲುವನ್ನು ವಿಶ್ವ ಸಮುದಾಯಕ್ಕೆ ವಿವರಿಸುವ ಉದ್ದೇಶದಿಂದ ವಿದೇಶಗಳಿಗೆ ಕಳುಹಿಸಲಿರುವ ಸರ್ವಪಕ್ಷಗಳ ಸದಸ್ಯರ ನಿಯೋಗವೊಂದರ ನೇತೃತ್ವವನ್ನು ಕಾಂಗ್ರೆಸ್ ಸಂಸದ ಶಶಿ ತರೂರ್ ವಹಿಸುವರು ಎಂದು ಕೇಂದ್ರ ಸರ್ಕಾರ ಶನಿವಾರ ಪ್ರಕಟಿಸಿದೆ.

ನಿಯೋಗದ ಭಾಗವಾಗುವುದಕ್ಕಾಗಿ ತನ್ನ ನಾಯಕರ ಪಟ್ಟಿಯನ್ನು ಕಾಂಗ್ರೆಸ್ ಪಕ್ಷ ಕೇಂದ್ರ ಸರ್ಕಾರಕ್ಕೆ ಕಳುಹಿಸಿ-ತ್ತಾದರೂ, ಆ ಪಟ್ಟಿಯಲ್ಲಿ ತರೂರ್ ಅವರ ಹೆಸರು ಇರಲಿಲ್ಲ. ಆದಾಗ್ಯೂ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ತರೂರ್ ಅವರನ್ನು ಆಯ್ಕೆ ಮಾಡಿರುವುದು, ಕಾಂಗ್ರೆಸ್ ಹಾಗೂ ಬಿಜೆಪಿ ನಡುವಿನ ಜಟಾಪಟಿಗೆ ಕಾರಣವಾಗಿದೆ.

ಒಟ್ಟು ಏಳು ನಿಯೋಗಗಳನ್ನು ವಿವಿಧ ದೇಶಗಳಿಗೆ ಕಳುಹಿಸಲಾಗು-ತ್ತಿದೆ. ಈ ನಿಯೋಗಗಳ ನೇತೃತ್ವ ವಹಿಸುವ ಸಂಸದರನ್ನು ಆಯ್ಕೆ ಮಾಡಲಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಪ್ರಕಟಣೆಯಲ್ಲಿ ತಿಳಿಸಿದೆ.

ಕಾಂಗ್ರೆಸ್ ಆಕ್ರೋಶವೇಕೆ?: ಸರ್ವಪಕ್ಷಗಳ ಸಂಸದರು ಇರುವ ಏಳು ನಿಯೋಗಗಳು ವಿದೇಶಗಳಿಗೆ ಭೇಟಿ ನೀಡಲಿವೆ ಎಂದು ಕೇಂದ್ರ ಸರ್ಕಾರ ಘೋಷಿಸಿದಾಗ, ಕೇಂದ್ರದ ಈ ನಡೆ ಕುರಿತು ಕಾಂಗ್ರೆಸ್ ಆಕ್ರೋಶ ಹೊರಹಾಕಿದೆ.

ಕೇಂದ್ರವು ನಿಯೋಗದ ಸದಸ್ಯರ ಹೆಸರುಗಳನ್ನು ಪ್ರಕಟಿಸಿರಲಿಲ್ಲ. ಆದರೆ, ತರೂರ್ ಅವರಿಗೆ ನಿಯೋಗವೊಂದರ ನೇತೃತ್ವ ವಹಿಸಿದ ಕೇಂದ್ರದ ನಡೆ ಕಾಂಗ್ರೆಸ್ ಕೆರಳುವಂತೆ ಮಾಡಿದೆ.

'ಪಕ್ಷದೊಂದಿಗೆ ಸಮಾಲೋಚನೆ ನಡೆಸದೆಯೇ ತರೂರ್ ಅವರನ್ನು ನಿಯೋಗವೊಂದರ ನಾಯಕರಾಗಿ ಘೋಷಿಸಿದ್ದು ನಿರಾಸೆ ಮೂಡಿಸಿದೆ' ಎಂದೂ ಕಾಂಗ್ರೆಸ್ ಪ್ರತಿಕ್ರಿಯಿಸಿದೆ.

'ತಮಗೆ ನಿಯೋಗವೊಂದರ ಸಾರಥ್ಯ ವಹಿಸಿರುವ ಕುರಿತು ಕೇಂದ್ರ ಸರ್ಕಾರ ಯೋಜಿಸಿದೆ ಎಂಬ ಬಗ್ಗೆ ತರೂರ್ ಅವರು ಪಕ್ಷಕ್ಕೆ ಮಾಹಿತಿ ನೀಡಿರಲಿಲ್ಲ ಅಥವಾ ಈ ಜವಾಬ್ದಾರಿ ಒಪ್ಪಿಕೊಳ್ಳುವ ಮುನ್ನ ಪಕ್ಷದ ಅನುಮತಿ ಪಡೆದಿರಲಿಲ್ಲ' ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ಮತ್ತೊಂದೆಡೆ, ನಿಯೋಗದ ಭಾಗವಾಗುವಂತೆ ಸಲ್ಮಾನ್ ಖುರ್ಷಿದ್ ಹಾಗೂ ಮನೀಷ್ ತಿವಾರಿ ಅವರಿಗೂ ಕೇಂದ್ರ ಸರ್ಕಾರ ಕೋರಿತ್ತು. ಈ ಇಬ್ಬರ ಹೆಸರು ಕೂಡ ಕಾಂಗ್ರೆಸ್ ನೀಡಿದ್ದ ಪಟ್ಟಿಯಲ್ಲಿ ಇರಲಿಲ್ಲ.

'ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಹಾಗೂ ಲೋಕಸಭೆಯಲ್ಲಿ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರೊಂದಿಗೆ ಸಚಿವ ಕಿರಣ್ ರಿಜಿಜು ಮಾತನಾಡಿದರು. ನಂತರ, ಪಕ್ಷವು ಆನಂದ ಶರ್ಮಾ, ಗೌರವ್ ಗೋಗೊಯಿ, ಸೈಯದ್ ನಾಸೀರ್ ಹುಸೇನ್ ಹಾಗೂ ರಾಜಾ ಬ್ರಾರ್ ಅವರ ಹೆಸರು ಸೂಚಿಸಿತ್ತು' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

ಆದರೆ, ಪಕ್ಷ ನೀಡಿದ್ದ ಪಟ್ಟಿಯಲ್ಲಿ ತರೂರ್ ಅವರ ಹೆಸರು ಇಲ್ಲದಿದ್ದ ಬಗ್ಗೆ ಅವರು ಯಾವುದೇ ವಿವರಣೆ ನೀಡಿಲ್ಲ.

'ಕೇಂದ್ರದ ಮನವಿಯಂತೆ ಈ ನಾಲ್ವರು ಸಂಸದರ ಹೆಸರುಗಳನ್ನು ಶುಕ್ರವಾರ ಮಧ್ಯಾಹ್ನವೇ ಸಚಿವ ರಿಜಿಜು ಅವರಿಗೆ ಖರ್ಗೆ ನೀಡಿದ್ದರು. ಈಗ ಪಕ್ಷವು ಪಟ್ಟಿಯನ್ನು ಬದಲಿಸುವುದಿಲ್ಲ. ಇತರರ ವಿರುದ್ಧ ಕ್ರಮವನ್ನೂ ತೆಗೆದು-ಕೊಳ್ಳುವುದಿಲ್ಲ' ಎಂದು ಹೇಳಿದ್ದಾರೆ.



ಜೈರಾಮ್ ವಾಗ್ದಾಳಿ

ಸರ್ವಪಕ್ಷಗಳ ನಿಯೋಗದ ನೇತೃತ್ವ ವಹಿಸಲು ಪಕ್ಷದ ಸಂಸದ ಶಶಿ ತರೂರ್ ಅವರ ಹೆಸರನ್ನು ಕೇಂದ್ರ ಸರ್ಕಾರ ಘೋಷಣೆ ಮಾಡಿದರೆ, ಮತ್ತೊಂದೆಡೆ, ತರೂರ್ ವಿರುದ್ಧ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಶನಿವಾರ ವಾಗ್ದಾಳಿ ನಡೆಸಿದ್ದಾರೆ.

ಅಲ್ಲದೇ, ಈ ಇಬ್ಬರು ನಾಯಕರು ನೀಡಿರುವ ಹೇಳಿಕೆಗಳು, ತರೂರ್ ಮತ್ತು ಕಾಂಗ್ರೆಸ್ ಪಕ್ಷದ ನಡುವಿನ ಕಂದಕ ದೊಡ್ಡದಾಗುತ್ತಿರುವುದನ್ನು ಸೂಚಿಸುತ್ತದೆ ಎನ್ನಲಾಗಿದೆ.

'ಪ್ರಜಾತಂತ್ರದಲ್ಲಿ, ಸರ್ಕಾರವು ನಿಯೋಗವೊಂದರ ಭಾಗವಾಗಿ ಸಂಸದರನ್ನು ಕಳುಹಿಸಲು ಬಯಸಿದಾಗ, ಸಂಸದರು ತಾವು ಪ್ರತಿನಿಧಿಸುವ ಪಕ್ಷದ ಅನುಮತಿ ಪಡೆಯಬೇಕು. ಅಲ್ಲದೇ, ಸಂಬಂಧಪಟ್ಟ ಪಕ್ಷದೊಂದಿಗೆ ಸಮಾಲೋಚನೆ ನಡೆಸದೇ ಸರ್ಕಾರವು ಆ ಪಕ್ಷದ ಸಂಸದರನ್ನು ನಿಯೋಗದ ಸದಸ್ಯರನ್ನಾಗಿ ಮಾಡಬಾರದು' ಎಂದು ಜೈರಾಮ್ ರಮೇಶ್ ಹೇಳಿದ್ದಾರೆ. 'ತರೂರ್ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುತ್ತದೆಯೇ' ಎಂಬ ಪ್ರಶ್ನೆಗೆ ಅವರು ಉತ್ತರಿಸಿಲಿಲ್ಲ.

ಕಾಂಗ್ರೆಸ್ ಪಕ್ಷ ಗಂಗಾ ನದಿ ಇದ್ದಂತೆ. ಇದು ಹಲವು ಉಪನದಿಗಳನ್ನು ಹೊಂದಿದೆ. ಕೆಲವು ಬತ್ತಿ ಹೋದರೆ, ಇನ್ನೂ ಕೆಲವು ಮಲಿನಗೊಳ್ಳುತ್ತವೆ. 'ಕಾಂಗ್ರೆಸ್ ಪಕ್ಷದಲ್ಲಿ ಇರುವುದಕ್ಕೂ, ಕಾಂಗ್ರೆಸ್ಸಿಗನಾಗುವುದಕ್ಕೂ ವ್ಯತ್ಯಾಸ ಇದೆ'

ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ



ತರೂರ್ ತಿರುಗೇಟು

'ಕಾಂಗ್ರೆಸ್ ನೀಡಿದ್ದ ಪಟ್ಟಿಯಲ್ಲಿ ನಿಮ್ಮ ಹೆಸರು ಇರಲಿಲ್ಲ. ಇದರಿಂದ ನಿಮಗೆ ಅವಮಾನ ಮಾಡಿದಂತಾಗಲಿಲ್ಲವೇ' ಎಂಬ ಪ್ರಶ್ನೆಗೆ,'ನನ್ನನ್ನು ಯಾರೂ ಅಷ್ಟು ಸುಲಭವಾಗಿ ಅವಮಾನಿಸಲು ಸಾಧ್ಯ ಇಲ್ಲ' ಎಂದು ಶಶಿ ತರೂರ್ ಉತ್ತರಿಸಿದ್ದಾರೆ.

'ನನ್ನ ಹೆಸರು ಸೂಚಿಸುವುದು ಅಥವಾ ಬಿಡುವುದು ಸರ್ಕಾರ ಮತ್ತು ಪಕ್ಷದ ನಡುವಿನ ವಿಚಾರ. ಇದು ರಾಷ್ಟ್ರೀಯ ಕರ್ತವ್ಯ ಎಂಬ ಕಾರಣಕ್ಕೆ ಸರ್ಕಾರದ ಆಹ್ವಾನ ಸ್ವೀಕರಿಸಿದ್ದೇನೆ' ಎಂದು ತಿರುವನಂತಪುರದಲ್ಲಿ ಪ್ರತಿಕ್ರಿಯಿಸಿದ್ದಾರೆ.

'ಸರ್ವಪಕ್ಷಗಳ ನಿಯೋಗದ ನೇತೃತ್ವ ವಹಿಸುವಂತೆ ಕೇಂದ್ರ ನೀಡಿರುವ ಆಹ್ವಾನ ಒಪ್ಪಿಕೊಂಡಿರುವ ಕುರಿತು ನಾನು ಪಕ್ಷಕ್ಕೆ ಈಗಾಗಲೇ ತಿಳಿಸಿದ್ದೇನೆ. ದೇಶ ಉಳಿದರೆ ಮಾತ್ರ ನಾವು ರಾಜಕೀಯ ಮಾಡಬಹುದು' ಎಂದು ತಿರುಗೇಟು ನೀಡಿದ್ದಾರೆ.

ಸರ್ವಪಕ್ಷ ನಿಯೋಗದ ನೇತೃತ್ವ ವಹಿಸುವಂತೆ ಕೇಂದ್ರ ಆಹ್ವಾನ ಕೊಟ್ಟಿದ್ದು ನನಗೆ ಗೌರವದ ವಿಚಾರ. ರಾಷ್ಟ್ರೀಯ ಹಿತಾಸಕ್ತಿ ಹಾಗೂ ನನ್ನ ಸೇವೆಯ ಅಗತ್ಯವಿದೆ ಎಂಬ ವಿಚಾರ ಬಂದಾಗ ನಾನು ಹಿಂದಡಿ ಇಡುವುದಿಲ್ಲ. ಜೈ ಹಿಂದ್

ಶಶಿ ತರೂರ್, ಕಾಂಗ್ರೆಸ್ ಸಂಸದ

ತಂಡಗಳಿಗೆ ಯಾರ ನೇತೃತ್ವ?

ಶಶಿ ತರೂರ್ (ಕಾಂಗ್ರೆಸ್) ಅಲ್ಲದೇ, ರವಿಶಂಕರ ಪ್ರಸಾದ್ (ಬಿಜೆಪಿ), ಸಂಜಯಕುಮಾರ್ ಝಾ (ಜೆಡಿಯು), ಬೈಜಯಂತ ಪಾಂಡ (ಬಿಜೆಪಿ), ಕನಿಮೊಳಿ (ಡಿಎಂಕೆ), ಸುಪ್ರಿಯಾ ಸುಳೆ (ಎನ್‌ಸಿಪಿ–ಶರದ್ ಪವಾರ್) ಹಾಗೂ ಶ್ರೀಕಾಂತ ಶಿಂದೆ (ಶಿವಸೇನಾ–ಶಿಂದೆ ಬಣ) ಅವರು ತಲಾ ಒಂದು ನಿಯೋಗದ ನೇತೃತ್ವ ವಹಿಸಲಿದ್ದಾರೆ.



ಇಂತಹ ಮಹತ್ವದ ಸಂದರ್ಭದಲ್ಲಿ ಭಾರತ ಒಟ್ಟಾಗಿ ನಿಲ್ಲಲಿದೆ. ಸರ್ವಪಕ್ಷಗಳ ಏಳು ನಿಯೋಗಗಳು ನಮ್ಮ ಪಾಲುದಾರ ರಾಷ್ಟ್ರಗಳಿಗೆ ಶೀಘ್ರವೇ ತೆರಳಲಿವೆ. ಉಗ್ರವಾದ ಕುರಿತು ಭಾರತ ತಳೆದಿರುವ ಶೂನ್ಯ ಸಹಿಷ್ಣುತೆಯ ಸಂದೇಶವನ್ನು ಈ ನಿಯೋಗಗಳು ಹೊತ್ತೊಯ್ಯಲಿವೆ. ರಾಜಕೀಯ ಹಾಗೂ ಭಿನ್ನಾಭಿಪ್ರಾಯ-ಗಳಿಗೂ ಮೀರಿದ ರಾಷ್ಟ್ರೀಯ ಏಕತೆಯ ಪ್ರತಿಬಿಂಬವಾಗಿ ಈ ನಿಯೋಗಗಳು ನಿಲ್ಲಲಿವೆ

ಕಿರಣ್ ರಿಜಿಜು

ಸಂಸದೀಯ ವ್ಯವಹಾರಗಳ ಸಚಿವ



ಇದು ನನ್ನ ಪಕ್ಷಕ್ಕೆ ಸಂಬಂಧಿಸಿದ ವಿಷಯವಲ್ಲ, ಇದು ಬಹುಮುಖ್ಯವಾದ ಕಾರ್ಯ. ನನಗೆ ವಹಿಸಿರುವ ಜವಾಬ್ದಾರಿಯನ್ನು ಅತ್ಯುತ್ತಮವಾಗಿ ನಿಭಾಯಿಸಲು ಪ್ರಯತ್ನಿಸುತ್ತೇನೆ

ಅಸಾದುದ್ದಿನ್ ಒವೈಸಿ,


ಎಐಎಂಐಎಂ ಸಂಸದ

ವಿಶೇಷ ತನಿಖಾ ತಂಡ ರಚನೆಗೆ ಸುಪ್ರೀಂ ಕೋರ್ಟ್ ಆದೇಶ

'ಕಂದಾಯ ವಶದ ಅರಣ್ಯ ಭೂಮಿ ಹಸ್ತಾಂತರಿಸಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಕಂದಾಯ ಇಲಾಖೆಯ ಸ್ವಾಧೀನದಲ್ಲಿರುವ 'ಅರಣ್ಯ ಭೂಮಿ' ಎಂದು ದಾಖಲಾಗಿರುವ ಭೂಮಿಯನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸುವಂತೆ ಕರ್ನಾಟಕ ಸೇರಿದಂತೆ ಎಲ್ಲ ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.



ಭಾರತದ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ, ನ್ಯಾಯಮೂರ್ತಿ-ಗಳಾದ ಆಗಸ್ಟೀನ್ ಜಾರ್ಜ್ ಮಸಿಹ್ ಮತ್ತು ಕೆ.ವಿನೋದ್ ಚಂದ್ರನ್ ಅವರ ಪೀಠವು, ವಾಣಿಜ್ಯ ಉದ್ದೇಶಗಳಿಗಾಗಿ ಅಮೂಲ್ಯವಾದ ಅರಣ್ಯವನ್ನು ಭೂ ಪರಿವರ್ತಿಸುವಲ್ಲಿ ಭಾಗಿಯಾಗುತ್ತಿರುವ ರಾಜಕಾರಣಿಗಳು, ಅಧಿಕಾರಿಗಳು ಮತ್ತು ಬಿಲ್ಡರ್‌ಗಳ ನಡುವಿನ ಅಪವಿತ್ರ ಮೈತ್ರಿಯನ್ನು ತೀವ್ರವಾಗಿ ಖಂಡಿಸಿದೆ.

ಸಾರ್ವಜನಿಕ ವಿಶ್ವಾಸದ ಸಿದ್ಧಾಂತ ದಡಿಯಲ್ಲಿ ಕಾರ್ಯನಿರ್ವಹಿಸುವ ಕಾರ್ಯಾಂಗವು ನೈಸರ್ಗಿಕ ಸಂಪನ್ಮೂಲ-ಗಳನ್ನು ಬೇರೆಯವರಿಗೆ ನೀಡಲು ಮತ್ತು ಅವುಗಳನ್ನು ಖಾಸಗಿ ಮಾಲೀಕತ್ವಕ್ಕೆ ಅಥವಾ ವಾಣಿಜ್ಯ ಬಳಕೆಗೆ ಪರಿವರ್ತನೆ ಮಾಡಲು ಸಾಧ್ಯವಿಲ್ಲ ಎಂದು ಪೀಠವು ಒತ್ತಿ ಹೇಳಿತು.

'ಅರಣ್ಯೇತರ ಉದ್ದೇಶಗಳಿಗಾಗಿ ಅನೇಕ ಅರಣ್ಯ ಭೂಮಿಗಳನ್ನು ಖಾಸಗಿ ವ್ಯಕ್ತಿಗಳು/ಸಂಸ್ಥೆಗಳಿಗೆ ಹಂಚಿಕೆ ಮಾಡಲಾಗಿದೆ ಮತ್ತು 1996ರ ಡಿಸೆಂಬರ್ 12ರ ನಂತರದ ಯಾವುದೇ ಅಂತಹ ಹಂಚಿಕೆ ಕಾನೂನಿನಲ್ಲಿ ಸಮರ್ಥನೀಯವಲ್ಲ' ಎಂದು ನ್ಯಾಯಪೀಠ ಹೇಳಿತು.

ಕಂದಾಯ ಇಲಾಖೆಯ ಸ್ವಾಧೀನ ದಲ್ಲಿರುವ ಯಾವುದೇ ಮೀಸಲು ಅರಣ್ಯ ಭೂಮಿಯನ್ನು ಅರಣ್ಯ ಉದ್ದೇಶಕ್ಕೆ ಹೊರತುಪಡಿಸಿ ಯಾವುದೇ ಖಾಸಗಿ ವ್ಯಕ್ತಿಗಳು/ಸಂಸ್ಥೆಗಳಿಗೆ ಹಂಚಿಕೆ ಮಾಡಲಾಗಿದೆಯೇ ಎಂಬುದನ್ನು ಪರಿಶೀಲಿಸಲು ಎಲ್ಲ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳು ಮತ್ತು ಎಲ್ಲ ಕೇಂದ್ರಾಡಳಿತ ಪ್ರದೇಶಗಳ ಆಡಳಿತಾಧಿ-ಕಾರಿಗಳು ವಿಶೇಷ ತನಿಖಾ ತಂಡಗಳನ್ನು ರಚಿಸಬೇಕು ಎಂದು ನ್ಯಾಯಪೀಠ ಸೂಚಿಸಿತು. ಈ ಪ್ರಕ್ರಿಯೆಯನ್ನು ಒಂದು ವರ್ಷದೊಳಗೆ ನಡೆಸಬೇಕು ಎಂದು ಪೀಠ ತಾಕೀತು ಮಾಡಿತು. ಜತೆಗೆ, ಅಂತಹ ಭೂಮಿಯನ್ನು ಅರಣ್ಯೀಕರಣದ ಉದ್ದೇಶಕ್ಕಾಗಿ ಮಾತ್ರ ಬಳಸಬೇಕು ಎಂದು ಹೇಳಿತು.

4ನೇ ಪುಟ ನೋಡಿ

ಸರ್ಕಾರದ ವಿರುದ್ಧ ಕ್ರಮದ ಎಚ್ಚರಿಕೆ

ವನ್ಯಜೀವಿ (ಸಂರಕ್ಷಣೆ) ಕಾಯ್ದೆಯಡಿಯಲ್ಲಿ ನಡೆಯುವ ಅಪರಾಧಗಳಿಗೆ ಸಂಬಂಧಪಟ್ಟ ಸರ್ಕಾರ ಮತ್ತು ಅಧಿಕಾರಿಗಳ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಸುಪ್ರೀಂಕೋರ್ಟ್ ಎಚ್ಚರಿಸಿದೆ.

ಪ್ರತ್ಯೇಕ ಪ್ರಕರಣವೊಂದರಲ್ಲಿ ಆದೇಶ ನೀಡಿರುವ ಪೀಠವು, 'ತ್ವರಿತ ನಗರೀಕರಣ, ವಸಾಹತುಶಾಹಿ, ಉದ್ಯಮ ಮತ್ತು ವಿವಿಧ ವಾಣಿಜ್ಯ ಉದ್ದೇಶಗಳಿಗೆ ಭೂಮಿ ಬಳಕೆ ಹೆಚ್ಚಳದಿಂದ ವನ್ಯಜೀವಿ ಪರಿಸರ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದ್ದು, ಅದು ವನ್ಯಜೀವಿ, ಮರ–ಗಿಡಗಳಿಗೆ ಅಪಾಯಕಾರಿಯಾಗಿದೆ.

ಮುಂದೊಂದು ದಿನ ಇವುಗಳು ಅವನತಿ ಹೊಂದುವುದು ಕೂಡ ಸತ್ಯವಾಗುತ್ತದೆ' ಎಂದು ಆತಂಕ ವ್ಯಕ್ತಪಡಿಸಿದೆ.

ವನ್ಯಜೀವಿಗಳ ಚರ್ಮ ಮತ್ತು ಮೂಳೆಯ ಜಪ್ತಿ ಪ್ರಕರಣದಲ್ಲಿ ಇಬ್ಬರು ಅಪರಾಧಿಗಳ ಶಿಕ್ಷೆಯನ್ನು ಪೀಠ ಈ ಪ್ರಕರಣದಲ್ಲಿ ಎತ್ತಿಹಿಡಿದಿತ್ತು.

'1978ರ ಪೂರ್ವದ ಅತಿಕ್ರಮಣಕಾರರಿಗೆ ಆತಂಕ'



'ಸುಪ್ರೀಂ ಕೋರ್ಟ್ ಆದೇಶದಿಂದ ಹಂಗಾಮಿ ಮತ್ತು 1978ರ ಪೂರ್ವದ ಅತಿಕ್ರಮಣಕಾರರು ಹಾಗೂ ಇನ್ನಿತರ ಉದ್ದೇಶಕ್ಕೆ ಅರಣ್ಯ ಭೂಮಿ ಅವಲಂಬಿತರಾಗಿರುವ ಅರಣ್ಯವಾಸಿಗಳು ಆತಂಕಕ್ಕೆ ಒಳಗಾಗಿದ್ದಾರೆ' ಎಂದು ಎಂದು ರಾಜ್ಯ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆ ಅಧ್ಯಕ್ಷ ರವೀಂದ್ರ ನಾಯ್ಕ ಹೇಳಿದರು.

'ಅರಣ್ಯ ಸಂರಕ್ಷಣಾ ಕಾಯ್ದೆ ಜಾರಿಗೆ ಬಂದ ನಂತರ, 1978ರ ಪೂರ್ವದಲ್ಲಿ ಕರ್ನಾಟಕದಲ್ಲಿ 19,348 ಪ್ರಕರಣಗಳಿಗೆ ಸಂಬಂಧಿಸಿ 14,848 ಹೆಕ್ಟೇರ್ ಪ್ರದೇಶ ಗುರುತಿಸಲಾಗಿತ್ತು. ಅದರಂತೆ, 3 ಸಾವಿರಕ್ಕೂ ಮಿಕ್ಕಿ ಹಂಗಾಮಿ ಲಾಗಣೀದಾರರು ವಾರ್ಷಿಕ ಗುತ್ತಿಗೆ ಹಣ ನೀಡಿ ನವೀಕರಣ ಮಾಡಿಲ್ಲ. ಕೇಂದ್ರ ಸರ್ಕಾರದ ಪರವಾನಗಿ ಪಡೆಯದೇ 8 ಸಾವಿರ ಕುಟುಂಬಗಳಿಗೆ ವಸತಿಗಾಗಿ ಆಶ್ರಯ ಪಟ್ಟವನ್ನು ಕಂದಾಯ ಇಲಾಖೆಯು ಅರಣ್ಯ ಭೂಮಿಯನ್ನು ವರ್ಗೀಕರಣ ಮಾಡಿದೆ. ಸುಪ್ರೀಂ ಕೋರ್ಟ್‌ನ ಈ ಆದೇಶದಿಂದ ಅರಣ್ಯವಾಸಿಗಳು ಮುಂದಿನ ಕಾನೂನಾತ್ಮಕ ಸಮಸ್ಯೆಗಳ ಕುರಿತು ಆತಂಕಕ್ಕೆ ಒಳಗಾಗಲು ಕಾರಣವಾಗಿದೆ' ಎಂದು ಅವರು ತಿಳಿಸಿದರು.

ಪಾಕ್ ಪರ ಬೇಹುಗಾರಿಕೆ: ಯೂಟ್ಯೂಬರ್ ಸೆರೆ

ಪ್ರಜಾವಾಣಿ ವಾರ್ತೆ/ಪಿಟಿಐ

ಚಂಡೀಗಢ (ಪಿಟಿಐ): ಪಾಕಿಸ್ತಾನದ ಗುಪ್ತಚರ ಅಧಿಕಾರಿಗಳಿಗೆ ಭಾರತದ ಸೇನಾ ಕಾರ್ಯ ಚಟುವಟಿಕೆಗಳ ಕುರಿತು ಮಾಹಿತಿ ನೀಡಿದ ಆರೋಪದಲ್ಲಿ ಹರಿಯಾಣದ ಯೂಟ್ಯೂಬರ್ ಜ್ಯೋತಿ ಮಲ್ಹೋತ್ರಾ ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಸರ್ಕಾರಿ ರಹಸ್ಯ ಕಾಯ್ದೆ ಮತ್ತು ಭಾರತೀಯ ನ್ಯಾಯಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಮೇ 16ರಂದು ಎಫ್‌ಐಆರ್ ದಾಖಲಿಸಲಾಗಿದೆ.

ಪೊಲೀಸರ ಮುಂದೆ ಎಲ್ಲ ವಿಚಾರಗಳನ್ನು ಹೇಳಿರುವ ಜ್ಯೋತಿ ಅವರನ್ನು ನ್ಯಾಯಾಲಯ ಮುಂದೆ ಹಾಜರುಪಡಿಸಲಾಯಿತು.

ನ್ಯಾಯಾಲಯವು ಜ್ಯೋತಿ ಅವರನ್ನು ಐದು ದಿನಗಳವರೆಗೆ ಪೊಲೀಸ್ ವಶಕ್ಕೆ ನೀಡಿದೆ.

ದೆಹಲಿಯಲ್ಲಿರುವ ಪಾಕಿಸ್ತಾನ ಹೈಕಮಿಷನ್ ಕಚೇರಿಯ ಸಿಬ್ಬಂದಿ ಎಹ್ಸಾನ್ ಉರ್ ರಹೀಮ್ ಅಲಿಯಾಸ್ ಡ್ಯಾನಿಷ್ ಅವರೊಂದಿಗೆ ಜ್ಯೋತಿ ಸಂಪರ್ಕ ಹೊಂದಿದ್ದರು. ಭಾರತದ ಕುರಿತು ಬೇಹುಗಾರಿಕೆ ನಡೆಸುತ್ತಿದ್ದ ಆರೋಪದಲ್ಲಿ ಡ್ಯಾನಿಷ್ ಅವರನ್ನು ಕೇಂದ್ರ ಇದೇ ಮೇ 13ರಂದು ಗಡೀಪಾರು ಮಾಡಿತ್ತು.

ಜ್ಯೋತಿ ಯಾರು?: 'ಟ್ರಾವೆಲ್ ವಿತ್ ಜ್ಯೋ' ಎನ್ನುವ ಯೂಟ್ಯೂಬ್ ಚಾನೆಲ್ ಮೂಲಕ ಪ್ರವಾಸದ ವಿಡಿಯೊಗಳನ್ನು ಮಾಡುತ್ತಿದ್ದ ಜ್ಯೋತಿ ಅವರಿಗೆ 3.77 ಲಕ್ಷ ಮತ್ತು ಇನ್‌ಸ್ಟಾಗ್ರಾಂನಲ್ಲಿ 1.33 ಲಕ್ಷ ಚಂದಾದಾರರಿದ್ದರು.

4ನೇ ಪುಟ ನೋಡಿ

ಐಎಸ್‌ಗೆ ನೆರವು ಇಬ್ಬರ ಬಂಧನ

ನವದೆಹಲಿ (ಪಿಟಿಐ): ಭಯೋತ್ಪಾದಕ ಸಂಘಟನೆ ಐಎಸ್‌ಗೆ (ಐಸಿಸ್) ಸಹಕಾರ ನೀಡಿದ್ದರು ಎನ್ನಲಾದ ಇಬ್ಬರು ಶಂಕಿತರನ್ನು ರಾಷ್ಟ್ರೀಯ ತನಿಖಾ ಸಂಸ್ಥೆ-(ಎನ್‌ಐಎ) ಶನಿವಾರ ಮುಂಬೈ ವಿಮಾನ ನಿಲ್ದಾಣದಲ್ಲಿ ಬಂಧಿಸಿದೆ.

ಅಬ್ದುಲ್ಲಾ ಫಯಾಜ್ ಶೇಖ್ ಅಲಿಯಾಸ್ ಡಯಾಪರ್ ವಾಲ ಮತ್ತು ತಲ್ಹಾ ಖಾನ್ ಬಂಧಿತರು. 2023ರಿಂದಲೂ ಈ ಇಬ್ಬರು ತಲೆ-ಮರೆಸಿಕೊಂಡಿದ್ದರು. ಇಬ್ಬರ ವಿರುದ್ಧ ಮುಂಬೈನ ಎನ್‌ಐಎ ನ್ಯಾಯಾಲಯ ಜಾಮೀನು ರಹಿತ ವಾರೆಂಟ್ ಜಾರಿ ಮಾಡಿತ್ತು. ಇವರ ಬಗ್ಗೆ ಮಾಹಿತಿ ಕೊಟ್ಟವರಿಗೆ ₹3 ಲಕ್ಷ ಬಹುಮಾನ ಘೋಷಿಸಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಹಾರಾಷ್ಟ್ರದ ಪುಣೆಯಲ್ಲಿ ಕಚ್ಚಾ ಬಾಂಬ್ ತಯಾರಿಸಿ ಪರೀಕ್ಷೆ ನಡೆಸಿದ್ದ 2023ರ ಪ್ರಕರಣದಲ್ಲಿ ಇಬ್ಬರೂ ಪೊಲೀಸರಿಗೆ ಬೇಕಾಗಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶುಕ್ರವಾರ ರಾತ್ರಿ ಜಕಾರ್ತದಿಂದ ಇಬ್ಬರೂ ಮುಂಬೈ ವಿಮಾನ ನಿಲ್ದಾಣ ಮೂಲಕ ಭಾರತಕ್ಕೆ ವಾಪಸಾಗುತ್ತಿದ್ದಾಗ ಬಂಧಿಸಲಾಯಿತು ಎಂದಿದ್ದಾರೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ



21ರಂದು ಸೌಂದರ್ಯ ವೆಂಕಟರಮಣಸ್ವಾಮಿ ಬ್ರಹ್ಮಕಲಶೋತ್ಸವ

ಪೀಣ್ಯ ದಾಸರಹಳ್ಳಿ: ಸಿಡೇದಹಳ್ಳಿ ಸೌಂದರ್ಯ ಬಡಾವಣೆಯ ಸೌಂದರ್ಯ ಟೆಂಪಲ್ ಟ್ರಸ್ಟ್ ನಿರ್ಮಿಸಿರುವ ಶ್ರೀ ಸೌಂದರ್ಯ ವೆಂಕಟರಮಣ ಸ್ವಾಮಿ ದೇವರ ಪ್ರತಿಷ್ಠಾಪನೆ, ದೇವಸ್ಥಾನ ಉದ್ಘಾಟನೆ ಹಾಗೂ ಬಹ್ಮಕಲಶೋತ್ಸವ ಶನಿವಾರದಿಂದ ಆರಂಭವಾಗಿದ್ದು, 23ರವರೆಗೆ ಮುಂದುವರಿಯಲಿದೆ.

ಮೇ 17ರ ಬೆಳಗ್ಗೆ 8 ಗಂಟೆಗೆ ಪ್ರತಿಷ್ಠಾಪನೆ ಮತ್ತು ಬ್ರಹ್ಮಕಲಶೋತ್ಸವ ನಡೆದಿದೆ.

18ರಂದು ಭಾನುವಾರ ಸಂಜೆ ಏಕದಂತ ಭಜನಾ ಮಂಡಳಿ ಭಜನೆ, 19ರಂದು ಸಂಜೆ ಕೊಳಲುವಾದನ, ಭರತನಾಟ್ಯ, ಧಾರ್ಮಿಕ ಉಪನ್ಯಾಸ ಜರುಗಲಿದೆ. 20ರಂದು ಭಜನಾ ಮಂಡಳಿ ಹಾವನೂರು ತಂಡದಿಂದ ಹರಿಕಥೆ, ಸಂಗೀತ, ಭರತ ನಾಟ್ಯ, ಭಜನೆ ಮಹಿಳಾ ಮಂಡಳಿ ಅವರಿಂದ ಭರತನಾಟ್ಯ, ಶಾಸ್ತ್ರೀಯ ಸಂಗೀತ ಕಛೇರಿ ಆಯೋಜಿಸಲಾಗಿದೆ.

ಮೇ 21ರಂದು ಬೆಳಿಗ್ಗೆ ಬ್ರಹ್ಮಕಲಶ ಸ್ಥಾಪನೆ, ದೇವರ ಪ್ರತಿಷ್ಠಾಪನೆ, ಸಂಜೆ 4 ಗಂಟೆಗೆ ವಿಶ್ವಪ್ರಸನ್ನ ತೀರ್ಥರ ಉಪಸ್ಥಿತಿಯಲ್ಲಿ ಧಾರ್ಮಿಕ ಸಭಾ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ, ಕೇಂದ್ರ ಸಚಿವೆ ಶೋಭಾಕರಂದ್ಲಾಜೆ, ಮಾಜಿ ಸಂಸದ ಡಿ.ಕೆ ಸುರೇಶ್, ಶಾಸಕ ಎಸ್.ಮುನಿರಾಜು, ಮಾಜಿ ಶಾಸಕ ಆರ್. ಮಂಜುನಾಥ್ ಮತ್ತಿತರರು ಪಾಲ್ಗೊಳ್ಳಲಿದ್ದಾರೆ ಎಂದು ಕಾರ್ಯಕ್ರಮದ ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

50 ಉದ್ಯಾನಗಳ ಅಭಿವೃದ್ಧಿಗೆ ಕ್ರಮ

'ಬ್ರ್ಯಾಂಡ್ ಬೆಂಗಳೂರು' ಅಡಿ ಉನ್ನತೀಕರಣ:ವಿಶೇಷ ಆಯುಕ್ತೆ ಪ್ರೀತಿ ಗೆಹಲೋತ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬ್ರ್ಯಾಂಡ್ ಬೆಂಗಳೂರು ಅಡಿಯಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿ ಹೆಚ್ಚುವರಿಯಾಗಿ 50 ಉದ್ಯಾನಗಳ ಅಭಿವೃದ್ಧಿ ಹಾಗೂ ಉನ್ನತೀಕರಣ ಮಾಡಲಾಗುತ್ತಿದೆ' ಎಂದು ಬಿಬಿಎಂಪಿ ಅರಣ್ಯ, ಪರಿಸರ ಹಾಗೂ ಹವಾಮಾನ ವೈಪರೀತ್ಯ ನಿರ್ವಹಣೆ ವಿಭಾಗದ ವಿಶೇಷ ಆಯುಕ್ತೆ ಪ್ರೀತಿ ಗೆಹಲೋತ್ ತಿಳಿಸಿದರು.


ಪ್ರೀತಿ

ನಗರದ ಬ್ಯೂಗಲ್ ರಾಕ್ ಉದ್ಯಾನದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಬೆಂಗಳೂರು ಹಬ್ಬ' ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ಪಾಲಿಕೆ ವ್ಯಾಪ್ತಿಯಲ್ಲಿ 1,287 ಉದ್ಯಾನಗಳು ಬರಲಿವೆ. ಎಲ್ಲ ಉದ್ಯಾನಗಳಲ್ಲಿ ಹಸಿರೀಕರಣ, ಫೆನ್ಸಿಂಗ್ ಮಾಡಲಾಗಿದೆ. ನಾಗರಿಕರಿಗೆ ಆಸನಗಳ ವ್ಯವಸ್ಥೆ, ಇನ್ನಿತರೆ ಸೌಲಭ್ಯಗಳ ವ್ಯವಸ್ಥೆ ಕಲ್ಪಿಸಲಾಗಿದೆ. ಈಗಿರುವ ಎಲ್ಲಾ ಉದ್ಯಾನಗಳಲ್ಲಿ ಉನ್ನತೀಕರಣ ಕಾರ್ಯ ನಡೆದಿದೆ. ಉದ್ಯಾನಗಳಲ್ಲಿ ಅಂತರ್ಜಲ-ಮಟ್ಟ ಹೆಚ್ಚಿಸಲು ಇಂಗುಗುಂಡಿಗಳನ್ನು ನಿರ್ಮಾಣ ಮಾಡಲಾಗುತ್ತಿದೆ' ಎಂದು ತಿಳಿಸಿದರು.


ಬೆಂಗಳೂರು ಹಬ್ಬದ ಅಂಗವಾಗಿ ಕಲಾತಂಡಗಳಿಂದ ಪ್ರದರ್ಶನಗಳು ನಡೆದವು

'ಉದ್ಯಾನಗಳಿಗೆ ಬರುವ ಸಾರ್ವಜನಿಕರು, ವಾಯುವಿಹಾರಿಗಳಿಗೆ ಅನುಕೂಲವಾಗಲೆಂದು ಉದ್ಯಾನಗಳಲ್ಲಿ 'ಬೆಂಗಳೂರು ಹಬ್ಬ' ಎಂಬ ವಿನೂತನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ' ಎಂದು ತಿಳಿಸಿದರು.

'ನಮ್ಮ ಪಾರಂಪರಿಕ ಸಂಸ್ಕೃತಿ, ಕಲೆಗಳು ಮತ್ತು ಇನ್ನಿತರ ಕಲಾ ಚಟುವಟಿಕೆಗಳಾದ ಡೊಳ್ಳುಕುಣಿತ, ಜಾನಪದ ಗಾಯನ, ಸುಗಮ ಸಂಗೀತ ಮತ್ತು ಜಾನಪದ ಕಲಾತಂಡಗಳನ್ನು ಒಳಗೊಂಡಂತೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಮುಂದಿನ ವರ್ಷದ ಮಾರ್ಚ್‌ವರೆಗೆ ವಿವಿಧ ಉದ್ಯಾನಗಳಲ್ಲಿ ಕಾರ್ಯಕ್ರಮ ನಡೆಯಲಿದೆ' ಎಂದು ಅವರು ತಿಳಿಸಿದರು.

ಬೆಂಗಳೂರು ಹಬ್ಬದ ಅಂಗವಾಗಿ ಕಲಾತಂಡಗಳನ್ನು ಒಳಗೊಂಡಂತೆ ರಾಮಕೃಷ್ಣ ಮಠ ವೃತ್ತದಿಂದ ಬ್ಯೂಗಲ್ ರಾಕ್ ಉದ್ಯಾನದವರೆಗೆ ಜಾಗೃತಿ ಜಾಥಾ ನಡೆಸುವ ಮೂಲಕ ನಾಗರಿಕರಲ್ಲಿ ಅರಿವು ಮೂಡಿಸುವ ಕೆಲಸ ಮಾಡಲಾಯಿತು.

ಮಾಜಿ ಮೇಯರ್ ಸತ್ಯನಾರಾಯಣ, ತೋಟಗಾರಿಕಾ ಉಪ ನಿರ್ದೇಶಕ ಚಂದ್ರಶೇಖರ್, ಅಧಿಕಾರಿಗಳು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಶ್ರೀಮಂತಿಕೆ, ಅಧಿಕಾರಕ್ಕೇ ಪೂಜೆ: ನ್ಯಾ. ಸಂತೋಷ್ ಹೆಗ್ಡೆ ಬೇಸರ

'ನೀತಿಪಾಠ ಬೇಕಿಲ್ಲ, ದುರಾಸೆಗೆ ಮದ್ದಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶ್ರೀಮಂತಿಕೆ ಹಾಗೂ ಅಧಿಕಾರವನ್ನು ಪೂಜಿಸುವ ಸಮಾಜದಲ್ಲಿ ನಾವು ಬದುಕುತ್ತಿದ್ದೇವೆ. ಇಲ್ಲಿ ನೀತಿ ಪಾಠಗಳಿಗೆ ಬೆಲೆಯಿಲ್ಲ, ದುರಾಸೆಗೆ ಮದ್ದಿಲ್ಲ' ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಬೇಸರ ವ್ಯಕ್ತಪಡಿಸಿದರು.

'ಆರ್ಟ್ ಆಫ್ ಗಿವಿಂಗ್' ಸರ್ಕಾರೇತರ ಸಂಸ್ಥೆಯು ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಅಂತರ-ರಾಷ್ಟ್ರೀಯ 'ಆರ್ಟ್ ಆಫ್ ಗಿವಿಂಗ್' ದಿನಾಚರಣೆ ಸಮಾರಂಭದಲ್ಲಿ ಭಾಗವಹಿಸಿ, ಮಾತನಾಡಿದರು.

'ಸಮಾಜದ ಭಾವನೆ ಬದಲಾಗಿದೆ. ಶ್ರೀಮಂತಿಕೆ, ಅಧಿಕಾರದ ತಿಕ್ಕಾಟ ಹಾಗೂ ಪೈಪೋಟಿಯಿಂದಾಗಿ ಪ್ರಾಮಾಣಿಕತೆಗೆ ಬೆಲೆ ಇಲ್ಲವಾಗಿದೆ. ಹಿಂದೆ ತಪ್ಪು ಮಾಡಿದವರಿಗೆ ಕಾನೂನಿನಡಿ ಶಿಕ್ಷೆಯ ಜತೆಗೆ, ಸಮಾಜವು ಬಹಿಷ್ಕಾರದಂತಹ ಶಿಕ್ಷೆ ವಿಧಿಸುತ್ತಿತ್ತು. ಈಗಿನ ಸಮಾಜದಲ್ಲಿ, ಪ್ರಾಮಾಣಿಕತೆ ಬಗ್ಗೆ ಮಾತನಾಡುವುದೇ ಅಪರಾಧವೆಂಬ ವಾತಾವರಣ ನಿರ್ಮಾಣವಾಗಿದೆ' ಎಂದರು.

'ಜಾಮೀನಿನ ಮೇಲೆ ಜೈಲಿನಿಂದ ಹೊರಬರುವ ವ್ಯಕ್ತಿಗೂ ಸೇಬಿನ ಹಾರ ಹಾಕಿ ಬರಮಾಡಿಕೊಳ್ಳುವ ಸಮಾಜದಲ್ಲಿ ನಾವು ಇಂದು ಬದುಕುತ್ತಿದ್ದೇವೆ. ಅಧಿಕಾರದಲ್ಲಿರುವವರ ಸ್ವಾರ್ಥ ಮತ್ತು ದುರಾಸೆಯು ಭ್ರಷ್ಟಾಚಾರವನ್ನು ಪೋಷಿಸುತ್ತಿದೆ. ಅನ್ಯ ಮಾರ್ಗದಿಂದ ಹಣ ಸಂಪಾದಿಸಿದವರು ಆದಾಯ ತೆರಿಗೆ (ಐಟಿ) ಅಧಿಕಾರಿಗಳ, ದರೋಡೆಕೋರರ ಭಯ, ಆತಂಕದಲ್ಲಿಯೇ ಬದುಕುತ್ತಿದ್ದಾರೆ' ಎಂದರು.


ಸಮಾರಂಭದಲ್ಲಿ ಆರ್ಟ್ ಆಫ್ ಗಿವಿಂಗ್ ಸಂಸ್ಥೆಯ ಗುರುಪ್ರಸಾದ್ ಹಾಗೂ ವೆಂಕಟೇಶ್ ಎಂ.ವಿ. ಸಮಾಲೋಚನೆ ನಡೆಸಿದರು. ನ್ಯಾಯಮೂರ್ತಿ ಎನ್ ಸಂತೋಷ್ ಹೆಗ್ಡೆ ಹಾಗೂ ಸವಿತಕ್ಕ ಭಾಗವಹಿಸಿದ್ದರು —ಪ್ರಜಾವಾಣಿ ಚಿತ್ರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ವೆಂಕಟೇಶ್ ಎಂ.ವಿ. 'ಇತ್ತೀಚೆಗೆ ಸ್ವಾರ್ಥ ಮನೋಭಾವ ಹೆಚ್ಚಾಗುತ್ತಿದೆ. ಸಾಮಾಜಿಕ ಜಾಲತಾಣದಿಂದ ಮನುಷ್ಯರ ಸಂಬಂಧದ ಕೊಂಡಿ ಕಳಚುತ್ತಿದೆ. ಈಗ ಮನೋ, ಬೌದ್ಧಿಕ ಸಂವಾದ ನಡೆಯಬೇಕು. ಮನಸ್ಸುಗಳ ನಡುವೆ ಶಾಂತಿ ನೆಲೆಸಬೇಕು. ಕಷ್ಟದಲ್ಲಿರುವವರಿಗೆ ನೆರವಾಗಬೇಕು. ಆದರೆ, ಇನ್ನೊಬ್ಬರ ಕಷ್ಟವನ್ನು ಲಾಭಕ್ಕೆ ಬಳಸಿಕೊಳ್ಳಬಾರದು' ಎಂದರು.

ಇದಕ್ಕೂ ಮೊದಲು 'ನೆಮ್ಮದಿಯ ಬದುಕಿಗೆ ವಾಸ್ತು ಸಲಹೆಗಳು' ಎಂಬ ವಿಷಯದ ಬಗ್ಗೆ ವಾಸ್ತು ತಜ್ಞ ಭಾಸ್ಕರ್ ಅವರು ಗೋಷ್ಠಿ ನಡೆಸಿಕೊಟ್ಟರು. ಗಾಯಕಿ ಸವಿತಕ್ಕ ಅವರು ಜಾನಪದ ಗೀತೆಗಳನ್ನು ಹಾಡಿದರು.

23ರಿಂದ 25ರವರೆಗೆ 'ಸಾವಯವ ಮಾವು–ಹಲಸು ಹಬ್ಬ'



ಬೆಂಗಳೂರು: ಜೈವಿಕ್ ಕೃಷಿ ಸೊಸೈಟಿ ಮತ್ತು ತೋಟಗಾರಿಕೆ ಇಲಾಖೆಯ ಪರಂಪರಾಗತ ಕೃಷಿ ವಿಕಾಸ ಯೋಜನೆ ಸಹಯೋಗದೊಂದಿಗೆ ಮೇ 23 ರಿಂದ 25ರವರೆಗೆ ಲಾಲ್‌ಬಾಗ್‌ನ ಡಾ. ಎಂ.ಎಚ್. ಮರೀಗೌಡ ಸಭಾಂಗಣದಲ್ಲಿ 'ಸಾವಯವ ಮಾವು ಮತ್ತು ಹಲಸು ಹಬ್ಬ' ಆಯೋಜಿಸಲಾಗಿದೆ.

23ರಂದು ಮಧ್ಯಾಹ್ನ 3ಕ್ಕೆ ಹಬ್ಬ ಉದ್ಘಾಟನೆಯಾಗಲಿದೆ. 24 ಮತ್ತು 25ರಂದು ಬೆಳಿಗ್ಗೆ 7 ರಿಂದ ಸಂಜೆ 6ರ ವರೆಗೆ ಪ್ರದರ್ಶನ ಮತ್ತು ಮಾರಾಟವಿರಲಿದೆ. ಹಬ್ಬದಲ್ಲಿ ರಾಜ್ಯದ ಸಾವಯವ ಕೃಷಿಕರ ತೋಟಗಳ ಬೈರಸಂದ್ರ, ಹೆಜ್ಜೇನು, ಕೆಂಪು ಮತ್ತು ಬಿಳಿ ಅಂಟಿಲ್ಲದ ಹಲಸಿನ ತಳಿಗಳು, ರುದ್ರಾಕ್ಷಿ, ಚಂದ್ರ ಹಲಸಿನ ತಳಿಗಳು ಸೇರಿ 50ಕ್ಕೂ ಹೆಚ್ಚು ತಳಿಗಳ ಹಣ್ಣುಗಳ ಪ್ರದರ್ಶನ ಮತ್ತು ಮಾರಾಟ ಇರಲಿದೆ.

ನೈಸರ್ಗಿಕ ಕೃಷಿಯಲ್ಲಿ ಬೆಳೆದು, ಸ್ವಾಭಾವಿಕವಾಗಿ ಮಾಗಿಸಿರುವ ವಿವಿಧ ಜಾತಿಯ ಮಾವಿನ ಹಣ್ಣುಗಳು, ಜ್ಯೂಸ್ ತಯಾರಿಸುವ ಬಿಲ್ವ ಹಣ್ಣುಗಳು ಜೊತೆಗೆ, ಇತರೆ ಸಾವಯವ ಉತ್ಪನ್ನಗಳು, ಸಿರಿ ಧಾನ್ಯಗಳು, ಮರೆತುಹೋದ ಆಹಾರ ಪದಾರ್ಥಗಳೂ ಮೇಳದಲ್ಲಿರಲಿದೆ ಎಂದು ಜೈವಿಕ್ ಕೃಷಿಕ್ ಸೊಸೈಟಿಯ ಕೆ. ರಾಮಕೃಷ್ಣಪ್ಪ ತಿಳಿಸಿದ್ದಾರೆ.

ವಿವಿಧ ಸ್ಪರ್ಧೆ: ಹಣ್ಣುಗಳ ಪ್ರದರ್ಶನ ಮತ್ತು ಮಾರಾಟವಲ್ಲದೇ, ಮಕ್ಕಳಿಗಾಗಿ ಹಲಸು, ಮಾವಿನ ಹಣ್ಣು ಮತ್ತು ಸಾವಯವ ರೈತರ ಚಿತ್ರಲೇಖನ ಸ್ಪರ್ಧೆ ಇರುತ್ತದೆ. ದೊಡ್ಡವರಿಗೆ ಹಲಸಿನ ಹಣ್ಣಿನ ತೂಕ ಊಹಿಸುವ ಮತ್ತು ಹಲಸಿನ ಹಣ್ಣು ಎತ್ತುವ ಸ್ಪರ್ಧೆಯನ್ನು ಆಯೋಜಿಸಲಾಗಿದೆ.

ಸಸಿಗಳು ಲಭ್ಯ: ಹಲವು ಜಾತಿಯ ಹಲಸು, ಮಾವಿನ ಹಣ್ಣಿನ ಗಿಡಗಳು, ದೇಸಿ ತರಕಾರಿ ಬೀಜಗಳು ಪ್ರದರ್ಶನದಲ್ಲಿರುತ್ತವೆ. ಸ್ಥಳದಲ್ಲೇ ಹಲಸಿನ ದೋಸೆ ಮತ್ತು ಕಾಯಿಚಟ್ನಿ ಸವಿಯಬಹುದು. ಮಾವು ಮತ್ತು ಇತರೆ ಸಾವಯವ ವಸ್ತುಗಳಿಂದ ತಯಾರಿಸಿದ ತಿಂಡಿ ತಿನಿಸು ಪ್ರದರ್ಶನ–ಮಾರಾಟವಿರುತ್ತದೆ.

ಯಾರೆಲ್ಲ ಬರುತ್ತಾರೆ?: ಪಾರಂಪರಿಕ ಕೃಷಿ ಯೋಜನೆ ಫಲಾನುಭವಿ ಗುಂಪುಗಳು , ನೋಂದಾಯಿತ ಸಾವಯವ ಕೃಷಿಕರ ಸಂಘಗಳು, ರೈತ ಉತ್ಪಾದಕ ಸಂಸ್ಥೆಗಳು, ಪರಿಸರ ಪ್ರಿಯ ಕೃಷಿಕರು, ಯುವಕರು, ವಿದ್ಯಾರ್ಥಿಗಳು ಮೇಳದಲ್ಲಿ ಭಾಗವಹಿಸಲಿದ್ದಾರೆ. ಮಾಹಿತಿಗೆ: ಮಂಜು– 7090009944 ಸಂಪರ್ಕಿಸಬಹುದು ಕವಿತಾ– 8105579839

ಗೀತಂ ವಿ.ವಿ –ಪೆನ್ ಸ್ಟೇಟ್ ವಿ.ವಿ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಶೋಧನೆ, ಬೋಧನೆ ಹಾಗೂ ಶಿಕ್ಷಣಕ್ಕೆ ಸಂಬಂಧಿಸಿದಂತೆ ಗೀತಂ ವಿಶ್ವವಿದ್ಯಾಲಯದ ಜತೆಗೆ ಅಮೆರಿಕದ ಪೆನ್ಸಿಲ್ವೇನಿಯದ ಪೆನ್ ಸ್ಟೇಟ್ ವಿಶ್ವ ವಿದ್ಯಾಲಯ (ಪಿಎಸ್‌ಯು) ಒಡಂಬಡಿಕೆ ಮಾಡಿಕೊಂಡಿದೆ.

ಗೀತಂ ವಿ.ವಿ ವಿಶಾಖ ಪಟ್ಟಣದ ಕ್ಯಾಂಪಸ್‌ಗೆ ಶನಿವಾರ ಪಿಎಸ್‌ಯು ನಿಯೋಗ ಭೇಟಿ ನೀಡಿ, ಈ ಒಡಂಬಡಿಕೆಗೆ ಸಹಿ ಹಾಕಿತು. ಪಿಎಸ್‌ಯುನ ಕುಲಪತಿ ಪ್ರೊ. ಡೇವಿಡ್ ಎಂ. ಕ್ಯಾಲೆಜೊ ಪೆರೆಜ್ ನೇತೃತ್ವದಲ್ಲಿ ಅಧ್ಯಾಪಕರು ಕ್ಯಾಂಪಸ್ ವೀಕ್ಷಿಸಿದರು. ಗೀತಂ ವಿವಿ ಕೈಗೊಂಡ ಸಂಶೋಧನೆ ಹಾಗೂ ಸೌಲಭ್ಯಗಳ ಬಗ್ಗೆ ಸಹ ಕುಲಾಧಿಪತಿ ಪ್ರೊ.ವೈ. ಗೌತಮ ರಾವ್ ವಿವರಿಸಿದರು.

'ವಿಶ್ವವಿದ್ಯಾನಿಲಯವು 16 ಸಂಶೋಧನಾ ಕೇಂದ್ರಗಳನ್ನು ಹೊಂದಿದೆ. 300ಕ್ಕೂ ಹೆಚ್ಚು ಸಂಶೋಧನಾ ಯೋಜನೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದೆ. 2026-27ನೇ ಶೈಕ್ಷಣಿಕ ಸಾಲಿಗೆ ಶಾಲಾ ಶಿಕ್ಷಣ ಪ್ರಾರಂಭಿಸಲು ಯೋಜಿಸುತ್ತಿದೆ. ಗೀತಂ ವಿ.ವಿ ವೇಗವಾಗಿ ಬೆಳವಣಿಗೆ ಹೊಂದುತ್ತಿದ್ದು, ಜಾಗತಿಕ ಶೈಕ್ಷಣಿಕ ಕೇಂದ್ರವಾಗಿ ಹೊರಹೊಮ್ಮುತ್ತಿದೆ. ಪದವಿ ಮತ್ತು ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳಿಗೆ 40ಕ್ಕೂ ಹೆಚ್ಚು ದೇಶಗಳ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. ಜ್ಞಾನದ ಮೂಲವನ್ನು ಹೆಚ್ಚಿಸಲು ಅಂತರ ರಾಷ್ಟ್ರೀಯ ಸಹಯೋಗ ಹೊಂದುತ್ತಿದ್ದೇವೆ' ಎಂದು ಪ್ರೊ.ವೈ. ಗೌತಮ ರಾವ್ ಹೇಳಿದರು.


ಪ್ರೊ.ವೈ. ಗೌತಮ ರಾವ್ ಹಾಗೂ ಪ್ರೊ. ಡೇವಿಡ್ ಎಂ. ಕ್ಯಾಲೆಜೊ ಪೆರೆಜ್ ಒಡಂಬಡಿಕೆಗೆ ಸಹಿ ಹಾಕಿದ ದಾಖಲೆಗಳನ್ನು ಪ್ರದರ್ಶಿಸಿದರು. ಗೀತಂ ವಿವಿ ಪ್ರಾಧ್ಯಾಪಕರು ಹಾಗೂ ಪಿಎಸ್‌ಯು ನಿಯೋಗದ ಪ್ರತಿನಿಧಿಗಳು ಉಪಸ್ಥಿತರಿದ್ದರು

ಗೀತಂನ ಶೈಕ್ಷಣಿಕ ದೃಷ್ಟಿಕೋನ ಮತ್ತು ಮೂಲಸೌಕರ್ಯವನ್ನು ಶ್ಲಾಘಿಸಿದ ಪ್ರೊ. ಡೇವಿಡ್ ಎಂ. ಕ್ಯಾಲೆಜೊ ಪೆರೆಜ್, 'ಭಾರತೀಯ ವಿದ್ಯಾರ್ಥಿಗಳಿಗೆ ಉತ್ತಮ ಶೈಕ್ಷಣಿಕ ವಾತಾವರಣ ಸೃಷ್ಟಿಸಲು ಪಿಎಸ್‌ಯು ಬದ್ಧವಾಗಿದೆ. ಈ ಒಪ್ಪಂದವು ಅಧ್ಯಾಪಕರ ವಿನಿಮಯ, ಜಂಟಿ ಸಂಶೋಧನೆ, ವೃತ್ತಿಪರ ತರಬೇತಿ ಕಾರ್ಯಕ್ರಮ, ವಿದೇಶದಲ್ಲಿ ಅಧ್ಯಯನ ಅವಕಾಶ, ವಿಚಾರ ಸಂಕಿರಣ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳನ್ನು ಉತ್ತೇಜಿಸಲಿದೆ' ಎಂದು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಶೇ 90ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾಗಿರುವ ದೇವಾಂಗ ಸಮಾಜದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಕರ್ನಾಟಕ ರಾಜ್ಯ ದೇವಾಂಗ ನೌಕರರ ಸಂಘ ಅರ್ಜಿ ಆಹ್ವಾನಿಸಿದೆ.

ಪದವಿ, ಸ್ನಾತಕೋತ್ತರ ಪದವಿ, ಸಿ.ಎ ಪರೀಕ್ಷೆಗಳಲ್ಲಿ ರ್‍ಯಾಂಕ್, ಚಿನ್ನದ ಪದಕ ಪಡೆದವರು, ಪಿಎಚ್.ಡಿ. ಪಡೆದವರು, ರಾಜ್ಯ, ಕೇಂದ್ರ ಲೋಕಸೇವಾ ಆಯೋಗದಿಂದ ಆಯ್ಕೆಯಾದವರನ್ನು ಸನ್ಮಾನಿಸಲಾಗುವುದು. ಅಗತ್ಯ ದಾಖಲೆಗಳೊಂದಿಗೆ ಜೂನ್ 30ರ ಒಳಗೆ ಅರ್ಜಿ ಸಲ್ಲಿಸಬೇಕು ಎಂದು ಸಂಘದ ಅಧ್ಯಕ್ಷ ಕೆ.ಬಿ. ಭಾಸ್ಕರಯ್ಯ, ಪ್ರಧಾನ ಕಾರ್ಯದರ್ಶಿ ಟಿ. ಶ್ರೀನಿವಾಸಮೂರ್ತಿ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ದೇವಾಂಗ ನೌಕರರ ಸಂಘ, ದೇವಾಂಗ ಹಾಸ್ಟೆಲ್ ಕಟ್ಟಡ, ಸಂಪಂಗಿರಾಮನಗರ, ಬೆಂಗಳೂರು 560027 ಇಲ್ಲಿಗೆ ಅರ್ಜಿ ಸಲ್ಲಿಸಬೇಕು. ಮಾಹಿತಿಗೆ 9483025240, 9945133066 ಸಂಪರ್ಕಿಸಿ.

ದತ್ತಿ ಪ್ರಶಸ್ತಿಗೆ ಕೃತಿಗಳ ಆಹ್ವಾನ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘವು 'ಡಾ. ನಳಿನಿ ಮೂರ್ತಿ ದತ್ತಿ ಪ್ರಶಸ್ತಿ'ಗೆ ಲೇಖಕಿಯರಿಂದ ವಿಜ್ಞಾನ ಕೃತಿಗಳನ್ನು ಆಹ್ವಾನಿಸಿದೆ. ಪ್ರಶಸ್ತಿ ₹25 ಸಾವಿರ ನಗದು ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದೆ.

ವಿಜ್ಞಾನಕ್ಕೆ ಸಂಬಂಧಿಸಿದ ಕೃತಿಗಳು, ವೈಜ್ಞಾನಿಕ ಕತೆ–ಕಾದಂಬರಿ ಹಾಗೂ ವೈದ್ಯಕೀಯ, ತಂತ್ರಜ್ಞಾನ, ಕೃಷಿ ವಿಜ್ಞಾನ ಸಂಬಂಧಿಸಿದ ಕೃತಿಗಳನ್ನು ಪರಿಗಣಿಸಲಾಗುತ್ತದೆ ಎಂದು ಸಂಘದ ಅಧ್ಯಕ್ಷೆ ಎಚ್. ಎಲ್. ಪುಷ್ಪ ತಿಳಿಸಿದ್ದಾರೆ. 2024ರಲ್ಲಿ ಪ್ರಕಟಗೊಂಡ ಸ್ವತಂತ್ರ ಕೃತಿಗಳ ಮೂರು ಪ್ರತಿಗಳನ್ನು ಕರ್ನಾಟಕ ಲೇಖಕಿಯರ ಸಂಘ, ಫ್ಲಾಟ್ ನಂ. 206, ವಿಜಯ ಮ್ಯಾನ್ಷನ್, 2ನೇ ಮಹಡಿ, 2ನೇ ಮುಖ್ಯರಸ್ತೆ, 2ನೇ ತಿರುವು, ಚಾಮರಾಜಪೇಟೆ, ಬೆಂಗಳೂರು-560018 ಈ ವಿಳಾಸಕ್ಕೆ ಇದೇ 31ರೊಳಗೆ ಕಳುಹಿಸಬೇಕು. ಸಂಪರ್ಕಕ್ಕೆ: 9480051222, 8073765665

ನಗರದಲ್ಲಿ ಇಂದು

ಶಿವಕುಮಾರ ಸ್ವಾಮೀಜಿ ಜನದಿನೋತ್ಸವ, ವಾರ್ಷಿಕೋತ್ಸವ, ಬಸವ ಹಾಗೂ ರೇಣುಕಾಚಾರ್ಯ ಜಯಂತಿ: ಉದ್ಘಾಟನೆ: ಪಟ್ಟದ ರಾಜೇಶ್ವರ ಶಿವಾಚಾರ್ಯ ಸ್ವಾಮೀಜಿ, ಉಚಿತ ಲಿಂಗದೀಕ್ಷೆ ಕೊಡುವವರು: ಅಭಿನವ ಚನ್ನಬಸವರಾಧ್ಯ ಶಿವಾಚಾರ್ಯ ಸ್ವಾಮೀಜಿ, ಅಧ್ಯಕ್ಷತೆ: ಜಿ. ಮರಿಸ್ವಾಮಿ, ಅತಿಥಿಗಳು: ನಟರಾಜ, ನಂಜುಂಡೇಶ್, ರಾಜೇಂದ್ರ, ಆಯೋಜನೆ ಮತ್ತು ಸ್ಥಳ: ವಿಶ್ವವೀರಶೈವ ಲಿಂಗಾಯತ ವೇದಿಕೆ, ರಾಘವೇಂದ್ರ ಪವಮಾನ ಮಂದಿರ, ಚಿಕ್ಕಬಾಣಾವರ, ಬೆಳಿಗ್ಗೆ 7ರಿಂದ

75ನೇ ಆರ್ಗ್ಯಾನಿಕ್ ಸಂತೆ: ಅತಿಥಿಗಳು: ಎಚ್.ಕೆ. ಪಾಟೀಲ, ಪ್ರಮೀಳಾ ಜಗ್ಗೇಶ್, ಶ್ರೀನಿವಾಸ್ ಜಿ. ಕಪ್ಪಣ್ಣ, ನಿರ್ಮಲಾ ಎಲಿಗಾರ್, ನಾಗೇಶ್ ಪುಟ್ಟಸ್ವಾಮಿ, ಆಯೋಜನೆ ಮತ್ತು ಸ್ಥಳ: ದಿ ಗ್ರೀನ್ ಪಾಥ್, ಮಲ್ಲೇಶ್ವರ, ಬೆಳಿಗ್ಗೆ 9ರಿಂದ

ಭಾರತೀಯ ಸೈನಿಕರಿಗೆ ಬೆಂಬಲ ಹಾಗೂ ಬಲ ನೀಡಲು ಲಕ್ಷ್ಮೀನರಸಿಂಹಸ್ವಾಮಿ ಹೋಮ: ಆಯೋಜನೆ: ಶ್ರೀರಾಘವೇಂದ್ರ ಸೇವಾ ಸಮಿತಿ ಟ್ರಸ್ಟ್, ಸ್ಥಳ: ಗಣಪತಿ ದೇವಸ್ಥಾನದ ಆವರಣ, ಗುರುರಾಜ ಸಭಾಭವನ ಪಕ್ಕ, ಕೆಂಗೇರಿ ಉಪನಗರ, ಬೆಳಿಗ್ಗೆ 9ರಿಂದ

2024–25ನೇ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ, ಕ್ರೀಡಾ, ಎನ್‌ಎಸ್‌ಎಸ್ ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳ ಸಮಾರೋಪ ಸಮಾರಂಭ: ಅತಿಥಿಗಳು: ಎಂ.ಡಿ. ಪಲ್ಲವಿ, ನಾರಾಯಣಸ್ವಾಮಿ ಎಸ್.ಟಿ., ಉಪಸ್ಥಿತಿ: ನಿರ್ಮಲ್‌ಕುಮಾರ್ ಕೆ.ಆರ್., ಎನ್.ಎಸ್. ವಿಜಯ, ಎಂ. ಕೃಷ್ಣದಾಸ್, ಬಿ.ಎಲ್. ನಂದಿನಿ, ಟಿ.ಆರ್. ವೆಂಕಟರೆಡ್ಡಿ, ಅಧ್ಯಕ್ಷತೆ: ಎ.ಜಿ. ನಟರಾಜ್, ಆಯೋಜನೆ ಮತ್ತು ಸ್ಥಳ: ಬಿಇಎಸ್ ಕಲೆ ಮತ್ತು ವಾಣಿಜ್ಯ ಸಂಜೆ ಕಾಲೇಜು, ನಾಲ್ಕನೇ ಬಡಾವಣೆ, ಜಯನಗರ, ಬೆಳಿಗ್ಗೆ 10.30

ಸ್ಪರ್ಶ ಆಸ್ಪತ್ರೆಯ ಉದ್ಘಾಟನೆ: ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅತಿಥಿಗಳು: ದಿನೇಶ್ ಗುಂಡೂರಾವ್, ಕೆ.ಜೆ. ಜಾರ್ಜ್, ಎಸ್.ಎಸ್. ಮಲ್ಲಿಕಾರ್ಜುನ್, ಡಾ. ಶರಣಪ್ರಕಾಶ ಪಾಟೀಲ, ಬಸವರಾಜ ಬೊಮ್ಮಾಯಿ, ಶಿವರಾಜ ವಿ. ಪಾಟೀಲ, ಶಾಮನೂರು ಶಿವಶಂಕರಪ್ಪ, ಆಯೋಜನೆ ಮತ್ತು ಸ್ಥಳ: ಸ್ಪರ್ಶ ಆಸ್ಪತ್ರೆ, ಹೆಣ್ಣೂರು ರಸ್ತೆ, ಬೆಳಿಗ್ಗೆ 10.30


ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ

ರಾಜ್ಯಮಟ್ಟದ ದೃಷ್ಟಿ ಚೇತನ ಬರಹಗಾರರ ಕಾವ್ಯ ಕಮ್ಮಟ ಮತ್ತು ಕವಿಗೋಷ್ಠಿ ಸಮಾರಂಭ: ಅಧ್ಯಕ್ಷತೆ: ಎಲ್.ಎನ್. ಮುಕುಂದರಾಜ್, ಅತಿಥಿಗಳು: ಕೆ.ವಿ. ರಾಜಣ್ಣ, ಜಿ.ಕೆ. ಮಹಾಂತೇಶ್, ಆಶಯ ನುಡಿ: ಮುದಿಗೆರೆ ರಮೇಶ್ ಕುಮಾರ್, 'ಕಾವ್ಯ ಕಟ್ಟುವ ಕಲೆ ಮತ್ತು ವಾಚನಾಭಿವ್ಯಕ್ತಿ' ಕುರಿತು: ಮೋದೂರು ತೇಜ, ಗೀತೋತ್ಸವ: ಅಂಧ ಬರಹಗಾರರ ಕಾವ್ಯ ಗಾಯನ, ಕವಿಗೋಷ್ಠಿ: ಅಧ್ಯಕ್ಷತೆ: ಪ್ರತಿಭಾ ನಂದಕುಮಾರ್, ಪ್ರಾಸ್ತಾವಿಕ ನುಡಿ: ಆರ್.ಎಸ್. ಶಾಂತಾರಾಮ್, ಆಯೋಜನೆ: ಕರ್ನಾಟಕ ಅಂಧರ ಸಾಹಿತ್ಯ ಪರಿಷತ್ತು, ದೀಪಾ ಅಕಾಡೆಮಿ, ಸ್ಥಳ: ಈಸ್ಟ್‌ವೆಸ್ಟ್ ಕಾಲೇಜಿನ ಸಭಾಂಗಣ, ಭಾರತ್‌ನಗರ, ಬೆಳಿಗ್ಗೆ 10.30ರಿಂದ

'ಗಾಂಪರ ಗುಂಪು' ನಾಟಕ ಪ್ರದರ್ಶನ: ನಿರ್ದೇಶನ: ಶ್ರೀಪಾದ್ ಎಸ್., ಆಯೋಜನೆ: ಬೆಂಗಳೂರು ಪ್ಲೇಯರ್ಸ್ ಥಿಯೇಟರ್ ಅಸೋಸಿಯೇಷನ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 11.30

ಯುಗಾದಿ ಸಂಭ್ರಮ: ಉದ್ಘಾಟನೆ: ಸೌಂದರ್ಯ ರಮೇಶ್, ಅತಿಥಿ: ಜಿ.ಕೆ. ಶೆಟ್ಟಿ, ಸನ್ಮಾನಿತರು: ಗಿರೀಶ್ ಉಪಾಧ್ಯ, ಅಧ್ಯಕ್ಷತೆ: ಕೆ.ಸಿ. ಬಲ್ಲಾಳ್, ಯುಗಾದಿ ಮಹತ್ವದ ಕುರಿತು: ಗಿರಿಧರ ಉಪಾಧ್ಯಾಯ, ಆಯೋಜನೆ: ದಕ್ಷಿಣ ಕನ್ನಡಿಗರ ಸಂಘ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4

'ಅನುಮಾನದ ಅವಾಂತರ' ನಾಟಕ ಪ್ರದರ್ಶನ: ರಚನೆ: ಮೋಲಿಯರ್, ನಿರ್ದೇಶನ: ವಿಕಾಸ್ ಎಸ್., ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 7

'ರಾಧಾ ನಿವಾಸ' ನಾಟಕ ಪ್ರದರ್ಶನ: ರಚನೆ: ವಿದ್ಯಾವಾಚಸ್ಪತಿ, ಕವಿತಾ ಕೃಷ್ಣ, ನಿರ್ದೇಶನ: ಮಹೇಶ್ ಕುಮಾರ್, ಆಯೋಜನೆ: ರಂಗಚಕ್ರ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

41 ತಂಡಗಳಿಂದ ಮಾದರಿ ಪ್ರದರ್ಶನ


ಬೆಂಗಳೂರು: ಇನ್ಫೋಸಿಸ್‌ನ ಮೈಸೂರು ಕ್ಯಾಂಪಸ್‌ನಲ್ಲಿ ಮೇ 23ರಿಂದ 25ರವರೆಗೆ 'ಸೋಲಾರ್ ಡಿಕ್ಯಾಥಲಾನ್ ಇಂಡಿಯಾ (ಎಸ್‌ಡಿಐ)' ವಾರ್ಷಿಕ ಸ್ಪರ್ಧೆ ನಡೆಯಲಿದೆ. ದೇಶದ ವಿವಿಧೆಡೆಯ 41 ಬಹುಶಿಸ್ತೀಯ ತಂಡಗಳು 'ನೆಟ್–ಜಿರೊ ಬಿಲ್ಡಿಂಗ್' ವಿನ್ಯಾಸಕ್ಕೆ ಸಂಬಂಧಿಸಿದ ಮಾದರಿಗಳನ್ನು ಪ್ರಸ್ತುಪಡಿಸಲಿವೆ ಎಂದು ಎಸ್‌ಡಿಐ ನಿರ್ದೇಶಕ ಪ್ರಸಾದ್ ವೈದ್ಯ ಹೇಳಿದರು.

ವರ್ಷದಲ್ಲಿ ಬಳಕೆಯಾಗುವ ಇಂಧನವನ್ನು ನವೀಕರಿಸಬಹುದಾದ ಇಂಧನ ಮೂಲಗಳಿಂದ ಉತ್ಪಾದನೆಗೆ ಶಕ್ತವಾಗಿರುವಂತೆ ಕಟ್ಟಡಗಳನ್ನು ವಿನ್ಯಾಸಗೊಳಿಸಲಿದ್ದು, ಇದನ್ನು 'ನೆಟ್–ಜಿರೊ ಬಿಲ್ಡಿಂಗ್ ಡಿಸೈನ್' ಎನ್ನಲಾಗುತ್ತದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

2100 ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳ 175 ತಂಡಗಳಿಂದ 41 ತಂಡಗಳನ್ನು ಅಂತಿಮ ಸುತ್ತಿಗೆ ಆಯ್ಕೆ ಮಾಡಲಾಗಿದೆ. ದೇಶದ 150 ಸಂಸ್ಥೆಗಳ ವಿದ್ಯಾರ್ಥಿಗಳೊಂದಿಗೆ 300ಕ್ಕಿಂತ ಹೆಚ್ಚು ಕೈಗಾರಿಕೆಗಳು ಪಾಲ್ಗೊಂಡಿವೆ ಎಂದು ತಿಳಿಸಿದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಳೆಯಲಿ, ಜೊತೆಯಲಿ...
ಬೆಂಗಳೂರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಪಂದ್ಯ ವೀಕ್ಷಿಸಲು ಬಂದವರು ಮಳೆಯ ನಡುವೆ ತೆರಳುತ್ತಿರುವ ಸಾಗುತ್ತಿರುವ ದೃಶ್ಯ ಇಲ್ಲಿನ ಚರ್ಚ್ ಸ್ಟ್ರೀಟ್ ರಸ್ತೆಯಲ್ಲಿ ಶನಿವಾರ ಕಂಡು ಬಂತು



ಬಾಲಕಿ ಮೇಲೆ ಅತ್ಯಾಚಾರ ನಡೆದಿಲ್ಲ: ಎಸ್.ಪಿ 2B
ಜಮೀನು ವಿವಾದ: ಗುಂಪುಗಳ ನಡುವೆ ಮಾರಾಮಾರಿ 2B
ಎತ್ತಿನಹೊಳೆ ಕಾಮಗಾರಿ ಶೀಘ್ರ: ಶಾಸಕ 2B
ಆಸ್ತಿ ತೆರಿಗೆ ವಂಚನೆ: ದಾಖಲೆ ಪರಿಶೀಲನೆ ಚುರುಕು 2B

ಶಿರಾಗೇಟ್‌ವರೆಗೆ ವಿಸ್ತರಣೆಗೆ ಚಿಂತನೆ: ರಾಜ್ಯ ಸರ್ಕಾರಕ್ಕೆ ಕಾರ್ಯಸಾಧ್ಯತಾ ವರದಿ ಸಲ್ಲಿಸಿದ ಬಿಎಂಆರ್‌ಸಿಎಲ್

ತುಮಕೂರಿಗೆ ಮೆಟ್ರೊ: ಗರಿಗೆದರಿದ ಕನಸು

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ತುಮಕೂರಿಗೆ 'ನಮ್ಮ ಮೆಟ್ರೊ' ವಿಸ್ತರಿಸುವ ಬಗ್ಗೆ ಕಾರ್ಯಸಾಧ್ಯತಾ ವರದಿಯನ್ನು ಸರ್ಕಾರಕ್ಕೆ ಬಿಎಂಆರ್‌ಸಿಎಲ್ ಸಲ್ಲಿಸಿದೆ. ಇದರಿಂದ ಬೆಂಗಳೂರಿನಾಚೆಗೆ ಮೆಟ್ರೊ ವಿಸ್ತರಿಸುವ ಕನಸು ಗರಿಗೆದರಿದೆ. ಆದರೆ, ನಗರದ ಸಂಸದರ ಸಹಿತ ಅನೇಕರು ಈ ಯೋಜನೆಗೆ ವಿರೋಧ ವ್ಯಕ್ತಪಡಿಸಿದ್ದಾರೆ.

'ನಮ್ಮ ಮೆಟ್ರೊ' ಹಸಿರು ಮಾರ್ಗದಲ್ಲಿ ಮಾದಾವರವರೆಗೆ ಸದ್ಯ ಮೆಟ್ರೊ ಸಂಚರಿಸುತ್ತಿದೆ. ಅಲ್ಲಿಂದ ತುಮಕೂರಿನ ಶಿರಾ ಗೇಟ್‌ವರೆಗೆ ವಿಸ್ತರಿಸಲು ಕಾರ್ಯಸಾಧ್ಯತಾ ವರದಿಯನ್ನು ನೀಡುವಂತೆ ಬಿಎಂಆರ್‌ಸಿಎಲ್‌ಗೆ ರಾಜ್ಯ ಸರ್ಕಾರ ಸೂಚನೆ ನೀಡಿತ್ತು. ಟೆಂಡರ್ ಪಡೆದ ಹೈದರಾಬಾದ್‌ನ ಆರ್.ವಿ. ಕನ್ಸಲ್ಟೆಂಟ್ ವರದಿ ತಯಾರಿಸಿ ಬಿಎಂಆರ್‌ಸಿಎಲ್‌ಗೆ ನೀಡಿತ್ತು. ಬಿಎಂಆರ್‌ಸಿಎಲ್ ಸರ್ಕಾರಕ್ಕೆ ಸಲ್ಲಿಸಿದೆ.

ವರದಿ ಪ್ರಕಾರ 59.6 ಕಿಲೋ ಮೀಟರ್ ಉದ್ದದ ಈ ಮಾರ್ಗದಲ್ಲಿ 25 ನಿಲ್ದಾಣಗಳು ಇರಲಿವೆ. 2 ಗಂಟೆಯ ಪ್ರಯಾಣದ ಹಾದಿ ಎಂದು ಸಮಯ ನಿಗದಿಪಡಿಸಲಾಗಿದೆ. ಇದು ಅನುಮೋದನೆಗೊಂಡರೆ ಕರ್ನಾಟಕದ ಮೊದಲ ಅಂತರ-ನಗರ ಮೆಟ್ರೊ ಯೋಜನೆಯಾಗಲಿದೆ.

ನೆಲಮಂಗಲ ತಾಲ್ಲೂಕಿನ ಹಲವು ಪಟ್ಟಣ ಪ್ರದೇಶಗಳ ಮೂಲಕ ಹಾದುಹೋಗಿ ದಾಬಸ್‌ಪೇಟೆ ತಲುಪಲಿದೆ. ಮುಂದೆ ತುಮಕೂರು ತಾಲ್ಲೂಕು ವ್ಯಾಪ್ತಿಯ ಪಟ್ಟಣಗಳು ಮತ್ತು ಹೊರವಲಯಗಳ ಮೂಲಕ ಸಾಗಿ ನಾಗಣ್ಣಪಾಳ್ಯದಲ್ಲಿ (ಶಿರಾ ಗೇಟ್) ಕೊನೆಗೊಳ್ಳಲಿದೆ. ವಸಂತ ನರಸಾಪುರ ಕೈಗಾರಿಕಾ ಪ್ರದೇಶಕ್ಕೂ ಹತ್ತಿರವಾಗುವಂತೆ ನಿಲ್ದಾಣ ನಿರ್ಮಿಸುವ ಗುರಿಯನ್ನು ಇಟ್ಟುಕೊಂಡಿದೆ.

ಕೈಗಾರಿಕಾ ಉಪನಗರವಾಗಿ ತುಮಕೂರು ಹೆಚ್ಚು ಪ್ರವರ್ಧಮಾನಕ್ಕೆ ಬರುತ್ತಿರುವುದರಿಂದ ಆರ್ಥಿಕ ಚಟುವಟಿಕೆಗಳನ್ನು ಹೆಚ್ಚಿಸಲು ತುಮಕೂರಿಗೆ ಮೆಟ್ರೊ ಸೇವೆ ವಿಸ್ತರಿಸಬೇಕೆಂದು ಉದ್ಯಮಿಗಳು, ರಾಜಕಾರಣಿಗಳು ಮಾತ್ರವಲ್ಲದೇ ಸರ್ಕಾರದ ಸಚಿವರಿಂದಲೇ ಸರ್ಕಾರಕ್ಕೆ ಬೇಡಿಕೆಗಳು ಬಂದಿದ್ದವು.

ಎರಡು ಮಾದರಿ: ಸಾರ್ವಜನಿಕ-ಖಾಸಗಿ ಪಾಲುದಾರಿಕೆ (ಪಿಪಿಪಿ) ಮಾದರಿಯಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸಬಹುದು. ಇದಕ್ಕೆ ಅಂದಾಜು ₹ 20,650 ಕೋಟಿ ಬೇಕಾಗಬಹುದು ಎಂದು ವರದಿ ಉಲ್ಲೇಖಿಸಿದೆ.

ಇಲ್ಲವೇ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ನಿಧಿ ಮತ್ತು ಬಾಹ್ಯ ನಿಧಿ (ಸಾಲ) ಬಳಸಿ ಯೋಜನೆ ಅನುಷ್ಠಾನ ಮಾಡಬಹುದು ಆಗ ₹ 18,670 ಕೋಟಿ ಬೇಕಾಗಬಹುದು ಎಂದು ಎರಡು ಸಾಧ್ಯತೆಗಳನ್ನು ವರದಿಯಲ್ಲಿ ನಮೂದಿಸಲಾಗಿದೆ.

ನೆಲಮಂಗಲ ಮತ್ತು ತುಮಕೂರಿನಲ್ಲಿ ತಲಾ ಒಂದು ನಮ್ಮ ಮೆಟ್ರೊ ಡಿಪೊಗಳನ್ನು ಪ್ರಸ್ತಾವಿಸಲಾಗಿದೆ. ಈ ಯೋಜನೆ ಜಾರಿಗೆ ಬಂದರೆ ಮೆಟ್ರೊ ಹಾದುಹೋಗುವ ಪ್ರದೇಶದಲ್ಲಿ ರಿಯಲ್ ಎಸ್ಟೇಟ್ ಅಭಿವೃದ್ಧಿಗೊಳ್ಳಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

2.8ಲಕ್ಷ	470ಎಕರೆ	2030	2035
ನಿತ್ಯ ಸಂಚರಿಸಬಹುದಾದ ಪ್ರಯಾಣಿಕರ ಅಂದಾಜು ಪ್ರಮಾಣ	ಖಾಸಗಿ ಭೂಮಿ ಸೇರಿದಂತೆ ಯೋಜನೆಗೆ ಬೇಕಾದ ಒಟ್ಟು ಜಮೀನು	ಅನುಮತಿ ಸಿಕ್ಕರೆ ಕಾಮಗಾರಿ ಆರಂಭಗೊಳ್ಳುವ ನಿರೀಕ್ಷೆ	ಕಾಮಗಾರಿ ಪೂರ್ಣಗೊಳ್ಳಬಹುದಾದ ವರ್ಷ

25 ನಿಲ್ದಾಣಗಳು (ಮಾದಾವರದಿಂದ)



'ನನ್ನ ಅವಧಿಯಲ್ಲೇ ತುಮಕೂರಿಗೆ ಮೆಟ್ರೊ'



ಮೆಟ್ರೊ ರೈಲು ಸಂಪರ್ಕವನ್ನು ತುಮಕೂರಿನವರೆಗೂ ವಿಸ್ತರಿಸುವ ಬಗ್ಗೆ ವರದಿ ಬಂದಿದ್ದು, ಪರಿಶೀಲನೆ ನಡೆಯುತ್ತಿದೆ. ನನ್ನ ಅವಧಿಯಲ್ಲೇ ತುಮಕೂರಿಗೆ ಮೆಟ್ರೊ ರೈಲು ಬರಲಿದೆ. ಈ ಸಂಬಂಧ ತುಮಕೂರಿನ ಜನರಿಗೆ ಒಂದು ತಿಂಗಳಲ್ಲಿ ಸಿಹಿಸುದ್ದಿ ನೀಡುತ್ತೇನೆ. ತುಮಕೂರನ್ನು ಎರಡನೇ ಬೆಂಗಳೂರನ್ನಾಗಿ ಮಾಡುತ್ತೇವೆ. ನಗರದ ಚಿತ್ರಣವೇ ಬದಲಾಗಲಿದೆ.

ವಿ.ಸೋಮಣ್ಣ, ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ

ಸರ್ಕಾರ ಒಪ್ಪಿದರೆ ಡಿಪಿಆರ್

ರಾಜ್ಯ ಸರ್ಕಾರದ ಸೂಚನೆಯಂತೆ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಸಾಧಕ ಬಾಧಕಗಳು ಚರ್ಚೆಯಾಗಲಿವೆ. ಬೇಕೋ ಬೇಡವೋ ಎಂದು ಆನಂತರ ತೀರ್ಮಾನವಾಗಲಿದೆ. ಬೇಕು ಎಂದಾದರೆ ಆನಂತರ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲಾಗುತ್ತದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಸಂಸದರಾದ ಮೋಹನ್, ತೇಜಸ್ವಿ ಸೂರ್ಯ ವಿರೋಧ

ಪ್ರಸ್ತಾವಿತ ಬೆಂಗಳೂರು–ತುಮಕೂರು ಮೆಟ್ರೊ ಯೋಜನೆಗೆ ಬೆಂಗಳೂರು ಕೇಂದ್ರ ಸಂಸದ ಪಿ.ಸಿ. ಮೋಹನ್, ಬೆಂಗಳೂದು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ವಿರೋಧ ವ್ಯಕ್ತಪಡಿಸಿದ್ದಾರೆ.

'ಬೆಂಗಳೂರು ಉಪನಗರ ರೈಲು ಯೋಜನೆಯನ್ನು (ಬಿಎಸ್‌ಆರ್‌ಪಿ) ತುಮಕೂರಿಗೆ ವಿಸ್ತರಿಸಿದರೆ ಪ್ರತಿ ಕಿಲೋಮೀಟರ್ ಕಾಮಗಾರಿಗೆ ₹ 100 ಕೋಟಿಯಿಂದ ₹ 150 ಕೋಟಿ ವೆಚ್ಚವಾಗಲಿದೆ. ಮೆಟ್ರೊ ಕಾಮಗಾರಿಗೆ ಪ್ರತಿ ಕಿಲೋಮೀಟರ್‌ಗೆ ₹ 350 ಕೋಟಿ ಬೇಕಾಗುತ್ತದೆ. ರಿಯಲ್ ಎಸ್ಟೇಟ್‌ಗೆ ಲಾಭ ಮಾಡಿಕೊಡಲು ರಾಜ್ಯ ಸರ್ಕಾರ ಹೊರಟಿದೆ' ಎಂದು ಸಂಸದ ಪಿ.ಸಿ. ಮೋಹನ್ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ತುಮಕೂರು, ಹೊಸೂರು, ಹೊಸಕೋಟೆ ಅಥವಾ ಬಿಡದಿಗೆ ಮೆಟ್ರೊ ಸಂಪರ್ಕಿಸುವ ಯೋಜನೆಗಳು ಇಲ್ಲ. ಇದು ರಿಯಲ್ ಎಸ್ಟೇಟ್‌ನ ಬೆಲೆಗಳನ್ನು ಹೆಚ್ಚಿಸಲು ಮಾತ್ರ ಇದೆ. ಉಪನಗರ ರೈಲು ಯೋಜನೆಯನ್ನು ಹಳಿ ತಪ್ಪಿಸುವುದನ್ನು ಬಿಟ್ಟು ರಾಜ್ಯ ಸರ್ಕಾರ ಬೇರೇನನ್ನೂ ಮಾಡುವುದಿಲ್ಲ ಎಂದು ಟೀಕಿಸಿದ್ದಾರೆ.

'ತುಮಕೂರಿಗೆ ಮೆಟ್ರೊ ವಿಸ್ತರಣೆ ಮಾಡುವ ಕರ್ನಾಟಕ ಸರ್ಕಾರದ ನಿರ್ಧಾರ ಮೂರ್ಖತನದಿಂದ (ಸ್ಟುಪಿಡ್) ಕೂಡಿದೆ. ಅದರ ಬದಲಾಗಿ ಬೆಂಗಳೂರಿನಲ್ಲಿ ಬಾಕಿ ಇರುವ ಮೆಟ್ರೊ ಮಾರ್ಗಗಳ ಕಾಮಗಾರಿಗಳನ್ನು ಬೇಗನೆ ಪೂರ್ಣಗೊಳಿಸಲು ಮತ್ತು ಬೆಂಗಳೂರಿನೊಳಗೆ ಮೆಟ್ರೊ ಜಾಲವನ್ನು ಮತ್ತಷ್ಟು ವಿಸ್ತರಿಸಲು ಗಮನಹರಿಸಬೇಕು' ಎಂದು ತೇಜಸ್ವಿ ಸೂರ್ಯ ಅವರು 'ಎಕ್ಸ್'ನಲ್ಲಿ ಸಲಹೆ ನೀಡಿದ್ದಾರೆ.

ಮೆಟ್ರೊ ನಗರದ ಒಳಗಿನ ಸಂಪರ್ಕ ಹೆಚ್ಚಿಸುವುದಕ್ಕೆ ಸಂಬಂಧಿಸಿದೆ. ತುಮಕೂರಿಗೆ ಪ್ರಾದೇಶಿಕ ಕ್ಷಿಪ್ರ ಸಾರಿಗೆ ವ್ಯವಸ್ಥೆ (ಆರ್‌ಆರ್‌ಟಿಎಸ್) ಅಥವಾ ಉಪನಗರ ರೈಲು ಯೋಜನೆಯನ್ನು ಒದಗಿಸಬೇಕು ಎಂದೂ ಹೇಳಿದ್ದಾರೆ.

ಬಿಜೆಪಿ ಮುಖಂಡ ಭಾಸ್ಕರ ರಾವ್ ಕೂಡ ಅಸಮಾಧಾನ ವ್ಯಕ್ತಪಡಿಸಿದ್ದು, 'ಮೆಟ್ರೊ ಅಂದರೆ ಏನು? ಸಬ್ ಅರ್ಬನ್, ಇಂಟರ್ ಸಿಟಿ ಹಾಗೂ ದೀರ್ಘ ದೂರ ಕ್ರಮಿಸುವ ರೈಲುಗಳ ನಡುವಣ ವ್ಯತ್ಯಾಸ ಏನು ಎಂಬುದನ್ನು ಯಾರಾದರೂ ಈ ಸರ್ಕಾರಕ್ಕೆ ಅರ್ಥ ಮಾಡಿಸುವಿರಾ? ಈ ಬೇಡಿಕೆ ಇನ್ನು ಮುಂದೆ ವಿಜಯಪುರ, ಚಿತ್ತಾಪುರ, ಬೆಳಗಾವಿಗೂ ವಿಸ್ತರಿಸಬಹುದು' ಎಂದು 'ಎಕ್ಸ್'ನಲ್ಲಿ ವ್ಯಂಗ್ಯ ಮಾಡಿದ್ದಾರೆ.

ಕನ್ನಡಿಗರಿಗೆ ಅವಮಾನ ಹೋಟೆಲ್‌ಗೆ ಬೀಗ

ಪ್ರಜಾವಾಣಿ ವಾರ್ತೆ


ಹೋಟೆಲ್ ಸಿಬ್ಬಂದಿ ಬಂಧನ

ಹೋಟೆಲ್ ಮಾಲೀಕ ಹಾಗೂ ಸಿಬ್ಬಂದಿ ವಿರುದ್ಧ ಮಡಿವಾಳ ಠಾಣೆ ಪೊಲೀಸರು ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮಾಲೀಕ ವಿದೇಶದಲ್ಲಿದ್ದು, ನೋಟಿಸ್ ಜಾರಿ ಮಾಡಲಾಗಿದೆ

ಸಾರಾ ಫಾತಿಮಾ, ಡಿಸಿಪಿ, ಆಗ್ನೇಯ ವಿಭಾಗ

ಬೆಂಗಳೂರು: ಡಿಜಿಟಲ್ ಬೋರ್ಡ್‌ನಲ್ಲಿ ಕನ್ನಡಿಗರ ಕುರಿತು ಅವಹೇಳನಕಾರಿ ಬರಹ ಪ್ರಕಟಿಸಿದ್ದ ತಾವರೆಕೆರೆ ಮುಖ್ಯರಸ್ತೆಯಲ್ಲಿ ಇರುವ ಜಿ.ಎಸ್. ಸೂಟ್ಸ್ ಹೋಟೆಲ್‌ನ ಪರವಾನಗಿಯನ್ನು ಬಿಬಿಎಂಪಿ ರದ್ದುಗೊಳಿಸಿದೆ.

ಬೋರ್ಡ್‌ನಲ್ಲಿ ಪ್ರಕಟವಾಗಿದ್ದ ಬರಹವು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ ಬಳಿಕ ಸ್ಥಳೀಯರು ಲಾಡ್ಜ್ ಎದುರು ಶನಿವಾರ ಜಮಾಯಿಸಿ ಆಕ್ರೋಶ ವ್ಯಕ್ತಪಡಿಸಿದ್ದರು.

ಆಕ್ರೋಶ ಹೆಚ್ಚಾದ ಬೆನ್ನಲ್ಲೇ ಸ್ಥಳಕ್ಕೆ ಭೇಟಿ ನೀಡಿದ್ದ ಮಡಿವಾಳ ಠಾಣೆಯ ಪೊಲೀಸರು, ಜಿ.ಎಸ್.ಸೂಟ್ಸ್ ಹೋಟೆಲ್‌ನ ಸಿಬ್ಬಂದಿ ಮಹಮ್ಮದ್, ಅಬ್ದುಲ್ ಸಮದ್ ಸೇರಿ ಐವರನ್ನು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಿದರು.

ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 196 (ವೈಷಮ್ಯ ಮೂಡಿಸುವುದು) ಅಡಿ ಪ್ರಕರಣ ದಾಖಸಿಕೊಂಡು ಹೋಟೆಲ್‌ನ ವ್ಯವಸ್ಥಾಪಕನನ್ನು ಬಂಧಿಸಲಾಗಿದೆ. ಉಳಿದವರ ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಹೋಟೆಲ್‌ನ ಪರವಾನಗಿ ರದ್ದುಗೊಳಿಸಿ, ಬೀಗ ಹಾಕಲಾಗಿದೆ' ಎಂದು ಬಿಬಿಎಂಪಿಯ ಮುಖ್ಯ ಆಯುಕ್ತ ಎಂ.ಮಹೇಶ್ವರ ರಾವ್ ತಿಳಿಸಿದರು.

ತಡರಾತ್ರಿ ಪ್ರಕಟವಾಗಿದ್ದ ಬರಹ: ಹೋಟೆಲ್‌ನ ಹೊರಭಾಗದಲ್ಲಿ ಡಿಜಿಟಲ್ ಬೋರ್ಡ್ ಅಳವಡಿಸಲಾಗಿತ್ತು. ಅದರಲ್ಲಿ ಶುಕ್ರವಾರ ತಡರಾತ್ರಿ ಕನ್ನಡಿಗರ ಕುರಿತ ಅವಹೇಳನಕಾರಿ ಬರಹವೊಂದು ಪ್ರಕಟವಾಗಿತ್ತು. ಅದನ್ನು ಗಮನಿಸಿದ್ದ ಸ್ಥಳೀಯರೊಬ್ಬರು, ಮೊಬೈಲ್‌ನಲ್ಲಿ ಸೆರೆ ಹಿಡಿದು ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಹಾಕಿದ್ದರು.

'ಕೋರಮಂಗಲದ ಕಂಪನಿಯೊಂದು ಡಿಜಿಟಲ್ ಬೋರ್ಡ್ ಸಿದ್ಧಪಡಿಸಿಕೊಟ್ಟಿತ್ತು. ಮೇ 8ರ ಬಳಿಕ ಬೋರ್ಡ್‌ನಲ್ಲಿ ಬೇರೆ ಬೇರೆ ವಾಕ್ಯಗಳು ಡಿಸ್ ಪ್ಲೇ ಆಗುತ್ತಿದ್ದರಿಂದ ಕಂಪನಿಗೆ ಮಾಹಿತಿ ನೀಡಿದ್ದೆವು. ಕನ್ನಡಿಗರ ಕುರಿತು ಅವಾಚ್ಯ ವಾಕ್ಯ ಹೇಗೆ ಡಿಸ್‌ಪ್ಲೆ ಆಗಿದೆ ಎಂಬುದು ನಮಗೆ ಗೊತ್ತಿಲ್ಲ. ಹ್ಯಾಕ್ ಆಗಿರುವ ಸಾಧ್ಯತೆ ಇದೆ ಎಂಬುದಾಗಿ ಹೋಟೆಲ್ ಸಿಬ್ಬಂದಿ ವಿಚಾರಣೆಯ ವೇಳೆ ತಿಳಿಸಿದ್ದಾರೆ. ಬೋರ್ಡ್ ಸಿದ್ಧಪಡಿಸಿಕೊಟ್ಟವರಿಗೂ ನೋಟಿಸ್ ಜಾರಿ ಮಾಡಿ ವಿಚಾರಣೆ ನಡೆಸಲಾಗುವುದು' ಎಂದು ಪೊಲೀಸರು ಹೇಳಿದರು.

'ಕನ್ನಡ ಭಾಷೆ ಹಾಗೂ ಕನ್ನಡಿಗರಿಗೆ ಅಪಮಾನವಾದರೆ ಪ್ರಶ್ನೆ ಮಾಡಬೇಕು. ಕನ್ನಡ ಸಂಘಟನೆಗಳೇ ಪ್ರಶ್ನಿಸಬೇಕು ಎಂದು ಕಾಯದೇ ಸ್ಥಳೀಯರು ಕನ್ನಡ ವಿರೋಧಿಗಳ ವಿರುದ್ಧ ಹೋರಾಟ ನಡೆಸಬೇಕು' ಎಂದು ಸ್ಥಳೀಯ ನಿವಾಸಿ ಶರತ್ ಆಗ್ರಹಿಸಿದರು.

'ಹೋಟೆಲ್ ಮಾಲೀಕ ಎಲ್ಲಿಯವರು? ಯಾವಾಗ ಹೋಟೆಲ್ ಆರಂಭಿಸಿದ್ದರು ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ. ಪ್ರಾಥಮಿಕ ತನಿಖೆಯಂತೆ ಹೋಟೆಲ್ ಮಾಲೀಕ ಹೊರ ರಾಜ್ಯದವರು ಎಂಬುದು ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ತಪ್ಪಿತಸ್ಥರ ವಿರುದ್ಧ ಕ್ರಮ ಆಗಬೇಕು. ಜಿಎಸ್ ಸೂಟ್ಸ್ ಹೋಟೆಲ್ ಒಂದೇ ಅಲ್ಲ. ಬೇರೆ ಬೇರೆ ಭಾಗದಿಂದ ಬೆಂಗಳೂರಿಗೆ ಬಂದು ಹೋಟೆಲ್, ಲಾಡ್ಜ್ ತೆರೆದಿರುವ ವ್ಯಕ್ತಿಗಳಿಂದ ಕನ್ನಡಕ್ಕೆ ಅಪಮಾನ ಆಗುತ್ತಿದೆ. ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದು ಕರ್ನಾಟಕ ರಕ್ಷಣಾ ವೇದಿಕೆಯ ಪ್ರವೀಣ್ ಶೆಟ್ಟಿ ಆಗ್ರಹಿಸಿದರು.



ಬಿರುಸಿನ ಮಳೆ
ಮನೆಗಳಿಗೆ ನುಗ್ಗಿದ ನೀರು

- ರಸ್ತೆಯಲ್ಲಿ ನೀರು ನಿಂತಿದ್ದರಿಂದ ವಾಹನಗಳ ಸಂಚಾರಕ್ಕೆ ತೊಡಕು
- ತಾಸುಗಟ್ಟಲೆ ನಿಂತ ವಾಹನಗಳು



ಎಂ.ಜಿ. ರಸ್ತೆಯ ಮಹಾತ್ಮಗಾಂಧಿ ಪ್ರತಿಮೆ ಬಳಿ ಮಳೆ ನೀರು ನಿಂತು ಕಾಲುವೆಯಂತಾಗಿದ್ದ ರಸ್ತೆಯನ್ನು ದಾಟುತ್ತಿರುವ ಜನರು ಚಿತ್ರ: ಎಸ್‌ಕೆ. ದಿನೇಶ್ (ಎಡ ಚಿತ್ರ)

ರೆಸಿಡೆನ್ಸಿ ರಸ್ತೆಯಲ್ಲಿ ಮಳೆಯಿಂದಾಗಿ ವಾಹನ ದಟ್ಟಣೆ ಕಂಡು ಬಂತು ಚಿತ್ರ: ರಂಜು ಪಿ



ಶಿವಾಜಿನಗರದಲ್ಲಿ ಮಳೆಯಲ್ಲೇ ಸಾಗಿದ ವಾಹನ ಸವಾರರು ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಶನಿವಾರ ಬಿರುಸಿನಿಂದ ಮಳೆಯಾಗಿದೆ. ಚರಂಡಿ ವ್ಯವಸ್ಥೆ ಸರಿ ಇಲ್ಲದೇ ಹಲವೆಡೆ ನೀರು ರಸ್ತೆಯಲ್ಲೇ ಹರಿದಿದೆ. ಇದರಿಂದ ವಾಹನ ಸರಾಗ ಸಂಚಾರಕ್ಕೆ ತೊಡಕುಂಟಾಯಿತು. ಕೆಲವು ಬಡಾವಣೆಗಳಲ್ಲಿ ಚರಂಡಿ ನೀರು ಮನೆಗಳಿಗೆ ನುಗ್ಗಿದೆ.

ಬಾಣಸವಾಡಿ ಮತ್ತು ಇಂದಿರಾನಗರದಲ್ಲಿ ಮರ ಮುರಿದು ಬಿದ್ದಿದೆ. ಯಾರಿಗೂ ಜೀವಾಪಾಯ ಉಂಟಾಗಿಲ್ಲ. ಪುಟ್ಟೇಣಹಳ್ಳಿಯಲ್ಲಿ ವೆಂಕಟಾದ್ರಿ ಅಪಾರ್ಟ್‌ಮೆಂಟ್‌ನ ಆವರಣಗೋಡೆ ಕುಸಿದಿದೆ. ಸಾಯಿ ಲೇಔಟ್‌ನಲ್ಲಿ ಮನೆಗಳು ಜಲಾವೃತಗೊಂಡವು. ಬನ್ನೇರುಘಟ್ಟ ರಸ್ತೆಯ ಮೈಕೋ ಲೇಔಟ್‌ನಲ್ಲಿ 15 ಮನೆಗಳಿಗೆ ನೀರು ನುಗ್ಗಿದೆ.

ರೆಸಿಡೆನ್ಸಿ ರಸ್ತೆ, ಯಶವಂತಪುರ ರಸ್ತೆಗಳಲ್ಲಿ ವಾಹನಗಳು ತಾಸುಗಟ್ಟಲೆ ನಿಲ್ಲುವಂತಾಯಿತು. ಕೆ.ಆರ್. ವೃತ್ತದಲ್ಲಿ ನೀರು ನಿಂತಿದ್ದರಿಂದ ಪೊಲೀಸ್ ಕಾರ್ನರ್ ಜಂಕ್ಷನ್ ಕಡೆಗೆ ವಾಹನ ಸಂಚಾರ ನಿಧಾನಗತಿಯಾಗಿತ್ತು. ರಸ್ತೆಗಳಲ್ಲಿ ನೀರು ನಿಂತಿದ್ದರಿಂದ ಸಾರಕ್ಕಿ ಮೆಟ್ರೊದಿಂದ (ಪುನೀತ್ ರಾಜ್‌ಕುಮಾರ್ ರಸ್ತೆ) ಬನ್ನೇರುಘಟ್ಟ ರಸ್ತೆ ಕಡೆಗೆ, ರಾಮಮೂರ್ತಿ ನಗರದಿಂದ ಟಿನ್ ಫ್ಯಾಕ್ಟರಿ ಕಡೆಗೆ, ಕೋರಮಂಗಲದಿಂದ ದೊಮ್ಮಲೂರು ಮೇಲ್ಸೇತುವೆ ಕಡೆಗೆ ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಯಿತು.

ಇದೇ ರೀತಿ ಎಚ್‌ಎಸ್‌ಬಿಸಿ ಜಂಕ್ಷನ್, ಜಿ.ಡಿ. ಮಾರಾ ಜಂಕ್ಷನ್, ಮಾನ್ಯತಾ ಟೆಕ್‌ಪಾರ್ಕ್, ಆಡುಗೋಡಿ, ಹುಳಿಮಾವು ಗೇಟ್, ಅನಿಲ್ ಕುಂಬ್ಳೆ ಜಂಕ್ಷನ್, ಜಾಲಹಳ್ಳಿ ಕ್ರಾಸ್, ವಸಂತ ನಗರ, ಖೋಡೆ ವೃತ್ತ, ಐಟಿಪಿಎಲ್ ಮುಖ್ಯ ರಸ್ತೆಯ ಹೂಡಿ, ಇಬ್ಬಲೂರು ಜಂಕ್ಷನ್, ಬನಶಂಕರಿ, ವಿದ್ಯಾಶಿಲ್ಪ ಸರ್ವೀಸ್ ರಸ್ತೆ, ಎಎಸ್‌ಸಿ ಜಂಕ್ಷನ್, ಅಯೋಧ್ಯ ಜಂಕ್ಷನ್, ಟ್ಯಾನರಿ ರಸ್ತೆ, ವೀರಣ್ಣಪಾಳ್ಯ ಜಂಕ್ಷನ್, ಕಮರ್ಷಿಯಲ್ ಸ್ಟ್ರೀಟ್, ಆನೆಪಾಳ್ಯ, ಹೋಪ್‌ಫಾರ್ಮ್ ಸಿಗ್ನಲ್, ವೈಟ್‌ಫೀಲ್ಡ್, ವಿಂಡ್ಸನ್ ಮ್ಯಾನರ್ ರೈಲ್ವೆ ಸೇತುವೆ ಬಳಿ ನೀರು ನಿಂತು ಸಂಚಾರಕ್ಕೆ ತೊಂದರೆಯಾಯಿತು.

ಜೆ ಪಿ ನಗರ, ಶ್ರೀನಿವಾಗಿಲು, ಗೋಪಾಲನ್ ಮಾಲ್, ಮೇಖ್ರಿ ವೃತ್ತದ ಕೆಳ ಸೇತುವೆ, ಎಂ.ಎಸ್. ಪಾಳ್ಯ, ಕಲ್ಯಾಣ ನಗರ, ಪಣತ್ತೂರು, ದೇವರ ಬೀಸನಹಳ್ಳಿ, ಜೆ.ಬಿ. ನಗರ. ಗುಂಜೂರು, ಹುಣಸಮಾರನಹಳ್ಳಿ ಸರ್ವೀಸ್ ರಸ್ತೆ, ಹೆಬ್ಬಾಳ, ವೀರಣ್ಣ ಪಾಳ್ಯ ಸಹಿತ ಹಲವೆಡೆ ರಸ್ತೆ ಮೇಲೆ ನೀರು ಹರಿದಿದೆ.

ಕಂಟ್ರೋಲ್ ರೂಂಗೆ ಭೇಟಿ

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಬಿಬಿಎಂಪಿ ಮುಖ್ಯ ಆಯುಕ್ತ ಎಂ.ಮಹೇಶ್ವರರಾವ್ ಅವರು ಶನಿವಾರ ರಾತ್ರಿ ಕಂಟ್ರೋಲ್ ರೂಂಗೆ ಭೇಟಿ ನೀಡಿ ಮಳೆಯಿಂದ ಉಂಟಾದ ಅನಾಹುತಗಳ ಬಗ್ಗೆ ಮಾಹಿತಿ ಪಡೆದರು. ಮುರಿದು ಬಿದ್ದ ಮರಗಳನ್ನು ಕೂಡಲೇ ತೆರವುಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಬೆಂಗಳೂರಿನ ರಾಜಕುಮಾರ್ ರಸ್ತೆಯಲ್ಲಿ ಶನಿವಾರ ಬಂದ ಮಳೆಯಲ್ಲಿ ಜನರು ಸಾಗುತ್ತಿರುವ ದೃಶ್ಯ ಪ್ರಜಾವಾಣಿ ಚಿತ್ರ

ಹೆಚ್ಚು ಮಳೆಯಾದ ಪ್ರದೇಶ

ಸ್ಥಳ	ಪ್ರಮಾಣ (ಸೆಂ.ಮೀ)
ಬಿಳೇಕಹಳ್ಳಿ	5.1
ಪುಲಕೇಶಿ ನಗರದಲ್ಲಿ	4.9
ವನ್ನಾರಪೇಟೆ	4.9
ಹೊರಮಾವು	4.7
ಸಂಪಂಗಿರಾಮ ನಗರ	4.4
ಪುಟ್ಟೇನಹಳ್ಳಿ	4.2
ಅರಕೆರೆ	4.1
ಬಾಣಸವಾಡಿ	3.9
ಕೋರಮಂಗಲ	3.6
ಚೌಡೇಶ್ವರಿ	3.3
ಜಕ್ಕೂರು	3.3
ಪಟ್ಟಾಭಿರಾಮನಗರ	3.3
ಮಾರತ್‌ಹಳ್ಳಿ	2.9
ಕುಶಾಲನಗರ	2.9
ಹಗದೂರು	2.9
ಎಚ್‌ಎಎಲ್	2.8
ಕಾಡುಗೋಡಿ	2.6
ವಿದ್ಯಾಪೀಠ	2.6
ಕೊಡಿಗೆಹಳ್ಳಿ	2.2
ರಾಮಮೂರ್ತಿ ನಗರ	2.2
ಬಸವನಪುರ	2.1

ಮುರಿದು ಬಿದ್ದ 8 ಮರ, 20 ಟೊಂಗೆ

ಶನಿವಾರ ಸುರಿದ ಭಾರಿ ಮಳೆಗೆ ನಗರದ ವಿವಿಧೆಡೆ 8 ಮರಗಳು, 20 ಟೊಂಗೆಗಳು ಮುರಿದು ಬಿದ್ದಿವೆ.

4 ಮರ ಹಾಗೂ 10 ಟೊಂಗೆಗಳನ್ನು ರಾತ್ರಿಯೇ ತೆರವುಗೊಳಿಸಲಾಗಿದೆ. ಉಳಿದವುಗಳನ್ನು ತೆರವುಗೊಳಿಸುವ ಕಾರ್ಯ ನಡೆಯುತ್ತಿದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.



ಬ್ರಿಗೇಡ್ ರಸ್ತೆಯಲ್ಲಿ ಸುರಿಯುತ್ತಿರುವ ಮಳೆಯಲ್ಲಿ ಜನರು ಸಾಗಿದರು ಚಿತ್ರ: ಎಂ. ಎಸ್ ಮಂಜುನಾಥ್

ಸಂಚಾರ ದಟ್ಟಣೆ: ಪರದಾಟ

ಭಾರಿ ಮಳೆಯಿಂದ ನಗರದ ಹಲವು ಕಡೆ ಸಂಚಾರ ದಟ್ಟಣೆ ಉಂಟಾಗಿತ್ತು. ಮೆಜೆಸ್ಟಿಕ್, ರಾಜಾಜಿನಗರ, ಯಶವಂತಪುರ, ಗೊರಗುಂಟೆಪಾಳ್ಯ, ಮೈಸೂರು ರಸ್ತೆಯ ಸ್ಯಾಟಲೈಟ್ ಬಸ್ ನಿಲ್ದಾಣ, ದೀಪಾಂಜಲಿನಗರ, ಕೆಂಗೇರಿ ಭಾಗದಲ್ಲಿ ಸಂಚಾರದ ದಟ್ಟಣೆ ಉಂಟಾಗಿತ್ತು. ದಟ್ಟಣೆಯಲ್ಲಿ ಆಂಬುಲೆನ್ಸ್‌ಗಳು ಸಿಲುಕಿದ್ದವು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಕೋಲತ್ತ ನೈಟ್ ರೈಡರ್ಸ್ ತಂಡಗಳ ನಡುವೆ ಶನಿವಾರ ಐಪಿಎಲ್ ಪಂದ್ಯ ವೀಕ್ಷಣೆಗೆಂದು ಭಾರಿ ಸಂಖ್ಯೆಯಲ್ಲಿ ಕ್ರಿಕೆಟ್ ಅಭಿಮಾನಿಗಳು ಸೇರಿದ್ದರು. ಸಂಜೆ ವೇಳೆಗೆ ಜೋರು ಮಳೆ ಆರಂಭವಾಗಿದ್ದರಿಂದ ಕ್ರೀಡಾಂಗಣದ ಸುತ್ತಮುತ್ತ ಜನರು ಪರದಾಡುವ ಸ್ಥಿತಿ ನಿರ್ಮಾಣವಾಗಿತ್ತು.

ಸುದ್ದಿ 2 ನಿಮಿಷ

ಕಸಾಪ ಸಾಹಿತ್ಯ ಪರೀಕ್ಷೆ: ಸೌಜನ್ಯಾ, ಕೀರ್ತನಾ, ಇಸ್ಮಾಯಿಲ್ ಪ್ರಥಮ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) 2024–25ನೇ ಸಾಲಿನ ಕನ್ನಡ ಪ್ರವೇಶ, ಕಾವ, ಜಾಣ ಮತ್ತು ರತ್ನ ಪರೀಕ್ಷೆಗಳ ಫಲಿತಾಂಶ ಪ್ರಕಟಿಸಿದೆ.

ಫೆ.7ರಿಂದ ಫೆ.9ರವರೆಗೆ ರಾಜ್ಯದಾದ್ಯಂತ 18 ಕೇಂದ್ರಗಳಲ್ಲಿ ನಡೆದ ಈ ಪರೀಕ್ಷೆಯನ್ನು ಒಟ್ಟು 1,534 ಅಭ್ಯರ್ಥಿಗಳು ಎದುರಿಸಿದ್ದರು. 'ಕನ್ನಡ ಪ್ರವೇಶ' ಪರೀಕ್ಷೆಗೆ ಹಾಜರಾಗಿದ್ದ 536 ಅಭ್ಯರ್ಥಿಗಳಲ್ಲಿ 457 ಮಂದಿ (ಶೇ 85.26) ತೇರ್ಗಡೆಯಾಗಿದ್ದಾರೆ. ಸೌಜನ್ಯಾ ಅನಿಲಕುಮಾರ ಗುಣದಾಳ ಅವರು 185 ಅಂಕ ಪಡೆಯುವುದರೊಂದಿಗೆ ಮೊದಲ ರ‍್ಯಾಂಕ್ ಪಡೆದಿದ್ದಾರೆ.

'ಕನ್ನಡ ಕಾವ' ಪರೀಕ್ಷೆ ಬರೆದ 655 ಅಭ್ಯರ್ಥಿಗಳಲ್ಲಿ 519 ಮಂದಿ (ಶೇ 79.24) ಉತ್ತೀರ್ಣರಾಗಿದ್ದಾರೆ. ಕೀರ್ತನಾ ಎಂ. (167) ಪ್ರಥಮ ರ‍್ಯಾಂಕ್ ಗಳಿಸಿದ್ದಾರೆ. 'ಕನ್ನಡ ಜಾಣ' ಪರೀಕ್ಷೆಯನ್ನು 37 ಅಭ್ಯರ್ಥಿಗಳು ಬರೆದಿದ್ದು, 29 ಮಂದಿ (ಶೇ 78.38) ತೇರ್ಗಡೆಯಾಗಿದ್ದಾರೆ. ಶ್ರೀನಿವಾಸ ಕೆ. (372) ಮೊದಲ ರ‍್ಯಾಂಕ್ ಪಡೆದಿದ್ದಾರೆ.

'ಕನ್ನಡ ರತ್ನ' ಪರೀಕ್ಷೆಗೆ 62 ಅಭ್ಯರ್ಥಿಗಳು ಹಾಜರಾಗಿದ್ದು, 44 ಮಂದಿ (ಶೇ 70.97) ಉತ್ತೀರ್ಣರಾಗಿದ್ದಾರೆ. ಇಸ್ಮಾಯಿಲ್ ಸಾಬ್ ಐರಣಿ ಅವರು 389 ಅಂಕಗಳೊಂದಿಗೆ ಮೊದಲ ರ‍್ಯಾಂಕ್ ಗಳಿಸಿದ್ದಾರೆ.

ಫಲಿತಾಂಶವನ್ನು ಪರಿಷತ್ತಿನ ಅಂತರ್ಜಾಲ ತಾಣ www.kasapa.in ಮೂಲಕ ಪಡೆದುಕೊಳ್ಳಬಹುದು ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಸಕ ಮಂಜುನಾಥ್ ವಜಾ ಮಾಡಿ: ಶರವಣ

ಬೆಂಗಳೂರು: 'ಆಪರೇಷನ್ ಸಿಂಧೂರದ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ಶಾಸಕ ಕೊತ್ತನೂರು ಮಂಜುನಾಥ್ ಅವರನ್ನು ಕಾಂಗ್ರೆಸ್ ಪಕ್ಷವು ತಕ್ಷಣವೇ ವಜಾ ಮಾಡಬೇಕು' ಎಂದು ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯ ಟಿ.ಎ.ಶರವಣ ಆಗ್ರಹಿಸಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಪಹಲ್ಗಾಮ್‌ನಲ್ಲಿ ಉಗ್ರರ ರಾಕ್ಷಸೀ ಕೃತ್ಯಕ್ಕೆ ತಕ್ಕ ಎದಿರೇಟು ನೀಡಲು ಆಪರೇಶನ್ ಸಿಂಧೂರ ನಡೆಸಲಾಗಿದೆ. ಅದನ್ನು ಮಂಜುನಾಥ್ ಪ್ರಶ್ನಿಸಿದ್ದಾರೆ. ಕಾಂಗ್ರೆಸ್‌ನ ನಿಲುವು ಸಹ ಇದೇನಾ ಎಂಬುದನ್ನು ಪಕ್ಷವು ಸ್ಪಷ್ಟಪಡಿಸಬೇಕು' ಎಂದಿದ್ದಾರೆ.

ಬಾಂಗ್ಲಾ ಸರಕುಗಳ ಆಮದಿಗೆ ನಿರ್ಬಂಧ

ನವದೆಹಲಿ (ಪಿಟಿಐ): ಬಾಂಗ್ಲಾದೇಶದಿಂದ ನಿರ್ದಿಷ್ಟ ಸರಕುಗಳ ಆಮದಿಗೆ ಕೇಂದ್ರ ಸರ್ಕಾರ ಶನಿವಾರ ನಿರ್ಬಂಧ ವಿಧಿಸಿದೆ. ಕಳೆದ ತಿಂಗಳು ಬಾಂಗ್ಲಾದೇಶ ಭಾರತದ ಕೆಲ ಉತ್ಪನ್ನಗಳ ಆಮದು ಮೇಲೆ ಇದೇ ರೀತಿಯ ನಿರ್ಬಂಧ ವಿಧಿಸಿತ್ತು.

ಇದಕ್ಕೆ ಪ್ರತಿಕ್ರಿಯೆಯಾಗಿ, ಬಾಂಗ್ಲಾದಿಂದ ಸಿದ್ಧ ಉಡುಪುಗಳು ಮತ್ತು ಸಂಸ್ಕರಿಸಿದ ಆಹಾರ ಪದಾರ್ಥಗಳಂತಹ ಕೆಲವು ಸರಕುಗಳ ಆಮದಿಗೆ ಭಾರತ ನಿರ್ಬಂಧ ವಿಧಿಸಿದೆ.

ಇದು, ತಕ್ಷಣದಿಂದಲೇ ಜಾರಿಗೆ ಬರಲಿದೆ ಎಂದು ವಿದೇಶಿ ವ್ಯಾಪಾರ ಮಹಾನಿರ್ದೇಶನಾಲಯದ (ಡಿಜಿಎಫ್‌ಟಿ) ತಿಳಿಸಿದೆ.

'ಒಂದೆಡೆ' ಸಂಸ್ಥೆ ಆಯೋಜಿಸಿದ್ದ ಸಾರ್ವಜನಿಕ ಸಭೆಯಲ್ಲಿ ಹಕ್ಕೊತ್ತಾಯ

ಲಿಂಗತ್ವ ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯ ತಪ್ಪಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಿಂಗತ್ವ ಅಲ್ಪಸಂಖ್ಯಾತರ ಮೇಲೆ ಆಗುತ್ತಿರುವ ಪೊಲೀಸ್ ಮತ್ತು ಕೌಟುಂಬಿಕ ದೌರ್ಜನ್ಯಗಳಿಗೆ ಕಡಿವಾಣ ಹಾಕಲು ಕಾನೂನು ರೂಪಿಸಬೇಕು. ಶೈಕ್ಷಣಿಕ ತಾರತಮ್ಯವನ್ನು ನಿವಾರಿಸಬೇಕು. ಸಾರ್ವಜನಿಕರಲ್ಲಿ ನಮ್ಮ ಸಮುದಾಯದ ಕುರಿತು ಜಾಗೃತಿ ಮೂಡಿಸಬೇಕು...

ಇವು 'ಒಂದೆಡೆ ಸಂಸ್ಥೆ' ಶನಿವಾರ ಆಯೋಜಿಸಿದ್ದ ಅಂತರ್ಲಿಂಗಿ, ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದ ಪ್ರಸ್ತುತ ಸ್ಥಿತಿಗತಿಗಳು, ಸವಾಲುಗಳು ಮತ್ತು ಪರಿಹಾರಗಳು' ಎಂಬ ಸಾರ್ವಜನಿಕ ಸಭೆಯಲ್ಲಿ ಮಂಡಿಸಿದ ಹಕ್ಕೊತ್ತಾಯಗಳು.

'ಹೆಣ್ಣಾದರೂ ಹೆಣ್ಣಲ್ಲದ, ಗಂಡಾದರೂ ಗಂಡಲ್ಲದ, ಅವನೊಳಗಿನ ಅವಳು, ಅವಳೊಳಗಿನ ಅವನನ್ನು ಹೊರತರುವ ಯತ್ನದಲ್ಲಿ ಲೋಕ ನಿಂದಿತರಾದವರು ಲಿಂಗತ್ವ ಅಲ್ಪಸಂಖ್ಯಾತರು. ನಮ್ಮಲ್ಲಿ ಮೂಡುವ ಇಂತಹ ಭಾವನೆಗಳನ್ನು ಯಾರ ಬಳಿಯೂ ಹೇಳಿಕೊಳ್ಳಲಾಗದೇ ಖಿನ್ನತೆಗೆ ಒಳಗಾಗಿ, ಆತ್ಮಹತ್ಯೆ ಪ್ರಕರಣಗಳು ಹೆಚ್ಚುತ್ತಿವೆ. ಲಿಂಗತ್ವ ಅಲ್ಪಸಂಖ್ಯಾತರಾಗಿ ಬದಲಾಗಲು ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳುವವರಿಗೆ ಕೌನ್ಸಿಲಿಂಗ್ ಮಾಡಬೇಕು. ಶಸ್ತ್ರ ಚಿಕಿತ್ಸೆ ಮಾಡುವ ವೈದ್ಯರಿಗೆ ತರಬೇತಿ ನೀಡಬೇಕು' ಎಂದು ಐಟಿ ಕಂಪನಿಯ ಉದ್ಯೋಗಿ ಪೃಥ್ವಿ ಒತ್ತಾಯಿಸಿದರು.



ಶನಿವಾರ ಇಲ್ಲಿ ನಡೆದ ಲಿಂಗತ್ವ ಅಲ್ಪಸಂಖ್ಯಾತರ ಸಭೆಯಲ್ಲಿ ಭಿತ್ತಿಪತ್ರವನ್ನು ಬಿಡುಗಡೆ ಮಾಡಲಾಯಿತು. ಅಕ್ಕೈ ಪದ್ಮಶಾಲಿ, ಭಾಗ್ಯಲಕ್ಷ್ಮಿ, ಎಲ್‌.ಎನ್. ಮುಕುಂದರಾಜ್, ಡಾ. ಅಲಿಕ್ವಾಜ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

'ಶೈಕ್ಷಣಿಕ ರಂಗದಲ್ಲಿ ಆಗುತ್ತಿರುವ ತಾರತಮ್ಯಗಳನ್ನು ನಿವಾರಿಸಬೇಕು. ಲಿಂಗತ್ವ ಅಲ್ಪಸಂಖ್ಯಾತರಿಗೆ ಮೂಲ ಸೌಲಭ್ಯಗಳನ್ನು ಒದಗಿಸಬೇಕು. ಸಾರ್ವಜನಿಕ ಪ್ರದೇಶಗಳಲ್ಲಿ ಪ್ರತ್ಯೇಕ ಶೌಚಾಲಯಗಳನ್ನು ನಿರ್ಮಿಸಬೇಕು' ಎಂದು ಸಮುದಾಯದ ಸಹನಾ ಮತ್ತು ಚಿನ್ನು ಮನವಿ ಮಾಡಿದರು.

'ಪೊಲೀಸ್ ಎಂಬ ಶಬ್ದ ಕೇಳಿದರೆ ಸಾಕು ನಮ್ಮ ಸಮುದಾಯದವರಲ್ಲಿ ಭಯದ ವಾತಾವರಣ ನಿರ್ಮಾಣವಾಗುತ್ತದೆ. ನಾವು ಯಾವುದೇ ಕೆಲಸಗಳನ್ನು ಮಾಡಿದರೂ ಪೊಲೀಸರು ಅದಕ್ಕೆ ಅಡ್ಡಿಪಡಿಸುತ್ತಾರೆ. ನಮ್ಮನ್ನು ರಕ್ಷಿಸ ಬೇಕಾದವರೇ ನಮ್ಮ ಮೇಲೆ ದಬ್ಬಾಳಿಕೆ ಮಾಡಿದರೆ, ನಾವು ಯಾರ ಬಳಿ ನ್ಯಾಯ ಕೇಳಬೇಕು' ಎಂದು ಮೋನಿಕಾ ಪ್ರಶ್ನಿಸಿದರು.

'ಸರ್ಕಾರದ ಗ್ಯಾರಂಟಿ ಯೋಜನೆಗಳು ನಮ್ಮ ಸಮುದಾಯಕ್ಕೆ ಸರಿಯಾಗಿ ತಲುಪುತ್ತಿಲ್ಲ' ಎಂದು ಸಮೀರ್ ಬೇಸರ ವ್ಯಕ್ತಪಡಿಸಿದರು.

ಬೆಂಗಳೂರು ಸಿವಿಲ್ ನ್ಯಾಯಾಲಯದ ಹಿರಿಯ ಸರ್ಕಾರಿ ಅಭಿಯೋಜಕಿ ಭಾಗ್ಯಲಕ್ಷ್ಮಿ ಮಾತನಾಡಿ, 'ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದ ಪ್ರತಿಯೊಬ್ಬರು ಶಿಕ್ಷಣ ಪಡೆದುಕೊಳ್ಳಬೇಕು. ನಮ್ಮ ಸಂವಿಧಾನದಲ್ಲಿರುವ ಕಾಯ್ದೆ, ಕಾನೂನುಗಳ ಬಗ್ಗೆ ಓದಿ ತಿಳಿದುಕೊಳ್ಳಬೇಕು. ಇದರಿಂದ ನಮ್ಮ ಮೇಲೆ ಆಗುವ ದೌರ್ಜನ್ಯಗಳನ್ನು ಪ್ರಶ್ನಿಸಲು ಸಹಾಯಕವಾಗುತ್ತದೆ. ಸಮುದಾಯ ಪರವಾಗಿ ಕಾರ್ಯನಿರ್ವಹಿಸುವ ಕಾನೂನು ಸಲಹಾ ಸಮಿತಿಯನ್ನು ರಚಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಮಾತನಾಡಿದರು. ಬಂಜಾರ ಅಕಾಡೆಮಿ ಸಂಸ್ಥಾಪಕ ಅಧ್ಯಕ್ಷ ಡಾ. ಅಲಿಕ್ವಾಜ್, ಲಿಂಗತ್ವ ಅಲ್ಪಸಂಖ್ಯಾತರ ಪರ ಹಕ್ಕುಗಳ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ ಉಪಸ್ಥಿತರಿದ್ದರು.

ಜಿಬಿಎ ವಿರುದ್ಧ ಕೋರ್ಟ್‌ಗೆ

ವಿಚಾರಸಂಕಿರಣದಲ್ಲಿ ಸಿವಿಕ್ ಸಂಸ್ಥೆಯ ಕಾತ್ಯಾಯಿನಿ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರೇಟರ್ ಬೆಂಗಳೂರು' ಹೆಸರಲ್ಲಿ ಸ್ಥಳೀಯ ಆಡಳಿತದ ಅಧಿಕಾರವನ್ನು ಕಸಿಯಲು ರಾಜ್ಯ ಸರ್ಕಾರ ಹೊರಟಿದೆ. ಇದು, ಅಧಿಕಾರ ವಿಕೇಂದ್ರೀಕರಣ ನಿಯಮಕ್ಕೆ ವಿರುದ್ಧವಾಗಿದೆ. ಇದನ್ನು ವಿರೋಧಿಸಿ 'ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ'ಯನ್ನು ಕೋರ್ಟ್‌ನಲ್ಲಿ ಪ್ರಶ್ನಿಸಲಾಗುವುದು ಎಂದು ಸಿವಿಕ್ ಬೆಂಗಳೂರು ಸಂಸ್ಥೆ ಕಾರ್ಯನಿರ್ವಾಹಕ ಟ್ರಸ್ಟಿ ಕಾತ್ಯಾಯಿನಿ ಚಾಮರಾಜ್ ತಿಳಿಸಿದ್ದಾರೆ.

ಸಿವಿಕ್ ಬೆಂಗಳೂರು ಸಂಸ್ಥೆ ಶನಿವಾರ ಹಮ್ಮಿಕೊಂಡಿದ್ದ 'ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ' ಕುರಿತ ಸಂವಾದ ಕಾರ್ಯಕ್ರಮದ ಬಳಿಕ ಅವರು ಮಾಹಿತಿ ನೀಡಿದರು.

ಸಂವಿಧಾನದ 74ನೇ ತಿದ್ದುಪಡಿಯು ನಗರ ಸ್ಥಳೀಯ ಸಂಸ್ಥೆಗಳನ್ನು ಸಾಂವಿಧಾನಿಕಗೊಳಿಸಿತ್ತು. ಅಧಿಕಾರ ವಿಕೇಂದ್ರೀಕರಣದ ಚೌಕಟ್ಟು ಒದಗಿಸಿತ್ತು. ಗ್ರೇಟರ್ ಬೆಂಗಳೂರು ಕಾಯ್ದೆ ಈ ತಿದ್ದುಪಡಿಯನ್ನು ಉಲ್ಲಂಘಿಸುತ್ತದೆ ಎಂದು ಸಂವಾದದಲ್ಲಿ ತಜ್ಞರು ಅಭಿಪ್ರಾಯಪಟ್ಟರು.

ರಾಜ್ಯ ಸರ್ಕಾರ ಸ್ಥಳೀಯ ಆಡಳಿತ ವಿಚಾರದಲ್ಲಿ ಮಧ್ಯಪ್ರವೇಶಿಸಬಾರದು. ಮುಖ್ಯಮಂತ್ರಿಯವರು ರಾಜ್ಯದ ಆಡಳಿತ ಮಾಡಬೇಕೇ ಹೊರತು ನಗರದ ಆಡಳಿತದಲ್ಲಿ ಹಸ್ತಕ್ಷೇಪ ಮಾಡಬಾರದು. ಮೂರನೇ ಹಂತದ ಸರ್ಕಾರಕ್ಕೆ ಅಧಿಕಾರ ಹಸ್ತಾಂತರಿಸಬೇಕು ಎಂದು ಕಾಯ್ದೆಗಳು ಹೇಳಿದರೆ, ಸರ್ಕಾರವು ಅದಕ್ಕೆ ವಿರುದ್ಧವಾಗಿ ಸ್ಥಳೀಯಾಡಳಿತಗಳ ಅಧಿಕಾರವನ್ನು ಹಿಂಪಡೆಯುತ್ತಿದೆ ಎಂದು ಆರೋಪಿಸಿದರು.

ಬಿಬಿಎಂಪಿ ಆಡಳಿತ ವ್ಯವಸ್ಥೆಯಲ್ಲಿ ಬೆಂಗಳೂರಿನ ಜನರಿಂದ ಆಯ್ಕೆಯಾದ ಪ್ರತಿನಿಧಿಗಳಲ್ಲಿ ಒಬ್ಬರು ಮೇಯರ್ ಆಗಿ ಆಯ್ಕೆ ಆಗುತ್ತಿದ್ದರು. ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿ ಮುಖ್ಯಮಂತ್ರಿ, ಸಚಿವರಿಗೆ ಅಧಿಕಾರ ಇರಲಿದೆ. ಮುಖ್ಯಮಂತ್ರಿ, ಸಚಿವರನ್ನು ಬೆಂಗಳೂರಿನ ಜನರು ಆಯ್ಕೆ ಮಾಡಿಲ್ಲ. ಮೇಯರ್ ಅವರೇ ಬೆಂಗಳೂರು ನಗರಾಡಳಿತವನ್ನು ನಡೆಸಬೇಕು ಎಂದು ಒತ್ತಾಯಿಸಿದರು.

ಬಿಬಿಎಂಪಿಯಲ್ಲಿ ಜನಪ್ರತಿನಿಧಿಗಳೇ ಇಲ್ಲದೇ ಐದು ವರ್ಷಗಳಾಗಿವೆ. ಬಿಬಿಎಂಪಿ ಆಡಳಿತ ವೈಫಲ್ಯಕ್ಕೆ ಸರ್ಕಾರವೇ ನೇರ ಹೊಣೆ. ಪಾಲಿಕೆಗೆ ಚುನಾವಣೆ ನಡೆಸದೇ ದಿನಕ್ಕೊಂದು ಸಬೂಬು ಹೇಳುತ್ತಿದೆ. ಬಿಬಿಎಂಪಿ ವೈಫಲ್ಯವನ್ನು ಮುಚ್ಚಿ ಹಾಕಲು 'ಜಿಬಿಎ' ಮಾಡಲಾಗುತ್ತಿದೆ ಎಂದು ದೂರಿದರು.

ನಗರ ತಜ್ಞರಾದ ಆರ್.ಟಿ. ರಘು ನಂದನ್, ಸತ್ಯಜಿತ್ ವಿಚಾರ ಮಂಡಿಸಿದರು. ಸಂದೀಪ್ ಅನಿರುಧನ್ ಸಂವಾದ ನಡೆಸಿಕೊಟ್ಟರು. ವಿವಿಧ ಸಂಸ್ಥೆಗಳ ಪ್ರತಿನಿಧಿಗಳು ಸಂವಾದದಲ್ಲಿ ಪಾಲ್ಗೊಂಡರು.



ಶನಿವಾರ ಹಮ್ಮಿಕೊಂಡಿದ್ದ 'ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ' ಕುರಿತ ಸಂವಾದ ಕಾರ್ಯಕ್ರಮದಲ್ಲಿ ಕಾತ್ಯಾಯಿನಿ ಚಾಮರಾಜ್, ಸತ್ಯಜಿತ್ ಅರಿಕುತರಾಮ್, ಟಿ.ಆರ್. ರಘುನಂದನ್ ಭಾಗವಹಿಸಿದ್ದರು. ಪ್ರಜಾವಾಣಿ ಚಿತ್ರ

ಎನ್‌ಎಚ್‌ಎಂ ವೈದ್ಯರ ವೇತನ ಹೆಚ್ಚಳ: ಸಂಸದ

ಪ್ರಜಾವಾಣಿ ವಾರ್ತೆ

ನವದೆಹಲಿ: 'ನನ್ನ ನಿರಂತರ ಪ್ರಯತ್ನದಿಂದಾಗಿ ಎನ್‌ಎಚ್‌ಎಂ ಯೋಜನೆಯಡಿ ಗುತ್ತಿಗೆ ಆಧಾರದಡಿ ಕಾರ್ಯ ನಿರ್ವಹಿಸುತ್ತಿರುವ ವೈದ್ಯರ ಮತ್ತು ದಾದಿಯರ ವೇತನವು ದೇಶದಾದ್ಯಂತ ಶೇ 25 ರಷ್ಟು ಹೆಚ್ಚಳ ಆಗಿದೆ' ಎಂದು ಬೆಂಗಳೂರು ಗ್ರಾಮಾಂತರ ಸಂಸದ ಡಾ.ಸಿ.ಎನ್. ಮಂಜುನಾಥ ತಿಳಿಸಿದ್ದಾರೆ.

'ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ವೈದ್ಯರು ಮತ್ತು ಸ್ಟಾಫ್ ನರ್ಸ್‌ಗಳ ಪ್ರಸ್ತುತ ವೇತನ ಹೆಚ್ಚಳ ಮಾಡುವಂತೆ 4-5 ತಿಂಗಳುಗಳಿಂದ ನಿರಂತರವಾಗಿ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿತ್ತು' ನನ್ನ ಮನವಿಗೆ ಸ್ಪಂದಿಸಿ ಕೇಂದ್ರ ಸರ್ಕಾರವು ವೇತನ ಹೆಚ್ಚಿಸಿದೆ' ಎಂದು ಹೇಳಿಕೆ ನೀಡಿದ್ದಾರೆ.



ಪರಿಶಿಷ್ಟ ಜಾತಿ ಸಮಗ್ರ ಸಮೀಕ್ಷೆ ಬಗ್ಗೆ ಬಿಬಿಎಂಪಿ ವತಿಯಿಂದ ಚೊಕ್ಕಸಂದ್ರದಲ್ಲಿ ಬೀದಿ ನಾಟಕ ಮೂಲಕ ಜಾಗೃತಿ ಮೂಡಿಸಲಾಯಿತು

ಎಸ್‌ಸಿ ಸಮಗ್ರ ಸಮೀಕ್ಷೆಗಾಗಿ ಜಾಗೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ ಸಮಗ್ರ ಸಮೀಕ್ಷಾ ಕಾರ್ಯದಲ್ಲಿ ನಾಗರಿಕರು ಸಕ್ರಿಯವಾಗಿ ಪಾಲ್ಗೊಳ್ಳುವ ಉದ್ದೇಶದಿಂದ ಬಿಬಿಎಂಪಿ 8 ವಲಯಗಳಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಂಡಿದೆ.

ಪಾಲಿಕೆ ಸಮನ್ವಯ ಸಮಿತಿಯ ಸದಸ್ಯ ಕಾರ್ಯದರ್ಶಿ ಹಾಗೂ ಕಲ್ಯಾಣ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ನೇತೃತ್ವದಲ್ಲಿ ಮೇ 20ರವರೆಗೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ. ಮೂರು ಹಂತಗಳಲ್ಲಿ ಸಮೀಕ್ಷಾ ಕಾರ್ಯ ನಡೆಯಲಿದೆ.

ಪರಿಶಿಷ್ಟ ಜಾತಿ ಸಮುದಾಯವರು ಹೆಚ್ಚಿರುವ ಕಾಲೊನಿಗಳಲ್ಲಿ, ಜನದಟ್ಟಣೆ ಹೆಚ್ಚಿರುವ ಜಾಗಗಳಲ್ಲಿ, ಸಿಗ್ನಲ್‌ಗಳಲ್ಲಿ, ಮಾಲ್‌ಗಳಲ್ಲಿ, ಮಾರುಕಟ್ಟೆ ಪ್ರದೇಶಗಳಲ್ಲಿ, ಬಸ್ ನಿಲ್ದಾಣ, ರೈಲು ನಿಲ್ದಾಣ, ಜನದಟ್ಟಣೆ ಪ್ರದೇಶಗಳಲ್ಲಿ ಬೀದಿ ನಾಟಕಗಳು ನಡೆಯಲಿವೆ. ಆಟೊಗಳಲ್ಲಿ ಧ್ವನಿವರ್ಧಕ ಮೂಲಕ ಸಮೀಕ್ಷೆಯ ಪ್ರಚಾರ ಮಾಡಲಾಗುತ್ತಿದೆ. ಜೊತೆಗೆ ಭಿತ್ತಿಪತ್ರಗಳು, ಕರಪತ್ರಗಳನ್ನು ಹಂಚಲಾಗುತ್ತಿದೆ.

ಗಣತಿದಾರರಿಂದ ಮನೆ-ಮನೆಗೆ ಭೇಟಿ ಸಮೀಕ್ಷೆಯು ಮೇ 5ರಂದು ಆರಂಭವಾಗಿ ಗುರುವಾರ ಮುಕ್ತಾಯಗೊಂಡಿದೆ. ಎರಡನೇ ಹಂತದಲ್ಲಿ ಮೇ 19ರಿಂದ ಮೇ 21ರವರೆಗೆ ಗಣತಿದಾರರಿಂದ ವಿಶೇಷ ಶಿಬಿರಗಳಲ್ಲಿ ಸಮೀಕ್ಷೆ ನಡೆಯಲಿದೆ. ಮೂರನೇ ಹಂತದಲ್ಲಿ ಮೇ 19ರಿಂದ 23ರವರೆಗೆ ಆನ್‌ಲೈನ್ ಮೂಲಕ ಸ್ವಯಂ ಘೋಷಣೆ ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿರುವ 27 ವಿಧಾನಸಭಾ ಕ್ಷೇತ್ರಗಳಲ್ಲಿ 8,072 ಗಣತಿದಾರರು ಮೇ 16ರವರೆಗೆ 58,122 ಪರಿಶಿಷ್ಟ ಮನೆಗಳು, 14,14,716 ಪರಿಶಿಷ್ಟರೇತರ ಮನೆಗಳಿಗೆ ಭೇಟಿ ನೀಡಿ ದತ್ತಾಂಶ ಸಂಗ್ರಹಿಸಿದ್ದಾರೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

ಸಿಎಂಆರ್‌ಐಟಿ: ರಾಷ್ಟ್ರೀಯ ಸೋಶಿಯಲ್ ಹ್ಯಾಕಥಾನ್- 2025 ಸ್ಪರ್ಧೆ

ಗಮನ ಸೆಳೆದ ತಂತ್ರಜ್ಞಾನ ಆವಿಷ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಗಳೇ ಅಭಿವೃದ್ಧಿಪಡಿಸಿದ ನವೀನ ವಿಜ್ಞಾನ ಮತ್ತು ತಂತ್ರಜ್ಞಾನ ಸಾಧನಗಳ 'ರಾಷ್ಟ್ರೀಯ ಮಟ್ಟದ ಸೋಶಿಯಲ್ ಹ್ಯಾಕಥಾನ್-2025' ಸ್ಪರ್ಧೆ ನಡೆಯಿತು.

ದೇಶದಾದ್ಯಂತ 480 ತಂಡಗಳು ಸ್ಪರ್ಧೆಗೆ ನೋಂದಾಯಿಸಿಕೊಂಡಿದ್ದು, 95 ತಂಡಗಳನ್ನು ತಜ್ಞರ ಸಮಿತಿ ಸ್ಪರ್ಧೆಗೆ ಆಯ್ಕೆ ಮಾಡಿತು.

ಆಯ್ಕೆಯಾದ ತಂಡಗಳಲ್ಲಿ 23 ಹಾರ್ಡ್‌ವೇರ್ ಮತ್ತು 72 ಸಾಫ್ಟ್‌ವೇರ್ ಯೋಜನೆಗಳು (ಪ್ರಾಜೆಕ್ಟ್) ಅಂತಿಮ ಸುತ್ತಿಗೆ ಆಯ್ಕೆಯಾದವು. ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯ, ಸಿಎಂಆರ್ ವಿಶ್ವವಿದ್ಯಾಲಯ, ಮೋಹನ್ ಬಾಬು ವಿಶ್ವವಿದ್ಯಾಲಯ, ನ್ಯಾಷನಲ್ ಪಬ್ಲಿಕ್ ಸ್ಕೂಲ್, ಎಸ್‌ಆರ್‌ಎಂ ಚೆನ್ನೈ, ಎನ್‌ಐಟಿ ರಾಯಪುರ್, ವಿಐಟಿ, ಅಮೃತ ವಿಶ್ವ ವಿದ್ಯಾಪೀಠ, ಅಣ್ಣಾ ವಿಶ್ವವಿದ್ಯಾಲಯ ಸ್ಪರ್ಧೆಯಲ್ಲಿದ್ದವು.

ಹ್ಯಾಕಥಾನ್-2025 ಸ್ಪರ್ಧೆಯಲ್ಲಿ ಪ್ರಮುಖವಾಗಿ ವಿಜ್ಞಾನ ಮತ್ತು ತಂತ್ರಜ್ಞಾನ ಆಧಾರಿತವಾಗಿ ಸಂಶೋಧಿಸಿ ಅಭಿವೃದ್ಧಿಪಡಿಸಿದ ಸಾಧನಗಳು ಗಮನಸೆಳೆದವು. ನ್ಯಾಷನಲ್ ಪಬ್ಲಿಕ್ ಶಾಲೆಯ 9 ಮತ್ತು 10ನೇ ತರಗತಿ ವಿದ್ಯಾರ್ಥಿಗಳಾದ ಜೋಶಿಸ್ ಮತ್ತು ಧ್ರುವ್ ಅಭಿವೃದ್ಧಿಪಡಿಸಿದ್ದ ರಸ್ತೆಯಲ್ಲಿ ಗುಂಡಿಗಳನ್ನು ಪತ್ತೆ ಹಚ್ಚಿ ಅಪಘಾತಗಳನ್ನು ತಡೆಯುವ 'ಸ್ಮಾರ್ಟ್ ಪಾತ್ ಹೋಲ್ ಪತ್ತೆ ಸಾಧನ' ಹೆಚ್ಚು ಗಮನ ಸೆಳೆಯಿತು. ಈ ಬಗ್ಗೆ ಮಾತನಾಡಿದ ವಿದ್ಯಾರ್ಥಿಗಳು 'ರಸ್ತೆ ಅಪಘಾತಗಳನ್ನು ತಪ್ಪಿಸಿ ಜೀವಗಳನ್ನು ಉಳಿಸಲು ಮತ್ತು ಸುರಕ್ಷಿತ ನಗರ ಯೋಜನೆ ರೂಪಿಸುವಲ್ಲಿ ಈ ಸಾಫ್ಟ್‌ವೇರ್ ಸಹಾಯ ಮಾಡುತ್ತದೆ' ಎಂದು ಹೇಳಿದರು.

ಸೃಜನಾತ್ಮಕ ತಂತ್ರಜ್ಞಾನ ಸಾಧನಗಳಾದ ಮೆಡಿಬ್ರಿಡ್ಜ್, ಭಿನ್ನ ಸಾಮರ್ಥ್ಯ ಹೊಂದಿರುವ ವ್ಯಕ್ತಿಗಳೊಂದಿಗೆ ಸಂವಹನ ನಡೆಸಲು ಸಹಾಯಕವಾಗುವ ಸಾಫ್ಟ್‌ವೇರ್, ರೋಗಿಯ ಆರೋಗ್ಯವನ್ನು ನಿರ್ವಹಣೆ ಮಾಡುವ ರಿಮೋಟ್, ಗುಹೆ ಭೂಕಂಪ ಮತ್ತು ಅನಿಲ ಸೋರಿಕೆಗಳನ್ನು ಊಹಿಸುವ ಗಣಿ ಸುರಕ್ಷತಾ ಸಾಧನಗಳು ನೋಡುಗರನ್ನು ಆಕರ್ಷಿಸಿದವು.

ಹ್ಯಾಕಥಾನ್ -2025ರ ಸ್ಪರ್ಧೆಯ ವಿಜೇತ ತಂಡಗಳಿಗೆ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು.



ಅಭಿವೃದ್ಧಿಪಡಿಸಿದ ಸಾಧನಗಳ ಬಗ್ಗೆ ಮುಖ್ಯಅತಿಥಿಗಳಿಗೆ ವಿದ್ಯಾರ್ಥಿಗಳು ಮಾಹಿತಿ ನೀಡಿದರು

'ಆರೋಗ್ಯ ತಪಾಸಣೆ, ಜಾಗೃತಿಗೆ ಕುಟುಂಬಗಳ ದತ್ತು ಯೋಜನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಶ್ವವಿದ್ಯಾಲಯದ ಆರೋಗ್ಯ ಕಾರ್ಯಕ್ರಮದಡಿ ರಾಜ್ಯದ ಗ್ರಾಮೀಣ ಭಾಗದ ಜನರ ಆರೋಗ್ಯ ತಪಾಸಣೆ ಮತ್ತು ಜಾಗೃತಿಗೆ ಕುಟುಂಬಗಳನ್ನು ದತ್ತು ಪಡೆಯುವ ಯೋಜನೆ ಜಾರಿಗೊಳಿಸಲಾಗುತ್ತಿದೆ' ಎಂದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ. ಭಗವಾನ್ ಬಿ.ಸಿ. ತಿಳಿಸಿದರು.

ವಿಶ್ವ ಅಧಿಕ ರಕ್ತದೊತ್ತಡ ದಿನದ ಅಂಗವಾಗಿ ವಿಶ್ವವಿದ್ಯಾಲಯವು ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಜಯದೇವ ಹೃದ್ರೋಗ ಸಂಸ್ಥೆ ಮತ್ತು ಇನ್‌ಸ್ಟಿಟ್ಯೂಟ್ ಆಫ್ ಪಾಲಿಸಿ ರಿಸರ್ಚ್ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಮಾತನಾಡಿದರು.

'ಹೃದಯ ಸಂಬಂಧಿ ಕಾಯಿಲೆ ತಡೆಗಟ್ಟುವುದು ಮತ್ತು ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವುದು ಈ ಯೋಜನೆಯ ಉದ್ದೇಶ. ವಿಶ್ವವಿದ್ಯಾಲಯದಡಿ 1,400ಕ್ಕೂ ಹೆಚ್ಚು ವಿದ್ಯಾಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರು ಮನೆ ಮನೆಗೆ ತೆರಳಿ ತಪಾಸಣೆ ಮಾಡುತ್ತಾರೆ' ಎಂದು ಹೇಳಿದರು.

ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಕೆ.ಎಸ್. ರವೀಂದ್ರನಾಥ್, 'ಹೃದಯ ಸಂಬಂಧಿ ಮರಣ ಪ್ರಕರಣಗಳಲ್ಲಿ ಶೇ 30ರಷ್ಟು ಸಾವುಗಳು ಅಧಿಕ ರಕ್ತದೊತ್ತಡದಿಂದಲೇ ಸಂಭವಿಸುತ್ತಿವೆ' ಎಂದು ಹೇಳಿದರು.

ಕ್ಯಾನ್ಸರ್ ತಜ್ಞ ಡಾ.ಯು.ಎಸ್. ವಿಶಾಲ್ ರಾವ್, 'ತಂಬಾಕು ಉತ್ಪನ್ನಗಳ ಸೇವನೆಯ ನಿಯಂತ್ರಣದಲ್ಲಿ ಕರ್ನಾಟಕ ಮಾದರಿಯಾಗಿದೆ' ಎಂದು ತಿಳಿಸಿದರು.


ಗ್ಲೋಬಲ್ ಹೆಲ್ತ್ ಅಡ್ವೋಕೆಸಿ ಇನ್‌ಕ್ಯೂಬಿಟರ್‌ನ ಡಾ. ಓಂಪ್ರಕಾಶ್ ಬೇರ, ವಿಶ್ವವಿದ್ಯಾಲಯದ ಉಪ ಕುಲಪತಿ ಡಾ. ರಿಯಾಜ್ ಬಾಷಾ, ಎನ್‌ಎಸ್‌ಎಸ್ ಘಟಕದ ಮುಖ್ಯಸ್ಥ ವಸಂತ್ ಶೆಟ್ಟಿ, ಇನ್‌ಸ್ಟಿಟ್ಯೂಟ್ ಫಾರ್ ಪಾಲಿಸಿ ನಿರ್ದೇಶಕ ಅಮಿತ್ ಕರ್ಣಿಕ ಉಪಸ್ಥಿತರಿದ್ದರು.




Carens Clavis
For epic journeys

Together isn't just a feeling. It's how we move. The new Carens Clavis brings that spirit to life by blending bold design with high ground clearance and spacious 3-row comfort. Advanced tech features like next-gen Kia Connect** with 80+ connected features, and ADAS# Level 2 with 20 autonomous features come together to make every drive safe, seamless and unforgettable. Because when you're with the ones who matter, every journey deserves to feel epic. Pre-book now and get ready for your family's next epic journey.

Built Smart Styled for the family


Dual Pane Panoramic Sunroof



67.62 cm (26.62") Dual Panoramic Display Panel


ADAS Level 2 with 20 Autonomous Features


Ventilated Front Seats


Smart Pure Air Purifier with AQI Display


BOSE Premium Sound System with 8 Speakers



Robust 18 Hi – Safety Package (Standard across all variants)

• Front Dual Airbags • Front Seat Side Airbags • Side Curtain Airbags • ABS (Anti-lock Brake System) • BAS (Brake Assist System) • ESC (Electronic Stability Control) • VSM (Vehicle Stability Management) • HAC (Hill-start Assist Control) • ESS (Emergency Stop Signal) • DBC (Downhill Brake Control) • Highline Tyre Pressure Monitor • Rear Parking Sensors • Speed Sensing Auto Door Lock • Impact Sensing Auto Door Unlock • All Seats 3-Point Seat Belts with Reminder • ISOFIX • Rear Occupant Alert • All Wheel Disc Brakes

Kia Service
Connected · Adaptive · Responsive · Engage

Introducing My Convenience Secure^: Option to cover your car's wear and tear parts for up to 3 years from date of delivery.

3 Years Unlimited km Warranty	Extended Warranty* Up to 5 Years	IoT Based Smart Services``	24x7 | 3 Years Nationwide RSA°

*Terms & Conditions Apply. **Kia Connect comes with 3 years free subscription. Amazon Alexa and any handheld device, mobile phone or/and smartwatch device are not standard car accessory & the customer needs to purchase from a third party. Kia Connect features may vary depending on the variant, device compatibility, software and network availability in the both vehicle and Alexa device. Kia Connect skill is only available in India and can be interacted with in English and Hindi. #Advanced Driver Assistance System (ADAS) is not a substitute for human eye and driver vigilance. It is an assistance feature that enhances driving experience and safety. Effectiveness of ADAS may vary based on actual situation and all objects around vehicle may not be detected. The driver shall remain responsible for safe, vigilant, and attentive driving. ^My Convenience Secure available with My Convenience/ My Convenience Plus at the time of sales at additional cost, covers wear and tear of selected parts only. ``IoT based workshops for live vehicle tracking for digital experience. °RSA coverage across India except Andaman & Nicobar Islands and Lakshadweep. The product & feature images shown in this brochure is for representation purpose only. Features and specifications as shown may not be part of standard fitment and may vary. The colors shown are subject to availability and may not be available across all variants and may differ slightly from those shown in this brochure. The specifications and features may vary depending on models/ variants. Kia India Pvt. Ltd. (Formerly known as Kia Motors India Private Limited) reserves the right to make any changes with respect to the trims, colors, specifications, Kia Connect features and other details of any model as mentioned in this brochure or to discontinue any model without prior notice. For more details visit your local Kia dealership. Kia India Pvt. Ltd. urges you to follow traffic rules, these are meant to keep you safe on roads. We do not endorse vandalism or illegal activities related to road safety. Safety is a top priority, and we urge responsible behavior regarding traffic regulations and road safety.

FOR INFORMATION CONTACT: BENGALURU: TAAPASI KIA, KALYAN NAGAR, PH: 8095537777, KORAMANGALA, PH: 8095537777, **VST KIA,** PALACE ROAD, PH: 9606988123, YESHWANTHPUR, PH: 9606988124, **ADVAITH KIA,** LALBAGH ROAD, PH: 6364871021, BANASHANKARI BRANCH, PH: 6364871022, MAGADI BRANCH, PH: 6364871023, BASAVESHWARA NAGAR, PH: 6364871024, **EPITOME KIA,** AVALAHALLI, PH: 7022317666, WHITEFIELD, PH: 9606970216, YELAHANKA, PH: 7406343339, VARTHUR: PH: 9844240044, **JSP KIA,** HOSUR ROAD, PH: 9606011244, BELLANDUR, PH: 9071077717, SARJAPUR, PH: 8095553636, **NAARA KIA,** J.P NAGAR, PH: 7406528200, KANAKAPURA ROAD, PH: 9071010099, **PPS KIA,** MYSORE ROAD, PH: 6309990010, **BELGAUM: MIRACULUM KIA,** PH: 08312439111, **BELLARY: ATHENA KIA,** PH: 6364922832, **BIJAPUR: KUMAR KIA,** PH: 08045849192, **DAVANGERE: JANSI KIA,** PH: 9538018155, **GULBARGA: KUMAR KIA,** PH: 08045849191, **HASSAN: AADARSH KIA,** PH: 9606034050, **HOSPET: BHADRA KIA,** PH: 7760888885, **HUBLI: NAGSHANTI KIA,** AMARGOL, PH: 9148432469, AIRPORT ROAD, PH: 8088752342 **KOLAR: EPITOME KIA,** PH: 8951903224, **RAICHUR, KUMAR KIA,** PH: 7829990743, **MANGALORE: ARM KIA,** PH: 9606013152, **ADVAITH KIA,** PH: 6364871025, **MANDYA: AADARSH KIA,** PH: 9606034070, **MYSORE: AADARSH KIA,** HUNSUR ROAD, PH: 9606034060, JLB ROAD, PH: 9606996680, **ARM KIA,** KUSHALNAGAR, PH: 9606055314, **SHIMOGA: JANSI KIA,** PH: 9538416666, **TUMKUR: PPS KIA,** PH: 6303622210, **UDUPI: ARM KIA,** PH: 9606055296, **CHIKAMANGALUR: JANSI KIA,** PH: 9538416666,

INNOCEAN-032/25

ಸಂಕ್ಷಿಪ್ತ ಸುದ್ದಿ

'ಮಸೀದಿ ಪುನಃ ನಿರ್ಮಾಣ: ಪಾಕ್ ಸರ್ಕಾರ ಭರವಸೆ'

ಲಾಹೋರ್ (ಪಿಟಿಐ): 'ಭಾರತದ ವಾಯುಪಡೆಯ ದಾಳಿಯಿಂದ ನಾಶವಾಗಿದ್ದ ಮುರೀದ್ಕೆಯಲ್ಲಿರುವ ಜಮಾತ್-ಉದ್-ದಾವಾ (ಜೆಯುಡಿ) ಉಗ್ರ ಸಂಘಟನೆಯ ಕೇಂದ್ರ ಕಚೇರಿಯಾಗಿದ್ದ ಮಸೀದಿಯನ್ನು ಪುನಃ ನಿರ್ಮಾಣ ಮಾಡುವುದಾಗಿ ಸರ್ಕಾರ ಭರವಸೆ ನೀಡಿದೆ' ಎಂದು ಪಾಕಿಸ್ತಾನ ಮರ್ಕಜ್ ಮುಸ್ಲಿಂ ಲೀಗ್ (ಪಿಎಂಎಂಎಲ್) ಶನಿವಾರ ಹೇಳಿದೆ.

ಪಿಎಂಎಂಎಲ್ ಪಕ್ಷವು 'ಜಮಾತ್-ಉದ್-ದಾವಾ' ಸಂಘಟನೆಯ ರಾಜಕೀಯ ಸಂಘಟನೆಯಾಗಿದೆ. ಮೇ 7ರಂದು ನಡೆಸಿದ 'ಆಪರೇಷನ್ ಸಿಂಧೂರ'ದಲ್ಲಿ ಭಾರತೀಯ ಸೇನೆಯು ಈ ಉಗ್ರ ಸಂಘಟನೆಗೆ ಸೇರಿದ ಮಸೀದಿಯನ್ನು ಧ್ವಂಸ ಮಾಡಿತ್ತು.

'ಈ ಮಸೀದಿಯು ಶೈಕ್ಷಣಿಕ ಸಂಕೀರ್ಣವಾಗಿತ್ತು. ಇದರ ಮೇಲೆ ಭಾರತೀಯ ಸೇನೆ ದಾಳಿ ನಡೆಸಿದೆ' ಎಂದು ಪಾಕಿಸ್ತಾನ ಹೇಳಿಕೊಂಡಿದೆ. ಮುಂಬೈ ದಾಳಿ ಸೇರಿದಂತೆ ಭಾರತದಲ್ಲಿ ಹಲವು ಭಯೋತ್ಪಾದನಾ ದಾಳಿ ನಡೆಸಿದ್ದ ಲಷ್ಕರ್ ಎ ತಯ್ಯಬಾ ಉಗ್ರ ಸಂಘಟನೆಯ ಕಾರಣವಾಗಿದೆ. ಈಗ ಈ ಸಂಘಟನೆಯು ಜಮಾತ್-ಉದ್-ದಾವಾ ಸಂಘಟನೆಯ ಹೆಸರಿನಲ್ಲಿ ಕಾರ್ಯನಿರ್ವಹಿಸುತ್ತಿದೆ.

ಲಾಡ್ ಜಾತಿ ಪ್ರಸ್ತಾಪಿಸಿ ಪ್ರತಾಪ ಸಿಂಹ ಟೀಕೆ

ಪ್ರಜಾವಾಣಿ ವಾರ್ತೆ

ಮೈಸೂರು: 'ಮರಾಠಾ ಸಮುದಾಯದ ಸಂತೋಷ್ ಲಾಡ್ ಅವರ ಬಾಯಲ್ಲಿ ಶಿವಾಜಿ ರೀತಿ ಮಾತು ಬರುತ್ತಿಲ್ಲ. ಅಬ್ದುಲ್ ಖಾನ್ ರೀತಿ ಬರುತ್ತಿದೆ. ಅವರೊಬ್ಬ ತಿಳಿಗೇಡಿ' ಎಂದು ಮಾಜಿ ಸಂಸದ ಪ್ರತಾಪ ಸಿಂಹ ಅವರು, ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರ ಜಾತಿ ಪ್ರಸ್ತಾಪಿಸಿ ಟೀಕಿಸಿದರು.

ಇಲ್ಲಿ ಶನಿವಾರ ಪತ್ರಕರ್ತರೊಂದಿಗೆ ಮಾತನಾಡಿ, 'ಪ್ರಧಾನಿ ಮೋದಿ ಬಗ್ಗೆ ಮಾತನಾಡದಿದ್ದರೆ ಲಾಡ್‌ಗೆ ತಿಂದಿದ್ದು ಜೀರ್ಣವಾಗುವುದಿಲ್ಲವೇ. ನೇಹಾ ಹತ್ಯೆ ಬಗ್ಗೆ ಪತ್ರಕರ್ತರ ಪ್ರಶ್ನೆಗೆ ಮೋದಿ ಕೇಳ್ರಿ ಅಂತಾರೆ. ಹತ್ಯೆ ಮಾಡಿದವನ ಎನ್‌ಕೌಂಟರ್‌ಗೆ ಮೋದಿ ಅನುಮತಿ ಏಕೆ ಬೇಕು? ಒಂದು ವರ್ಷವಾಯ್ತಲ್ಲಾ, ನೇಹಾಗೆ ನ್ಯಾಯ ಕೊಡಿಸಿದ್ರಾ? ಕಾರ್ಮಿಕ ಇಲಾಖೆಯ ಹೆಲ್ತ್ ಕಿಟ್ ಹಗರಣದ ಕಥೆ ಏನಾಯ್ತು? ಮೋದಿಗೆ ಹೇಳಿಕೊಡುವಷ್ಟು ಬುದ್ಧಿವಂತರಾ ನೀವು' ಎಂದರು.

ವಹಿವಾಟು ಸ್ಥಗಿತಗೊಳಿಸಿದ ಬೆಂಗಳೂರು ಸಗಟು ಬಟ್ಟೆ ವ್ಯಾಪಾರಿಗಳ ಸಂಘ

'ಟರ್ಕಿಯ ಹತ್ತಿ ಬಟ್ಟೆಗೆ ಬಹಿಷ್ಕಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾಕಿಸ್ತಾನಕ್ಕೆ ಬೆಂಬಲ ನೀಡಿದ ಟರ್ಕಿ ಹಾಗೂ ಅಜರ್‌ಬೈಜಾನ್ ದೇಶಗಳ ಜತೆಗಿನ ಜವಳಿ ವ್ಯವಹಾರವನ್ನು ಬೆಂಗಳೂರಿನ ಬಟ್ಟೆ ವ್ಯಾಪಾರಿಗಳ ಸಂಘ ಸ್ಥಗಿತಗೊಳಿಸಿದೆ.

'ಭಾರತದೊಂದಿಗಿನ ಸಶಸ್ತ್ರ ಸಂಘರ್ಷದಲ್ಲಿ ಪಾಕಿಸ್ತಾನಕ್ಕೆ ಬೆಂಬಲ ನೀಡಿದ ಟರ್ಕಿ ಮತ್ತು ಅಜರ್‌ಬೈಜಾನ್ ದೇಶಗಳೊಂದಿಗೆ ವ್ಯಾಪಾರ ವಹಿವಾಟನ್ನು ಸ್ಥಗಿತಗೊಳಿಸಿದ್ದೇವೆ' ಎಂದು ಸಂಘದ ಅಧ್ಯಕ್ಷ ಪ್ರಕಾಶ್‌ಚಂದ್ ಪಿರ್ಗಾಲ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಟರ್ಕಿಯಲ್ಲಿ ಭೂಕಂಪವಾದಾಗ ಅಲ್ಲಿಗೆ ಬಟ್ಟೆ, ಆಹಾರ, ಹಣ್ಣು ಮತ್ತು ಔಷಧಗಳನ್ನು ಮೊದಲು ಕಳುಹಿಸಿದ್ದು ಭಾರತ. ನಮ್ಮ ದೇಶದ ಜನರ ಮೇಲೆ ಭಯೋತ್ಪಾದನಾ ದಾಳಿಗೆ ಕುಮ್ಮಕ್ಕು ನೀಡುತ್ತಿರುವ ಪಾಕಿಸ್ತಾನಕ್ಕೆ ಟರ್ಕಿ ಬೆಂಬಲ ನೀಡಿದೆ. ಇಂತಹ ದ್ರೋಹವನ್ನು ಸಹಿಸಲು ಸಾಧ್ಯವಿಲ್ಲ' ಎಂದಿದ್ದಾರೆ.

'ಪಾಕಿಸ್ತಾನದ ಭಯೋತ್ಪಾದಕರ ವಿರುದ್ಧ ಹೋರಾಡುತ್ತಿರುವ ಕೇಂದ್ರ ಸರ್ಕಾರ ಮತ್ತು ಸೇನೆಗೆ ನಮ್ಮ ರಾಜ್ಯ ಸರ್ಕಾರವು ಬೆಂಬಲ ಘೋಷಿಸಿದೆ. ಹಲವು ವ್ಯಾಪಾರಿ ಸಂಘಗಳು ಟರ್ಕಿ ಜತೆಗೆ ವ್ಯವಹಾರ ನಿಲ್ಲಿಸಿವೆ. ಬೆಂಗಳೂರಿನ ಸಗಟು ಬಟ್ಟೆ ವ್ಯಾಪಾರಿಗಳೂ ಸೇನೆಗೆ ಬೆಂಬಲ ಸೂಚಿಸಲು ಟರ್ಕಿ ಜತೆಗೆ ವ್ಯಾಪಾರ ನಿಲ್ಲಿಸುವ ನಿರ್ಧಾರ ಮಾಡಿದ್ದೇವೆ' ಎಂದು ಪ್ರಕಾಶ್‌ಚಂದ್ ಪಿರ್ಗಾಲ್ 'ಪ್ರಜಾವಾಣಿ'ಗೆ ತಿಳಿಸಿದರು.

'ನಮ್ಮ ಸಂಘದಲ್ಲಿ 1,500ಕ್ಕೂ ಹೆಚ್ಚು ಸದಸ್ಯರಿದ್ದಾರೆ. ಅವರೂ ಸೇರಿ ಬೆಂಗಳೂರಿನಲ್ಲಿ 3,000ಕ್ಕೂ ಹೆಚ್ಚು ಸಗಟು ಬಟ್ಟೆ ವ್ಯಾಪಾರಿಗಳು ಇದ್ದಾರೆ. ಬೆಂಗಳೂರಿನ ಸಗಟು ಬಟ್ಟೆ ವ್ಯಾಪಾರಿಗಳು ಟರ್ಕಿಯಿಂದ ದೊಡ್ಡಮಟ್ಟದಲ್ಲಿ ಹತ್ತಿಯ ಬಟ್ಟೆ ಮತ್ತು ಟರ್ಕಿ ಟವಲ್‌ಗೆ ಬೇಕಾದ ಬಟ್ಟೆಯನ್ನು ಆಮದು ಮಾಡಿಕೊಳ್ಳುತ್ತಾರೆ. ಎಲ್ಲ ವ್ಯಾಪಾರಿಗಳ ಜತೆ ಮಾತನಾಡಿದ್ದೇವೆ. ಎಲ್ಲರೂ, ಟರ್ಕಿ ಮತ್ತು ಅಜರ್‌ಬೈಜಾನ್ ಜತೆಗಿನ ವ್ಯವಹಾರಗಳನ್ನು ನಿಲ್ಲಿಸಲು ಒಪ್ಪಿದ್ದಾರೆ' ಎಂದರು.

'ಈಗಾಗಲೇ ಆಮದು ಮಾಡಿಕೊಳ್ಳಲು ನೀಡಿದ್ದ ಖರೀದಿ ಆರ್ಡರ್‌ಗಳನ್ನು ಬಹುತೇಕ ಸದಸ್ಯರು ರದ್ದುಪಡಿಸಿದ್ದಾರೆ. ಈ ನಿರ್ಧಾರದಿಂದ ನಮ್ಮ ವ್ಯಾಪಾರಕ್ಕೆ ಸ್ವಲ್ಪ ದಿನ ಸಮಸ್ಯೆ ಮತ್ತು ನಷ್ಟವಾಗಲಿದೆ. ಟರ್ಕಿಯ ಬಟ್ಟೆಗೆ ಪರ್ಯಾಯ ಮೂಲವನ್ನು ಹುಡುಕುತ್ತಿದ್ದೇವೆ. ಹೊಸ ದೇಶಗಳೊಂದಿಗೆ, ತಿಂಗಳೊಳಗೆ ವಹಿವಾಟು ಕುದುರಲಿದೆ' ಎಂದು ತಿಳಿಸಿದರು.

'ಟರ್ಕಿಯೊಂದಿಗೆ ವ್ಯಾಪಾರ ನಿಲ್ಲಿಸಿ'

'ಆಪರೇಷನ್ ಸಿಂಧೂರ'ಕ್ಕೆ ನಮ್ಮ ಸಂಪೂರ್ಣ ಬೆಂಬಲವಿದೆ. ರಾಷ್ಟ್ರ ಹಿತದ ದೃಷ್ಟಿಯಿಂದ ಟರ್ಕಿ ಮತ್ತು ಅಜರ್‌ಬೈಜಾನ್ ದೇಶಗಳೊಂದಿಗೆ ವ್ಯಾಪಾರ ನಡೆಸುವುದನ್ನು ತಕ್ಷಣವೇ ನಿಲ್ಲಿಸಿ ಎಂದು ದೇಶದ ಎಲ್ಲ ಹರಳು ಮತ್ತು ಆಭರಣ ಕ್ಷೇತ್ರದ ತಯಾರಕರು, ವ್ಯಾಪಾರಿಗಳು, ಸಗಟು ವ್ಯಾಪಾರಿಗಳು ಕೇಳಿಕೊಳ್ಳುತ್ತೇವೆ

ಅಖಿಲ ಭಾರತೀಯ ಹರಳು ಮತ್ತು ಆಭರಣ ಕೌನ್ಸಿಲ್ (ಜಿಜೆಸಿ)

ಕಾಶ್ಮೀರ ಸೇಬು ಕೃಷಿಕರಲ್ಲಿ ಹೊಸ ನಿರೀಕ್ಷೆ

• ಝುಲ್ಫಿಕರ್ ಮಜೀದ್



ಶ್ರೀನಗರ: ಟರ್ಕಿ ಸೇಬುಗಳಿಗೆ ಭಾರತದಲ್ಲಿ ಬಹಿಷ್ಕಾರ ಹಾಕಿದ ಬೆನ್ನಲ್ಲೇ, ಸಂಕಷ್ಟದಲ್ಲಿರುವ ಕಾಶ್ಮೀರದ ಸೇಬು ಉದ್ಯಮದಲ್ಲಿ ಹೊಸ ಭರವಸೆ ಮೂಡಿಸಿದೆ.

'ಆಪರೇಷನ್ ಸಿಂಧೂರ' ಹೆಸರಿನಲ್ಲಿ ಭಾರತವು ಸೇನಾ ಕಾರ್ಯಾಚರಣೆ ನಡೆಸಿದ ವೇಳೆ ಪಾಕಿಸ್ತಾನ ಪರ ಟರ್ಕಿ ಬೆಂಬಲ ವ್ಯಕ್ತಪಡಿಸಿದ್ದಕ್ಕೆ ಪ್ರತಿಯಾಗಿ ಭಾರತದ ಉದ್ಯಮಿಗಳು ಟರ್ಕಿ ಉತ್ಪನ್ನಗಳಿಗೆ ಬಹಿಷ್ಕಾರ ಹಾಕಲು ತೀರ್ಮಾನಿಸಿದ್ದಾರೆ. ಅದರಲ್ಲೂ ಅಲ್ಲಿನ ಸೇಬು ಮಾರಾಟ ಮಾಡದಿರಲು ಹಣ್ಣಿನ ವ್ಯಾಪಾರಿಗಳು ನಿರ್ಧರಿಸಿದ್ದಾರೆ. ಟರ್ಕಿಯಿಂದ ಕಳುಹಿಸಿರುವ ಸೇಬುಗಳನ್ನು ಸ್ವೀಕರಿಸದಿರಲು ದೇಶದ ಪ್ರಮುಖ ಹಣ್ಣಿನ ಮಂಡಿಗಳಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿದೆ.

ಭಾರತದಲ್ಲಿ ಮಾರಾಟವಾಗುವ ಶೇಕಡ 75ರಷ್ಟು ಸೇಬುಗಳನ್ನು ಕಾಶ್ಮೀರದಿಂದಲೇ ಪೂರೈಸಲಾಗುತ್ತಿದೆ. ಹೊರದೇಶದಿಂದ ಕಡಿಮೆ ವೆಚ್ಚದಲ್ಲಿ ಸೇಬುಗಳನ್ನು ಆಮದು ಮಾಡಿಕೊಳ್ಳುತ್ತಿದ್ದ ಕಾರಣ, ಕಾಶ್ಮೀರದ ಸೇಬು ಬೆಳೆಗಾರರು ಪೈಪೋಟಿ ಎದುರಿಸಿ, ಲಾಭಾಂಶದಲ್ಲಿ ಹಿನ್ನಡೆ ಅನುಭವಿಸಿದ್ದರು.

'ಬಹಿಷ್ಕಾರದ ನಿರ್ಧಾರ ತೀವ್ರ ಸಂಕಷ್ಟದಲ್ಲಿದ್ದ ಸೇಬು ಉದ್ಯಮಕ್ಕೆ ತೀವ್ರ ಅಗತ್ಯವಾದ ಕ್ರಮವಾಗಿರಬಹುದು' ಎಂದು ಕಾಶ್ಮೀರ ಕಣಿವೆಯ ಹಣ್ಣು ಬೆಳೆಗಾರರ ಒಕ್ಕೂಟದ ಅಧ್ಯಕ್ಷ ಬಷೀರ್ ಅಹಮ್ಮದ್ ತಿಳಿಸಿದ್ದಾರೆ.

'ಹೊರದೇಶಗಳಿಂದ ಕಡಿಮೆ ಬೆಲೆಗೆ ಆಮದು ಮಾಡಿಕೊಳ್ಳುತ್ತಿದ್ದ ಸೇಬಿನಿಂದ ಕಾಶ್ಮೀರ ಸೇಬು ಬೆಳೆಗಾರರಿಗೆ ಲಾಭಾಂಶದಲ್ಲಿ ಕಡಿಮೆಯಾಗಿ, ಆರ್ಥಿಕ ನಷ್ಟ ಅನುಭವಿಸುತ್ತಿದ್ದರು. ಒಂದೊಮ್ಮೆ ಟರ್ಕಿ ಸೇಬುಗಳನ್ನು ನಿಷೇಧಿಸಿದರೆ, ಕಾಶ್ಮೀರದ ಸೇಬು ಉದ್ಯಮದ ಮೇಲೆ ಧನಾತ್ಮಕ ಪರಿಣಾಮ ಬೀರಲಿದೆ' ಎಂದು ಹೇಳಿದ್ದಾರೆ.

'ಟರ್ಕಿ ಸೇಬುಗಳನ್ನು ಅಧಿಕೃತವಾಗಿ ಬಹಿಷ್ಕರಿಸಿದರೆ, ದೇಶಿಯ ಮಾರುಕಟ್ಟೆಯಲ್ಲಿ ಸೇಬಿನ ದರದಲ್ಲಿ ಶೇ 10ರಿಂದ 15ರಷ್ಟು ಏರಿಕೆಯಾಗಲಿದೆ. ಇದರಿಂದ, ಇದನ್ನೇ ನಂಬಿರುವ ಕಾಶ್ಮೀರದ 7 ಲಕ್ಷ ಸೇಬು ಬೆಳೆಗಾರರ ಆರ್ಥಿಕ ಪರಿಸ್ಥಿತಿಯು ಸುಧಾರಣೆಯಾಗಲಿದೆ' ಎಂದು ಆರ್ಥಿ ತಜ್ಞರು ಅಂದಾಜಿಸಿದ್ದಾರೆ.

ಸುದ್ದಿ 2 ನಿಮಿಷ

'ಬಿಜೆಪಿ ದ್ವೇಷಪ್ರೇಮಿಗಳು'

ಮುದ್ದೇಬಿಹಾಳ (ವಿಜಯಪುರ ಜಿಲ್ಲೆ): 'ದೇಶಪ್ರೇಮಿಗಳೆಂದು ಹೇಳಿಕೊಳ್ಳುವ ಬಿಜೆಪಿಯವರೇ ನಿಜವಾದ ದ್ವೇಷಪ್ರೇಮಿಗಳು. ಅವರು ಬೆಂಕಿ ಹಚ್ಚುವ ಕೆಲಸ ಮಾಡುತ್ತಾರೆ' ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಆರೋಪಿಸಿದರು.

ರಾಜ್ಯ ಸರ್ಕಾರದ ಸಾಧನಾ ಸಮಾವೇಶದ ಹಿನ್ನೆಲೆಯಲ್ಲಿ ಶನಿವಾರ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, 'ದೇಶದಲ್ಲಿ ಸಂವಿಧಾನ ಪೀಠಿಕೆಯನ್ನು ಹೇಳಿಸುವ ಕೆಲಸ ಕಾಂಗ್ರೆಸ್ ಸರ್ಕಾರ ಮಾಡಿದೆ. ನಿತ್ಯ 1.08 ಕೋಟಿ ಮಕ್ಕಳು ಸಂವಿಧಾನ ಪೀಠಿಕೆ ಓದುತ್ತಾರೆ. ಇದು ಬಿಜೆಪಿಯವರಿಗೆ ಆಗಿ ಬರಲ್ಲ. ಬಿಜೆಪಿ ಎಂದರೆ ಬ್ರಿಟಿಷ್ ಜನತಾ ಪಾರ್ಟಿ. ಜಾತಿ, ಧರ್ಮ ಪ್ರಾಂತ್ಯದ ಆಧಾರದ ಮೇಲೆ ರಾಜಕಾರಣ ಮಾಡುತ್ತಾರೆ' ಎಂದರು.



'ನನ್ನನ್ನು ಗ್ಯಾರಂಟಿಯ ಪ್ರಣಾಳಿಕೆಯ ಸಮಿತಿಯ ಉಪಾಧ್ಯಕ್ಷನನ್ನಾಗಿ ನೇಮಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗ್ಯಾರಂಟಿಗಳ ಸರದಾರ. ಗ್ಯಾರಂಟಿ ಯೋಜನೆಗಳ ಲಾಭ ಪಡೆಯಲು ಬಿಜೆಪಿ ಕುಟುಂಬದವರು ಅರ್ಜಿ ಹಾಕಿದ್ದಾರೆ' ಎಂದು ಅವರು ಹೇಳಿದರು.

ಕಾಂಗ್ರೆಸ್ ನಾಯಕರು ಪಾಕ್ ಏಜೆಂಟರು: ಯತ್ನಾಳ

ಹುಬ್ಬಳ್ಳಿ: 'ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಸಿದ್ದರಾಮಯ್ಯ ಅವರು ಪಾಕಿಸ್ತಾನದ ಏಜೆಂಟರು. ಅವರದ್ದೇ ಒಂದು ನಿಯೋಗ ಪಾಕಿಸ್ತಾನಕ್ಕೆ ತೆರಳಿ, ಭಾರತ ದಾಳಿ ಮಾಡಿದ ಸ್ಥಳಗಳನ್ನು ನೋಡಿಕೊಂಡು ಬರಲಿ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಸವಾಲು ಹಾಕಿದರು.

'ಆಪರೇಷನ್ ಸಿಂಧೂರ' ಕುರಿತು ಕಾಂಗ್ರೆಸ್ ನಾಯಕರು ಅವಹೇಳನ ಮಾಡುತ್ತಿರುವುದಕ್ಕೆ ಶನಿವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಪಾಕಿಸ್ತಾನದ ಉಗ್ರರ ಹಾಗೂ ವಾಯು ನೆಲೆಗಳ ಮೇಲೆ ಭಾರತ ದಾಳಿ ನಡೆಸಿರುವುದನ್ನು ವಿದೇಶಗಳ ಮಾಧ್ಯಮಗಳು ಸಾಕ್ಷಿ ಸಮೇತ ಸುದ್ದಿ ಮಾಡುತ್ತಿವೆ. ಪ್ರಧಾನಿ ಮೋದಿ ಸಹ ಅದೇ ದಾಳಿಯ ಸ್ಥಳಗಳ ಬಗ್ಗೆ ಹೇಳಿದ್ದಾರೆ. ಆದರೆ, ಕಾಂಗ್ರೆಸ್ ನಾಯಕರಿಗೆ ಅನುಮಾನ ಕಾಡುತ್ತಿದೆ' ಎಂದರು.

ವಾಸ್ತವ ಸಂಗತಿಗಳ ತಪ್ಪು ನಿರೂಪಣೆ: ವಿದೇಶಾಂಗ ಸಚಿವಾಲಯ

'ದಾಳಿ: ಪಾಕ್‌ಗೆ ಸರ್ಕಾರದಿಂದಲೇ ಮಾಹಿತಿ'

ಪ್ರಜಾವಾಣಿ ವಾರ್ತೆ



ರಾಹುಲ್ ಗಾಂಧಿ

ನವದೆಹಲಿ: 'ಆಪರೇಷನ್ ಸಿಂಧೂರ' ಭಾಗವಾಗಿ ಪಾಕಿಸ್ತಾನದ ಸೇನಾ ಮೂಲಸೌಕರ್ಯಗಳನ್ನು ಗುರಿಯಾಗಿಸಿ ನಡೆಸಿದ ದಾಳಿ ಕುರಿತು ಕೇಂದ್ರ ಸರ್ಕಾರ ಮುಂಚಿತವಾಗಿಯೆ ಪಾಕಿಸ್ತಾನಕ್ಕೆ ಮಾಹಿತಿ ನೀಡಿತ್ತು. ಇದು ಅಪರಾಧ ಎಂದು ರಾಹುಲ್ ಗಾಂಧಿ ಶನಿವಾರ ಗಂಭೀರ ಆರೋಪ ಮಾಡಿದ್ದಾರೆ.

ಈ ಆರೋಪಗಳನ್ನು ತಳ್ಳಿ ಹಾಕಿರುವ ವಿದೇಶಾಂಗ ಸಚಿವಾಲಯ, 'ವಾಸ್ತವ ಸಂಗತಿಗಳನ್ನು ತಪ್ಪಾಗಿ ನಿರೂಪಿಸುವ ಯತ್ನ ಇದು' ಎಂದು ಹೇಳಿದೆ.

ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರ ಮಾತುಗಳಿರುವ ವಿಡಿಯೊವೊಂದನ್ನು 'ಎಕ್ಸ್'ನಲ್ಲಿ ಹಂಚಿಕೊಂಡಿರುವ ರಾಹುಲ್ ಗಾಂಧಿ,'ಆಪರೇಷನ್ ಸಿಂಧೂರ' ಕುರಿತು ಪಾಕಿಸ್ತಾನಕ್ಕೆ ಸರ್ಕಾರವೇ ಮಾಹಿತಿ ನೀಡಿರುವುದನ್ನು ಜೈಶಂಕರ್ ಬಹಿರಂಗವಾಗಿಯೇ ಒಪ್ಪಿಕೊಂಡಿದ್ದಾರೆ' ಆರೋಪಿಸಿದ್ದಾರೆ.

ಅಲ್ಲದೇ, ಈ ಕಾರ್ಯಾಚರಣೆಯಿಂದಾಗಿ ವಾಯುಪಡೆಯು ಎಷ್ಟು ಯುದ್ಧವಿಮಾನಗಳನ್ನು ಕಳೆದುಕೊಂಡಿದೆ ಎಂದೂ ಪ್ರಶ್ನಿಸಿದ್ದಾರೆ.

ಈ ಆರೋಪಗಳಿಗೆ ಪ್ರತಿಕ್ರಿಯಿಸಿರುವ ವಿದೇಶಾಂಗ ಸಚಿವಾಲಯದ ಪ್ರಕಾಶನ ವಿಭಾಗವು, 'ನಾವು ಪಾಕಿಸ್ತಾನಕ್ಕೆ ಎಚ್ಚರಿಕೆ ನೀಡಿದೆವು. ಎಂದು ಸಚಿವ ಜೈಶಂಕರ್ ಹೇಳಿದ್ದಾರೆ. ಆಪರೇಷನ್ ಸಿಂಧೂರ ಶುರುವಾದ ನಂತರದ ಆರಂಭಿಕ ಹಂತದಲ್ಲಿ ಹೇಳಿದ್ದ ಮಾತಿದು ಎಂಬುದು ಸ್ಪಷ್ಟ. ಆದರೆ, ಜೈಶಂಕರ್ ಅವರು ದಾಳಿ ಆರಂಭಕ್ಕೂ ಮುನ್ನವೇ ಹೀಗೆ ಹೇಳಿದ್ದರು ಎಂದು ತಪ್ಪಾಗಿ ನಿರೂಪಿಸಲಾಗುತ್ತಿದೆ. ಇದನ್ನು ಒಪ್ಪಲಾಗದು' ಎಂದು ಹೇಳಿದೆ.

ಬಿಜೆಪಿ ಟೀಕೆ: ಇದೇ ವಿಚಾರವಾಗಿ ರಾಹುಲ್ ಗಾಂಧಿ ವಿರುದ್ಧ ಬಿಜೆಪಿ ವಾಗ್ದಾಳಿ ನಡೆಸಿದ್ದು, 'ರಾಹುಲ್ ಗಾಂಧಿ ಅವರು ಪಾಕಿಸ್ತಾನ ಪರ ಪ್ರಚಾರ ಮಾಡುವ ಸಾಧನದಂತೆ ವರ್ತಿಸುವುದನ್ನು ಹಾಗೂ ಸುಳ್ಳು ಸುದ್ದಿಗಳನ್ನು ಹಬ್ಬಿಸುವುದನ್ನು ಬಿಡಬೇಕು' ಎಂದು ಹೇಳಿದೆ.'ಆಪರೇಷನ್ ಸಿಂಧೂರ ಭಾಗವಾಗಿ ಪಾಕಿಸ್ತಾನದಲ್ಲಿನ ಉಗ್ರರ ನೆಲೆಗಳನ್ನು ಧ್ವಂಸ ಮಾಡಿರುವುದು ಕಾಂಗ್ರೆಸ್‌ಗೆ ಖುಷಿ ತಂದಿಲ್ಲವೇ' ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಪ್ರದೀಪ್ ಭಂಡಾರಿ ಪ್ರಶ್ನಿಸಿದ್ದಾರೆ.

'ಅಮೆರಿಕ ಒತ್ತಡಕ್ಕೆ ಮಣಿದ ಕೇಂದ್ರ'

ನವದೆಹಲಿ(ಪಿಟಿಐ): ಅಂತರರಾಷ್ಟ್ರೀಯ ಹಣಕಾಸು ನಿಧಿಯ(ಐಎಂಎಫ್) ಕಾರ್ಯಕಾರಿ ಮಂಡಳಿ ಸಭೆಯಲ್ಲಿ ಪಾಲ್ಗೊಂಡಿದ್ದ ಕೇಂದ್ರ ಸರ್ಕಾರ, ಅಮೆರಿಕದ ಒತ್ತಡಕ್ಕೆ ಮಣಿಯಿತು. ಐಎಂಎಫ್‌ನ ಇದೇ ಸಭೆಯಲ್ಲಿ, ಪಾಕಿಸ್ತಾನಕ್ಕೆ ಸಾಲ ಮಂಜೂರು ಮಾಡಲಾಗಿದೆ ಎಂದು ಕಾಂಗ್ರೆಸ್ ಶನಿವಾರ ಆರೋಪಿಸಿದೆ.

ಪಾಕಿಸ್ತಾನಕ್ಕೆ ಹಣಕಾಸು ನೆರವು ನೀಡಿರುವ ಬಗ್ಗೆ ಐಎಂಎಫ್ ಮರುಚಿಂತನೆ ಮಾಡಬೇಕು ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಒತ್ತಾಯಿಸಿದ ಮಾರನೇ ದಿನವೇ, ಕಾಂಗ್ರೆಸ್ ಈ ಆರೋಪ ಮಾಡಿದೆ. 'ಪಾಕಿಸ್ತಾನಕ್ಕೆ ಸಾಲ ನೀಡಿರುವುದಕ್ಕೆ ಮೇ 9ರಂದು ಅನುಮೋದನೆ ನೀಡಿದ ವಿಚಾರವಾಗಿ ಸಚಿವ ರಾಜನಾಥ್ ಸಿಂಗ್ ಐಎಂಎಫ್ ಅನ್ನು ಈಗ ಟೀಕಿಸುತ್ತಿದ್ದಾರೆ. ಈಗ ಸರ್ಕಾರ ಎಚ್ಚೆತ್ತುಕೊಂಡಿದೆ. ಆದರೆ, ಇಂತಹ ಸಾಧ್ಯತೆ ಬಗ್ಗೆ ಏಪ್ರಿಲ್ 29ರಂದೇ ಕಾಂಗ್ರೆಸ್ ಪಕ್ಷವು ಸರ್ಕಾರವನ್ನು ಎಚ್ಚರಿಸಿತ್ತು. ಪಾಕಿಸ್ತಾನಕ್ಕೆ ಸಾಲ ನೀಡುವುದನ್ನು ಭಾರತ ವಿರೋಧಿಸಬೇಕು ಎಂದೂ ಹೇಳಿತ್ತು' ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

'ಮೇ 9ರ ಸಭೆಯಿಂದ ಭಾರತ ದೂರ ಉಳಿಯಿತು. ಅದೊಂದೇ ಭಾರತದ ಮುಂದಿದ್ದ ಆಯ್ಕೆಯಾಗಿತ್ತು ಎಂದು ಮೋದಿ ಸರ್ಕಾರದ ಬೆಂಬಲಿಗರು, ಸಮರ್ಥಕರು ವಾದಿಸುತ್ತಿದ್ದಾರೆ. ಇದು ಸುಳ್ಳು. ಐಎಂಎಫ್ ಕಾರ್ಯಕಾರಿ ಮಂಡಳಿ ಸಭೆಯಲ್ಲಿ, ವಿರೋಧ ವ್ಯಕ್ತಪಡಿಸುವುದಕ್ಕೆ ಅವಕಾಶ ಇದೇ ಇದೆ' ಎಂದು ಹೇಳಿದ್ದಾರೆ.

'ಕೈ'ಗೆ ಪಾಕಿಸ್ತಾನದ ಮೇಲೇಕೆ ಪ್ರೀತಿ?'

ಬೆಂಗಳೂರು: 'ಕಾಂಗ್ರೆಸ್ ಸರ್ಕಾರದ ಸಚಿವರು, ಶಾಸಕರಿಗೆ ಪಾಕಿಸ್ತಾನದ ಮೇಲೇಕೆ ಇಷ್ಟು ಪ್ರೀತಿ' ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಪಾಕಿಸ್ತಾನದಲ್ಲಿ ಭಾರತೀಯ ಸೇನೆ ದಾಳಿ ನಡೆಸಿದೆ ಎಂಬುದನ್ನು ಆ ದೇಶವೇ ಹೇಳಿಕೊಂಡಿದೆ. ಉಗ್ರ ಅಜರ್ ಮಸೂದ್ ಕುಟುಂಬಕ್ಕೆ ಪಾಕಿಸ್ತಾನ ಸರ್ಕಾರ ಪರಿಹಾರ ನೀಡಿದೆ. ಕಾಂಗ್ರೆಸ್ ಸಚಿವರು ಮತ್ತು ಶಾಸಕರು ಸೇನಾ ಕಾರ್ಯಾಚರಣೆಗೆ ಸಾಕ್ಷ್ಯ ಕೇಳುತ್ತಿದ್ದಾರೆ. ಸಚಿವರಾದ ಪ್ರಿಯಾಂಕ್ ಖರ್ಗೆ, ಸಂತೋಷ್ ಲಾಡ್ ಮತ್ತು ಕೋಲಾರ ಶಾಸಕ ಮಂಜುನಾಥ್ ಅವರು ಪಾಕಿಸ್ತಾನದ ಪರ ಮಾತನಾಡುತ್ತಿದ್ದಾರೆ' ಎಂದರು.

ನಮ್ಮ ಪಕ್ಷ ಮತ್ತು ಸರ್ಕಾರ ದೇಶದ ಸೈನಿಕರ ಪರವಾಗಿ ಇದೆ ಮತ್ತು ಅವರ ಬೆಂಬಲಕ್ಕೆ ನಿಲ್ಲುತ್ತದೆ. ಕೊತ್ತನೂರು ಮಂಜುನಾಥ್ ಅವರ ಹೇಳಿಕೆ ಬಗ್ಗೆ, ಅವರನ್ನು ಕರೆದು ಮಾತನಾಡುತ್ತೇನೆ

ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಪಾಕ್ ಪರ ಬೇಹುಗಾರಿಕೆ: ಯೂಟ್ಯೂಬರ್ ಸೆರೆ

ಒಂದನೇ ಪುಟದಿಂದ...

ಪಾಕಿಸ್ತಾನದ ಪರವಾದ ಅಭಿಪ್ರಾಯ ಮೂಡಿಸುವಂತೆ ಜ್ಯೋತಿ ಅವರು ವಿಡಿಯೊಗಳನ್ನು ಮಾಡಿದ್ದಾರೆ ಎಂದೂ ಆರೋಪಿಸಲಾಗಿದೆ. 'ಇಂಡಿಯನ್ ಗರ್ಲ್ ಇನ್ ಪಾಕಿಸ್ತಾನ್', 'ಇಂಡಿಯನ್ ಗರ್ಲ್ ಎಕ್ಸ್‌ಪ್ಲೋರಿಂಗ್ ಪಾಕಿಸ್ತಾನ್', 'ಇಂಡಿಯನ್ ಗರ್ಲ್ ಅಟ್ ಕಟಾಸ್ ರಾಜ್ ಟೆಂಪಲ್' ಮತ್ತು 'ಇಂಡಿಯನ್ ಗರ್ಲ್ ಲೆಕ್ಸುರಿ ಬಸ್ ಇನ್ ಪಾಕಿಸ್ತಾನ್' ಹೆಸರಿನ ವಿಡಿಯೊಗಳನ್ನು ಮಾಡಿದ್ದಾರೆ. ಈವರೆಗೆ ಜ್ಯೋತಿ ಅವರು ಸುಮಾರು 487 ವಿಡಿಯೊಗಳನ್ನು ಮಾಡಿದ್ದಾರೆ.

ಎಫ್‌ಐಆರ್‌ನಲ್ಲೇನಿದೆ?

- ವೀಸಾ ಪಡೆದುಕೊಳ್ಳಲು 2023ರಲ್ಲಿ ಜ್ಯೋತಿ ಅವರು ಪಾಕಿಸ್ತಾನ ಹೈಕಮಿಷನ್‌ಗೆ ಭೇಟಿ ನೀಡಿದ್ದರು. ಈ ವೇಳೆ ಡ್ಯಾನಿಷ್ ಅವರ ಸಂಪರ್ಕ ಏರ್ಪಟ್ಟಿತ್ತು. ಬಳಿಕ ಜ್ಯೋತಿ ಅವರು ಹಲವು ಬಾರಿ ಪಾಕ್ ಹೈಕಮಿಷನ್‌ಗೆ ಭೇಟಿ ನೀಡಿದ್ದಾರೆ
- ಜ್ಯೋತಿ ಅವರು ಎರಡು ಬಾರಿ ಪಾಕಿಸ್ತಾನಕ್ಕೆ ತೆರಳಿದ್ದಾರೆ. ಅಲ್ಲಿ ಉಳಿದುಕೊಳ್ಳಲು ಜ್ಯೋತಿ ಅವರಿಗೆ ಡ್ಯಾನಿಷ್ ಅವರ ಪರಿಚಯಸ್ಥ ಅಲಿ ಅಹ್ವನ್ ಅವರು ಸಹಕಾರ ನೀಡಿದ್ದರು
- ಜ್ಯೋತಿ ಅವರು ಪಾಕಿಸ್ತಾನದ ಭದ್ರತೆ ಮತ್ತು ಗುಪ್ತಚರ ಅಧಿಕಾರಿಗಳೊಂದಿಗೆ ಸಭೆ ನಡೆಸಲು ಅಲಿ ವ್ಯವಸ್ಥೆ ಕಲ್ಪಿಸಿದ್ದರು. ಜೊತೆಗೆ ಶಾಕಿರ್ ಮತ್ತು ರಾಣಾ ಶಹಬಾಜ್ ಎಂಬುವರನ್ನು ಜ್ಯೋತಿ ಭೇಟಿ ಮಾಡಿದ್ದರು. ಶಹಬಾಜ್ ಅವರ ಹೆಸರನ್ನು ತಮ್ಮ ಮೊಬೈಲ್‌ನಲ್ಲಿ 'ಜಾಟ್ ರಂಧಾವಾ' ಎಂದು ಸೇವ್ ಮಾಡಿಕೊಂಡಿದ್ದರು
- ಈ ಎಲ್ಲರೊಂದಿಗೆ ಜ್ಯೋತಿ ಅವರು ವಾಟ್ಸ್‌ಆ್ಯಪ್, ಟೆಲಿಗ್ರಾಂ ಮತ್ತು ಸ್ನ್ಯಾಪ್‌ಚಾಟ್‌ನಲ್ಲಿ ಸಂಪರ್ಕ ಇಟ್ಟುಕೊಂಡಿದ್ದರು. ಈ ವೇದಿಕೆಗಳ ಮುಖಾಂತರವೇ ಮಾಹಿತಿಗಳನ್ನು ಹಂಚಿಕೊಳ್ಳುತ್ತಿದ್ದರು

ಹರಿಯಾಣ, ಪಂಜಾಬ್‌ನಲ್ಲಿದೆ ಬೇಹುಗಾರಿಕೆ ಜಾಲ

'ಪಾಕಿಸ್ತಾನ ಪರ ಭಾರತದಲ್ಲಿ ಬೇಹುಗಾರಿಕೆ ನಡೆಸುತ್ತಿದ್ದ ಹಲವರನ್ನು ಪೊಲೀಸರು ಬಂಧಿಸಿದ್ದಾರೆ. ಇವರಲ್ಲಿ ಜ್ಯೋತಿ ಕೂಡ ಒಬ್ಬರು. ಎಲ್ಲ ಬಂಧಿತರು ಹರಿಯಾಣ ಹಾಗೂ ಪಂಜಾಬ್ ಮೂಲದವರು. ಹಾಗಾಗಿ, ಈ ಎರಡು ರಾಜ್ಯಗಳಲ್ಲಿ ದೊಡ್ಡ ಮಟ್ಟದ ಬೇಹುಗಾರಿಕೆ ಜಾಲ ಕಾರ್ಯನಿರ್ವಹಿಸುತ್ತಿದ್ದು, ಬಂಧಿತರು ಈ ಜಾಲದ ಸದಸ್ಯರಾಗಿದ್ದಾರೆ' ಎಂದು ಅಧಿಕಾರಿಗಳು ಹೇಳಿ ದ್ದಾರೆ ಎಂದು ಹಲವು ಮಾಧ್ಯಮಗಳು ವರದಿ ಮಾಡಿವೆ.

'ಬೇಹುಗಾರಿಕೆ, ಸೇನಾ ಕಾರ್ಯಚರಣೆಗಳ ಬಗ್ಗೆ ಮಾಹಿತಿ ಹಂಚಿಕೆ, ಪಾಕಿಸ್ತಾನದ ಬೇಹುಗಾರರಿಗೆ ಹಣಕಾಸು, ಸಾರಿಗೆ ಮತ್ತು ವಸತಿ ನೆರವು ನೀಡಿದ ಆರೋಪಗಳಿವೆ' ಎಂದೂ ಅವರು ಮಾಹಿತಿ ನೀಡಿದ್ದಾರೆ. ಪೆಹಲ್ಗಾಮ್ ದಾಳಿಯ ಬಳಿಕ ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಸಂಘರ್ಷ ಏರ್ಪಟ್ಟಿದೆ. ಇದೇ ವೇಳೆಯೇ ಈ ಬಂಧನಗಳು ನಡೆದಿವೆ.

- ಸೇನಾ ಕಾರ್ಯಚಟುವಟಿಕೆಗಳ ಮಾಹಿತಿಗಳನ್ನು ಹಂಚಿಕೊಂಡಿದ್ದಕ್ಕಾಗಿ ಪಂಜಾಬ್‌ನ ಗುಝಾಲಾ ಮತ್ತು ಯಮೀನ್ ಮೊಹಮ್ಮದ್ ಅವರನ್ನು ಮೇ 11ರಂದು ಪೊಲೀಸರು ಬಂಧಿಸಿದ್ದಾರೆ. ಮಾಹಿತಿ ಹಂಚಿಕೊಂಡಿದ್ದಕ್ಕಾಗಿ ಪಾಕಿಸ್ತಾನದ ಅಧಿಕಾರಿಯೊಬ್ಬರು ಹಣ ಪಾವತಿಸುತ್ತಿದ್ದರು. 'ನನಗೆ ₹30 ಸಾವಿರ ನೀಡಿದ್ದಾರೆ' ಎಂದು ಗುಝಾಲಾ ಹೇಳಿದ್ದಾರೆ
- ಹರಿಯಾಣದ ಕೈಥಲ್ ನಗರದಲ್ಲಿ 25 ವರ್ಷದ ದೇವೇಂದ್ರ ಸಿಂಗ್ ಎಂಬುವರನ್ನು ಪೊಲೀಸರು ಮೇ 16ರಂದು ಬಂಧಿಸಿದ್ದಾರೆ. ಪಂಜಾಬ್‌ನ ಕಾಲೇಜುವೊಂದರಲ್ಲಿ ರಾಜಕೀಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆಯುತ್ತಿರುವ ದೇವೇಂದ್ರ, ಕಳೆದ ವರ್ಷ ಪಾಕಿಸ್ತಾನಕ್ಕೆ ಭೇಟಿ ನೀಡಿದ್ದರು. ಶಸ್ತ್ರಾಸ್ತ್ರಗಳೊಂದಿಗೆ ಇದ್ದ ಫೋಟೊ ಹಂಚಿಕೊಂಡಿದ್ದಕ್ಕಾಗಿ ದೇವೇಂದ್ರ ಅವರನ್ನು ಬಂಧಿಸಲಾಗಿತ್ತು
- ಪಾಕಿಸ್ತಾನದ ಅಧಿಕಾರಿಗೆ ರಕ್ಷಣಾ ಮಾಹಿತಿಗಳನ್ನು ಹಂಚಿಕೊಂಡಿದ್ದಕ್ಕಾಗಿ ಹರಿಯಾಣದ 24 ವರ್ಷದ ನೌಮಾನ್ ಇಲಾಹಿ ಅವರನ್ನು ಕೆಲವು ದಿನಗಳ ಹಿಂದೆ ಪೊಲೀಸರು ಬಂಧಿಸಿದ್ದರು

ಅಭದ್ರತೆಯೋ, ಮತ್ಸರವೋ: ಬಿಜೆಪಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಉಗ್ರವಾದ ಕುರಿತು ಭಾರತದ ನಿಲುವನ್ನು ರಾಜತಾಂತ್ರಿಕ ಮಾರ್ಗದ ಮೂಲಕ ವಿವಿಧ ರಾಷ್ಟ್ರಗಳಿಗೆ ತಿಳಿಸಲು ಕೇಂದ್ರ ಸರ್ಕಾರ ರಚಿಸಿರುವ ನಿಯೋಗಕ್ಕೆ ಪಕ್ಷ ಸೂಚಿಸಿರುವ ಸಂಸದರ ಹೆಸರುಗಳ ವಿಚಾರವಾಗಿ ಕಾಂಗ್ರೆಸ್‌ಅನ್ನು ಬಿಜೆಪಿ ತರಾಟೆಗೆ ತೆಗೆದುಕೊಂಡಿದೆ.

'ಸಂಸದ ಶಶಿ ತರೂರ್ ಅವರು ಪಕ್ಷದ ಹೈಕಮಾಂಡ್‌ಗೂ ಮೀರಿ ಹೊರ ಹೊಮ್ಮಿದ್ದಕ್ಕಾಗಿ ಅವರನ್ನು ಕಾಂಗ್ರೆಸ್ ಸರ್ವಪಕ್ಷಗಳ ನಿಯೋಗಕ್ಕೆ ನಾಮನಿರ್ದೇಶನ ಮಾಡಲಿಲ್ಲವೇ' ಎಂದು ಬಿಜೆಪಿ ಪ್ರಶ್ನಿಸಿದೆ.

'ಶಶಿ ತರೂರ್ ಅವರ ವಾಕ್ಚಾತುರ್ಯ, ವಿಶ್ವಸಂಸ್ಥೆಯಲ್ಲಿ ಸುದೀರ್ಘ ಅವಧಿಗೆ ಸೇವೆ ಸಲ್ಲಿಸಿರುವುದು, ಅವರು ಹೊಂದಿರುವ ಅನುಭವ ಹಾಗೂ ವಿದೇಶಾಂಗ ನೀತಿ ಕುರಿತ ಅವರ ಅಗಾಧ ಒಳನೋಟವನ್ನು ಯಾರೂ ಅಲ್ಲಗಳೆಯಲು ಸಾಧ್ಯ ಇಲ್ಲ' ಎಂದು ಬಿಜೆಪಿ ಐಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ, 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಕಾಂಗ್ರೆಸ್ ಪಕ್ಷ, ಅದರಲ್ಲೂ ವಿಶೇಷವಾಗಿ ರಾಹುಲ್ ಗಾಂಧಿ ಅವರು ತರೂರ್ ಹೆಸರನ್ನು ಯಾಕೆ ನಾಮನಿರ್ದೇಶನ ಮಾಡಲಿಲ್ಲ? ಇದು ಮತ್ಸರವೋ ಅಥವಾ ಅಭದ್ರತೆಯೋ? ಅಥವಾ ಹೈಕಮಾಂಡ್ ಮೀರಿ ಬೆಳೆಯುವವರ ಕುರಿತ ಅಸಹನೆಯೋ' ಎಂದು ಮಾಳವೀಯ ಪ್ರಶ್ನಿಸಿದ್ದಾರೆ.

'ನಿಯೋಗದಲ್ಲಿರುವವರ ಕುರಿತು ಕಾಂಗ್ರೆಸ್‌ನ ಆಯ್ಕೆ ಕುತೂಹಲಕಾರಿ ಮಾತ್ರವಲ್ಲ, ಗಹನವಾದ ಹಲವು ಪ್ರಶ್ನೆಗಳನ್ನೂ ಹುಟ್ಟು ಹಾಕುತ್ತದೆ' ಎಂದು ಮಾಳವೀಯ ಹೇಳಿದ್ದಾರೆ.

'ಉದಾಹರಣೆಗೆ, ನಿಯೋಗ ಸದಸ್ಯರಾಗಲು ಸೈಯದ್ ನಾಸೀರ್ ಹುಸೇನ್ ಹೆಸರು ಸೂಚಿಸಿರುವುದು ಆಘಾತಕಾರಿ. ನಾಸೀರ್, ರಾಜ್ಯಸಭಾ ಚುನಾವಣೆಯಲ್ಲಿ ಗೆದ್ದಾಗ, ಅವರ ಬೆಂಬಲಿಗರು ವಿಧಾನಸಭೆ ಒಳಗೇ 'ಪಾಕಿಸ್ತಾನ ಜಿಂದಾಬಾದ್' ಎಂಬ ಘೋಷಣೆ ಕೂಗಿದ್ದರು' ಎಂದೂ ಹೇಳಿದ್ದಾರೆ.

'ಗೌರವ್ ಗೋಗೊಯಿ ಕುರಿತು ಹೇಳುವುದೇ ಬೇಡ. ಗೋಗೊಯಿ 15 ದಿನ ಪಾಕಿಸ್ತಾನದಲ್ಲಿ ಕಳೆದಿದ್ದರು ಎಂದು ಅಸ್ಸಾಂ ಸಿ.ಎಂ ಹಿಮಂತ ಬಿಸ್ವ ಶರ್ಮಾ ಆರೋಪಿಸಿದ್ದಾರೆ. ಅವರ ಆಗಮನ ಮತ್ತು ನಿರ್ಗಮನ ಕುರಿತು ಅಟ್ಟಾರಿ ಗಡಿಯಲ್ಲಿನ ಕಚೇರಿಯಲ್ಲಿ ದಾಖಲಾಗಿದೆ' ಎಂದು ಟೀಕಿಸಿದ್ದಾರೆ.

ನಿಬಂಧನೆಗಳ ಹೊರತಾಗಿ ಒಪ್ಪಿಗೆ: ಸಿಪಿಎಂ

'ರಾಷ್ಟ್ರೀಯ ವಿಚಾರಗಳಿಗೆ ಸಂಬಂಧಿಸಿ ತಮ್ಮದೇ ಆದ ನಿಬಂಧನೆಗಳು ಇವೆ. ರಾಷ್ಟ್ರೀಯ ಹಿತಾಸಕ್ತಿ ದೃಷ್ಟಿಯಿಂದ ಕೇಂದ್ರ ಸರ್ಕಾರದ ಈ ನಿಯೋಗದ ಭಾಗವಾಗಲು ಪಕ್ಷ ಒಪ್ಪಿದೆ' ಎಂದು ಸಿಪಿಎಂ ಹೇಳಿದೆ. 'ಪಹಲ್ಗಾಮ್‌ನಲ್ಲಿ ಉಗ್ರರ ದಾಳಿ ಹಾಗೂ ನಂತರ ಬೆಳವಣಿಗೆಗಳ ಕುರಿತು ಚರ್ಚಿಸಲು ಪ್ರಧಾನಿ ಮತ್ತು ಅವರ ನೇತೃತ್ವದ ಸರ್ಕಾರ ಸಂಸತ್‌ನ ವಿಶೇಷ ಅಧಿವೇಶನ ಕರೆಯಲು ಒಪ್ಪದಿರುವುದು ದುರದೃಷ್ಟಕರ' ಎಂದೂ ಪಕ್ಷ ಹೇಳಿದೆ.

ಜಾಗತಿಕ ವೇದಿಕೆಯಲ್ಲಿ ಭಾರತದ ನಿಲುವು ತಿಳಿಸಲಿರುವ ಸರ್ವಪಕ್ಷಗಳ ನಿಯೋಗದ ಭಾಗವಾಗಲು ಅವಕಾಶ ಸಿಕ್ಕಿದ್ದು ಗೌರವದ ವಿಷಯ. ಈ ಜವಾಬ್ದಾರಿಯನ್ನು ವಿನಮ್ರತೆಯಿಂದ ಸ್ವೀಕರಿಸುವೆ. ಪ್ರಧಾನಿ ಮೋದಿ, ಸಚಿವ ರಿಜಿಜು ಹಾಗೂ ವಿದೇಶಾಂಗ ಸಚಿವಾಲಯಕ್ಕೆ ಧನ್ಯವಾದ ಅರ್ಪಿಸುವೆ. ಒಂದು ರಾಷ್ಟ್ರವಾಗಿ ನಾವು ಘನತೆಯಿಂದ, ಬಲಿಷ್ಠ ಹಾಗೂ ಅಚಲವಾಗಿ ನಿಲ್ಲುತ್ತೇವೆ

ಸುಪ್ರಿಯಾ ಸುಳೆ, ಎನ್‌ಸಿಪಿ–ಎಸ್‌ಪಿ

ಅಧಿಕ ಬಿಲ್ ಪಾವತಿ: ಉಪ ಆರೋಗ್ಯಾಧಿಕಾರಿ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಇಂದಿರಾ ಕ್ಯಾಂಟೀನ್‌ಗೆ ಆಹಾರ ಪೂರೈಸುವ ಕಂಪನಿಗೆ ನಿಗದಿತ ಮೊತ್ತಕ್ಕಿಂತ ₹ 7 ಕೋಟಿ ಅಧಿಕ ಬಿಲ್ ಪಾವತಿ ಮಾಡಿದ್ದ ಉಪ ಆರೋಗ್ಯಾಧಿಕಾರಿಯನ್ನು ಬಿಬಿಎಂಪಿ ವಿಶೇಷ ಆಯುಕ್ತರು (ಆಡಳಿತ) ಅಮಾನತು ಮಾಡಿದ್ದಾರೆ.

ಬಿಬಿಎಂಪಿ ದಕ್ಷಿಣ ವಲಯದ ಉಪ ಆರೋಗ್ಯಾಧಿಕಾರಿ ಡಾ. ಕಲ್ಪನಾ ಪಿ. ಅಮಾನತು ಆದವರು. ಉಪ ಆರೋಗ್ಯಾಧಿಕಾರಿಯಾಗಿದ್ದ ಅವರಿಗೆ ಆರೋಗ್ಯಾಧಿಕಾರಿಯ ಹೊಣೆಗಾರಿಕೆ ನೋಡಿಕೊಳ್ಳಲು ನಿಯೋಜಿಸಲಾಗಿತ್ತು. ಆಹಾರ ಪೂರೈಕೆ ಮಾಡಿದ್ದಕ್ಕಾಗಿ ಮೆ. ಚಿಫ್‌ಟಾಕ್ ಫುಡ್ ಆ್ಯಂಡ್ ಹಾಸ್ಪಿಟಾಲಿಟಿ ಸರ್ವಿಸಸ್ ಪ್ರೈವೆಟ್ ಲಿಮಿಟೆಡ್‌ಗೆ ₹ 2,27,34,474 ನೀಡಲು ಬಾಕಿ ಇತ್ತು. ಅದನ್ನು ಪಾವತಿಸುವಂತೆ ಸಂಸ್ಥೆಯು ಕೋರಿತ್ತು. ಡಾ. ಕಲ್ಪನಾ ಅವರು ಇದನ್ನು ಪರಿಶೀಲಿಸದೇ ₹ 9,72,21,787 ಪಾವತಿ ಮಾಡಿದ್ದರು. ಕರ್ತವ್ಯ ಲೋಪವನ್ನು ಗಂಭೀರವಾಗಿ ಪರಿಗಣಿಸಿ ಅವರನ್ನು ಅಮಾನತು ಮಾಡಲಾಗಿದೆ. ವಿಚಾರಣೆ ನಡೆಯುತ್ತಿದೆ.

'ಅರಣ್ಯ ಭೂಮಿ ಹಸ್ತಾಂತರಿಸಿ'

ಒಂದನೇ ಪುಟದಿಂದ...

ಪುಣೆಯ ಮೀಸಲು ಅರಣ್ಯ ಭೂಮಿಗೆ ಸಂಬಂಧಿಸಿದಂತೆ ಪೀಠವು 88 ಪುಟಗಳ ತೀರ್ಪನ್ನು ಪ್ರಕಟಿಸಿದೆ.

1988ರ ಆಗಸ್ಟ್ 28 ರಂದು ಪುಣೆ ಜಿಲ್ಲೆಯ ಕೊಂಧ್ವಾ ಬುದ್ರುಕ್‌ನಲ್ಲಿ 11.89 ಹೆಕ್ಟೇರ್ ಮೀಸಲು ಅರಣ್ಯ ಭೂಮಿಯನ್ನು ಕೃಷಿ ಉದ್ದೇಶಗಳಿಗಾಗಿ ಹಂಚಿಕೆ ಮಾಡಲಾಗಿತ್ತು. ನಂತರ 1999ರ ಅಕ್ಟೋಬರ್ 30ರಂದು ಆರ್‌ಆರ್‌ಸಿಎಚ್‌ಎಸ್ ಪರವಾಗಿ ಅದನ್ನು ಮಾರಾಟ ಮಾಡಲು ಅನುಮತಿ ನೀಡಲಾಗಿತ್ತು. ಇದು ಸಂಪೂರ್ಣವಾಗಿ ಕಾನೂನುಬಾಹಿರವಾಗಿದೆ ಎಂದು ಪೀಠ ಅಭಿಪ್ರಾಯಪಟ್ಟಿತು.

ಜೊತೆಗೆ, 2007ರ ಜುಲೈ 3ರಂದು ಆರ್‌ಆರ್‌ಸಿಎಚ್‌ಎಸ್‌ಗೆ ಅರಣ್ಯ ಸಚಿವಾಲಯ ನೀಡಿದ್ದ ಪರಿಸರ ನಿರಾಕ್ಷೇಪಣಾ ಪತ್ರವನ್ನು ಕೂಡ ಪೀಠ ವಜಾಗೊಳಿಸಿತು.

ತ್ರಿಸದಸ್ಯ ಪೀಠದಲ್ಲಿ ಒಬ್ಬರಾದ ಮುಖ್ಯ ನ್ಯಾಯಮೂರ್ತಿಯವರು, 'ರಾಜಕಾರಣಿಗಳು, ಅಧಿಕಾರಿಗಳು ಮತ್ತು ಬಿಲ್ಡರ್‌ಗಳ ನಡುವಿನ ಅಪವಿತ್ರ ಸಂಬಂಧದ ಮೂಲಕ ಹಿಂದುಳಿದ ವರ್ಗಗಳ ಪುನರ್ವಸತಿ ಹೆಸರಿನಲ್ಲಿ ಅಮೂಲ್ಯ ಅರಣ್ಯ ಭೂಮಿಯನ್ನು ಹೇಗೆ ವಾಣಿಜ್ಯ ಉದ್ದೇಶಕ್ಕೆ ಪರಿವರ್ತನೆ ಮಾಡಲಾಗುತ್ತದೆ ಎಂಬುದಕ್ಕೆ ಪ್ರಸ್ತುತ ಪ್ರಕರಣವು ಒಂದು ಅತ್ಯುತ್ತಮ ಉದಾಹರಣೆಯಾಗಿದೆ' ಎಂದಿದ್ದಾರೆ.

'ಮಹಾರಾಷ್ಟ್ರದ ಆಗಿನ ಕಂದಾಯ ಸಚಿವರು ಮತ್ತು ಆಗಿನ ಜಿಲ್ಲಾಧಿಕಾರಿಯು ಸಾರ್ವಜನಿಕರ ವಿಶ್ವಾಸಕ್ಕೆ ತಿಲಾಂಜಲಿ ಇಟ್ಟಂತೆ ಕಾಣುತ್ತಿದೆ. ಇದು ದಾಖಲೆಗಳಲ್ಲಿ ಎದ್ದು ಕಾಣುತ್ತಿದೆ' ಎಂದು ಪೀಠ ಅಭಿಪ್ರಾಯ ವ್ಯಕ್ತಪಡಿಸಿತು.

ಈ ಪ್ರಕರಣದಲ್ಲಿ, ಅರಣ್ಯ ಭೂಮಿಯಾಗಿ ಮೀಸಲಾಗಿರುವ, ಕಂದಾಯ ಇಲಾಖೆಯ ಸ್ವಾಧೀನದಲ್ಲಿರುವ ಭೂಮಿಯನ್ನು ಮೂರು ತಿಂಗಳ ಅವಧಿಯೊಳಗೆ ಅರಣ್ಯ ಇಲಾಖೆಗೆ ಹಸ್ತಾಂತರಿಸಬೇಕು ಎಂದು ನ್ಯಾಯಾಲಯ ನಿರ್ದೇಶನ ನೀಡಿತು.

'ನಯಾಪೈಸೆ ಗುತ್ತಿಗೆ ಪಾವತಿಸದ ಪ್ರಕರಣಗಳು ರಾಜ್ಯದಲ್ಲಿವೆ'

ಸುಪ್ರೀಂಕೋರ್ಟ್‌ನ ಈ ತೀರ್ಪು ತುಂಬಾ ಮುಖ್ಯವಾದುದು. ಕರ್ನಾಟಕದಲ್ಲಿ, ಮೀಸಲು ಅರಣ್ಯ ಮಂಜೂರು ಮಾಡುವ ಕಂದಾಯ ಇಲಾಖೆಯ ನಿರ್ಧಾರದಿಂದ ಕಾರಿಡಾರ್‌ಗಳ ನಾಶ ಸೇರಿದಂತೆ ದೊಡ್ಡ ಪ್ರಮಾಣದ ಹಾನಿ ಉಂಟಾಗಿದೆ. ಇದರಿಂದ ಮಾನವ–ಪ್ರಾಣಿ ಸಂಘರ್ಷ ಕೂಡ ಹೆಚ್ಚಾಗಿದೆ. ಈ ತೀರ್ಪು ನಾಗರಹೊಳೆ ಹುಲಿ ಅಭಿಯಾರಣ್ಯದಲ್ಲಿನ ಎಕ್ಸಾಲಿ ಗುತ್ತಿಗೆಯನ್ನು ಉಲ್ಲೇಖಿಸುತ್ತದೆ. ಕಾಕನಕೋಟೆ ರಾಜ್ಯ ಅರಣ್ಯದೊಳಗೆ 405 ಎಕರೆ ಭೂಮಿಯನ್ನು ಮೂರು ರೂಪಾಯಿ 67 ಪೈಸೆ ವಾರ್ಷಿಕ ಗುತ್ತಿಗೆ ಬಾಡಿಗೆಯ ಆಧಾರದ ಮೇಲೆ ಎಕ್ಸಾಲಿ ಗುತ್ತಿಗೆ ನೀಡಲಾಗಿತ್ತು. ಪ್ರಮುಖ ಅರಣ್ಯ ಪ್ರದೇಶಗಳಲ್ಲಿ ಗುತ್ತಿಗೆ ಬಾಡಿಗೆ ಪಾವತಿಸದೆ ಎಸ್ಟೇಟ್‌ಗಳು, ರಬ್ಬರ್ ತೋಟಗಳು ಮತ್ತು ಕಂಪನಿಗಳು ಗುತ್ತಿಗೆ ಪಡೆದಿರುವ ಇನ್ನೂ ಅನೇಕ ಪ್ರಕರಣಗಳಿವೆ. ಇವುಗಳನ್ನು ವಿಶೇಷ ತನಿಖಾ ತಂಡದ ಮೂಲಕ ಪರಿಶೀಲಿಸಬೇಕಿದೆ. ಇಂತಹ ಪ್ರಕರಣಗಳು ನ್ಯಾಯಾಲಯವು ಎತ್ತಿಹಿಡಿದಿರುವ ಸಾರ್ವಜನಿಕ ವಿಶ್ವಾಸ ಸಿದ್ಧಾಂತಕ್ಕೆ ವಿರುದ್ಧವಾಗಿದೆ.

ಪ್ರವೀಣ್ ಭಾರ್ಗವ್, ವೈಲ್ಡ್‌ಲೈಫ್ ಫಸ್ಟ್ ಟ್ರಸ್ಟಿ

ವಾಣಿಜ್ಯ ತೆರಿಗೆ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ

ತೆರಿಗೆ ಸಂಗ್ರಹ ಗುರಿ ಮುಟ್ಟಲೇಬೇಕು: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈ ಆರ್ಥಿಕ ವರ್ಷದಲ್ಲಿ ವಾಣಿಜ್ಯ ತೆರಿಗೆ ಸಂಗ್ರಹಕ್ಕೆ ನೀಡಲಾಗಿರುವ ಗುರಿಯನ್ನು ಮುಟ್ಟಲೇಬೇಕು. ಈ ಹೊಣೆಗಾರಿಕೆಯನ್ನು ಅರಿತು ಅಧಿಕಾರಿಗಳು ಕೆಲಸ ಮಾಡಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ವಾಣಿಜ್ಯ ತೆರಿಗೆಗಳ ಸೇವಾ ಅಧಿಕಾರಿಗಳ ಸಂಘದ ಸುವರ್ಣ ಮಹೋತ್ಸವವನ್ನು ಶನಿವಾರ ಉದ್ಘಾಟಿಸಿದ ಅವರು, 'ತೆರಿಗೆ ಸಂಗ್ರಹ ಸರಿಯಾಗಿ ಆದರಷ್ಟೇ ರಾಜ್ಯವನ್ನು ಅಭಿವೃದ್ಧಿ ಹಾದಿಯಲ್ಲಿ ಕರೆದೊಯ್ಯಲು ಸಾಧ್ಯ. ವಾಣಿಜ್ಯ ತೆರಿಗೆ ಸಂಗ್ರಹದಲ್ಲಿ ಲೋಪವಿದೆ ಮತ್ತು ತೆರಿಗೆ ಸೋರಿಕೆ ಯಾಗುತ್ತಿದೆ. ಇದನ್ನು ನೀವೂ ಒಪ್ಪುತ್ತೀರಿ, ನಾನೂ ಒಪ್ಪುತ್ತೇನೆ. ಆದರೆ ಅದನ್ನು ತಡೆಯುವ ಹೊಣೆಗಾರಿಕೆ ನಿಮ್ಮ ಮೇಲಿದೆ' ಎಂದರು.

'ಸೋರಿಕೆ ನಿಲ್ಲಿಸಿದರಷ್ಟೇ ಗುರಿ ನೀಡಿರುವಷ್ಟು ತೆರಿಗೆಯನ್ನು ಸಂಗ್ರಹಿಸಲು ಸಾಧ್ಯವಾಗುತ್ತದೆ. ವಾಣಿಜ್ಯ ತೆರಿಗೆ ಇಲಾಖೆಯನ್ನು ಬಲಪಡಿಸುವ ಸಲುವಾಗಿ ಅಗತ್ಯವಿರುವಷ್ಟು ವಾಹನ, ಸಿಬ್ಬಂದಿ ಮತ್ತು ಸವಲತ್ತುಗಳನ್ನು ನೀಡಲು ಸರ್ಕಾರ ಬದ್ಧವಾಗಿದೆ. ಆದರೆ ಅಧಿಕಾರಿಗಳು ಮಾತ್ರ ಸರಿಯಾಗಿ ಕೆಲಸ ಮಾಡಬೇಕು' ಎಂದರು.

'ನಾನು ಈ ಹಿಂದೆ ಹಣಕಾಸು ಮಂತ್ರಿಯಾಗಿದ್ದಾಗ ತೆರಿಗೆ ಸಂಗ್ರಹದ ವಿಚಾರದಲ್ಲಿ ಬಹಳ ಕಟ್ಟುನಿಟ್ಟಾಗಿದ್ದೆ. ಈಗ ಮುಖ್ಯಮಂತ್ರಿಯ ಹೊಣೆಗಾರಿಕೆ ಇರುವುದರಿಂದ ಅಷ್ಟು ಸಮಯ ನೀಡಲಾಗುತ್ತಿಲ್ಲ. ತೆರಿಗೆ ಸಂಗ್ರಹ ಗುರಿ ಮುಟ್ಟಲು, ಗರಿಷ್ಠ ಮಟ್ಟದಲ್ಲಿ ತೆರಿಗೆ ಸಂಗ್ರಹಿಸಲು ಅಗತ್ಯವಿರುವ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಿ' ಎಂದರು.

ಅತಿಹೆಚ್ಚು ಜಿಎಸ್‌ಟಿ ಸಂಗ್ರಹಣೆಯಲ್ಲಿ ಕರ್ನಾಟಕವು ಈಗ 2ನೇ ಸ್ಥಾನದಲ್ಲಿದೆ. ಮುಂದಿನ ದಿನಗಳಲ್ಲಿ ರಾಜ್ಯವನ್ನು ಮೊದಲ ಸ್ಥಾನಕ್ಕೆ ತರಬೇಕು

ಸಿದ್ದರಾಮಯ್ಯ, ಮುಖ್ಯಮಂತ್ರಿ



ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳನ್ನು ಉದ್ದೇಶಿಸಿ ಸಿದ್ದರಾಮಯ್ಯ ಮಾತನಾಡಿದರು

'ವಾಣಿಜ್ಯ ಇಲಾಖೆಗೆ ಈ ಸಾಲಿನಲ್ಲಿ ₹1.20 ಲಕ್ಷ ಕೋಟಿ ತೆರಿಗೆ ಸಂಗ್ರಹ ಗುರಿ ನೀಡಲಾಗಿದೆ. ಆ ಗುರಿಯನ್ನು ಮುಟ್ಟಿ, ನೀವು ಸಲ್ಲಿಸಿರುವ ಹಲವು ಬೇಡಿಕೆಗಳನ್ನು ಈಡೇರಿಸುತ್ತೇವೆ. ಗುರಿ ನೀಡಿದ ತೆರಿಗೆ ಸಂಗ್ರಹಿಸಿಕೊಟ್ಟರೆ, ನಿಮಗಾಗಿ ನಾಲ್ಕೈದು ಕೋಟಿ ರೂಪಾಯಿ ವೆಚ್ಚ ಮಾಡುವುದು ಸರ್ಕಾರಕ್ಕೆ ದೊಡ್ಡ ವಿಷಯವೇನಲ್ಲ' ಎಂದರು.

'ನಿಮ್ಮ ಸಂಘದ ವತಿಯಿಂದ ಒಂದು ಭವನ ನಿರ್ಮಾಣಕ್ಕೆ ಮನವಿ ಸಲ್ಲಿಸಿದ್ದೀರಿ. ಅದನ್ನು ನಿರ್ಮಿಸುವ ಬಗ್ಗೆ ಪರಿಶೀಲನೆ ನಡೆಸುತ್ತೇವೆ. ವೇತನ ತಾರತಮ್ಯವನ್ನು ನಿವಾರಿಸುತ್ತೇವೆ. ನಿಮ್ಮ ಕೆಲಸದಲ್ಲಿ ನಾನು ಹಸ್ತಕ್ಷೇಪ ಮಾಡುವುದಿಲ್ಲ. ಆದರೆ ಅಧಿಕಾರಿಗಳು ಹೊಣೆಗಾರಿಕೆ ಮರೆತು, ಕೆಲಸ ಮಾಡದೇ ಇದ್ದರೆ ಖಂಡಿತವಾಗಿಯೂ ಕಠಿಣ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ' ಎಂದು ಹೇಳಿದರು..

ಅವಹೇಳನಕಾರಿ ಬರಹದ ವಿರುದ್ಧ ಸ್ಥಳೀಯರ ಪ್ರತಿಭಟನೆ • ಪೊಲೀಸರಿಂದ ವ್ಯವಸ್ಥಾಪಕನ ಬಂಧನ

ಕನ್ನಡಿಗರಿಗೆ ಅವಮಾನ; ಹೋಟೆಲ್‌ಗೆ ಬೀಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿಜಿಟಲ್ ಬೋರ್ಡ್‌ನಲ್ಲಿ ಕನ್ನಡಿಗರ ಕುರಿತು ಅವಹೇಳನಕಾರಿ ಬರಹ ಪ್ರಕಟಿಸಿದ್ದ ತಾವರೆಕೆರೆ ಮುಖ್ಯ-ರಸ್ತೆಯಲ್ಲಿ ಇರುವ ಜಿ.ಎಸ್. ಸೂಟ್ಸ್ ಹೋಟೆಲ್‌ನ ಪರವಾನಗಿಯನ್ನು ಬಿಬಿಎಂಪಿ ರದ್ದುಗೊಳಿಸಿದೆ.

ಬೋರ್ಡ್‌ನಲ್ಲಿ ಪ್ರಕಟವಾಗಿದ್ದ ಬರಹವು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ ಬಳಿಕ ಸ್ಥಳೀಯರು ಲಾಡ್ಜ್ ಎದುರು ಶನಿವಾರ ಜಮಾಯಿಸಿ ಆಕ್ರೋಶ ವ್ಯಕ್ತಪಡಿಸಿದ್ದರು.

ಆಕ್ರೋಶ ಹೆಚ್ಚಾದ ಬೆನ್ನಲ್ಲೇ ಸ್ಥಳಕ್ಕೆ ಭೇಟಿ ನೀಡಿದ್ದ ಮಡಿವಾಳ ಠಾಣೆಯ ಪೊಲೀಸರು, ಜಿ.ಎಸ್.ಸೂಟ್ಸ್ ಹೋಟೆಲ್‌ನ ಸಿಬ್ಬಂದಿ ಮಹಮ್ಮದ್, ಅಬ್ದುಲ್ ಸಮದ್ ಸೇರಿ ಐವರನ್ನು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಿದರು.



ಹೋಟೆಲ್ ಸಿಬ್ಬಂದಿ ಬಂಧನ

ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 196 (ವೈಷಮ್ಯ ಮೂಡಿಸುವುದು) ಅಡಿ ಪ್ರಕರಣ ದಾಖಲಿಸಿಕೊಂಡು ಹೋಟೆಲ್‌ನ ವ್ಯವಸ್ಥಾಪಕನನ್ನು ಬಂಧಿಸಲಾಗಿದೆ. ಉಳಿದವರ ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

> **ಹೋಟೆಲ್ ಮಾಲೀಕ ಹಾಗೂ ಸಿಬ್ಬಂದಿ ವಿರುದ್ಧ ಮಡಿವಾಳ ಠಾಣೆ ಪೊಲೀಸರು ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮಾಲೀಕ ವಿದೇಶದಲ್ಲಿದ್ದು, ನೋಟಿಸ್ ಜಾರಿ ಮಾಡಲಾಗಿದೆ**
>
> **ಸಾರಾ ಫಾತಿಮಾ,** ಡಿಸಿಪಿ, ಆಗ್ನೇಯ ವಿಭಾಗ

‘ಹೋಟೆಲ್‌ನ ಪರವಾನಗಿ ರದ್ದುಗೊಳಿಸಿ, ಬೀಗ ಹಾಕಲಾಗಿದೆ’ ಎಂದು ಬಿಬಿಎಂಪಿಯ ಮುಖ್ಯ ಆಯುಕ್ತ ಎಂ.ಮಹೇಶ್ವರ ರಾವ್ ತಿಳಿಸಿದರು.

ತಡರಾತ್ರಿ ಪ್ರಕಟವಾಗಿದ್ದ ಬರಹ: ಹೋಟೆಲ್‌ನ ಹೊರಭಾಗದಲ್ಲಿ ಡಿಜಿಟಲ್ ಬೋರ್ಡ್ ಅಳವಡಿಸಲಾಗಿತ್ತು. ಅದರಲ್ಲಿ ಶುಕ್ರವಾರ ತಡರಾತ್ರಿ ಕನ್ನಡಿಗರ ಕುರಿತ ಅವಹೇಳನಕಾರಿ ಬರಹವೊಂದು ಪ್ರಕಟವಾಗಿತ್ತು. ಅದನ್ನು ಗಮನಿಸಿದ್ದ ಸ್ಥಳೀಯರೊಬ್ಬರು, ಮೊಬೈಲ್‌ನಲ್ಲಿ ಸೆರೆ ಹಿಡಿದು ಸಾಮಾಜಿಕ ಮಾಧ್ಯಮ ‘ಎಕ್ಸ್’ನಲ್ಲಿ ಹಾಕಿದ್ದರು.

‘ಕೋರಮಂಗಲದ ಕಂಪನಿಯೊಂದು ಡಿಜಿಟಲ್ ಬೋರ್ಡ್ ಸಿದ್ಧಪಡಿಸಿಕೊಟ್ಟಿತ್ತು. ಮೇ 8ರ ಬಳಿಕ ಬೋರ್ಡ್‌ನಲ್ಲಿ ಬೇರೆ ಬೇರೆ ವಾಕ್ಯಗಳು ಡಿಸ್ ಪ್ಲೇ ಆಗುತ್ತಿದ್ದರಿಂದ ಕಂಪನಿಗೆ ಮಾಹಿತಿ ನೀಡಿದ್ದೆವು. ಕನ್ನಡಿಗರ ಕುರಿತು ಅವಾಚ್ಯ ವಾಕ್ಯ ಹೇಗೆ ಡಿಸ್‌ಪ್ಲೆ ಆಗಿದೆ ಎಂಬುದು ನಮಗೆ ಗೊತ್ತಿಲ್ಲ. ಹ್ಯಾಕ್ ಆಗಿರುವ ಸಾಧ್ಯತೆ ಇದೆ ಎಂಬುದಾಗಿ ಹೋಟೆಲ್ ಸಿಬ್ಬಂದಿ ವಿಚಾರಣೆಯ ವೇಳೆ ತಿಳಿಸಿದ್ದಾರೆ. ಬೋರ್ಡ್ ಸಿದ್ಧಪಡಿಸಿ ಕೊಟ್ಟವರಿಗೂ ನೋಟಿಸ್ ಜಾರಿ ಮಾಡಿ ವಿಚಾರಣೆ ನಡೆಸಲಾಗುವುದು’ ಎಂದು ಪೊಲೀಸರು ಹೇಳಿದರು.

‘ಕನ್ನಡ ಭಾಷೆ ಹಾಗೂ ಕನ್ನಡಿಗರಿಗೆ ಅಪಮಾನವಾದರೆ ಪ್ರಶ್ನೆ ಮಾಡಬೇಕು. ಕನ್ನಡ ಸಂಘಟನೆಗಳೇ ಪ್ರಶ್ನಿಸಬೇಕು ಎಂದು ಕಾಯದೇ ಸ್ಥಳೀಯರು ಕನ್ನಡ ವಿರೋಧಿಗಳ ವಿರುದ್ಧ ಹೋರಾಟ ನಡೆಸಬೇಕು’ ಎಂದು ಸ್ಥಳೀಯ ನಿವಾಸಿ ಶರತ್ ಆಗ್ರಹಿಸಿದರು.

‘ಹೋಟೆಲ್ ಮಾಲೀಕ ಎಲ್ಲಿಯವರು? ಯಾವಾಗ ಹೋಟೆಲ್ ಆರಂಭಿಸಿದ್ದರು ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ. ಪ್ರಾಥಮಿಕ ತನಿಖೆಯಂತೆ ಹೋಟೆಲ್ ಮಾಲೀಕ ಹೊರ ರಾಜ್ಯದವರು ಎಂಬುದು ಗೊತ್ತಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ತಪ್ಪಿತಸ್ಥರ ವಿರುದ್ಧ ಕ್ರಮ ಆಗಬೇಕು. ಜಿಎಸ್ ಸೂಟ್ಸ್ ಹೋಟೆಲ್ ಒಂದೇ ಅಲ್ಲ. ಬೇರೆ ಬೇರೆ ಭಾಗದಿಂದ ಬೆಂಗಳೂರಿಗೆ ಬಂದು ಹೋಟೆಲ್, ಲಾಡ್ಜ್ ತೆರೆದಿರುವ ವ್ಯಕ್ತಿಗಳಿಂದ ಕನ್ನಡಕ್ಕೆ ಅಪಮಾನ ಆಗುತ್ತಿದೆ. ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು’ ಎಂದು ಕರ್ನಾಟಕ ರಕ್ಷಣಾ ವೇದಿಕೆಯ ಪ್ರವೀಣ್ ಶೆಟ್ಟಿ ಆಗ್ರಹಿಸಿದರು.

ಹಗಲು ಸೆಕ್ಯೂರಿಟಿ ಗಾರ್ಡ್ ಕೆಲಸ, ರಾತ್ರಿ ಕಳ್ಳತನ

ಬೆಂಗಳೂರು: ಭದ್ರತಾ ಸಿಬ್ಬಂದಿಯಾಗಿ (ಸೆಕ್ಯೂರಿಟಿ ಗಾರ್ಡ್) ಹಗಲಿನಲ್ಲಿ ಕೆಲಸ ಮಾಡುತ್ತಾ, ರಾತ್ರಿ ವೇಳೆ ಮನೆಗಳ್ಳತನ ಮಾಡುತ್ತಿದ್ದ ಇಬ್ಬರನ್ನು ಬಾಣಸವಾಡಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ನೇಪಾಳದ ಪದಂ ಲಕ್ಷ್ಮಿಶಾಯಿ ಮತ್ತು ಮುಕುಂದ್ ಶಾಯಿ ಬಂಧಿತರು.

ಬಂಧಿತರಿಂದ ₹10 ಲಕ್ಷ ಮೌಲ್ಯದ 117 ಗ್ರಾಂ ಚಿನ್ನಾಭರಣ ಜಪ್ತಿ ಮಾಡಿ-ಕೊಳ್ಳಲಾಗಿದೆ. ಹಗಲು ಹೊತ್ತು ಬೀಗ ಹಾಕಿರುವ ಮನೆಗಳನ್ನು ಗುರುತಿಸಿ, ರಾತ್ರಿ ವೇಳೆ ಕಬ್ಬಿಣದ ಸಲಾಕೆಯಿಂದ ಬಾಗಿಲು ಮೀಟಿ ಕಳವು ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

‘ಠಾಣಾ ವ್ಯಾಪ್ತಿಯ ಕಲ್ಯಾಣ ನಗರದ ಮೂರನೇ ಬ್ಲಾಕ್‌ನಲ್ಲಿ ಕಳವು ಮಾಡಿದ್ದರು. ಮನೆಯ ಮಾಲೀಕರು ಬಾಣಸವಾಡಿ ಠಾಣೆಗೆ ದೂರು ನೀಡಿದ್ದರು. ದೂರು ಆಧರಿಸಿ, ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ತಿಳಿಸಿದರು.

ಅಪಘಾತ: ಪುತ್ರಿ ಸಾವು, ತಾಯಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಮೇಲ್ಸೇತುವೆಯಲ್ಲಿ ಕ್ಯಾಂಟರ್ ವಾಹನ ಹಾಗೂ ಆಟೊ ನಡುವೆ ಸಂಭವಿಸಿದ ಅಪಘಾತದಲ್ಲಿ ಪುತ್ರಿ ಮೃತಪಟ್ಟು, ತಾಯಿ ಗಾಯಗೊಂಡಿದ್ದಾರೆ.

ಯಲಹಂಕ ನ್ಯೂಟೌನ್ ನಿವಾಸಿ ಪ್ರಿಯಾ (26) ಮೃತರು. ಇವರ ತಾಯಿ ಮಾಲತಿ ಹಾಗೂ ಆಟೊ ಚಾಲಕನಿಗೆ ಗಾಯವಾಗಿದೆ. ಶುಕ್ರವಾರ ರಾತ್ರಿ ಸುಮಾರು 10 ಗಂಟೆ ಸುಮಾರಿಗೆ ಬಳ್ಳಾರಿ ರಸ್ತೆಯ ಅಟ್ರೈಡ್ ಹೋಟೆಲ್ ಎದುರಿನ ಮೇಲ್ಸೇತುವೆಯಲ್ಲಿ ದುರ್ಘಟನೆ ನಡೆದಿದೆ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು.

ಪ್ರಿಯಾ ಮತ್ತು ಅವರ ತಾಯಿ ಮಾಲತಿ ಶುಕ್ರವಾರ ರಾತ್ರಿ ಕಮರ್ಷಿಯಲ್ ಸ್ಟ್ರೀಟ್‌ನಿಂದ ಆಟೊದಲ್ಲಿ ಮನೆಗೆ ಹೊರಟ್ಟಿದ್ದರು. ರಾತ್ರಿ ಸಮಾರು 10 ಗಂಟೆ ಸುಮಾರಿಗೆ ಬಳ್ಳಾರಿ ಮುಖ್ಯರಸ್ತೆಯ ಮೇಲ್ಸೇತುವೆಯಲ್ಲಿ ಸೇತುವೆಯಲ್ಲಿ ಹೋಗುತ್ತಿದ್ದರು.

ಈ ವೇಳೆ ರಸ್ತೆಯ ಬದಿ ಪಾರ್ಕಿಂಗ್ ಸಿಗ್ನಲ್ ಹಾಕದೆ ನಿಲುಗಡೆ ಮಾಡಿದ್ದ ಕ್ಯಾಂಟರ್ ವಾಹನಕ್ಕೆ ಆಟೊ ಡಿಕ್ಕಿಯಾಗಿದೆ. ಡಿಕ್ಕಿಯ ರಭಸಕ್ಕೆ ಆಟೊ ರಸ್ತೆಗೆ ಉರುಳಿ ಬಿದ್ದ ಪರಿಣಾಮ ಪ್ರಿಯಾ ಅವರ ತಲೆ ಹಾಗೂ ಕುತ್ತಿಗೆಯ ಭಾಗಕ್ಕೆ ಗಂಭೀರ ಗಾಯವಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮಾಲತಿ ಹಾಗೂ ಆಟೊ ಚಾಲಕ ಗಾಯಗೊಂಡಿದ್ದು, ಸ್ಥಳೀಯರು ಸಮೀಪದ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಟ್ಯಾಂಕರ್ ವಾಹನದ ಚಾಲಕನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದೆ ಎಂದು ಸಂಚಾರ ಪೊಲೀಸರು ಮಾಹಿತಿ ನೀಡಿದರು. ಯಲಹಂಕ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವೇಶ್ಯಾವಾಟಿಕೆ: ಯುವತಿಯರ ರಕ್ಷಣೆ

ಬೆಂಗಳೂರು: ಬಸವೇಶ್ವರ ನಗರದ ಸ್ಪಾವೊಂದರಲ್ಲಿ ವೇಶ್ಯಾವಾಟಿಕೆ ನಡೆಸುತ್ತಿದ್ದ ಇಬ್ಬರು ವ್ಯಕ್ತಿಗಳನ್ನು ಸಿಸಿಬಿ ಮಹಿಳಾ ಸಂರಕ್ಷಣಾ ದಳದ ಸಿಬ್ಬಂದಿ ಬಂಧಿಸಿದ್ದಾರೆ. ಈ ಸಂಬಂಧ ಐಟಿಪಿ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ. ಆರೋಪಿಗಳು ಯುವತಿಯರನ್ನು ಕರೆತಂದು ವೇಶ್ಯಾವಾಟಿಕೆ ನಡೆಸುತ್ತಿರುವ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿದ್ದು, ನಾಲ್ವರು ಯುವತಿಯರನ್ನು ರಕ್ಷಿಸಲಾಯಿತು ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿ

ಅತ್ಯಾಚಾರ ನಡೆದಿಲ್ಲ: ಎಸ್‌ಪಿ

ಬಿಡದಿ (ರಾಮನಗರ): ತಾಲ್ಲೂಕಿನ ಬಿಡದಿ ಹೋಬಳಿ ಭದ್ರಾಪುರ ಹಕ್ಕಿಪಿಕ್ಕಿ ಕಾಲೊನಿಯಲ್ಲಿ ವಾರದ ಹಿಂದೆ ಶವವಾಗಿ ಪತ್ತೆಯಾಗಿದ್ದ ಮಾತು ಬಾರದ ಮತ್ತು ಕಿವಿ ಕೇಳಿಸದ ಬಾಲಕಿ ಖುಷಿ (15) ಮೇಲೆ ಅತ್ಯಾಚಾರ ನಡೆದಿಲ್ಲ ಎಂಬುದು ವಿಧಿ ವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ವರದಿಯಿಂದ ದೃಢಪಟ್ಟಿದೆ.

ಎಫ್‌ಎಸ್‌ಎಲ್ ವರದಿ ಶನಿವಾರ ಸಂಜೆ ಕೈ ಸೇರುತ್ತಿದ್ದಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಶ್ರೀನಿವಾಸಗೌಡ ಅವರು, ಬಿಡದಿ ಠಾಣೆಯಲ್ಲಿ ಶನಿವಾರ ರಾತ್ರಿ ಸುದ್ದಿಗೋಷ್ಠಿ ನಡೆಸಿದರು.

‘ಬಾಲಕಿ ರೈಲಿಗೆ ಸಿಲುಕಿ ಮೃತಪಟ್ಟಿದ್ದಾಳೆ’ ಎಂಬ ಮಾತುಗಳ ಬಗ್ಗೆ ಗಮನಸೆಳೆದಾಗ , ‘ಇದುವರೆಗಿನ ತನಿಖೆ ಹಾಗೂ ವಿವಿಧ ಸಾಕ್ಷ್ಯಾಧಾರ ಪರಿಶೀಲಿಸಿದಾಗ ಬಾಲಕಿ ರೈಲಿಗೆ ಸಿಲುಕಿ ಮೃತಪಟ್ಟಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ’ ಎಂದರು.

‘ಪ್ರಕರಣಕ್ಕೆ ಸಂಬಂಧಿಸಿದಂತೆ ಇದುವರೆಗೆ 10 ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿತ್ತೇ ಹೊರತು, ಯಾರನ್ನೂ ಬಂಧಿಸಿರಲಿಲ್ಲ’ ಎಂದು ಸ್ಪಷ್ಟಪಡಿಸಿದರು. ಪುತ್ರಿಯ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಲಾಗಿದೆ ಎಂದು ತಾಯಿ ಸೇರಿದಂತೆ ಕುಟುಂಬದವರು ಆರೋಪಿಸಿದ್ದರು. ಹಾಗಾಗಿ, ಮರಣೋತ್ತರ ಪರೀಕ್ಷೆ ಸಂದರ್ಭದಲ್ಲಿ ಬಾಲಕಿ ದೇಹದ 32 ಮಾದರಿ ಸಂಗ್ರಹಿಸಿ ಎಫ್‌ಎಸ್‌ಎಲ್‌ಗೆ ಕಳುಹಿಸಲಾಗಿತ್ತು.

ಜಿಬಿಎ: ಜನಾಭಿಪ್ರಾಯ

‘ಜಿಬಿಎ ರಚನೆಯ ನಂತರ ಮುಂದೇನಾಗಬೇಕು’ ಈ ಪ್ರಶ್ನೆಗೆ ಸಾರ್ವಜನಿಕರು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಇಲ್ಲಿವೆ.

‘ಜಿಬಿಎ ಗ್ರೇಟ್ ಆಗಲು ಸಹಕಾರ ಅಗತ್ಯ’



ಜಿಬಿಎಗೆ ಎಲ್ಲ ಇಲಾಖೆಗಳನ್ನು ಒಂದೇ ಸೂರಿನಡಿ ಸೇರಿಸಬೇಕು. ಆಗ ಅಧಿಕಾರಿಗಳು ಜವಾಬ್ದಾರಿಯನ್ನು ಒಬ್ಬರ ಮೇಲೆ ಒಬ್ಬರು ಹಾಕಿ ನುಣುಚಿಕೊಳ್ಳುವುದು ನಿಲ್ಲಲಿದೆ. ರಸ್ತೆಗಳನ್ನು ಅಗೆದು ಹಾಳು ಮಾಡಿ ನಮ್ಮ ತೆರಿಗೆ ಹಣ ಪೋಲಾಗುವುದನ್ನು ತಡೆಯ ಬೇಕು. ಮನೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ಒಂದೇ ಕಡತದಲ್ಲಿ ಏಕ ಗವಾಕ್ಷಿಯಲ್ಲಿ ಅನುಮತಿಗಳು ದೊರೆಯುವಂತೆ ಮಾಡಬೇಕು. ಸಂಚಾರ ದಟ್ಟಣೆಯಾಗದಂತೆ ಮುಂದಿನ 30 ವರ್ಷಗಳ ಚಿಂತನೆಯುಳ್ಳ ಯೋಜನೆಯನ್ನು ರೂಪಿಸಬೇಕು. ಗ್ರೇಟರ್ ಬೆಂಗಳೂರು ನಿಜವಾಗಲೂ ಗ್ರೇಟ್ ಆಗಲು ಸರ್ಕಾರವೂ ಕೆಲಸ ಮಾಡಬೇಕು. ಸಾರ್ವಜನಿಕರೂ ಸಹಕಾರ ನೀಡಬೇಕು.

ಸಿ. ಮುರಳೀಧರ್, ವೆಂಕಟಾಲ, ಯಲಹಂಕ

‘ನಗರ ಗ್ರೇಟರ್ ಆಗಲಿ’



‘ಗ್ರೇಟರ್ ಬೆಂಗಳೂರು ಪ್ರದೇಶ’ ಘೋಷಣೆಯಾಗಿರುವುದು ಸಂತೋಷದ ಸಂಗತಿ. ಎಲ್ಲ ಆಯಾಮಗಳಿಂದಲೂ ಅಭಿವೃದ್ಧಿ ಕಾರ್ಯಗಳು ನಡೆಯಬೇಕು. ನಿಯಮಗಳು ಸರಿಯಾದ ರೀತಿಯಲ್ಲಿ ಜಾರಿಗೊಂಡು ವಿಶ್ವದಲ್ಲಿ ಮಟ್ಟದಲ್ಲಿ ಗ್ರೇಟರ್ ಬೆಂಗಳೂರು ಎಂದು ಕರೆಸಿಕೊಳ್ಳುವ ರೀತಿಯಲ್ಲಿ ಹೊರ ಹೊಮ್ಮಿದರೆ ಸಾಕು.

ಎಚ್. ದೊಡ್ಡ ಮಾರಯ್ಯ, ಸಂತೃಪ್ತಿ ನಗರ

‘ಹೆಸರಷ್ಟೇ ಬದಲಾವಣೆ’



ಬಿಬಿಎಂಪಿ ರಚನೆಯಾಗಿ ದಶಕಗಳಾದರೂ ಜನ ಸಾಮಾನ್ಯರ ಕಷ್ಟಗಳು ನೀಗಿವೆಯೇ? ಹೆಸರು ಬದಲಾವಣೆ ಆಗಿದೆ ಅಷ್ಟೇ. ಆದರೆ ಅಧಿಕಾರ ನಡೆಸುವವರ, ಅಧಿಕಾರಿಗಳ ಕಾರ್ಯವೈಖರಿ ಬದಲಾಗುವುದೇ? ಅನಧಿಕೃತ ಕೇಬಲ್ ತೆರವುಗೊಳಿಸಿ ಎಂದು ಬಿಬಿಎಂಪಿ ಮುಖ್ಯ ಆಯುಕ್ತರು ಅಧಿಕಾರಿಗಳಿಗೆ ಸೂಚಿಸಿರುವುದು ಇಂದು ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಇದೇ ನಿತ್ಯದ ಗೋಳಾಗಿದೆ. ಜನ ಎಚ್ಚೆತ್ತುಕೊಳ್ಳುವರೆಗೆ ಇದೇ ಪರಿಸ್ಥಿತಿ ಮುಂದುವರಿಯಲಿದೆ.

ಎಂ.ಎನ್. ಅನಂತಮೂರ್ತಿ, ಅಕ್ಷಯ ನಗರ

‘ಬೇರೆ ಹಳ್ಳಿಗಳನ್ನು ಸೇರಿಸಬೇಡಿ’



ಬೆಂಗಳೂರು ಮಹಾನಗರವು ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುತ್ತಿದೆ. ಹಿಂದೆ ನಗರಕ್ಕೆ ಸೇರಿಸಿರುವ ಪ್ರದೇಶಗಳಿಗೆ ಇನ್ನೂ ನೀರು ಸರಬರಾಜು ವ್ಯವಸ್ಥೆ ಸರಿಯಾಗಿಲ್ಲ. ಇದನ್ನೆಲ್ಲ ಸರಿಪಡಿಸುವವರೆಗೆ ಗ್ರೇಟರ್ ಬೆಂಗಳೂರು ಪ್ರದೇಶಕ್ಕೆ ಬೇರೆ ಹಳ್ಳಿಗಳನ್ನು ಸೇರಿಸಬಾರದು.

ಚಂದ್ರಶೇಖರ್ ಟಿ.ಎ., ತೋಟಗೆರೆ

ಜಿಬಿಎ ಆಯ್ತು: ಮುಂದೇನಾಗಬೇಕು

‘ಗ್ರೇಟರ್ ಬೆಂಗಳೂರು ಪ್ರದೇಶ’ ಘೋಷಣೆಯಾಗಿದೆ. ಮುಂದೆ ಏನಾಗಬೇಕು? ಪ್ರತಿಕ್ರಿಯಿಸಿ. ಮಾಹಿತಿ ಸಂಕ್ಷಿಪ್ತವಾಗಿರಲಿ.ಜೊತೆಗೆ ವಿಳಾಸ, ಭಾವಚಿತ್ರವಿರಲಿ. ವ್ಯಾಟ್ಸ್‌ಆ್ಯಪ್ ಸಂಖ್ಯೆ: 9606038256

ಮೈದಾನಕ್ಕೆ ನುಗ್ಗುವುದಾಗಿ ಹೇಳಿದ್ದವರ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬೆಂಗಳೂರು ರಾಯಲ್ ಚಾಲೆಂಜರ್ಸ್ (ಆರ್‌ಸಿಬಿ) ಹಾಗೂ ಕೋಲ್ಕತ್ತ ನೈಟ್ ರೈಡರ್ಸ್ (ಕೆಕೆಆರ್) ತಂಡಗಳ ನಡುವಣ ಐಪಿಎಲ್ ಪಂದ್ಯದ ವೇಳೆ ಮೈದಾನಕ್ಕೆ ನುಗ್ಗಿ ವಿರಾಟ್ ಕೊಹ್ಲಿ ಅವರನ್ನು ತಬ್ಬಿಕೊಳ್ಳುವುದಾಗಿ ವಿಡಿಯೊ ಮಾಡಿ ಜಾಲತಾಣದಲ್ಲಿ ಹಾಕಿದ್ದ ಇಬ್ಬರು ಯುವಕರ ವಿರುದ್ಧ ಕಬ್ಬನ್‌ಪಾರ್ಕ್ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಶರಣ್ ಬಸಪ್ಪ (ಕಬ್ಜ ಶರಣು) ಹಾಗೂ ವಿ.ಜಿ.ಬಾಲಾಜಿ ಅವರನ್ನು ವಶಕ್ಕೆ ಪಡೆದು ಎಚ್ಚರಿಕೆ ನೀಡಿ ಕಳುಹಿಸಲಾಗಿದೆ ಎಂದು ಪೊಲೀಸರು ಹೇಳಿದರು.



ಯುವಕರನ್ನು ವಶಕ್ಕೆ ಪಡೆದುಕೊಂಡಿದ್ದ ಪೊಲೀಸರು

‘ನನ್ನಿಂದ ತಪ್ಪಾಗಿದೆ. ಪೊಲೀಸ್ ಠಾಣೆಗೆ ಕರೆ ತಂದಿದ್ದಾರೆ. ನಾನು ಕ್ಷಮೆ ಕೇಳಿದ್ದೇನೆ. ಇನ್ಮುಂದೆ ಈ ರೀತಿ ವಿಡಿಯೊ ಮಾಡುವುದಿಲ್ಲ’ ಎಂದು ಕಬ್ಜ ಶರಣ್ ಹೇಳಿರುವ ವಿಡಿಯೊವನ್ನು ಸಾಮಾಜಿಕ ಮಾಧ್ಯಮದಲ್ಲಿ ಪೊಲೀಸರು ಅಪ್‌ಲೋಡ್ ಮಾಡಿದ್ದಾರೆ.

ವಿಡಿಯೊದಲ್ಲಿ ಏನಿತ್ತು?: ‘ನಮಸ್ಕಾರ, ನಾನು ನಿಮ್ಮ ಕಬ್ಜ ಶರಣ್. ಈ ಚಾಲೆಂಜ್ ತೆಗೆದುಕೊಳ್ಳಲು ಧಮ್ ಇರಬೇಕು. ಹತ್ತು ಗುಂಡಿಗೆ ಇರಬೇಕು. ಇದೊಂದು ಹೆಮ್ಮೆ, ಇತಿಹಾಸ, ಮೈಲುಗಲ್ಲು. ಮೇ 17ರಂದು ನಡೆಯುವ ಆರ್‌ಸಿಬಿ ಹಾಗೂ ಕೆಕೆಆರ್ ತಂಡಗಳ ನಡುವಣ ಪಂದ್ಯದ ವೇಳೆ, ಈ ಕಬ್ಜ ವಿರಾಟ್ ಕೊಹ್ಲಿ ಅವರನ್ನು ತಬ್ಬಿಕೊಳ್ಳುತ್ತಾನೆ’ ಎಂದು ವಿಡಿಯೊ ಮಾಡಿ ಇನ್‌ಸ್ಟಾಗ್ರಾಂನಲ್ಲಿ ಹಾಕಿದ್ದರು.

ಪೊಲೀಸರ ಎಚ್ಚರಿಕೆ

‘ಭದ್ರತೆ ದಾಟಿ ಮೈದಾನಕ್ಕೆ ನುಗ್ಗುವುದು ಪವರ್ ಪ್ಲೇ ಆಟವಲ್ಲ. ಹೀಗೆ ಮಾಡಿದರೆ ನೀವು ನೇರವಾಗಿ ಸೇರುವುದು ಪೊಲೀಸ್ ಜೀಪಿಗೆ’ ಎಂದು ಕಬ್ಬನ್ ಪಾರ್ಕ್ ಠಾಣೆಯ ಪೊಲೀಸರು ಸಾಮಾಜಿಕ ಜಾಲತಾಣದಲ್ಲಿ ಎಚ್ಚರಿಸಿದ್ದಾರೆ.

‘ಮೈದಾನದ ಒಳಗೆ ಹಾಗೂ ಹೊರಗೆ ಕ್ಯಾಚ್ ಹಿಡಿಯುವುದರಲ್ಲಿ ನಮ್ಮ ಖಾಕಿ ಪಡೆಯ ಫೀಲ್ಡರ್‌ಗಳು ಎತ್ತಿದ ಕೈ’ ಎಂದು ಹೇಳಿದ್ದಾರೆ.

ಕಾರು ಗುದ್ದಿಸಿ ಟೆಕಿ ಕೊಲೆ



ಕಾರಿನಿಂದ ಬೈಕ್‌ಗೆ ಡಿಕ್ಕಿ ಹೊಡೆಸಿರುವ ದೃಶ್ಯ

ಒಂದನೇ ಪುಟದಿಂದ...

ಆರಂಭದಲ್ಲಿ ಇದು ಅಪಘಾತ ಪ್ರಕರಣ ಅಂದುಕೊಂಡಿದ್ದ ಪೊಲೀಸರಿಗೆ, ಘಟನಾ ಸ್ಥಳದಲ್ಲಿದ್ದ ಸಿ.ಸಿ.ಟಿ.ವಿ ಕ್ಯಾಮೆರಾಗಳ ದೃಶ್ಯಾವಳಿಗಳನ್ನು ಪರಿಶೀಲನೆ ವೇಳೆ ಕಾರು ಗುದ್ದಿಸಿ ಕೊಲೆ ಮಾಡಿರುವುದು ಗೊತ್ತಾಗಿತ್ತು. ಆರೋಪಿ ಜನ್ಮದಿನಾಚ-ರಣೆಯ ಪಾರ್ಟಿಯಲ್ಲಿ ಪಾಲ್ಗೊಂಡು ಮನೆಗೆ ತೆರಳುತ್ತಿದ್ದ. ಆಗ ಕೃತ್ಯ ಎಸಗಿದ್ದಾನೆ ಎಂದು ಮೂಲಗಳು ತಿಳಿಸಿವೆ. ಕೊಲೆ ಪ್ರಕರಣ ದಾಖಲಿಸಿ, ಆರೋಪಿಯನ್ನು ಬಂಧಿಸಿ ಕೋರ್ಟ್ ಹಾಜರು ಪಡಿಸಲಾಗಿದೆ ಎಂದು ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಬಿ. ಜಗಲಾಸರ್ ತಿಳಿಸಿದರು.



ಟೈಗರ್ ಕಪ್ (12 ವರ್ಷದೊಳಗಿನವರ) ಕ್ರಿಕೆಟ್ ಟೂರ್ನಿಯ ಪ್ರಶಸ್ತಿ ಗೆದ್ದ ಸಿಬಿಟಿ ತಂಡ

ಸಿಬಿಟಿ ತಂಡಕ್ಕೆ ಟೈಗರ್ ಕಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಷ್ಣು ಸಾತ್ವಿಕ್ (80 ರನ್) ಅವರ ಅರ್ಧಶತಕದ ಬಲದಿಂದ ಸಿಬಿಟಿ ತಂಡವು ಟೈಗರ್ ಕಪ್ (12 ವರ್ಷದೊಳಗಿನವರ) ಕ್ರಿಕೆಟ್ ಟೂರ್ನಿಯ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು.

ಸತ್ವ ಗ್ಲೋಬಲ್ ಸಿಟಿ ಮೈದಾನದಲ್ಲಿ ಶನಿವಾರ ನಡೆದ ಫೈನಲ್ ಪಂದ್ಯದಲ್ಲಿ ಸಿಬಿಟಿ ತಂಡವು 74 ರನ್‌ಗಳಿಂದ ಆನಂದ್ಸ್ ಕ್ರಿಕೆಟ್ ಕೋಚಿಂಗ್ ಅಕಾಡೆಮಿ ತಂಡವನ್ನು ಮಣಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಸಿಬಿಟಿ ತಂಡವು 30 ಓವರ್‌ಗಳಲ್ಲಿ 4 ವಿಕೆಟ್‌ಗೆ 176 ರನ್ ಗಳಿಸಿತು. ಈ ಗುರಿಯನ್ನು ಬೆನ್ನಟ್ಟಿದ ಆನಂದ್ಸ್ ತಂಡವು 28.2 ಓವರ್‌ಗಳಲ್ಲಿ 102 ರನ್‌ಗೆ ಹೋರಾಟ ಮುಗಿಸಿತು.

ಸಂಕ್ಷಿಪ್ತ ಸ್ಕೋರ್: ಸಿಬಿಟಿ: 30 ಓವರ್‌ಗಳಲ್ಲಿ 4 ವಿಕೆಟ್‌ಗೆ 176 (ವಿಷ್ಣು ಸಾತ್ವಿಕ್ 80, ಎಸ್.ಮೋಹಿತ್ 44, ಆರವ್ 24). ಆನಂದ್ಸ್ ಕ್ರಿಕೆಟ್ ಕೋಚಿಂಗ್ ಆಕಾಡೆಮಿ: 28.2 ಓವರ್‌ಗಳಲ್ಲಿ 102 (ಜೀವ ಗೌಡರ್ 24; ಸಿದ್ಧಾಂತ್ 7ಕ್ಕೆ 2, ಪಾರ್ಥ ಬಿ.ಎನ್. 8ಕ್ಕೆ 2, ವಿಷ್ಣು ಸಾತ್ವಿಕ್ 20ಕ್ಕೆ 2).

ಹೆಬ್ಬಾಳ ಮೇಲ್ಸೇತುವೆಯಲ್ಲಿ ರಾತ್ರಿ ಸಂಚಾರ ಬಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಡಿಎ ಕಾಮಗಾರಿ ಹಿನ್ನಲೆಯಲ್ಲಿ ಮೇ 21ರವರೆಗೆ ಪ್ರತಿದಿನ ಮಧ್ಯರಾತ್ರಿ 12ರಿಂದ 3 ಗಂಟೆವರೆಗೆ ಹೆಬ್ಬಾಳ ಮೇಲ್ಸೇತು-ವೆಯಲ್ಲಿ ವಾಹನ ಸಂಚಾರ ಬಂದ್ ಆಗಿರಲಿದೆ.

ಎಸ್ಟೀಮ್ ಮಾಲ್‌ನಿಂದ ಬಾಪ್ಟಿಸ್ಟ್ ಆಸ್ಪತ್ರೆವರೆಗೆ ಮೂರು ತಾಸು ಸಂಚಾರಕ್ಕೆ ನಿರ್ಬಂಧವಿದ್ದು, ಈ ಅವಧಿಯಲ್ಲಿ ಪರ್ಯಾಯ ಮಾರ್ಗಗಳನ್ನು ಬಳಸುವಂತೆ ವಾಹನ ಸವಾರರಿಗೆ ನಗರ ಸಂಚಾರ ಪೊಲೀಸರು ಕೋರಿದ್ದಾರೆ.

ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಮೇಖ್ರಿ ವೃತ್ತದ ಕಡೆಗೆ ಚಲಿಸುವ ವಾಹನಗಳು ಎಸ್ಟೀಮ್ ಮಾಲ್‌ನಲ್ಲಿ ಇರುವ ಸರ್ವೀಸ್ ರಸ್ತೆ ಪ್ರವೇಶಿಸಿ, ಹೆಬ್ಬಾಳ ವೃತ್ತದಲ್ಲಿ ಹೊರ ವರ್ತುಲ ರಸ್ತೆಗೆ ಬಲಕ್ಕೆ ತಿರುವು ಪಡೆಯಬೇಕು. ತುಮಕೂರು ಮಾರ್ಗವಾಗಿ ಚಲಿಸಿ, ಕುವೆಂಪು ವೃತ್ತದಲ್ಲಿ ಎಡಕ್ಕೆ ತಿರುವು ಪಡೆದು ನ್ಯೂ ಬಿಇಎಲ್ ರಸ್ತೆ ಮೂಲಕ ಮೇಖ್ರಿ ವೃತ್ತ ತಲುಪಬಹುದಾಗಿದೆ ಎಂದು ತಿಳಿಸಿದ್ದಾರೆ.

ಬೆಂಗಳೂರು ರೇಸ್

ಗ್ಲೋರಿಯಸ್‌ನೆಸ್ ಗೆಲ್ಲುವ ನಿರೀಕ್ಷೆ

ವಾರ್ ಹ್ಯಾಮರ್ ಮಿಲಿಯನ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಗ್ಲೋರಿಯಸ್‌ನೆಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸ್ಲಿಂಗ್ ಶಾಟ್ 1, ಸದರ್ನ್ ಅರಿಸ್ಟೊಕ್ರಾಟ್ 4, ಸೀ ಡೈಮಂಡ್ 2
2ನೇ ರೇಸ್: ಕ್ಸಾಂತೆ 10, ಮಿಡ್‌ನೈಟ್ ಬ್ಲೂ 3, ಡ್ಯಾರಿಂಗ್ಟನ್ 1
3ನೇ ರೇಸ್: ಬೆಸಿಲಿಕ 1, ಸೂಪರ್‌ಚಾರ್ಜ್ 6, ರಿಯಲ್ ಹ್ಯಾಪಿನೆಸ್ 2
4ನೇ ರೇಸ್: ರೀಗಲ್ ರಿಯಾಲಿಟಿ 10, ಭರತ್ 2, ಆಸ್ಪೀಸಿಯಸ್ ಕ್ವೀನ್ 8
5ನೇ ರೇಸ್: ಗ್ಲೋರಿಯಸ್‌ನೆಸ್ 3, ರೆಡ್ ಬಿಷಪ್ 8, ವೈಬ್ರ್ಯಾಂಟ್ ಬ್ಲಿಸ್ 1
6ನೇ ರೇಸ್: ಫಿನ್ಲೆ 2, ಎಕ್ಸಲೆಂಟ್ ಲಾಸ್ 1, ಲಿವ್ ದಿ ಡ್ರೀಮ್ 6
7ನೇ ರೇಸ್: ಫೋರ್ಟಸ್ 3, ಫೆಲಿಸ 4, ನಾಟಿ ಅಫೇರ್ 1

ಉತ್ತಮ ಬೆಟ್; ಫೋರ್ಟಸ್

ಜಾಕ್‌ಪಾಟ್‌ಗೆ	1ನೇ ಟ್ರಬಲ್	2ನೇ ಟ್ರಬಲ್
3,4,5,6,7	2,3,4	5,6,7

ಮನೆಯಂಗಳದಲ್ಲಿ ಮಾತುಕತೆಯಲ್ಲಿ ಎಚ್‌ಆರ್ ಲೀಲಾವತಿ ಅಭಿಮತ

‘ಕಲಾವಿದರಿಗೆ ಭಾಷಾ ಮರ್ಯಾದೆ ಮುಖ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಲಾವಿದರಿಗೆ ಭಾಷಾ ಮರ್ಯಾದೆ ಮುಖ್ಯವಾಗಿದ್ದು, ಭಾಷೆ, ಬರವಣಿಗೆ, ಉಚ್ಚಾರವನ್ನು ಕಲಿತು ಮುನ್ನಡೆಯಬೇಕು’ ಎಂದು ಗಾಯಕಿ ಎಚ್.ಆರ್. ಲೀಲಾವತಿ ಅಭಿಮತ ವ್ಯಕ್ತಪಡಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಮನೆಯಂಗಳದಲ್ಲಿ ಮಾತುಕತೆ ಕಾರ್ಯ-ಕ್ರಮದಲ್ಲಿ ತಿಂಗಳ ಅತಿಥಿಯಾಗಿ ಭಾಗವಹಿಸಿ, ಮಾತನಾಡಿದರು.



> **‘ಆಕಾಶವಾಣಿ ಹಲವು ಕಲಾವಿದರಿಗೆ ಜೀವನ ನೀಡಿದೆ. ಆದರೆ, ಆಕಾಶವಾಣಿಯು ಪ್ರಸಾರಭಾರತಿಯಾಗಿ ಬದಲಾದ ಬಳಿಕ ಶೋಚನೀಯ ಸ್ಥಿತಿಯಲ್ಲಿದೆ. ಉದ್ಯೋಗಿಗಳ ನೇಮಕವೂ ಸರಿಯಾಗಿ ಆಗುತ್ತಿಲ್ಲ**
>
> **ಎಚ್.ಆರ್. ಲೀಲಾವತಿ,** ಗಾಯಕಿ

‘ಕಲಾವಿದರು ಹೆಚ್ಚು ಪರಿಶ್ರಮ ವಹಿಸಿ ಸಾಧನೆ ಮಾಡಬೇಕು. ನಾನು ಬಂಗಾಳಿ, ಅಸ್ಸಾಮಿ ಹಾಡುಗಳನ್ನು ಆಕಾಶವಾಣಿ ಕೇಂದ್ರಗಳಲ್ಲಿ ಹಾಡುವಾಗ, ಆ ಹಾಡುಗಳ ಬರವಣಿಗೆಗೂ, ಉಚ್ಚಾರಕ್ಕೂ ವ್ಯತ್ಯಾಸ ಇರುವುದನ್ನು ಅರಿತು, ಮನದಟ್ಟು ಮಾಡಿಕೊಂಡು ಹಾಡಿದೆ. ಪ್ರತಿಯೊಂದು ಸಂಗೀತ ಪ್ರಕಾರಕ್ಕೂ ತನ್ನತನ ಇರುತ್ತದೆ. ಕಲಾವಿದರಿಗೆ ನಂದೇ ಸರಿ ಎಂಬ ಅಹಂ ಇರಬಾರದು’ ಎಂದರು.

‘ಇತ್ತೀಚೆಗೆ ಸಂಗೀತಗಾರರು ಕೇವಲ ನಾಲ್ಕು ಹಾಡುಗಳಿಗೆ ತಮ್ಮ ಸಂಗೀತ ಕಛೇರಿ ಮುಗಿಸುವುದನ್ನೂ ಕಾಣುತ್ತಿದ್ದೇವೆ. ಇದಕ್ಕೆ ಕಲಾವಿದರಲ್ಲಿ ಪರಿಶ್ರಮ ಇಲ್ಲದಿರುವುದೇ ಕಾರಣ’ ಎಂದು ಹೇಳಿದರು.

‘ಭಾವಗೀತೆಯಂತಹ ಹಾಡುಗಳಿಗೆ ಈಗ ವಿಪರೀತ ವಾದ್ಯಗಳನ್ನು ಬಳಕೆ ಮಾಡಲಾಗುತ್ತಿದೆ. ಇದರಿಂದ ಕವಿ ಸಾಯುತ್ತಾನೆ. ಸಾಹಿತ್ಯ ಅರ್ಥವಾಗದೆ ಕೇವಲ ವಾದ್ಯಗಳನ್ನು ಕೇಳಿಸಿಕೊಳ್ಳುವಂತಾಗಿದೆ. ಇನ್ನು ಕೆಲವೆಡೆ ಪ್ರದರ್ಶನ-ಗಳಲ್ಲಿ ನೃತ್ಯವನ್ನೂ ಮಾಡಲಾಗುತ್ತಿದೆ’ ಎಂದು ಬೇಸರ ವ್ಯಕ್ತಪಡಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ.ಗಾಯತ್ರಿ ಉಪಸ್ಥಿತರಿದ್ದರು.

ಮೇ ಸಾಹಿತ್ಯ ಮೇಳದಲ್ಲಿ ಚಿಂತಕ ರಾಮ್ ಪುನಿಯಾನಿ ಅಭಿಮತ • ಸಾಮರಸ್ಯದ ಭಾರತ ಕಟ್ಟಲು ಶಂಸುಲ್ ಇಸ್ಲಾಮ್ ಕರೆ

ಮುಂದುವರಿದ ಸಂವಿಧಾನ–ಮನುಸ್ಮೃತಿ ಸಂಘರ್ಷ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಬಡವರು–ಶ್ರೀಮಂತರ ನಡುವೆ ಅಂತರ ಹೆಚ್ಚು
- ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ಒಗ್ಗಟ್ಟಿನ ಹೋರಾಟ
- ರಾಜ್ಯದ ವಿವಿಧೆಡೆಯ ಪ್ರತಿನಿಧಿಗಳು ಸಾಹಿತ್ಯ ಮೇಳದಲ್ಲಿ ಭಾಗಿ

ಸಿಂಧನೂರು (ರಾಯಚೂರು ಜಿಲ್ಲೆ): ‘ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸಂವಿಧಾನದ ಆಶಯದಂತೆ ಅಸಮಾನತೆ ಬೇರು ಸಮೇತ ತೊಲಗಬೇಕಾಗಿತ್ತು. ಆದರೆ, ಸಂವಿಧಾನ ಅಸ್ತಿತ್ವಕ್ಕೆ ಬರುವ ಸಮಯದಲ್ಲಿ ವಿರೋಧಿಸಿದ ಮನುಸ್ಮೃತಿಯ ಆರಾಧಕರು ಈಗಲೂ ಅಸಮಾನತೆಯನ್ನು ಪೋಷಿಸುತ್ತಿದ್ದಾರೆ. ಹೀಗಾಗಿ ಸಂವಿಧಾನ ಮತ್ತು ಮನುಸ್ಮೃತಿ ನಡುವೆ ಸಂಘರ್ಷ ಮುಂದುವರಿದಿದೆ’ ಎಂದು ಮುಂಬೈನ ಚಿಂತಕ ರಾಮ್ ಪುನಿಯಾನಿ ಅಭಿಪ್ರಾಯಪಟ್ಟರು.

ಲಡಾಯಿ ಪ್ರಕಾಶನ ಗದಗ, ಕವಿ ಪ್ರಕಾಶ ಕವಲಕ್ಕಿ, ಧಾರವಾಡದ ಚಿತ್ತಾರ ಕಲಾ ಬಳಗ ಹಾಗೂ ಸಿಂಧನೂರಿನ ಮೇ ಸಾಹಿತ್ಯ ಮೇಳ ಬಳಗದ ಆಶ್ರಯದಲ್ಲಿ ಮೆದಿಕಿನಾಳ ಭೂ ಹೋರಾಟ ನೆನಪಿನ ವೇದಿಕೆಯಲ್ಲಿ ‘ಅಸಮಾನ ಭಾರತ ಸಮಾನತೆಗಾಗಿ ಸಂಘರ್ಷ ಅಂದು–ಇಂದು’ ಘೋಷವಾಕ್ಯದೊಂದಿಗೆ ಶನಿವಾರ ಆರಂಭಗೊಂಡ ಎರಡು ದಿನಗಳ 11ನೇ ಮೇ ಸಾಹಿತ್ಯ ಮೇಳದಲ್ಲಿ ಅವರು ಮಾತನಾಡಿದರು.

‘ಆಹಾರ ಧಾನ್ಯ ಬೆಳೆಯುವ ರೈತರು ಅನ್ನಕ್ಕಾಗಿ, ಮನೆ ಕಟ್ಟುವ ಕಾರ್ಮಿಕರು ವಾಸಕ್ಕಾಗಿ, ಬಟ್ಟೆ ನೇಯುವ ನೇಕಾರರು ಬಟ್ಟೆಗಾಗಿ ಪರಿತಪಿಸಬೇಕಾಗಿದೆ. 10 ಜನ ಇರುವ ಕುಟುಂಬ ಚಿಕ್ಕ ಗುಡಿಸಲಲ್ಲಿ ವಾಸಿಸುತ್ತಿದ್ದರೆ, ಕೇವಲ ಐವರಿರುವ ಶ್ರೀಮಂತ ಕುಟುಂಬ 26 ಅಂತಸ್ತಿನ ಕಟ್ಟಡದಲ್ಲಿ ವಾಸಿಸುತ್ತಿರುವುದು ಅಸಮಾನ ಭಾರತಕ್ಕೆ ಕನ್ನಡಿಯಾಗಿದೆ’ ಎಂದು ವಿಷಾದಿಸಿದರು.



ಸಿಂಧನೂರಿನಲ್ಲಿ ಆಯೋಜಿಸಿದ್ದ 11ನೇ ಮೇ ಸಾಹಿತ್ಯ ಮೇಳವನ್ನು ಹೋರಾಟಗಾರರಾದ ಸಂಗಮ್ಮ, ಭೀಮಣ್ಣ ನಗನೂರು, ನರಸಿಂಹಮ್ಮ, ಚಿನ್ನಮ್ಮ ಮುದ್ದನಗುಡ್ಡಿ ಹಾಗೂ ತಿಮ್ಮನಗೌಡ ಚಿಲ್ಕರಾಗಿ ಪಂಜನ್ನು ಎತ್ತಿ ಹಿಡಿದು ಉದ್ಘಾಟಿಸಿದರು

ಚಿಂತಕ ಶಂಸುಲ್ ಇಸ್ಲಾಮ್ ಮಾತನಾಡಿ, ‘1,100 ವರ್ಷಗಳ ಕಾಲ ಆಳಿದ ಮುಸ್ಲಿಂ ರಾಜರಿಗೆ ಮುಸ್ಲಿಂ ರಾಷ್ಟ್ರ ಹಾಗೂ ಹಿಂದೂ ರಾಜರ ಆಡಳಿತದಲ್ಲಿಯೂ ಹಿಂದೂ ರಾಷ್ಟ್ರ ನಿರ್ಮಿಸುವ ಉದ್ದೇಶ ಇರಲಿಲ್ಲ. ಆದರೆ, ಇತ್ತೀಚೆಗೆ ಫ್ಯಾಸಿಸ್ಟ್ ಶಕ್ತಿಗಳು ಮುಸ್ಲಿಮರನ್ನು ಭಯೋತ್ಪಾದಕರಂತೆ ಚಿತ್ರಿಸಿ ಹಿಂದೂ ರಾಷ್ಟ್ರವನ್ನಾಗಿಸುವ ಹುನ್ನಾರ ನಡೆಸಿವೆ. ಇದು ಅಪಾಯಕಾರಿಯಾಗಿದೆ. ದೇಶದ ಎಲ್ಲ ವರ್ಗದ ಜನರು ಜಾಗೃತರಾಗಿ ಸಾಮರಸ್ಯದ ಭಾರತ ಕಟ್ಟಬೇಕಿದೆ’ ಎಂದು ಪ್ರತಿಪಾದಿಸಿದರು.

ಔರಂಗಾಬಾದ್‌ನ ಮಾಲತಿ ವರಾಳೆ ಮಾತನಾಡಿ, ‘ಅಪಮಾನವುಂಡು ಕೆಳವರ್ಗದವರಿಗೆ ಅಕ್ಷರ ಕಲಿಸಿದ ಸಾವಿತ್ರಿಬಾಯಿ ಫುಲೆ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಅವರು ನಮ್ಮೆಲ್ಲರಿಗೂ ಸ್ಫೂರ್ತಿದಾಯಕರಾಗಿದ್ದಾರೆ’ ಎಂದರು.

ಸಾಹಿತಿ ಬಿ.ಎಂ.ಪುಟ್ಟಯ್ಯ ಮಾತನಾಡಿದರು.

ಇದಕ್ಕೂ ಮೊದಲು ಮೆದಿಕಿನಾಳ ಭೂ ಹೋರಾಟದ ಸಂಗಮ್ಮ, ದಲಿತ ಚಳವಳಿಯ ಭೀಮಣ್ಣ ನಗನೂರು, ಕಾರ್ಮಿಕ ಚಳವಳಿಯ ನರಸಿಂಹಪ್ಪ ರಾಮತ್ನಾಳ, ಮದ್ಯವಿರೋಧಿ ಹೋರಾಟದ ಚಿನ್ನಮ್ಮ ಮುದ್ದನಗುಡ್ಡಿ ಹಾಗೂ ರೈತ ಚಳವಳಿಯ ತಿಮ್ಮನಗೌಡ ಚಿಲ್ಕರಾಗಿ ಒಗ್ಗೂಡಿ ಭಾರತದ ನಕ್ಷೆಯಿದ್ದ ಫಲಕಕ್ಕೆ ಹಾಕಿದ್ದ ಸರಪಳಿಗಳ ಬೀಗ ತೆಗೆದು, ಬೆಳಕಿನ ಪಂಜನ್ನು ಎತ್ತಿ ಹಿಡಿದು ಸಾಹಿತ್ಯ ಮೇಳವನ್ನು ಉದ್ಘಾಟಿಸಿದರು.

ಬಸವರಾಜ ಬಾದರ್ಲಿ ಸಂವಿಧಾನದ ಪೀಠಿಕೆ ಓದಿದರು. ಸಂಗಮೇಶ ಮೆಣಸಿನಕಾಯಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಪೋತ್ನಾಳ ಚರ್ಚ್ ಫಾದರ್ ವಿನೋದ ಪೌಲ್, ಅನಿಲ ಹೊಸಮನಿ ಉಪಸ್ಥಿತರಿದ್ದರು. ಎಚ್.ಎಸ್.ಅನುಪಮಾ ನಿರೂಪಿಸಿದರು. ರಾಜ್ಯದ ವಿವಿಧ ಜಿಲ್ಲೆಗಳಿಂದ ಮೇಳಕ್ಕೆ ಪ್ರತಿನಿಧಿಗಳು ಬಂದಿದ್ದಾರೆ.

ಸುದ್ದಿ 2 ನಿಮಿಷ

20ರಂದು ಹೊಸಪೇಟೆಯಲ್ಲಿ 2ನೇ ಸಿದ್ದರಾಮೋತ್ಸವ: ಜಮೀರ್

ಹೊಸಪೇಟೆ (ವಿಜಯನಗರ): ‘ಇಲ್ಲಿನ ಜಿಲ್ಲಾ ಕ್ರೀಡಾಂಗಣದಲ್ಲಿ ಮೇ 20ಕ್ಕೆ ನಡೆಯುವ ಸಮರ್ಪಣಾ ಸಂಕಲ್ಪ ಸಮಾವೇಶ ಎರಡನೇ ಸಿದ್ದರಾಮೋತ್ಸವವಾಗಿ ಹೊರಹೊಮ್ಮಲಿದೆ. ಮೊದಲನೇ ಸಿದ್ದರಾಮೋತ್ಸವ ದಾವಣಗೆರೆಯಲ್ಲಿ ಈಗಾಗಲೇ ಜರುಗಿದೆ’ ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ಹೇಳಿದರು.

‘ಸಮಾವೇಶಕ್ಕೆ ರಾಜ್ಯ ಸಾರಿಗೆ ಸಂಸ್ಥೆಯ 3,700 ಬಸ್‌ಗಳನ್ನು ಕಾಯ್ದಿರಿಸಲಾಗಿದೆ. ಪ್ರತ್ಯೇಕವಾಗಿ ನಾನು 2,000 ಬಸ್‌ಗಳನ್ನು ಕಾಯ್ದಿರಿಸಿದ್ದೇನೆ. ಹಲವು ಶಾಸಕರು ಶಾಲಾ, ಕಾಲೇಜು ಬಸ್‌ಗಳನ್ನೂ ಬಳಸುತ್ತಾರೆ. ಹೀಗಾಗಿ 3 ಲಕ್ಷಕ್ಕೂ ಹೆಚ್ಚು ಜನರು ಪಾಲ್ಗೊಳ್ಳುವ ನಿರೀಕ್ಷೆಯಿದೆ’ ಎಂದು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘1.50 ಲಕ್ಷ ಕುರ್ಚಿಗಳನ್ನು ಹಾಕಿ, 2 ಲಕ್ಷ ಜನರಿಗೆ ಊಟದ ವ್ಯವಸ್ಥೆ ಮಾಡಲಾಗುವುದು. ಬೆಳಿಗ್ಗೆ 9 ರಿಂದ ಒಟ್ಟು 500 ಕೌಂಟರ್‌ಗಳಲ್ಲಿ ಊಟ ಬಡಿಸಲಾಗುವುದು. ತುರ್ತು ಅಗತ್ಯಕ್ಕೆ 50 ಸಾವಿರ ಊಟದ ಪ್ಯಾಕೆಟ್ ಸಿದ್ಧಪಡಿಸಲಾಗುವುದು. 5 ಲಕ್ಷ ನೀರಿನ ಪ್ಯಾಕೆಟ್ ತರಿಸಲಾಗುವುದು. ಹೊಸಪೇಟೆ ಸುತ್ತಮುತ್ತ 200 ಎಕರೆ ಪ್ರದೇಶದಲ್ಲಿ 10 ಸಾವಿರಕ್ಕೂ ಹೆಚ್ಚು ವಾಹನಗಳ ನಿಲುಗಡೆಗೆ ವ್ಯವಸ್ಥೆ ಮಾಡಲಾಗುವುದು’ ಎಂದರು.

‘140x60 ಅಡಿ ವಿಸ್ತೀರ್ಣದ ವೇದಿಕೆ ನಿರ್ಮಾಣವಾಗಲಿದ್ದು, ಮಧ್ಯಭಾಗದ ಪ್ರಧಾನ ವೇದಿಕೆಯಲ್ಲಿ 300 ಮಂದಿ ಆಸೀನರಾಗುವರು. ಎಡ, ಬಲ ಬದಿಯ ಎರಡು ಸಮಾನಾಂತರ ವೇದಿಕೆಗಳಲ್ಲಿ ತಲಾ 50 ಮಂದಿ ಕೂರುವ ವ್ಯವಸ್ಥೆ ಮಾಡಲಾಗುವುದು. ಕಾರ್ಯಕ್ರಮ ಬೆಳಿಗ್ಗೆ 10ಕ್ಕೆ ಆರಂಭವಾಗಿ, ಮಧ್ಯಾಹ್ನ 2ರ ವೇಳೆಗೆ ಮುಕ್ತಾಯವಾಗಲಿದೆ’ ಎಂದರು.



‘ಅಭಿವೃದ್ಧಿಯೇ ಆಗಿಲ್ಲ; ಸಾಧನಾ ಸಮಾವೇಶ ಯಾಕೆ’

ಹುಬ್ಬಳ್ಳಿ: ‘ಎರಡು ವರ್ಷದಿಂದ ರಾಜ್ಯದಲ್ಲಿ ಯಾವ ಅಭಿವೃದ್ಧಿ ಕೆಲಸಗಳೂ ನಡೆದಿಲ್ಲ. ಏನನ್ನೂ ಸಾಧನೆ ಮಾಡದ ರಾಜ್ಯ ಸರ್ಕಾರವು ಹೊಸಪೇಟೆಯಲ್ಲಿ ಯಾಕೆ ಸಾಧನಾ ಸಮಾವೇಶ ಆಯೋಜಿಸುತ್ತಿದೆ’ ಎಂದು ಸಂಸದ ಜಗದೀಶ ಶೆಟ್ಟರ್ ಪ್ರಶ್ನಿಸಿದರು.

‘ರಾಜ್ಯ ಸರ್ಕಾರವು ಈಗಾಗಲೇ ಜನರ ವಿಶ್ವಾಸ ಕಳೆದುಕೊಂಡಿದೆ. ರಾಜ್ಯದಲ್ಲಿ ಭ್ರಷ್ಟಾಚಾರ ಹೆಚ್ಚಿದೆ. ಕಾನೂನು ಮತ್ತು ಸುವ್ಯವಸ್ಥೆ ಕುಸಿದಿದೆ. ಗುತ್ತಿಗೆದಾರರ ಬಿಲ್ ಬಾಕಿಯಿದೆ. ಅವರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಇದೆ’ ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

‘ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗಳಿಗೆ ಹಣ ಸಿಗುತ್ತಿಲ್ಲವೆಂದು ಸ್ವತಃ ಕಾಂಗ್ರೆಸ್ ಶಾಸಕರೇ ಅಳಲು ತೋಡಿಕೊಂಡಿದ್ದಾರೆ. ಇಂತಹ ಸಂದರ್ಭದಲ್ಲಿ ಸಾಧನಾ ಸಮಾವೇಶ ಯಾವ ಪುರುಷಾರ್ಥಕ್ಕಾಗಿ ಮಾಡುತ್ತಿದ್ದಾರೆ’ ಎಂದು ಅವರು ಟೀಕಿಸಿದರು.

35,000 ಅಡಿ ಎತ್ತರದಲ್ಲಿ ದೇವೇಗೌಡರ ಹುಟ್ಟುಹಬ್ಬ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರು ಇದೇ ಗುರುವಾರ (ಮೇ 16) ಸಂಜೆ ದೆಹಲಿಯಿಂದ ಏರ್ ಇಂಡಿಯಾ ವಿಮಾನ ಏರಿ, ಬೆಂಗಳೂರಿನತ್ತ ಹೊರಟಿದ್ದರು. ಆರಂಭದಲ್ಲಿ ಸಾಮಾನ್ಯ ಎಂಬಂತೆ ಇದ್ದ ಪ್ರಯಾಣವು, ನಂತರದಲ್ಲಿ ದೇವೇಗೌಡರಿಗೆ ಅಚ್ಚರಿ ತಂದಿತ್ತು.

ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಟೇಕ್‌ಆಫ್ ಆದ ವಿಮಾನವು ಕೆಲ ಹೊತ್ತಿನಲ್ಲಿ ನೆಲದಿಂದ 35,000 ಅಡಿ ಎತ್ತರದಲ್ಲಿ ಹಾರುತ್ತಿತ್ತು. ಅಷ್ಟರಲ್ಲೇ ಮೌತ್‌ಪೀಸ್ ಹಿಡಿದು ಮಾತನ್ನಾರಂಭಿಸಿದ ಪರಿಚಾರಿಕೆಯೊಬ್ಬರು, ‘ದೇಶದ ಮಾಜಿ ಪ್ರಧಾನಿ ಮತ್ತು ರಾಜ್ಯಸಭಾ ಸದಸ್ಯರಾದ ಎಚ್.ಡಿ.ದೇವೇಗೌಡ ಅವರು ನಮ್ಮ ವಿಮಾನದಲ್ಲಿ ಪ್ರಯಾಣಿಸುತ್ತಿದ್ದಾರೆ. ಇದೇ 18ರ ಭಾನುವಾರ ಅವರಿಗೆ 92 ವರ್ಷ ತುಂಬಲಿದೆ. ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು’ ಎಂದರು.

ವಿಮಾನದಲ್ಲಿದ್ದ ಪ್ರಯಾಣಿಕರು ದೇವೇಗೌಡರತ್ತ ನೋಡಿ, ಅಭಿನಂದನೆ ಸಲ್ಲಿಸಿದರು. ಇದೇ ವೇಳೆ ವಿಮಾನದ ಸಿಬ್ಬಂದಿ ಕೇಕ್ ಒಂದನ್ನು ತಂದು ದೇವೇಗೌಡರ ಮುಂದೆ ಇರಿಸಿದರು. ಅವರಿಂದಲೇ ಕೇಕ್ ಕತ್ತರಿಸಿ, ಹಂಚಿದರು. ಹೂ ನೀಡಿ, ಮತ್ತೊಮ್ಮೆ ಹುಟ್ಟುಹಬ್ಬದ ಶುಭಾಶಯ ಹೇಳಿದರು. ಶುಭಾಶಯ ಪತ್ರವನ್ನೂ ನೀಡಿದರು.

ಈ ಸಂಭ್ರಮದ ಕ್ಷಣ ಮತ್ತು ಚಿತ್ರಗಳನ್ನು ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿರುವ ದೇವೇಗೌಡ ಅವರು, ಏರ್ ಇಂಡಿಯಾ ಸಿಬ್ಬಂದಿಗೆ ಧನ್ಯವಾದ ಹೇಳಿದ್ದಾರೆ.



ಏರ್ ಇಂಡಿಯಾ ವಿಮಾನದ ಸಿಬ್ಬಂದಿಯಿಂದ ಎಚ್‌ಡಿ.ದೇವೇಗೌಡರ ಹುಟ್ಟುಹಬ್ಬ ಆಚರಣೆ

ಜೋಶಿ ಅಮಾನತುಗೊಳಿಸಲು ಒತ್ತಾಯ

ಕನ್ನಡ ಜಾಗೃತಿ ಸಮಾವೇಶದಲ್ಲಿ ಆಡಳಿತಾಧಿಕಾರಿ ನೇಮಕ ಸೇರಿ 12 ನಿರ್ಣಯ

ಪ್ರಜಾವಾಣಿ ವಾರ್ತೆ

ಮಂಡ್ಯ: ‘ದ್ವೇಷಪೂರಿತ ದುರಾಡಳಿತ, ಆರ್ಥಿಕ ಅಶಿಸ್ತು ಹಾಗೂ ಸರ್ವಾಧಿಕಾರಿ ಧೋರಣೆಯಿಂದಾಗಿ ಪರಿಷತ್ತಿನ ಘನತೆಗೆ ಚ್ಯುತಿಯುಂಟು ಮಾಡಿರುವ ಕಸಾಪ ಅಧ್ಯಕ್ಷ ಮಹೇಶ ಜೋಶಿ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಬೇಕು ಮತ್ತು ಸಚಿವ ಸಂಪುಟ ದರ್ಜೆಯ ಸ್ಥಾನಮಾನವನ್ನು ಕೂಡಲೇ ಹಿಂಪಡೆಯಬೇಕು’ ಎಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಲು ಇಲ್ಲಿನ ‘ಕನ್ನಡ ಜಾಗೃತಿ ಸಮಾವೇಶ’ದಲ್ಲಿ ನಿರ್ಣಯ ಕೈಗೊಳ್ಳಲಾಯಿತು.

‘ಮಂಡ್ಯದ ಕನ್ನಡ ನಾಡುನುಡಿ ಜಾಗೃತಿ ಸಮಿತಿ’ ಆಶ್ರಯದಲ್ಲಿ ಶನಿವಾರ ನಡೆದ ಸಮಾವೇಶದಲ್ಲಿ ‘ಜೋಶಿಯವರನ್ನು ಅಮಾನತುಗೊಳಿಸಿ, ಆಡಳಿತಾಧಿಕಾರಿ ನೇಮಿಸಿ’ ಎಂಬ ಒಕ್ಕೊರಲ ಆಗ್ರಹ ಮೂಡಿತು. ನಗಾರಿ ಬಾರಿಸಿ ಸಮಾವೇಶ ಉದ್ಘಾಟಿಸಿದ ಗಣ್ಯರು, ಒಟ್ಟು 12 ನಿರ್ಣಯ ಕೈಗೊಂಡರು.

ಮೈಸೂರು, ಚಾಮರಾಜನಗರ, ಹಾಸನ, ರಾಮನಗರ, ತುಮಕೂರು, ಬೆಂಗಳೂರು ಜಿಲ್ಲೆಗಳಿಂದ ಬಂದಿದ್ದ ಕನ್ನಡ ಪರ ಸಂಘಟಕರು ನಗರದ ಸಂಜಯ ವೃತ್ತದಲ್ಲಿ ಮಾನವ ಸರಪಳಿ ರಚಿಸಿ, ‘ಮಹೇಶ ಜೋಶಿ ಇಳಿಸಿ, ಕಸಾಪ ಉಳಿಸಿ’ ಘೋಷಣೆಗಳನ್ನು ಮೊಳಗಿಸಿದರು.



ಕನ್ನಡ ನಾಡುನುಡಿ ಜಾಗೃತಿ ಸಮಿತಿ ಆಶ್ರಯದಲ್ಲಿ ಮಂಡ್ಯ ನಗರದ ಕಲಾಮಂದಿರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ‘ಕನ್ನಡ ಜಾಗೃತಿ ಸಮಾವೇಶ’ವನ್ನು ಸಾಹಿತಿ ಪ್ರೊ.ಎಸ್‌ಜಿ.ಸಿದ್ಧರಾಮಯ್ಯ ಅವರು ನಗಾರಿ ಬಾರಿಸುವ ಮೂಲಕ ಉದ್ಘಾಟಿಸಿದರು. ಸಾಹಿತಿ ರಾಮೇಗೌಡ, ಸುನಂದಾ ಜಯರಾಂ, ಹಿ.ಶಿ.ರಾಮಚಂದ್ರೇಗೌಡ, ಕೆ.ಟಿ.ಶ್ರೀಕಂಠೇಗೌಡ, ಪ್ರೊ.ನಂಜರಾಜೇ ಅರಸ್, ಮೀರಾ ಶಿವಲಿಂಗಯ್ಯ, ಜಾಣಗೆರೆ ವೆಂಕಟರಾಮಯ್ಯ, ಆರ್‌ಜಿ.ಹಳ್ಳಿ ನಾಗರಾಜ್, ಪದ್ಮಾ ಶೇಖರ್, ಕೆ.ಎಸ್‌ವಿಮಲಾ, ಎಚ್‌ಎಲ್‌ಪುಷ್ಪಾ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

‘ಪರಿಷತ್ತಿಗೆ ಅಂಟಿದ ರಾಜಕಾರಣದ ಕೊಳಕು’

‘ಜೋಶಿಯವರು ಪಕ್ಷ ರಾಜಕಾರಣದ ಕೊಳಕನ್ನು ಪರಿಷತ್ತಿಗೆ ಅಂಟಿಸಿದ್ದಾರೆ. ಸರ್ವಾಧಿಕಾರತ್ವದಿಂದ ಬೈಲಾ ತಿದ್ದುಪಡಿ ಮಾಡಿ ವಿಕೇಂದ್ರೀಕರಣ ವ್ಯವಸ್ಥೆಯನ್ನೇ ಹಾಳುಗೆಡವಿದ್ದಾರೆ. ಚುನಾವಣೆಯಲ್ಲಿ ಸೋತವರ ಬಗ್ಗೆ ಠೇವಣಿ ಕಳೆದಿದ್ದೇನೆ ಎಂಬ ದುರಹಂಕಾರದ ಮಾತಾಡುತ್ತಿದ್ದಾರೆ. ಇದು ಅಸಾಹಿತ್ಯಿಕ ಮನಸು. ಸಾಹಿತ್ಯ ಸದಾ ಸೋತವನ ಕಡೆಗೆ, ನೋವು ಉಂಡವರ ಕಡೆಗೆ ನಿಲ್ಲುತ್ತದೆ. ಗೆದ್ದವನ ಬಾಲ ಹಿಡಿಯುವುದಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು’ ಎಂದು ಪ್ರೊ.ಎಸ್.ಜಿ.ಸಿದ್ಧರಾಮಯ್ಯ ಹೇಳಿದರು.

ಪ್ರಕರಣವೊಂದರಲ್ಲಿ ಜೋಶಿಯವರಿಗೆ ನ್ಯಾಯಾಲಯವು ದಂಡ ಹಾಕಿದೆ. ಜೈಲಿಗೆ ಹೋಗುವ ಪರಿಸ್ಥಿತಿ ಬಂದಿದ್ದರೆ, ಪರಿಷತ್ತಿನ ಘನತೆ ಏನಾಗುತ್ತಿತ್ತು? ಅಧ್ಯಕ್ಷರೊಬ್ಬರು ಪೊಲೀಸ್ ಭದ್ರತೆ ಕೇಳಿದಾಗ ನ್ಯಾಯಾಲಯ ಕಣ್ಮುಚ್ಚಿ ಅನುಮತಿ ಕೊಟ್ಟಿದ್ದು ಸರಿಯೇ?
ಜಾಣಗೆರೆ ವೆಂಕಟರಾಮಯ್ಯ, ಚಿಂತಕ

‘ಜೋಶಿ ಅವರ ಅವಧಿಯಲ್ಲಿ ಆಗಿರುವ ಬೈಲಾ ತಿದ್ದುಪಡಿಯನ್ನು ರದ್ದುಪಡಿಸಿ 4 ವರ್ಷಗಳ ಹಿಂದೆ ಇದ್ದ ಮೂಲ ಬೈಲಾವನ್ನು ಉಳಿಸಿಕೊಳ್ಳಬೇಕು. ಆರ್ಥಿಕ ಮತ್ತು ಸಹಕಾರಿ ಇಲಾಖೆಯ ಹಿರಿಯ ಅಧಿಕಾರಿಗಳಿಂದ ತನಿಖೆ ನಡೆಸಿ, ಸರ್ಕಾರಕ್ಕೆ ಆಗಿರುವ ನಷ್ಟವನ್ನು ಅಧ್ಯಕ್ಷರಿಂದ ತುಂಬಿಸಿಕೊಳ್ಳಬೇಕು. ಸಮ್ಮೇಳನದ ₹2.5 ಕೋಟಿ ಅನುದಾನ ಮತ್ತು ದೇಶ–ವಿದೇಶಗಳಿಂದ ಪಡೆದಿರುವ ಹಣದ ಖರ್ಚು–ವೆಚ್ಚದ ಲೆಕ್ಕ ಕೊಡಬೇಕು’ ಎಂದು ಆಗ್ರಹಿಸಿದರು.

ಪ್ರೊ.ಕಾಳೇಗೌಡ ನಾಗವಾರ, ಹಿ.ಶಿ.ರಾಮಚಂದ್ರೇಗೌಡ, ಆರ್.ಜಿ.ಹಳ್ಳಿ ನಾಗರಾಜ್, ಪ್ರೊ.ಬಿ.ಜಯಪ್ರಕಾಶಗೌಡ, ಸುನಂದಾ ಜಯರಾಂ, ಎಚ್.ಎಲ್.ಪುಷ್ಪಾ, ವಸುಂಧರಾ ಭೂಪತಿ, ಕೆ.ಎಸ್.ವಿಮಲಾ, ಪದ್ಮಾ ಶೇಖರ್, ಮೀರಾ ಶಿವಲಿಂಗಯ್ಯ, ಸಿ.ಕುಮಾರಿ, ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ಪ್ರೊ. ನಂಜರಾಜೇ ಅರಸ್, ರಾಮೇಗೌಡ ಪಾಲ್ಗೊಂಡಿದ್ದರು.

ದತ್ತಿ ಪ್ರಶಸ್ತಿಗೆ ಲೇಖಕಿಯರ ಕೃತಿ ಆಹ್ವಾನ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘವು ‘ಡಾ. ನಳಿನಿ ಮೂರ್ತಿ ದತ್ತಿ ಪ್ರಶಸ್ತಿ’ಗೆ ಲೇಖಕಿಯರಿಂದ ವಿಜ್ಞಾನ ಕೃತಿಗಳನ್ನು ಆಹ್ವಾನಿಸಿದೆ.

ವಿಜ್ಞಾನಕ್ಕೆ ಸಂಬಂಧಿಸಿದ ಕೃತಿಗಳು, ವೈಜ್ಞಾನಿಕ ಕತೆ–ಕಾದಂಬರಿ ಹಾಗೂ ಸಂಕೀರ್ಣಕ್ಕೆ (ವೈದ್ಯಕೀಯ/ ತಂತ್ರಜ್ಞಾನ/ ಕೃಷಿ ವಿಜ್ಞಾನ) ಸಂಬಂಧಿಸಿದ ಕೃತಿಗಳನ್ನು ಪರಿಗಣಿಸಲಾಗುತ್ತದೆ. ಪ್ರಶಸ್ತಿಯು ₹25 ಸಾವಿರ ನಗದು ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿದೆ. 2024ರಲ್ಲಿ ಪ್ರಕಟಗೊಂಡ ಸ್ವತಂತ್ರ ಕೃತಿಗಳ ಮೂರು ಪ್ರತಿಗಳನ್ನು ಕರ್ನಾಟಕ ಲೇಖಕಿಯರ ಸಂಘ, ಫ್ಲಾಟ್ ನಂ. 206, ವಿಜಯ ಮ್ಯಾನ್ಷನ್, 2ನೇ ಮಹಡಿ, 2ನೇ ಮುಖ್ಯರಸ್ತೆ, 2ನೇ ತಿರುವು, ಚಾಮರಾಜಪೇಟೆ, ಬೆಂಗಳೂರು-560018 ಈ ವಿಳಾಸಕ್ಕೆ ಇದೇ 31ರೊಳಗೆ ಕಳುಹಿಸಬೇಕು ಎಂದು ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ ತಿಳಿಸಿದ್ದಾರೆ.

ಸಂಪರ್ಕಕ್ಕೆ: 9480051222, 8073765665

ತಮಿಳುನಾಡು: ರಸ್ತೆ ಅಪಘಾತದಲ್ಲಿ ನಾಲ್ವರು ಸಾವು

ಕರೂರ್ (ಪಿಟಿಐ): ತಮಿಳುನಾಡಿನ ಕರೂರ್ ಜಿಲ್ಲೆಯ ಸೆಮ್ಮಾಡೈ ಬಳಿ ಟ್ರ್ಯಾಕ್ಟರ್ ಹಾಗೂ ಟೂರಿಸ್ಟ್ ವ್ಯಾನ್‌ಗೆ ಓಮ್ನಿ ಬಸ್ ಡಿಕ್ಕಿ ಹೊಡೆದು ನಾಲ್ವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಈ ಘಟನೆಯಲ್ಲಿ 15 ಪ್ರಯಾಣಿಕರು ಗಾಯಗೊಂಡಿದ್ದಾರೆ.

ಸಾವಿಗೀಡಾದವರಲ್ಲಿ ವ್ಯಾನ್ ಚಾಲಕ ಸೇರಿದ್ದಾರೆ. ಗಾಯಾಳುಗಳನ್ನು ಸ್ಥಳೀಯ ಸರ್ಕಾರಿ ಆಸ್ಪತ್ರೆಗೆ ಸೇರಿಸಲಾಗಿದೆ.

ಬೆಂಗಳೂರಿನಿಂದ ನಾಗರ್ ಕೋಯಿಲ್‌ಗೆ ಹೊರಟಿದ್ದ ಪ್ರವಾಸಿಗರ ಮಿನಿಬಸ್, ಕರೂರ್–ಸೇಲಂ ಹೆದ್ದಾರಿಯಲ್ಲಿ ವಾಹನ ಬಲಕ್ಕೆ ತಿರುಗಿದ್ದರಿಂದಾಗಿ, ಟ್ರ್ಯಾಕ್ಟರ್‌ಗೆ ಡಿಕ್ಕಿ ಹೊಡೆಯಿತು. ಆ ಬಳಿಕ ತೂತುಕುಡಿಯಿಂದ ವಿರುದ್ಧ ದಿಕ್ಕಿನಿಂದ ಬರುತ್ತಿದ್ದ ಬರುತ್ತಿದ್ದ ಪ್ರವಾಸಿ ವ್ಯಾನ್‌ಗೂ ಓಮ್ನಿ ಬಸ್ ಡಿಕ್ಕಿ ಹೊಡೆದಿದೆ. ಇದರಿಂದಾಗಿ ವ್ಯಾನ್ ಚಾಲಕ ಮೃತಪಟ್ಟಿದ್ದಾನೆ. ಅಪಘಾತದ ತೀವ್ರತೆಗೆ ಓಮ್ನಿ ಬಸ್, ಟ್ರ್ಯಾಕ್ಟರ್ ಮತ್ತು ವ್ಯಾನ್‌ನ ಮುಂಭಾಗವು ಸಂಪೂರ್ಣವಾಗಿ ನಜ್ಜುಗುಜ್ಜಾಗಿವೆ ಎಂದು ಪೊಲೀಸರು ಹೇಳಿದ್ದಾರೆ.

ರಾಜ್ಯದ ಹಲವೆಡೆ ಉತ್ತಮ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿಯೂ ಸೇರಿ ರಾಜ್ಯದ ಹಲವೆಡೆ ಶನಿವಾರ ಧಾರಾಕಾರ ಮಳೆ ಸುರಿದಿದೆ.

ದಾವಣಗೆರೆ ವರದಿ: ನಗರವೂ ಸೇರಿ ಜಿಲ್ಲೆಯ ವಿವಿಧೆಡೆ ಉತ್ತಮ ಮಳೆಯಾಯಿತು. ಹೊನ್ನಾಳಿ, ಚನ್ನಗಿರಿ, ಹರಿಹರ ಹಾಗೂ ದಾವಣಗೆರೆ ತಾಲ್ಲೂಕಿನ ಮಾಯಕೊಂಡದಲ್ಲಿ ಮಳೆಯಾಗಿದೆ ನಿರಂತರ ಸುರಿಯುತ್ತಿರುವ ಮಳೆಯಿಂದ ಜಿಲ್ಲೆಯಲ್ಲಿ ಕೃಷಿ ಚಟುವಟಿಕೆ ಗರಿಗೆದರಿದೆ.

ಚಿಕ್ಕಮಗಳೂರು ವರದಿ: ಜಿಲ್ಲೆಯಲ್ಲಿ ಶನಿವಾರ ಮಳೆ ಮುಂದುವರಿದಿದ್ದು, ದಿನವಿಡಿ ಮಳೆಯ ವಾತಾವರಣ ಇತ್ತು. ನಗರದಲ್ಲಿ ಸತತ ಆರು ದಿನಗಳಿಂದ ಮಧ್ಯಾಹ್ನದ ವೇಳೆಗೆ ಮಳೆ ಸುರಿಯುತ್ತಿದೆ. ಚಿಕ್ಕಮಗಳೂರು ನಗರ, ಮುಳ್ಳಯ್ಯನಗಿರಿ ಸೇರಿ ಚಂದ್ರದ್ರೋಣ ಪರ್ವತ ಶ್ರೇಣಿಯಲ್ಲಿ ಬೆಳಿಗ್ಗೆ 11ರ ವೇಳೆಗೆ ಆರಂಭವಾದ ಮಳೆ 1 ಗಂಟೆಗೂ ಹೆಚ್ಚು ಕಾಲ ಸುರಿಯಿತು.

ಚಿತ್ರದುರ್ಗ ವರದಿ: ಜಿಲ್ಲೆಯ ಹೊಸದುರ್ಗ, ಚಿಕ್ಕಜಾಜೂರು ಹಾಗೂ ಸಾಣೇಹಳ್ಳಿಯಲ್ಲಿ ಗಂಟೆಗೂ ಹೆಚ್ಚು ಹೊತ್ತು ರಭಸವಾಗಿ ಮಳೆ ಸುರಿಯಿತು. ಹೊಳಲ್ಕೆರೆ ತಾಲ್ಲೂಕಿನ ತಾಳ್ಯ ಭಾಗದಲ್ಲಿ ಸುರಿದ ಬಿರುಸಿನ ಮಳೆಗೆ ಹಳ್ಳ, ಕೊಳ್ಳಗಳು ತುಂಬಿ ಹರಿದವು.

ಶಿವಮೊಗ್ಗ ವರದಿ: ಜಿಲ್ಲೆಯಲ್ಲಿ ಶನಿವಾರ ಮಧ್ಯಾಹ್ನದಿಂದ ಮಳೆ ಸುರಿದಿದೆ. ಇಡೀ ದಿನ ಮೋಡ ಕವಿದ ವಾತಾವರಣ ಇದ್ದು, ಜಡಿ ಮಳೆಯಿಂದ ಅವಧಿಗೆ ಮುನ್ನವೇ ಮುಂಗಾರು ಹಂಗಾಮು ಆರಂಭವಾದ ಅನುಭವವನ್ನು ನೀಡಿತು. ತೀರ್ಥಹಳ್ಳಿ, ಕೋಣಂದೂರು, ರಿಪ್ಪನ್ ಪೇಟೆ, ಹೊಳೆಹೊನ್ನೂರು, ಶಿಕಾರಿಪುರದ ಗ್ರಾಮೀಣ ಭಾಗದಲ್ಲಿ ಮಳೆ ಬಂದಿದೆ.

ಬಂಗಾರಪೇಟೆ/ಕೆಜಿಎಫ್ ವರದಿ: ಬಂಗಾರಪೇಟೆ ತಾಲ್ಲೂಕಿನ ವಿವಿಧೆಡೆ ಶನಿವಾರ ಭಾರಿ ಮಳೆ ಸುರಿಯಿತು. ಕೆಜಿಎಫ್ ಬಿಜಿಎಂಎಲ್ ಪ್ರದೇಶದ ಎನ್.ಟಿ ಬ್ಲಾಕ್‌ನಲ್ಲಿ ಎರಡು ಮನೆಗಳ ಮೇಲೆ ಮರ ಬಿದ್ದು ಮನೆಗಳು ಜಖಂಗೊಂಡಿವೆ. ಹಣ್ಣು ಮತ್ತು ತರಕಾರಿ ತೋಟಗಳು ಮಳೆಯಿಂದಾಗಿ ಹಾನಿಗೊಳಗಾಗಿವೆ. ಮುಳಬಾಗಿಲು ಸುತ್ತಮುತ್ತ ಉತ್ತಮ ಮಳೆ ಸುರಿಯಿತು.

ಚಿಕ್ಕಬಳ್ಳಾಪುರ ವರದಿ: ಗೌರಿಬಿದನೂರು ತಾಲ್ಲೂಕಿನಲ್ಲಿ ಶನಿವಾರ ಸಂಜೆ ಮಳೆ ಸುರಿಯಿತು. ಗ್ರಾಮಾಂತರ ಪೊಲೀಸ್ ಠಾಣೆ ಮುಂಭಾಗದ ಕೆಳ ಸೇತುವೆಯಲ್ಲಿ ನೀರು ತುಂಬಿಕೊಂಡಿತ್ತು. ಆನೇಕಲ್ ಸುತ್ತಮುತ್ತ ಭಾರಿ ಮಳೆ ಆಗಿದೆ.



ಹೊಳಲ್ಕೆರೆ ತಾಲ್ಲೂಕಿನ ತಾಳ್ಯದಲ್ಲಿ ಶನಿವಾರ ಸಂಜೆ ಸುರಿದ ಮಳೆಗೆ ಕರಿಯಮ್ಮನ ಹಳ್ಳ ತುಂಬಿ ಹರಿದ ಕಾರಣ ಕೆಲ ಹೊತ್ತು ವಾಹನ ಸಂಚಾರಕ್ಕೆ ಅಡಚಣೆ ಆಯಿತು

ನಾಗಮಂಗಲ: ಗುಡುಗು–ಸಿಡಿಲಿನ ಮಳೆ

ಮೈಸೂರು: ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ಶನಿವಾರ ಮಧ್ಯಾಹ್ನ ಎರಡೂವರೆ ಗಂಟೆಗೂ ಹೆಚ್ಚು ಕಾಲ ಧಾರಾಕಾರ ಮಳೆ ಸುರಿಯಿತು.

ಹೆದ್ದಾರಿ ಬದಿಯಲ್ಲಿ ಮಳೆಯ ನೀರು ಕಾಲುವೆಯಂತೆ ಹರಿಯಿತು. ವಿದ್ಯಾರ್ಥಿಗಳು, ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಯಿತು. ಪಟ್ಟಣ ಸೇರಿದಂತೆ ಗ್ರಾಮೀಣ ಭಾಗದಲ್ಲಿ ವಿದ್ಯುತ್ ಸಂಪರ್ಕ ಕಡಿತವಾಗಿತ್ತು.

ಮೈಸೂರು ಜಿಲ್ಲಾ ಕೇಂದ್ರದಲ್ಲಿ ಕೆಲಹೊತ್ತು ಗುಡುಗು ಸಹಿತ ಜೋರು ಮಳೆ ಸುರಿಯಿತು. ಜಿಲ್ಲೆಯ ತಿ.ನರಸೀಪುರ, ಎಚ್.ಡಿ. ಕೋಟೆ, ಧರ್ಮಾಪುರ, ಬೆಟ್ಟದಪುರ, ಪಿರಿಯಾಪಟ್ಟಣ, ಹಂಪಾಪುರ, ನಂಜನಗೂಡು, ಸಾಲಿಗ್ರಾಮ ಭಾಗದಲ್ಲಿ ಸಾಧಾರಣ ಮಳೆ ಸುರಿಯಿತು.

ಮನೋಹರ ಗ್ರಂಥಮಾಲಾ ಮೇರು ಮಾರ್ಗಿ

• ಹ.ವೆಂ.ಕಾಖಂಡಿಕಿ

ನುಡಿ ನಮನ

ಓದುಗರ ಪಾಲಿಗೆ ರಮಾಕಾಂತ ಜೋಶಿ. ಗಿರೀಶ ಕಾರ್ನಾಡ, ಎ.ಕೆ.ರಾಮಾನುಜನ್, ಯು.ಆರ್. ಅನಂತಮೂರ್ತಿ, ಚಂದ್ರಶೇಖರ ಕಂಬಾರ, ಗಿರಡ್ಡಿ ಗೋವಿಂದರಾಜ, ಚಂದ್ರಶೇಖರ ಪಾಟೀಲ ಅಷ್ಟೇ ಅಲ್ಲ, ದ.ರಾ.ಬೇಂದ್ರೆ, ಎಂ.ಎಂ.ಕಲಬುರ್ಗಿ, ಚನ್ನವೀರ ಕಣವಿ ಮತ್ತಿತರರಿಗೆ ‘ರಾಮು’. ಅಟ್ಟದ (ಮನೋಹರ ಗ್ರಂಥಮಾಲಾದ ಮಹಡಿ) ನನ್ನಂತಹ ಕೆಲ ಸ್ನೇಹಿತರಿಗೆ ‘ರಾಮಣ್ಣ’. ಅವರು ಈಗ ನಮ್ಮೊಂದಿಗೆ ಇಲ್ಲ ಎಂಬುದು ನಂಬಲು ಆಗುತ್ತಿಲ್ಲ.

ರಾಮಣ್ಣ ಇದ್ದಿದ್ದು ಹಾಗೆ. ಅವರ ಕ್ರಿಯಾಶೀಲತೆ, ಶಿಸ್ತುಬದ್ಧ ಕೆಲಸ, ಪ್ರಾಮಾಣಿಕ ನಡವಳಿಕೆ, ಪಾರದರ್ಶಕತೆ, ಸ್ಪಷ್ಟ ಮತ್ತು ನಿರ್ದಿಷ್ಟ ಮಾತುಗಳು ಎಲ್ಲವೂ ಅವರನ್ನು ಬಹು ಎತ್ತರಕ್ಕೆ ಒಯ್ದಿದ್ದವು.

ರಮಾಕಾಂತ ಜೋಶಿ ಅವರು ಧಾರವಾಡದ ಕರ್ನಾಟಕ ವಿದ್ಯಾಲಯದಲ್ಲಿ ಬಿ.ಎ, ಗುಜರಾತ್‌ನ ಸರ್ದಾರ್ ಪಟೇಲ್ ವಿಶ್ವವಿದ್ಯಾಲಯದಲ್ಲಿ ಎಂ.ಎ ಮತ್ತು ಪಿಎಚ್.ಡಿ ಪದವಿ ಪಡೆದಿದ್ದರು. ಕಿಟೆಲ್ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಯನ ವಿಭಾಗದ ಪ್ರಾಧ್ಯಾಪಕರು, ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿ, 1994ರಲ್ಲಿ ನಿವೃತ್ತರಾದರು. ತಂದೆ ಜಿ.ಬಿ.ಜೋಶಿ ಅವರು 1993ರಲ್ಲಿ ನಿಧನರಾದ ಬಳಿಕ ಮನೋಹರ ಗ್ರಂಥಮಾಲಾ ಜವಾಬ್ದಾರಿ ವಹಿಸಿಕೊಂಡರು. ಗ್ರಂಥಮಾಲಾದಿಂದ ಬಹಳಷ್ಟು ಸಾಹಿತ್ಯಿಕ ಚಟುವಟಿಕೆಗಳನ್ನು ನಡೆಸಿದರು. ಜಿ.ಬಿ. ಅವರಂತೆ ಹೊಸ ಲೇಖಕರನ್ನು ಹುಡುಕಿ, ಕೃತಿಗಳನ್ನು ಪ್ರಕಟಿಸಿದರು.

ಮನೋಹರ ಗ್ರಂಥಮಾಲಾದ ವ್ಯವಸ್ಥಾಪಕ ಸಂಪಾದಕರಾದ ಬಳಿಕ ಅನೇಕರ ಸಮಗ್ರ ಸಾಹಿತ್ಯವನ್ನು ಅವರ ಕುಟುಂಬದ ಅನುಮತಿ ಪಡೆದು, ಪ್ರಕಟಿಸಿದರು. ಗಳಗನಾಥ, ಸದಾಶಿವರಾವ ಗರುಡ, ವಾಮನರಾವ ಸವಣೂರ, ದ.ಬಾ.ಕುಲಕರ್ಣಿ, ರಾಘವೇಂದ್ರ ಖಾಸನೀಸ ಮೊದಲಾದವರ ಕಾದಂಬರಿ, ನಾಟಕ, ಕತೆ, ಪ್ರಬಂಧ ಮೊದಲಾದ ಸಮಗ್ರ ಸಾಹಿತ್ಯವನ್ನು ಹೊರತಂದರು.


ರಮಾಕಾಂತ ಜೋಶಿಯವರು ಸ್ವತಃ ಉತ್ತಮ ಬರಹಗಾರರು. ದೀನಾನಾಥ ಮಲ್ಹೋತ್ರಾ ಅವರ ‘ಬುಕ್ ಪಬ್ಲಿಷಿಂಗ್’ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದರು. ನಾನು ಬರೆದ ‘ಜಿ.ಬಿ.ಜೋಶಿ’ ಕೃತಿಯನ್ನು ರಮಾಕಾಂತ ಅವರು ಇಂಗ್ಲಿಷ್‌ಗೆ ಅನುವಾದಿಸಿದ್ದರು. ಇದನ್ನು ನ್ಯಾಷನಲ್ ಬುಕ್ ಟ್ರಸ್ಟ್ ಶೀಘ್ರದಲ್ಲೇ ಪ್ರಕಟಿಸಲಿದೆ. ಅವರು ‘ಮಿಥ್ ಇನ್ ಇಂಡಿಯನ್ ಡ್ರಾಮಾ’ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.

ನವದೆಹಲಿಯ ಭಾರತೀಯ ಪ್ರಕಾಶಕರ ಒಕ್ಕೂಟದ 'ವಿಶಿಷ್ಟ ಪ್ರಕಾಶಕ ಪ್ರಶಸ್ತಿ', ಕನ್ನಡ ಪುಸ್ತಕ ಪ್ರಾಧಿಕಾರದ ‘ಅತ್ಯುತ್ತಮ ಪ್ರಕಾಶನ’ ಪ್ರಶಸ್ತಿ, ‘ಆಳ್ವಾಸ್ ನುಡಿಸಿರಿ’ ಪ್ರಶಸ್ತಿ ಸೇರಿ ಹಲವು ಪುರಸ್ಕಾರಗಳು ಅವರಿಗೆ ಸಂದಿವೆ. ರಮಾಕಾಂತ ಜೋಶಿ ಅವರ ಅಗಲಿಕೆಯಿಂದ ಈಗ ‘ಮನೋಹರ ಗ್ರಂಥಮಾಲಾದ ಮಹಡಿ’ಯಲ್ಲಿ ಮೌನ ಆವರಿಸಿದೆ.



ಧಾರವಾಡದ ಮನೋಹರ ಗ್ರಂಥಮಾಲಾದಲ್ಲಿ ಗಿರೀಶ ಕಾರ್ನಾಡ ಅವರೊಂದಿಗೆ ರಮಾಕಾಂತ ಜೋಶಿ ಅವರು ಚರ್ಚೆಯಲ್ಲಿ ತೊಡಗಿರುವುದು (ಸಂಗ್ರಹ ಚಿತ್ರ)

ರಮಾಕಾಂತ ಜೋಶಿ ಇನ್ನಿಲ್ಲ



ಧಾರವಾಡ: ನಗರದ ಮನೋಹರ ಗ್ರಂಥಮಾಲಾ ಪ್ರಕಾಶನದ ಸಂಪಾದಕ, ಪ್ರಕಾಶಕ, ಲೇಖಕ ಮತ್ತು ನಿವೃತ್ತ ಪ್ರಾಧ್ಯಾಪಕ ಪ್ರೊ.ರಮಾಕಾಂತ ಜಿ. ಜೋಶಿ (89) ಅವರು ಹುಬ್ಬಳ್ಳಿಯ ಆಸ್ಪತ್ರೆಯಲ್ಲಿ ಶನಿವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರ ಮತ್ತು ಇಬ್ಬರು ಪುತ್ರಿಯವರು ಇದ್ದಾರೆ. ನಗರದ ಮಂಗಳವಾರಪೇಟೆಯ ಮೆಣಸಿನಕಾಯಿ ಓಣಿಯ ಅವರ ಸ್ವಗೃಹದಲ್ಲಿ ಭಾನುವಾರ (ಮೇ 18) ಬೆಳಿಗ್ಗೆ 9 ರಿಂದ 10ರವರೆಗೆ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಹೊಸಯಲ್ಲಾಪುರ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಅರಣ್ಯವಾಸಿ ಫಲಾನುಭವಿಗಳಿಗೆ ಸಚಿವರಿಂದ ಪರಿಹಾರದ ಚೆಕ್ ವಿತರಣೆ

ಸ್ವಪ್ರೇರಿತ ಸ್ಥಳಾಂತರಕ್ಕೆ ಸಲಹೆ

ಪ್ರಜಾವಾಣಿ ವಾರ್ತೆ



ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಹೆಮ್ಮಡಗಾ ಬಳಿಯ ಭೀಮಗಡ ಅರಣ್ಯ ಶಿಬಿರದಲ್ಲಿ ಶನಿವಾರ, ತಳೇವಾಡಿ ಅರಣ್ಯದಿಂದ ಸ್ಥಳಾಂತರವಾಗಲು ಸಮ್ಮತಿಸಿದ 27 ಕುಟುಂಬಗಳಿಗೆ ಸಚಿವ ಈಶ್ವರ ಖಂಡ್ರೆ ಪರಿಹಾರ ಧನದ ಚೆಕ್ ವಿತರಿಸಿದರು. ಸತೀಶ ಜಾರಕಿಹೊಳಿ, ವಿಠ್ಠಲ ಹಲಗೇಕರ್ ಹಾಜರಿದ್ದರು

ತಳೇವಾಡಿ(ಬೆಳಗಾವಿ ಜಿಲ್ಲೆ): 'ಭೀಮಗಡ ಅರಣ್ಯ ವ್ಯಾಪ್ತಿಯಲ್ಲಿನ 13 ಗ್ರಾಮಗಳಲ್ಲಿ 754 ಕುಟುಂಬಗಳಿವೆ. ಇವರೆಲ್ಲರ ಸ್ಥಳಾಂತರಕ್ಕೆ ಕನಿಷ್ಠ ₹1,000 ಕೋಟಿ ಬೇಕು. ಇದರ ಬಗ್ಗೆ ಕೇಂದ್ರ ಅರಣ್ಯ ಸಚಿವರು ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿ, ನಿರ್ಧರಿಸಲಾಗುವುದು' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ಜಿಲ್ಲೆಯ ಖಾನಾಪುರ ತಾಲ್ಲೂಕಿನ ಹೆಮ್ಮಡಗಾ ಸಮೀಪ ಭೀಮಗಡ ಅರಣ್ಯ ಶಿಬಿರದಲ್ಲಿ ಶನಿವಾರ, ತಳೇವಾಡಿ ಅರಣ್ಯದಿಂದ ಸ್ಥಳಾಂತರಕ್ಕೆ ಸಮ್ಮತಿಸಿದ 27 ಕುಟುಂಬಗಳಿಗೆ ಪರಿಹಾರ ಧನದ ಚೆಕ್ ವಿತರಿಸಿ ಅವರು ಮಾತನಾಡಿದರು.

'ರಾಜ್ಯದಲ್ಲಿ ಅರಣ್ಯ ಸಮೃದ್ಧವಾಗಿದ್ದು, ಅರಣ್ಯವಾಸಿಗಳೇ ಇದನ್ನು ಬೆಳೆಸಿದ್ದಾರೆ. ಆದರೆ, ಅವರಿಗೆ ನಾಗರಿಕ ಸೌಲಭ್ಯ ಕಲ್ಪಿಸಲು ಆಗುತ್ತಿಲ್ಲ. ಹೀಗಾಗಿ, ಸ್ವಯಂ ಪ್ರೇರಣೆಯಿಂದ ಸ್ಥಳಾಂತರಕ್ಕೆ ಸಮ್ಮತಿಸುವವರನ್ನು ಮುಖ್ಯವಾಹಿನಿಗೆ ತರಲಾಗುತ್ತಿದೆ. ತಳೇವಾಡಿ ಸ್ಥಳಾಂತರ ರಾಜ್ಯದ ಇತರ ವನವಾಸಿಗಳಿಗೂ ಪ್ರೇರಣೆ ಆಗಲಿದೆ' ಎಂದರು.

'ಹಿಂದೆ ಹಿರಿಯರು ವನ್ಯಮೃಗಗಳ ಜತೆಗೇ, ಹೇಗೆ ಜೋಪಾನವಾಗಿ ಬದುಕಬೇಕು ಎಂದು ಅರಿತಿದ್ದರು. ಆದರೆ, ಇಂದು ಆಧುನಿಕ ಪ್ರಪಂಚಕ್ಕೆ ವಾಲಿದವರಿಗೆ ಅದು ಸಾಧ್ಯವಾಗುತ್ತಿಲ್ಲ. ಮಾನವ ಹಸ್ತಕ್ಷೇಪದಿಂದ ಅರಣ್ಯಕ್ಕೂ ಧಕ್ಕೆಯಾಗುತ್ತಿದೆ. ಹೀಗಾಗಿ ಸ್ವಯಂ ಪ್ರೇರಿತ ಸ್ಥಳಾಂತರವೇ ಒಳ್ಳೆಯ ಆಯ್ಕೆ' ಎಂದು ತಿಳಿಸಿದರು.

'ನಿಯಮಾನುಸಾರ ಮತ್ತು ಕಾನೂನು ಬದ್ಧವಾಗಿ ಪ್ರಥಮ ಹಂತದಲ್ಲಿ 27 ಕುಟುಂಬಗಳು ಸ್ಥಳಾಂತರ ಆಗಲಿದ್ದು, ಒಂದು ಪರಿವಾರದ ಘಟಕಕ್ಕೆ ತಲಾ ₹10 ಲಕ್ಷ ನೀಡಲಾಗುತ್ತಿದೆ. ಸ್ಥಳಾಂತರ ಪ್ರಕ್ರಿಯೆ ಪೂರ್ಣಗೊಳಿಸಿದ ಬಳಿಕ ಅವರಿಗೆ ಉಳಿದ ₹5 ಲಕ್ಷ ನೀಡಲಾಗುವುದು' ಎಂದರು.

ಬಲವಂತದ ಸ್ಥಳಾಂತರ ಇಲ್ಲ: 'ಒತ್ತಾಯಪೂರ್ವಕವಾಗಿ ಅರಣ್ಯದಿಂದ ಅರಣ್ಯವಾಸಿಗಳನ್ನು ಹೊರಗೆ ಕಳಿಸುತ್ತಿಲ್ಲ' ಎಂದು ಸ್ಪಷ್ಟಪಡಿಸಿದ ಸಚಿವರು, 'ಸ್ವಇಚ್ಛೆಯಿಂದ ತಾವೇ ಮುಂದೆ ಬಂದ ಅರಣ್ಯವಾಸಿಗಳನ್ನು ಸಮಾಜದ ಮುಖ್ಯವಾಹಿನಿಗೆ ತರುವ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ' ಎಂದರು.

'ಸ್ಥಳಾಂತರಗೊಂಡವರಿಗೆ ಪರಿಹಾರ ಧನ ನೀಡಿದರೆ ಸಾಲದು. ವಾಸ ಮತ್ತು ಕೆಲಸದ ವ್ಯವಸ್ಥೆ ಮಾಡಬೇಕು ಎಂಬ ಬೇಡಿಕೆ ಇದೆ. ಆ ಬಗ್ಗೆಯೂ ಸಕಾರಾತ್ಮಕ ನಿರ್ಧಾರ ಕೈಗೊಳ್ಳಲಾಗುವುದು' ಎಂದೂ ಹೇಳಿದರು.

ಮುಖ್ಯ ವನ್ಯಜೀವಿ ಪರಿಪಾಲಕ ಸುಭಾಷ್ ಮಾಲ್ಖಡೆ, ಕಾಂಪಾ ಮುಖ್ಯ ನಿರ್ವಹಣಾಧಿಕಾರಿ ರಾಧಾ ದೇವಿ, ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮಂಜುನಾಥ ಚವ್ಹಾಣ, ಉಪ ಅರಣ್ಯ ಸಂರಕ್ಷಣಾಧಿಕಾರಿ ಮರಿಯಾ ಕ್ರಿಸ್ತುರಾಜ್ ಇದ್ದರು.

20 ವರ್ಷಗಳಿಂದ ಸ್ಥಳಾಂತರದ ಬೇಡಿಕೆ ಇತ್ತು. ಈಶ್ವರ ಖಂಡ್ರೆ ಮಹತ್ವದ ಯೋಜನೆ ರೂಪಿಸಿದ್ದಾರೆ. ಸ್ಥಳಾಂತರ ಆದವರಿಗೆ ಪರಿಹಾರದ ಮೊತ್ತ ಹೆಚ್ಚಿಸಬೇಕು
ಸತೀಶ ಜಾರಕಿಹೊಳಿ, ಲೋಕೋಪಯೋಗಿ ಸಚಿವ

ಸ್ಥಳಾಂತರಗೊಂಡವರಿಗೆ ಹಣ ಕೊಟ್ಟರೆ ಸಾಲದು. ಅವರಿಗೆ ಒಂದೇ ಕಡೆ ನಿವೇಶನಗಳನ್ನು ನೀಡಲು ಸರ್ಕಾರ ಅಗತ್ಯ ವ್ಯವಸ್ಥೆಯನ್ನು ಮಾಡಬೇಕು
ವಿಠ್ಠಲ ಹಲಗೇಕರ್, ಶಾಸಕ, ಖಾನಾಪುರ

ಸಂಕ್ಷಿಪ್ತ ಸುದ್ದಿ

ಡೆಂಗಿ: ಬಾಲಕಿ ಸಾವು



ಸಂಸ್ಕೃತಿ

ಕುಳಗೇರಿ ಕ್ರಾಸ್ (ಬಾಗಲಕೋಟೆ ಜಿಲ್ಲೆ): ಸಮೀಪದ ಬೀರನೂರ ಗ್ರಾಮದ ಸಂಸ್ಕೃತಿ ಸುರೇಶ್ ಅಂಬಣ್ಣವರ (13) ಡೆಂಗಿ ಜ್ವರದಿಂದ ಶುಕ್ರವಾರ ಮೃತಪಟ್ಟಿದ್ದಾಳೆ. ಅವಳು ಮಂಗಳೂರಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಏಳನೇ ತರಗತಿಯಲ್ಲಿ ಓದುತ್ತಿದ್ದಳು.

'ತೀವ್ರ ಜ್ವರದಿಂದ ಬಳಲುತ್ತಿದ್ದ ನನ್ನ ಮಗಳನ್ನು ಶುಕ್ರವಾರ ಬಾದಾಮಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದೆವು. ಅವಳ ಸಾವಿಗೆ ಡೆಂಗಿ ಕಾರಣವೆಂದು ವೈದ್ಯರು ಖಚಿತಪಡಿಸಿದರು' ಎಂದು ಸಂಸ್ಕೃತಿಯ ತಂದೆ ಸುರೇಶ್ ತಿಳಿಸಿದರು.

ಬೆಂಕಿ ನಂದಿಸಲು ಹೋದ ವ್ಯಕ್ತಿ ಸಾವು



ಜಯಕುಮಾರ್

ಕೆ.ಆರ್.ಪೇಟೆ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಕಸಬಾ ಹೋಬಳಿ ಕತ್ತರಘಟ್ಟ ಗ್ರಾಮದಲ್ಲಿ ಹುಲ್ಲಿನ ಮೆದೆಗೆ ಬಿದ್ದ ಬೆಂಕಿಯನ್ನು ನಂದಿಸಲು ಹೋಗಿದ್ದ ಜಯಕುಮಾರ್ (46) ಜ್ವಾಲೆಗೆ ಸಿಲುಕಿ ಮೃತಪಟ್ಟರು. ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ.

ಶನಿವಾರ ಮಧ್ಯಾಹ್ನ ಕಿಡಿಗೇಡಿಗಳ ಕೃತ್ಯದಿಂದ ಬೆಂಕಿ ಬಿದ್ದಿರಬಹುದು ಎನ್ನಲಾಗಿದೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಪ್ರಗತಿಪರ ಕೃಷಿಕರಾಗಿದ್ದ ಜಯರಾಮ ಅವರನ್ನು ಕಳೆದುಕೊಂಡ ಕುಟುಂಬ ಕಂಗಾಲಾಗಿದೆ. ಸರ್ಕಾರವು ನೆರವಿಗೆ ಧಾವಿಸಬೇಕು' ಎಂದು ದಲಿತ ಮುಖಂಡ ಡಿ. ಪ್ರೇಮಕುಮಾರ್ ಒತ್ತಾಯಿಸಿದ್ದಾರೆ.

ಇಬ್ಬರು ಕುರಿಗಾಹಿ ಯುವಕರು ನೀರು ಪಾಲು

ಕೆಂಭಾವಿ (ಯಾದಗಿರಿ ಜಿಲ್ಲೆ): ಏವೂರ ಗ್ರಾಮದ ಸಮೀಪದ ಜೆಬಿಸಿ ಕಾಲುವೆಯಲ್ಲಿ ಈಜಲು ತೆರಳಿದ್ದ ಕುರಿಗಾಹಿ ಯುವಕ ಪ್ರಧಾನಿ ಜಟ್ಟೆಪ್ಪ ಕನ್ನೊಳ್ಳಿ (19) ಹಾಗೂ ಆತನನ್ನು ರಕ್ಷಿಸಲು ಹೋದ ಕರಿಯಪ್ಪ ಬೀರಪ್ಪ ಹೊನ್ನಮೀಸೆ (19) ಶನಿವಾರ ನೀರುಪಾಲಾಗಿದ್ದಾರೆ.

'ವಿಜಯಪುರ ಜಿಲ್ಲೆಯ ಆರು ಕುರಿಗಾಹಿ ಯುವಕರು ಶನಿವಾರ ಮಧ್ಯಾಹ್ನ ಜೆಬಿಸಿ ಕಾಲುವೆಯಲ್ಲಿ ಸ್ನಾನ ಮಾಡಲು ತೆರಳಿದ್ದರು. ಆರೂ ಜನರಿಗೆ ಈಜು ಬಾರದೇ ಇದ್ದುದರಿಂದ ದಡದಲ್ಲೇ ಸ್ನಾನ ಮಾಡಿದ್ದಾರೆ. ಕಾಲಿಗೆ ಹತ್ತಿದ್ದ ಕೊಳೆ ತೊಳೆಯಲು ಪ್ರಧಾನಿ ಎಂಬ ಯುವಕ ಮತ್ತೊಮ್ಮೆ ನೀರಿಗೆ ಇಳಿಯಲು ಹೋದಾಗ ಕಾಲು ಜಾರಿ ಕಾಲುವೆಗೆ ಬಿದ್ದಿದ್ದಾನೆ.

ಆತನನ್ನು ರಕ್ಷಿಸಲು ಹೋದ ಕರಿಯಪ್ಪ ಸಹ ನೀರಿನಲ್ಲಿ ಮುಳುಗಿದ್ದಾನೆ. ಇಬ್ಬರ ಶವಗಳು ನೂರು ಮೀಟರ್ ದೂರದಲ್ಲಿ ಕಾಲುವೆಯಲ್ಲಿ ಸಿಕ್ಕಿವೆ' ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಶಿಕ್ಷಕರಿಗೆ ಕಿರುಕುಳ: ಬಿಇಒ ಅಮಾನತು

ಬೀದರ್: ಶಿಕ್ಷಕರಿಗೆ ಕಿರುಕುಳ ಕೊಟ್ಟು ಕರ್ತವ್ಯಲೋಪ ಎಸಗಿದ ಕಾರಣಕ್ಕೆ ಬೀದರ್ ಕ್ಷೇತ್ರ ಶಿಕ್ಷಣಾಧಿಕಾರಿ ಟಿ.ಆರ್. ದೊಡ್ಡೆ ಅವರನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಮಲ್ಲಿಕಾರ್ಜುನ ರಾಮಚಂದ್ರಪ್ಪ ಶುಕ್ರವಾರ ಅಮಾನತುಗೊಳಿಸಿದ್ದಾರೆ.

ದೊಡ್ಡೆ ಅವರ ಸ್ಥಾನಕ್ಕೆ ಕಲಬುರಗಿ ಜಿಲ್ಲೆಯ ಕಮಲಾಪುರದ ಡಯಟ್ ಹಿರಿಯ ಉಪನ್ಯಾಸಕರನ್ನು ವರ್ಗಾಯಿಸಿ, ನೇಮಕ ಮಾಡಲಾಗಿದೆ.

ಏಳನೇ ಪರಿಷ್ಕೃತ ವೇತನ ಬಟವಾಡೆಗೆ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲೆ ಶಿಕ್ಷಕರಿಂದ ಹಣ ತೆಗೆದುಕೊಂಡು ಪರಿಷ್ಕೃತ ವೇತನ ಬಿಡುಗಡೆಗೊಳಿಸಿದ್ದಾರೆ. ಕಾಲಮಿತಿ ವೇತನ ಬಡ್ತಿ ಹಾಗೂ ವಾರ್ಷಿಕ ವೇತನ ಬಡ್ತಿ ಮಂಜೂರಿಗೆ ಶಿಕ್ಷಕರಿಂದ ಹಣ ಪಡೆದಿದ್ದಾರೆ. ದೈಹಿಕ ಸದೃಢ ಪ್ರಮಾಣ ಪತ್ರ ಇಲ್ಲದೇ ರಜೆ ಮತ್ತು ವೇತನ ಬಿಡುಗಡೆ ಮಾಡಿರುವುದು, ಶಿಕ್ಷಕರು ಸಮಸ್ಯೆ ಹೇಳಿಕೊಂಡು ಹೋದರೆ ಅವರನ್ನು ಅವಾಚ್ಯ ಪದಗಳಿಂದ ನಿಂದಿಸಿ, ಕಿರುಕುಳ ನೀಡಿದ ಆರೋಪಗಳ ಕಾರಣಕ್ಕೆ ಅಮಾನತು ಮಾಡಲಾಗಿದೆ.

22 ಅಥವಾ 23ಕ್ಕೆ ಸಿಇಟಿ ಫಲಿತಾಂಶ ಪ್ರಕಟ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಿದ್ದ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ) ಫಲಿತಾಂಶ ಮೇ 22 ಅಥವಾ 23ರಂದು ಪ್ರಕಟವಾಗಲಿದೆ.

ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಏ.16ರಂದು ಭೌತ ವಿಜ್ಞಾನ ಮತ್ತು ರಸಾಯನ ವಿಜ್ಞಾನ, ಏ.17ರಂದು ಗಣಿತ ಮತ್ತು ಜೀವ ವಿಜ್ಞಾನ ವಿಷಯಗಳ ಪರೀಕ್ಷೆಗಳನ್ನು 775 ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲಾಗಿತ್ತು.

ದ್ವಿತೀಯ ಪಿಯು ಪರೀಕ್ಷೆ–1 ಮತ್ತು ಪರೀಕ್ಷೆ–2, ಸಿಬಿಎಸ್‌ಇ, ಐಸಿಎಸ್‌ಇ ಫಲಿತಾಂಶ ಪ್ರಕಟವಾಗಿದ್ದು, ಅಭ್ಯರ್ಥಿಗಳು ಪಡೆದ ಅಂಕಗಳ ಕೂಡುವಿಕೆ ಕಾರ್ಯವನ್ನು ಕೆಇಎ ಪೂರ್ಣಗೊಳಿಸಿದೆ.

ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಹೊರನಾಡು ಮತ್ತು ಗಡಿನಾಡು ಕನ್ನಡಿಗ ಅಭ್ಯರ್ಥಿಗಳಿಗೆ ಏ. 15ರಂದು ಕನ್ನಡ ಭಾಷಾ ಪರೀಕ್ಷೆ ನಡೆಸಲಾಗಿತ್ತು. ಅವರಲ್ಲಿ ಹೆಚ್ಚಿನವರು ಕೇರಳದ ವಿದ್ಯಾರ್ಥಿಗಳು. ಈ ವಿದ್ಯಾರ್ಥಿಗಳ ಪಿಯು ಫಲಿತಾಂಶವನ್ನು ಕೇರಳ ಪದವಿಪೂರ್ವ ಶಿಕ್ಷಣ ಇಲಾಖೆ ಇದೇ ಮೇ 21ರಂದು ಪ್ರಕಟಿಸಲಿದೆ. ಫಲಿತಾಂಶ ಪ್ರಕಟವಾದ ಒಂದು ಅಥವಾ ಎರಡು ದಿನಗಳಲ್ಲಿ ಸಿಇಟಿ ರ್‍ಯಾಂಕಿಂಗ್ ಬಿಡುಗಡೆ ಮಾಡಲು ಕೆಇಎ ನಿರ್ಧರಿಸಿದೆ.

ಎಂಬಿಎ, ಎಂಸಿಎ: ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂ.ಬಿ.ಎ, ಎಂ.ಸಿ.ಎ ಕೋರ್ಸ್‌ಗಳ ಪ್ರವೇಶಕ್ಕೆ ಜೂನ್ 22 ರಂದು ನಡೆಯುವ ಪಿಜಿ–ಸಿಇಟಿಗೆ ಅರ್ಜಿ ಸಲ್ಲಿಸುವ ಅವಧಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ವಿಸ್ತರಿಸಿದೆ.

ಅಭ್ಯರ್ಥಿಗಳು ಮೇ 19ರವರೆಗೆ ಅರ್ಜಿ ಸಲ್ಲಿಸಿ, ಶುಲ್ಕ ಪಾವತಿಸಬಹುದು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ಅವಧಿ ವಿಸ್ತರಣೆ ಎಂ.ಬಿ.ಎ, ಎಂ.ಸಿ.ಎಗೆ ಮಾತ್ರ ಅನ್ವಯವಾಗುತ್ತದೆ. ಎಂ.ಟೆಕ್, ಎಂ.ಇ ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸಲು ಕೊನೆ ದಿನಾಂಕ ಮುಗಿದಿದ್ದು, ಕಂಪ್ಯೂಟರ್ ಸೈನ್ಸ್ ಹೊರತುಪಡಿಸಿ ಉಳಿದ ವಿಷಯಗಳಿಗೆ ಮೇ 31ರಂದು ಲಿಖಿತ ಪರೀಕ್ಷೆ ನಡೆಯಲಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಎಂ.ಇ ಮತ್ತು ಎಂ.ಟೆಕ್‌ನ ಕಂಪ್ಯೂಟರ್ ಸೈನ್ಸ್ ಕೋರ್ಸ್ ಪ್ರವೇಶಕ್ಕೆ ಮಾತ್ರ ಜೂನ್ 2ರಂದು ಈ ಬಾರಿ ಕಂಪ್ಯೂಟರ್ ಆಧಾರಿತ ಪರೀಕ್ಷೆ (ಸಿಬಿಟಿ) ನಡೆಸಲಾಗುವುದು.

ನಿಧನ ವಾರ್ತೆ

ವಿರೂಪಾಕ್ಷಪ್ಪ

ಹೊಸಪೇಟೆ(ವಿಜಯನಗರ): ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಸುಡುಗಾಡು ಸಿದ್ಧರ ಕಲಾವಿದ ವಿರೂಪಾಕ್ಷಪ್ಪ (76) ಶುಕ್ರವಾರ ರಾತ್ರಿ ಇಲ್ಲಿನ ಸುಡುಗಾಡು ಸಿದ್ಧರ ಆಶ್ರಯ ಕಾಲೊನಿಯಲ್ಲಿ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು, ಪುತ್ರಿ ಇದ್ದಾರೆ.



ವಿರೂಪಾಕ್ಷಪ್ಪ ಅವರು ಮೈಸೂರು ದಸರಾ, ಹಂಪಿ ಉತ್ಸವ, ಹಲವಾರು ಜಾನಪದ ಉತ್ಸವಗಳಲ್ಲಿ ಅಲ್ಲದೇ ಆಂಧ್ರ ಪ್ರದೇಶ, ತಮಿಳುನಾಡು, ಮಹಾರಾಷ್ಟ್ರದಲ್ಲಿ ಕಲೆ ಪ್ರದರ್ಶಿಸಿದ್ದರು.

ಪಪ್ಪಾಯ ಬೆಲೆ ಕುಸಿತ

• ವಾಗೀಶ್ ಎ. ಕುರುಗೋಡು

ಕುರುಗೋಡು (ಬಳ್ಳಾರಿ ಜಿಲ್ಲೆ): ಮಾರುಕಟ್ಟೆಯಲ್ಲಿ ಪಪ್ಪಾಯ ಹಣ್ಣಿನ ಬೆಲೆಯು ಕುಸಿದಿದ್ದು, ರೈತರು ಕಂಗಾಲಾಗಿದ್ದಾರೆ.

ತಾಲ್ಲೂಕಿನಲ್ಲಿ 25 ಹೆಕ್ಟೇರ್ ಪ್ರದೇಶದಲ್ಲಿ ರೈತರು ಪಪ್ಪಾಯ ಬೆಳೆದಿದ್ದಾರೆ. ಈ ಬಾರಿ ಉತ್ತಮ ಇಳುವರಿ ಬಂದಿದ್ದು, ಬೆಳೆಗಾರರು ಹೆಚ್ಚಿನ ಲಾಭದ ನಿರೀಕ್ಷೆಯಲ್ಲಿದ್ದರು. ಆದರೆ, ಬೆಲೆ ಕುಸಿತದಿಂದ ಕೃಷಿ ವೆಚ್ಚವೂ ಕೈಗೆ ಸಿಗದಂತಾಗಿದೆ. ಖರೀದಿಗೆ ವ್ಯಾಪಾರಿಗಳು ಸುಳಿಯದ ಕಾರಣ ಗಿಡಗಳಲ್ಲೇ ಹಣ್ಣುಗಳು ಕೊಳೆಯುತ್ತಿವೆ.



ಗಿಡದಲ್ಲಿಯೇ ಕೊಳೆಯುತ್ತಿರುವ ಪಪ್ಪಾಯ

ಜನವರಿಯಿಂದ ಮಾರ್ಚ್‌ವರೆಗೆ ಪಪ್ಪಾಯ ಕೆ.ಜಿಗೆ ₹35ರಿಂದ ₹40 ದರ ಇತ್ತು. ಆದರೆ, ಏಪ್ರಿಲ್ ಆರಂಭದಿಂದ ಹಣ್ಣಿನ ಬೆಲೆ ಕೆ.ಜಿಗೆ ₹2ರಿಂದ ₹2.50ಕ್ಕೆ ಕುಸಿದಿದೆ. ತೋಟದಲ್ಲಿ ನಿರೀಕ್ಷೆಗಿಂತ ಹೆಚ್ಚು ಪಪ್ಪಾಯ ಫಸಲು ಬಂದರೂ ಪ್ರಯೋಜನವಿಲ್ಲದಂತಾಗಿದೆ ಎಂಬುದು ಬೆಳೆಗಾರರ ಅಳಲು.

‘ಪರಿಸ್ಥಿತಿ ಹೀಗೆಯೇ ಮುಂದುವರಿದರೆ ರೈತರು ಇನ್ನಷ್ಟು ಸಂಕಷ್ಟಕ್ಕೆ ಸಿಲುಕುತ್ತಾರೆ. ಕಾರ್ಮಿಕರಿಗೆ ಕೂಲಿ ನೀಡಲು ಕಷ್ಟವಾಗಲಿದೆ. ಹಣ್ಣು ಕೊಯ್ಲು ಮಾಡುವುದಕ್ಕಿಂತ ಗಿಡದಲ್ಲಿ ಬಿಡುವುದು ಲೇಸು ಎಂಬ ಮನಸ್ಥಿತಿಗೆ ಬಂದಿರುವೆ. ಕಳೆದ ಮೂರು ವರ್ಷಗಳಿಂದಲೂ ಒಂದಿಲ್ಲೊಂದು ಸಮಸ್ಯೆಯನ್ನು ಬೆಳೆಗಾರರು ಎದುರಿಸುವಂತಾಗಿದೆ’ ಎಂದು ಪಪ್ಪಾಯ ಬೆಳೆಗಾರ ಕುರುಗೋಡಿನ ಎನ್. ರಾಜಾ ತಿಳಿಸಿದರು.

ಚೆನ್ನೈ, ಪುಣೆ, ದೆಹಲಿ ಮತ್ತು ಬೆಂಗಳೂರಿಗೆ ಬೇರೆಡೆಯಿಂದ ಹೆಚ್ಚಿನ ಪ್ರಮಾಣದಲ್ಲಿ ಹಣ್ಣು ಸರಬರಾಜು ಆಗುತ್ತಿದೆ. ಇದರಿಂದ ಬೇಡಿಕೆ ಕಡಿಮೆಯಾಗಿದ್ದು, ಬೆಲೆ ಕುಸಿದಿದೆ ಎಂದು ವ್ಯಾಪಾರಿಗಳು ಹೇಳುತ್ತಾರೆ.

ಅಧಿಕ ತಾಪಮಾನವಿದೆ. ಹೆಚ್ಚು ಪ್ರಮಾಣದ ಹಣ್ಣು ಏಕಕಾಲಕ್ಕೆ ಮಾರುಕಟ್ಟೆಗೆ ಬಂದಿದೆ. ಮಾವಿನಹಣ್ಣಿನ ಸುಗ್ಗಿಯೂ ಇದೆ. ಹೀಗಾಗಿ ಪಪ್ಪಾಯ ಬೆಲೆ ಕುಸಿದಿದೆ
ಸಂತೋಷ್ ಸಪ್ಪಂಡಿ,
ಉಪ ನಿರ್ದೇಶಕ, ತೋಟಗಾರಿಕೆ ಇಲಾಖೆ

ಕಳೆದ ವರ್ಷ ಇಳುವರಿ ಕಡಿಮೆ ಇದ್ದರೂ ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಸಿಕ್ಕಿತ್ತು. ಈ ಬಾರಿ ಬೆಲೆ ಕುಸಿದಿದೆ. ವ್ಯಾಪಾರಿಗಳು ಖರೀದಿಗೆ ಬರುತ್ತಿಲ್ಲ
ರಾಜಾಸಾಬ್,
ಪಪ್ಪಾಯ ಬೆಳೆಗಾರ, ಎಚ್. ವೀರಾಪುರ ಗ್ರಾಮ

ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ ಪುಷ್ಪ ಕೃಷಿ; ಹೊರ ರಾಜ್ಯಗಳಿಗೂ ರವಾನೆ

ಚಿಕ್ಕಬಳ್ಳಾಪುರ: ಹೆಚ್ಚುತ್ತಿದೆ ಹೂವಿನ ಘಮ

ಜಿಲ್ಲೆಯಲ್ಲಿ ಪ್ರಮುಖ ಹೂ ಬೆಳೆಯ ವಿಸ್ತೀರ್ಣ

ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)	ಸೇವಂತಿಗೆ	ಗುಲಾಬಿ	ಸುಗಂಧರಾಜ	ಚೆಂಡು ಹೂ	ಗ್ಲಾಡಿಯೊಲಸ್
	3,900	1,642.29	445.18	1506.72	234.52

• ಡಿ.ಎಂ.ಕುರ್ಕೆ ಪ್ರಶಾಂತ್

ಚಿಕ್ಕಬಳ್ಳಾಪುರ: ಜಿಲ್ಲೆಯಲ್ಲಿ ವರ್ಷದಿಂದ ವರ್ಷಕ್ಕೆ ಹೂ ಬೇಸಾಯ ಗಣನೀಯ ಪ್ರಮಾಣದಲ್ಲಿ ಹೆಚ್ಚುತ್ತಿದೆ. ಹೂ ಬೆಳೆಯುವ ಪ್ರದೇಶ ಹೆಚ್ಚಿದಂತೆ ಉತ್ಪಾದನೆಯೂ ಏರಿಕೆಯಾಗಿದೆ.

ರಾಜ್ಯದಲ್ಲಿ ಅತಿ ಹೆಚ್ಚು ಹೂ ಬೇಸಾಯ ನಡೆಯುತ್ತಿರುವ ಜಿಲ್ಲೆಗಳಲ್ಲಿ ಚಿಕ್ಕಬಳ್ಳಾಪುರ ಪ್ರಮುಖವಾಗಿದೆ. ಇಲ್ಲಿ ಬೆಳೆಯುವ ಹೂವು ರಾಜ್ಯದ ವಿವಿಧ ಭಾಗಗಳಿಗೆ ರವಾನೆ ಆಗುತ್ತಿದೆ. ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರ, ಕೇರಳ, ನವದೆಹಲಿಗೆ ಪೂರೈಕೆ ಆಗುತ್ತಿದೆ. ಗ್ಲಾಡಿಯೊಲಸ್ ಹೂವಿಗೆ ನವದೆಹಲಿ ಮಾರುಕಟ್ಟೆ ಪ್ರಮುಖವಾಗಿದೆ.

ಚಿಕ್ಕಬಳ್ಳಾಪುರ, ಮಂಚೇನಹಳ್ಳಿ, ಗುಡಿಬಂಡೆ ತಾಲ್ಲೂಕುಗಳಲ್ಲಿ ಪುಷ್ಪ ಕೃಷಿ ಪ್ರಧಾನವಾಗಿದ್ದರೆ ಶಿಡ್ಲಘಟ್ಟ, ಚಿಂತಾಮಣಿ, ಬಾಗೇಪಲ್ಲಿ ಮತ್ತು ಗೌರಿಬಿದನೂರು ತಾಲ್ಲೂಕಿನ ರೈತರ ಆರ್ಥಿಕ ಬದುಕಿಗೆ ಹೂ ಬೇಸಾಯ ಬಲ ನೀಡುತ್ತಿದೆ.




ಚಿಕ್ಕಬಳ್ಳಾಪುರ ತಾಲ್ಲೂಕಿನ ಮನ್ನಾರಪುರ ಗ್ರಾಮದ ಹೊರವಲಯದಲ್ಲಿ ಹೂ ಬಿಡಿಸುತ್ತಿರುವ ಮಹಿಳೆಯರು (ಸಂಗ್ರಹ ಚಿತ್ರ)

2014–15ನೇ ಸಾಲಿನಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 1,936 ಹೆಕ್ಟೇರ್‌ನಲ್ಲಿ ಹೂ ಬೇಸಾಯ ನಡೆಯುತ್ತಿತ್ತು. 2023–24ನೇ ಸಾಲಿಗೆ 8 ಸಾವಿರ ಹೆಕ್ಟೇರ್‌ನಲ್ಲಿ ಪುಷ್ಪ ಕೃಷಿ ನಡೆಯುತ್ತಿದೆ. ಈ ಅಂಕಿ ಅಂಶಗಳೇ ಜಿಲ್ಲೆಯು ಹೂ ಬೇಸಾಯಕ್ಕೆ ಹೇಗೆ ಒಡ್ಡಿಕೊಂಡಿದೆ ಎನ್ನುವುದನ್ನು ಸಾರುತ್ತಿದೆ.

ಕನಕಾಂಬರ, ಸೇವಂತಿಗೆ, ಸುಗಂಧರಾಜ, ಚೆಂಡು, ಗ್ಲಾಡಿಯೊಲಸ್, ಗುಲಾಬಿಯನ್ನು ಪ್ರಮುಖವಾಗಿ ಬೆಳೆಯಲಾಗುತ್ತಿದೆ. ಇವುಗಳ ಜೊತೆಗೆ ಚೈನಾ ಆಸ್ಕರ್, ಮಲ್ಲಿಗೆ, ಬರ್ಡ್ ಆಫ್ ಪ್ಯಾರಡೇಜ್, ಜರ್ಬೆರಾ ಮತ್ತಿತರ ಅಲಂಕಾರ ಹೂಗಳ ಬೇಸಾಯ ಸಹ ನಡೆದಿದೆ.

ಬರದ ನಾಡಿನ ಹಣೆಪಟ್ಟಿಯ ಜಿಲ್ಲೆಯಲ್ಲಿ ಹೂ ಬೇಸಾಯ ರೈತರ ಬದುಕಿಗೆ ಆಸರೆಯಾಗಿದೆ. ಕನಿಷ್ಠ ನಾಲ್ಕೈದು ಗುಂಟೆ ಜಮೀನಿನಿಂದ ಹಿಡಿದು ಎಕರೆಗಳ ಲೆಕ್ಕದಲ್ಲಿ ರೈತರು ಹೂ ಬೇಸಾಯದಲ್ಲಿ ತೊಡಗಿದ್ದಾರೆ.

‘ಚಿಕ್ಕಬಳ್ಳಾಪುರ ಹೂ ಮಾರುಕಟ್ಟೆಗೆ ನಿತ್ಯ 40 ಟನ್‌ಗೂ ಅಧಿಕ ಹೂ ಆವಕವಾಗುತ್ತದೆ. ಇದಕ್ಕಿಂತಲೂ ದುಪ್ಪಟ್ಟು ಪ್ರಮಾಣದ ಹೊರ ರಾಜ್ಯಗಳಿಗೆ ನಿತ್ಯ ರವಾನೆ ಆಗುತ್ತದೆ’ ಎನ್ನುತ್ತಾರೆ ಚಿಕ್ಕಬಳ್ಳಾಪುರ ಹೂ ಮಾರುಕಟ್ಟೆ ವ್ಯಾಪಾರಿಗಳ ಸಂಘದ ಅಧ್ಯಕ್ಷ ರವೀಂದ್ರ.



‘ಉತ್ತಮ ಮಾರುಕಟ್ಟೆಯೇ ಕಾರಣ’

ಸ್ಥಳೀಯ ಹವಾಗುಣಕ್ಕೆ ಹೊಂದುವ ಬೇರೆ ಬೇರೆ ತಳಿಯ ಹೂವುಗಳನ್ನು ಜಿಲ್ಲೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಳೆಯಲಾಗುತ್ತಿದೆ. ಜಿಲ್ಲೆಯ ರೈತರಿಗೆ ಮಾರುಕಟ್ಟೆ ಉತ್ತಮವಾಗಿರುವುದೇ ಹೂ ಬೇಸಾಯಕ್ಕೆ ಪ್ರಮುಖ ಕಾರಣ ಎನ್ನುತ್ತಾರೆ ತೋಟಗಾರಿಕೆ ಇಲಾಖೆ ಉಪನಿರ್ದೇಶಕಿ ಗಾಯತ್ರಿ.

ಬೆಂಗಳೂರು ಮಹಾನಗರ, ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ಅಂತರ ರಾಷ್ಟ್ರೀಯ ಪುಷ್ಪ ಹರಾಜು ಕೇಂದ್ರ ಸಮೀಪವಿದೆ. ಹೈದರಾಬಾದ್‌ಗೆ ಹೂ ಕಳುಹಿಸಲು ಸೂಕ್ತ ಸಾರಿಗೆ ವ್ಯವಸ್ಥೆ ಇದೆ ಎಂದರು. ಕಡಿಮೆ ಅವಧಿಯಲ್ಲಿ ಮತ್ತು ಐದತ್ತು ಗುಂಟೆ ಜಾಗದಲ್ಲಿ ಹೂವಿನ ಬೇಸಾಯ ನಡೆಸಿ ಬದುಕು ಕಟ್ಟಿಕೊಳ್ಳುತ್ತಿರುವ ಕುಟುಂಬಗಳು ಇವೆ ಎಂದರು.

ಡಾಯಿಷ್, ಯೆಸ್ ಬ್ಯಾಂಕ್‌ಗೆ ದಂಡ

ಮುಂಬೈ (ಪಿಟಿಐ): ನಿಯಮಗಳನ್ನು ಪಾಲಿಸದ ಕಾರಣ ಡಾಯಿಷ್ ಬ್ಯಾಂಕ್ ಎ.ಜಿ ಮತ್ತು ಯೆಸ್ ಬ್ಯಾಂಕ್‌ಗೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ದಂಡವಿಧಿಸಿದೆ. ಡಾಯಿಷ್ ಬ್ಯಾಂಕ್‌ಗೆ ₹50 ಲಕ್ಷ ದಂಡ ವಿಧಿಸಿದೆ. ಯೆಸ್ ಬ್ಯಾಂಕ್‌ಗೆ ₹29 ಲಕ್ಷ ದಂಡ ವಿಧಿಸಿದೆ. ಈ ಬ್ಯಾಂಕ್‌ಗಳು ಕೆಲವು ನಿಯಮಗಳನ್ನು ಪಾಲಿಸಿಲ್ಲ. ಇದರ ಆಧಾರದ ಮೇಲೆ ದಂಡ ವಿಧಿಸಲಾಗಿದೆ ಎಂದು ತಿಳಿಸಿದೆ.

ಖಾದ್ಯ ತೈಲ ಮುಂಬೈ (10 ಕೆಜಿಗೆ)
(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1380	(1375)
ಸೋಯಾ (ರಿಫೈನ್ಡ್)	₹1265	(1275)
ಸೂರ್ಯಕಾಂತಿ (ರಿಫೈನ್ಡ್)	₹1380	(1385)
ಪಾಮೋಲಿನ್	₹1230	(1240)

ಸಂಕ್ಷಿಪ್ತ ಸುದ್ದಿ

ವಿದೇಶಿ ವಿನಿಮಯ ಸಂಗ್ರಹ ಹೆಚ್ಚಳ

ಮುಂಬೈ (ಪಿಟಿಐ): ಮೇ 9ಕ್ಕೆ ಕೊನೆಗೊಂಡ ವಾರದಲ್ಲಿ ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹಕ್ಕೆ ₹38,948 ಕೋಟಿ ಸೇರ್ಪಡೆಯಾಗಿದೆ. ಒಟ್ಟು ಮೀಸಲು ಸಂಗ್ರಹವು ₹59.11 ಲಕ್ಷ ಕೋಟಿಯಾಗಿದೆ ಎಂದು ಆರ್‌ಬಿಐ ತಿಳಿಸಿದೆ.

2024ರ ಸೆಪ್ಟೆಂಬರ್‌ನಲ್ಲಿ ₹60.33 ಲಕ್ಷ ಕೋಟಿಯಾಗಿತ್ತು. ಇದು ಇದುವರೆಗಿನ ಸಾರ್ವಕಾಲಿಕ ಗರಿಷ್ಠವಾಗಿದೆ.

ವಿದೇಶಿ ಕರೆನ್ಸಿ ಸಂಗ್ರಹ ಮೌಲ್ಯವು ₹1,677 ಕೋಟಿಯಷ್ಟು ಏರಿಕೆಯಾಗಿದ್ದು, ₹49.76 ಲಕ್ಷ ಕೋಟಿಯಾಗಿದೆ ಎಂದು ತಿಳಿಸಿದೆ.

ಚಿನ್ನದ ಮೀಸಲು ಸಂಗ್ರಹವು ₹7.39 ಲಕ್ಷ ಕೋಟಿಯಾಗಿದೆ. ಸ್ಪೆಷಲ್ ಡ್ರಾಯಿಂಗ್ ರೈಟ್ಸ್ (ಎಸ್‌ಡಿಆರ್) ₹1.58 ಲಕ್ಷ ಕೋಟಿಯಾಗಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿ (ಐಎಂಎಫ್) ಭಾರತದ ಮೀಸಲು ಸಂಗ್ರಹ ₹1,147 ಕೋಟಿ ಕಡಿಮೆಯಾಗಿದ್ದು, ₹37,441 ಕೋಟಿಯಾಗಿದೆ ಎಂದು ತಿಳಿಸಿದೆ.

ಜೆನ್ಸೋಲ್ ಸಿಎಫ್‌ಒ ರಾಜೀನಾಮೆ

ನವದೆಹಲಿ (ಪಿಟಿಐ): ಜೆನ್ಸೋಲ್ ಎಂಜಿನಿಯರಿಂಗ್ ಕಂಪನಿಯ ಮುಖ್ಯ ಹಣಕಾಸು ಅಧಿಕಾರಿ (ಸಿಎಫ್‌ಒ) ಜಬೀರ್‌ಮಹೇಂದಿ ಮೊಹಮ್ಮದ್‌ರಜಾ ಅಗಾ ಅವರು ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿದ್ದಾರೆ.

ಕಂಪನಿಯು ಪ್ರಸ್ತುತ ಸವಾಲುಗಳನ್ನು ಎದುರಿಸುತ್ತಿದ್ದು, ತನಿಖಾ ಸಂಸ್ಥೆಗಳಿಂದ ವಿಚಾರಣೆ ನಡೆಯುತ್ತಿದೆ. ಅಲ್ಲದೆ, ಕಂಪನಿಯ ಪ್ರವರ್ತಕರು ಸಹ ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿದ್ದಾರೆ. ಪ್ರಮುಖ ಮಾಹಿತಿ ಮತ್ತು ಒಗ್ಗಟ್ಟಿನ ಕೊರತೆಯಿಂದಾಗಿ ವಿಚಾರಣೆಗಳಿಗೆ ಪರಿಣಾಮಕಾರಿಯಾಗಿ ಪ್ರತಿಕ್ರಿಯಿಸುವ ಸಾಮರ್ಥ್ಯಕ್ಕೆ ಅಡ್ಡಿಯಾಗುತ್ತಿದೆ. ಇದು ನನ್ನ ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಹೀಗಾಗಿ ರಾಜೀನಾಮೆ ನೀಡುತ್ತಿದ್ದೇನೆ ಎಂದು ಷೇರುಪೇಟೆಗೆ ಸಲ್ಲಿಸಿರುವ ಪತ್ರದಲ್ಲಿ ತಿಳಿಸಿದ್ದಾರೆ.

ಕಂಪನಿಯ ಪ್ರವರ್ತಕರಾದ ಅನ್ಮೋಲ್ ಸಿಂಗ್ ಜಗ್ಗಿ ಮತ್ತು ಪುನೀತ್ ಸಿಂಗ್ ಜಗ್ಗಿ ಅವರು ಕಂಪನಿಯ ಹಣವನ್ನು ವೈಯಕ್ತಿಕ ಕೆಲಸಕ್ಕೆ ಬಳಕೆ ಮಾಡಿಕೊಂಡಿದ್ದು, ಆರ್ಥಿಕ ಅವ್ಯವಹಾರ ನಡೆಸಿದ್ದಾರೆ ಎಂದು ಇವರನ್ನು ಏಪ್ರಿಲ್‌ನಲ್ಲಿ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ), ಷೇರುಪೇಟೆ ವಹಿವಾಟಿನಿಂದ ನಿಷೇಧಿಸಿತ್ತು. ಇತ್ತೀಚೆಗೆ ಸೆಬಿ ಮಧ್ಯಂತರ ಆದೇಶದಂತೆ ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿದ್ದರು.

ಅನ್ಮೋಲ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾಗಿದ್ದರು. ಪುನೀತ್ ಪೂರ್ಣಕಾಲಿಕ ನಿರ್ದೇಶಕರಾಗಿದ್ದರು.

‘ಶೇ 100ರಷ್ಟು ಸುಂಕ ಕೈಬಿಡಲು ಭಾರತ ಸಿದ್ಧ’

ನ್ಯೂಯಾರ್ಕ್ (ಪಿಟಿಐ): ‘ಅಮೆರಿಕದ ವಸ್ತುಗಳ ಮೇಲೆ ಶೇ 100ರಷ್ಟು ಸುಂಕವನ್ನು ಕೈಬಿಡುವುದಕ್ಕೆ ಭಾರತ ಸಿದ್ಧವಿದೆ’ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪುನರುಚ್ಚರಿಸಿದ್ದಾರೆ.



ಡೊನಾಲ್ಡ್ ಟ್ರಂಪ್

‘ಫಾಕ್ಸ್ ನ್ಯೂಸ್’ ಸುದ್ದಿ ವಾಹಿನಿಗೆ ನೀಡಿದ ಸಂದರ್ಶನದಲ್ಲಿ ಟ್ರಂಪ್ ಅವರು ಈ ಹೇಳಿಕೆ ನೀಡಿದ್ದಾರೆ. ‘ಭಾರತವು ಅತ್ಯಂತ ಅಧಿಕ ಸುಂಕ ವಿಧಿಸುವ ದೇಶ. ಈ ದೇಶದಲ್ಲಿ ವ್ಯಾಪಾರ ಮಾಡುವುದು ಕಷ್ಟಸಾಧ್ಯ. ಆದರೆ ನಿಮಗೆ ಗೊತ್ತಾ, ಭಾರತವು ನಮ್ಮ ವಸ್ತುಗಳ ಮೇಲೆ ಶೇ 100ರಷ್ಟು ಸುಂಕವನ್ನು ಕೈಬಿಡಲು ಸಿದ್ಧವಿದೆ’ ಎಂದಿದ್ದಾರೆ.

ಭಾರತದೊಂದಿಗೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ‘ಸದ್ಯದಲ್ಲಿಯೇ ಭಾರತ ಮತ್ತು ಅಮೆರಿಕ ವ್ಯಾಪಾರ ಒಪ್ಪಂದ ಮಾಡಿಕೊಳ್ಳಲಿದೆ. ಆದರೆ, ಈ ಕೂಡಲೇ ಒಪ್ಪಂದ ನಡೆಯಬೇಕು ಎಂಬ ಅವಸರದಲ್ಲಿ ನಾನಿಲ್ಲ’ ಎಂದು ಹೇಳಿದ್ದಾರೆ.

ವ್ಯಾಪಾರ ಒಪ್ಪಂದ: ಚರ್ಚೆ

ವ್ಯಾಪಾರ ಒಪ್ಪಂದದ ಕುರಿತು ಭಾರತ ಮತ್ತು ಅಮೆರಿಕ ಚರ್ಚೆ ಆರಂಭಿಸಿವೆ. ಈ ಬಗ್ಗೆ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಗುರುವಾರವೇ ಮಾಹಿತಿ ನೀಡಿದ್ದಾರೆ. ಕೇಂದ್ರ ವಾಣಿಜ್ಯ ಹಾಗೂ ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಅವರು ಸದ್ಯ ಅಮೆರಿಕದಲ್ಲಿದ್ದಾರೆ. ಅಮೆರಿಕದ ವಾಣಿಜ್ಯ ಕಾರ್ಯದರ್ಶಿ ಹಾವರ್ಡ್ ಲುಟ್‌ನಿಕ್ ಮತ್ತು ಅಮೆರಿಕ ವ್ಯಾಪಾರ ಪ್ರತಿನಿಧಿ ಜೇಮಿಸನ್ ಗೀರ್ ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ.

ಸುಂಕ ವಿನಾಯಿತಿಗೆ ಮನವಿ: ಯಾವ ವಸ್ತುಗಳು?

ಭಾರತದ ಮನವಿ: ಜವಳಿ, ಹರಳು ಮತ್ತು ಆಭರಣಗಳು, ಚರ್ಮದ ವಸ್ತುಗಳು, ಪ್ಲಾಸ್ಟಿಕ್, ರಾಸಾಯನಿಕಗಳು, ಸಿದ್ಧ ಉಡುಪು, ಎಣ್ಣೆ ಕಾಳುಗಳು, ದ್ರಾಕ್ಷಿ ಮತ್ತು ಬಾಳೆಹಣ್ಣು

ಅಮೆರಿಕದ ಮನವಿ: ಕೆಲವು ಕೈಗಾರಿಕಾ ವಸ್ತುಗಳು, ಆಟೊಮೊಬೈಲ್ಸ್ (ಪ್ರಮುಖವಾಗಿ ವಿದ್ಯುತ್‌ಚಾಲಿತ ವಾಹನ), ವೈನ್ಸ್, ಪೆಟ್ರೋಲಿಯಂ ಉತ್ಪನ್ನ, ಹಾಲು, ಸೇಬು ಮತ್ತು ಕೆಲವು ಒಣಹಣ್ಣುಗಳು

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	100ಕ್ಕೆ	₹585
	12 ಕ್ಕೆ	₹77
ಮೈಸೂರು	100ಕ್ಕೆ	₹598

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹275-540
ದ್ವಿತಳಿ (ಬಿ.ವಿ)	₹300-679

ಎನ್.ಆರ್.ಪುರ ರಬ್ಬರ್


ಆರ್‌ಎಸ್‌ಎಸ್-4	₹192.50
ಆರ್‌ಎಸ್‌ಎಸ್-5	₹187.50
ಗುಡ್ ಲಾಟ್	₹177.50

(ಪ್ರತಿ ಕೆ.ಜಿಗೆ)

ಫಾಕ್ಸ್‌ಕಾನ್ ಘಟಕ: ಜೂನ್‌ನಲ್ಲಿ ಕಾರ್ಯಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವನಹಳ್ಳಿ ಬಳಿಯ ಕೈಗಾರಿಕಾ ಪ್ರದೇಶದಲ್ಲಿ ನಿರ್ಮಾಣವಾಗಿರುವ ಫಾಕ್ಸ್‌ಕಾನ್ ಘಟಕ ಉದ್ಘಾಟನೆಗೆ ಸಿದ್ಧವಾಗಿದ್ದು, ಜೂನ್ ತಿಂಗಳ ಮೊದಲ ವಾರ ಐಫೋನ್‌ಗಳ ಪೂರೈಕೆ ಆರಂಭಿಸಲಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ.



ಎಂ.ಬಿ ಪಾಟೀಲ

ಇದು ಕೇವಲ ಉತ್ಪಾದನಾ ಘಟಕವಲ್ಲ, ಒಂದು ಕಾರ್ಯತಂತ್ರದ ಬದಲಾವಣೆಯ ಸಂಕೇತ. ಹೆಚ್ಚುತ್ತಿರುವ ಭೌಗೋಳಿಕ ರಾಜಕೀಯ ಹಾಗೂ ಸುಂಕದ ಒತ್ತಡಗಳ ನಡುವೆಯೂ ಭಾರತವು ಆ್ಯಪಲ್‌ನ ಆದ್ಯತೆಯ ಉತ್ಪಾದನಾ ಕೇಂದ್ರವಾಗಿ ಬದಲಾಗುತ್ತಿದೆ. ಈ ಬೆಳವಣಿಗೆ ಜಾಗತಿಕ ಉತ್ಪಾದನೆಯಲ್ಲಿ ಕರ್ನಾಟಕದ ಸ್ಥಾನವನ್ನು ಬಲಪಡಿಸುತ್ತದೆ. ಪಾಲುದಾರರ ಹಿತಾಸಕ್ತಿಗೆ ಧಕ್ಕೆಯಾಗದ ರೀತಿಯಲ್ಲಿ ಹೆಚ್ಚಿನ ವಿದೇಶಿ ಹೂಡಿಕೆಗೆ ಬಾಗಿಲು ತೆರೆಯುತ್ತದೆ ಎಂದಿದ್ದಾರೆ.

‘ಜೂನ್ ನಂತರ ಅಮೆರಿಕದಲ್ಲಿ ಮಾರಾಟವಾಗುವ ಹೆಚ್ಚಿನ ಐಫೋನ್‌ಗಳು ಭಾರತದಲ್ಲಿ ತಯಾರಿಸಲ್ಪಡುತ್ತವೆ’ ಎನ್ನುವುದನ್ನು ಆ್ಯಪಲ್ ಸಿಇಒ ಟಿಮ್‌ಕುಕ್ ಅವರು ದೃಢಪಡಿಸಿದ್ದಾರೆ. ಒಬ್ಬ ಕನ್ನಡಿಗನಾಗಿ, ಕನ್ನಡಿಗರಿಗೆ ಇದು ಹೆಮ್ಮೆಯ ಕ್ಷಣ’ ಎಂದು ಸಚಿವ ಪಾಟೀಲ ಹರ್ಷ ವ್ಯಕ್ತಪಡಿಸಿದ್ದಾರೆ.

ಇಸ್ರೇಲ್ ದಾಳಿ: 58 ಮಂದಿ ಸಾವು

ಜೆರುಸಲೇಂ (ರಾಯಿಟರ್ಸ್/ಎಎಫ್‌ಪಿ): ಗಾಜಾ ನಗರದ ಮೇಲೆ ಇಸ್ರೇಲ್‌ನ ವಾಯುಪಡೆ ರಾತ್ರೋರಾತ್ರಿ ನಡೆಸಿದ ವೈಮಾನಿಕ ದಾಳಿಯಲ್ಲಿ 58 ಮಂದಿ ಪ್ಯಾಲೆಸ್ಟೀನಿಯರು ಮೃತಪಟ್ಟಿದ್ದಾರೆ ಎಂದು ಸ್ಥಳೀಯ ಆಡಳಿತಾಧಿಕಾರಿಗಳು ಶನಿವಾರ ಹೇಳಿದ್ದಾರೆ.

ಇಸ್ರೇಲ್ ಹಾಗೂ ಹಮಾಸ್ ನಡುವಿನ ಸಂಘರ್ಷವನ್ನು ಶಮನಗೊಳಿಸಲು ನಡೆಯುತ್ತಿರುವ ಮಾತುಕತೆಯಲ್ಲಿ ಯಾವುದೇ ಪ್ರಗತಿ ಕಾಣದೇ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಪಶ್ಚಿಮ ಏಷ್ಯಾ ಪ್ರವಾಸವನ್ನು ಕೊನೆಗೊಳಿಸಿದ ಬೆನ್ನಲ್ಲೇ ಈ ದಾಳಿ ನಡೆದಿದೆ.

ವೈಮಾನಿಕ ದಾಳಿ ಕುರಿತಂತೆ ಉತ್ತರ ಗಾಜಾದ ಇಂಡೋನೇಷ್ಯನ್ ಆಸ್ಪತ್ರೆಯ ನಿರ್ದೇಶಕ ಮರ್ವಾನ್ ಅಲ್ ಸುಲ್ತಾನ್ ಮಾಹಿತಿ ನೀಡಿದ್ದು, ಮಧ್ಯರಾತ್ರಿಯೇ 58 ಶವಗಳನ್ನು ಆಸ್ಪತ್ರೆಗೆ ತರಲಾಗಿದೆ. ಇನ್ನೂ ಹಲವರು ಅವಶೇಷಗಳ ಅಡಿಯಲ್ಲಿ ಸಿಲುಕಿದ್ದಾರೆ. ಇಲ್ಲಿನ ಪರಿಸ್ಥಿತಿ ಭೀಕರವಾಗಿದೆ ಎಂದು ಹೇಳಿದ್ದಾರೆ.

ಕಾಸಿಯಾ ಅಮೃತ ಮಹೋತ್ಸವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಹೇಳಿಕೆ

ಎಂಎಸ್ಎಂಇಗಳಿಗೆ ಪ್ರತ್ಯೇಕ ಇಲಾಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ (ಎಂಎಸ್ಎಂಇ) ಶೀಘ್ರವೇ ಪ್ರತ್ಯೇಕ ಇಲಾಖೆ ಮಾಡುತ್ತೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ (ಕಾಸಿಯಾ) ಅಮೃತ ಮಹೋತ್ಸವವನ್ನು ಶನಿವಾರ ಉದ್ಘಾಟಿಸಿ ಮಾತನಾಡಿದ ಅವರು, 'ಎಂಎಸ್ಎಂಇ ವಿಭಾಗವು ವಾಣಿಜ್ಯ ಇಲಾಖೆಯ ಜತೆ ಇದೆ. ವಾಣಿಜ್ಯ ಇಲಾಖೆಗೆ, ಇಲಾಖೆಯ ಕಾರ್ಯದರ್ಶಿಗಳಿಗೆ, ಅಧಿಕಾರಿಗಳು ಕೈಗೆ ಸಿಗುವುದಿಲ್ಲ. ಅವರಿಗೆ ಕೆಲಸ ಹೆಚ್ಚು ಇರುವಂತಿದೆ. ಹೀಗಾಗಿ ಎಂಎಸ್ಎಂಇಗಳಿಗೆ ಸಮಯ ನೀಡಲು ಅವರಿಗೆ ಸಾಧ್ಯ ಆಗುತ್ತಿಲ್ಲ. ಈ ಸಮಸ್ಯೆ ತಪ್ಪಿಸಲು ಪ್ರತ್ಯೇಕ ಇಲಾಖೆಯನ್ನೇ ಮಾಡುತ್ತೇನೆ' ಎಂದರು.

'ರಾಜ್ಯದಲ್ಲಿ 20 ಲಕ್ಷಕ್ಕೂ ಹೆಚ್ಚು ಎಂಎಸ್ಎಂಇಗಳು ಇವೆ. ಅವು ಒಟ್ಟು 1.85 ಕೋಟಿ ಉದ್ಯೋಗ ನೀಡಿವೆ. ರಾಜ್ಯದ ಆರ್ಥಿಕತೆಗೆ ಈ ಮಟ್ಟದ ಕೊಡುಗೆ ನೀಡುತ್ತಿರುವ ಈ ವಲಯಕ್ಕೆ ಪ್ರತ್ಯೇಕ ಇಲಾಖೆಯ ಅಗತ್ಯವಿದೆ. ಇಲಾಖೆಗೆ ಪ್ರತ್ಯೇಕ ಸಚಿವ, ಸಚಿವಾಲಯ ಮತ್ತು ಕಾರ್ಯದರ್ಶಿಯನ್ನು ನಿಯೋಜನೆ ಮಾಡುತ್ತೇವೆ' ಎಂದರು.

ಉದ್ಯಮಿಗಳಿಗೆ ತೆರಿಗೆ ಪಾಠ: 'ರಾಜ್ಯದ ಆರ್ಥಿಕತೆಯಲ್ಲಿ ಮತ್ತು ರಾಷ್ಟ್ರನಿರ್ಮಾಣದಲ್ಲಿ ಎಂಎಸ್ಎಂಇಗಳು ಮಹತ್ವದ ಪಾತ್ರವಹಿಸುತ್ತವೆ. ಎಂಎಸ್ಎಂಇ ಉದ್ಯಮಿಗಳಾದ ನೀವು ಎಷ್ಟು ತೆರಿಗೆ ಕಟ್ಟುತ್ತಿದ್ದೀರಿ, ಅದರಲ್ಲಿ ನಿಮಗೆಷ್ಟು ವಾಪಸ್ ಬರುತ್ತಿದೆ ಎಂಬುದು ಗೊತ್ತಿದೆಯೇ' ಎಂದು ಸಿದ್ದರಾಮಯ್ಯ ಅವರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಕಾಸಿಯಾ ಸದಸ್ಯರನ್ನು ಪ್ರಶ್ನಿಸಿದರು.

ಅವರ ಪ್ರಶ್ನೆಗೆ ಯಾವುದೇ ಉತ್ತರ ಬರದಿದ್ದಾಗ, 'ಉದ್ಯಮ ನಡೆಸುವ ನಿಮಗೇ ಇದು ಗೊತ್ತಿರದಿದ್ದರೆ ಹೇಗೆ? ರಾಜ್ಯವು ಜಿಎಸ್‌ಟಿ, ಆದಾಯ ತೆರಿಗೆ, ಪೆಟ್ರೋಲ್–ಡೀಸೆಲ್ ಮೇಲಿನ ಎಕ್ಸೈಸ್ ಸುಂಕ ಎಂದು ವಾರ್ಷಿಕ ₹4.50 ಲಕ್ಷ ಕೋಟಿಯನ್ನು ಕೇಂದ್ರಕ್ಕೆ ನೀಡುತ್ತಿದೆ. ಅದರಲ್ಲಿ ನಮಗೆ ವಾಪಸ್ ಬರುವುದು ₹60,000 ಕೋಟಿ ಮಾತ್ರ. ಉದ್ಯಮಿಗಳಾದ ನೀವು ಇದನ್ನು ತಿಳಿದುಕೊಳ್ಳಬೇಕು' ಎಂದು ಕಿವಿಮಾತು ಹೇಳಿದರು.

'ನಾವು ಇಲ್ಲಿ ದುಡಿದು ಸಂಪಾದಿಸುವ ತೆರಿಗೆ ಹಣದಲ್ಲಿ ಅರ್ಧದಷ್ಟಾದರೂ ವಾಪಸ್ ಬಂದರೆ, ಎಂಎಸ್ಎಂಇಗಳ ಅಭಿವೃದ್ಧಿಗೆ ಹೆಚ್ಚಿನ ಹಣ ಬಳಸಬಹುದು. ಹಣವೇ ಬರದಿದ್ದರೆ ಅಭಿವೃದ್ಧಿ ಹೇಗೆ ಸಾಧ್ಯ. ಈ ಬಗ್ಗೆ ಅವಕಾಶ ಸಿಕ್ಕಾಗಲೆಲ್ಲಾ ಕೇಂದ್ರ ಸರ್ಕಾರವನ್ನು ನೀವು ಪ್ರಶ್ನಿಸಬೇಕು. ನಾವು ಕೇಳಿದರೆ, ಅದಕ್ಕೆ ರಾಜಕೀಯ ಬಣ್ಣ ಕಟ್ಟುತ್ತಾರೆ. ನೀವು ಕೇಳಿದರೆ ಅವರಿಗೆ ಪರಿಸ್ಥಿತಿ ಅರ್ಥವಾಗಬಹುದು' ಎಂದರು.



ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ (ಕಾಸಿಯಾ) ಅಮೃತ ಮಹೋತ್ಸವ ಸಮಾರಂಭದಲ್ಲಿ ಸಿದ್ದರಾಮಯ್ಯ ಅವರಿಗೆ ಕಾಸಿಯಾದ ಅಧ್ಯಕ್ಷ ಎಂ.ಜಿ.ರಾಜಗೋಪಾಲ್ ಮನವಿ ಪತ್ರ ಸಲ್ಲಿಸಿದರು. ಡಿ.ಕೆ.ಶಿವಕುಮಾರ್, ಶರಣಬಸಪ್ಪ ದರ್ಶನಾಪುರ, ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಟಿ. ರಘುಮೂರ್ತಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

'ನಾವೂ ಉದ್ಯಮಿಗಳೇ'

'ಉದ್ಯಮಗಳ ಸ್ಥಾಪನೆಗೆ ಅಗತ್ಯವಿರುವ ಎಲ್ಲ ರೀತಿಯ ನೆರವು, ಸಹಕಾರವನ್ನು ನೀಡಲು ನಮ್ಮ ಸರ್ಕಾರ ಬದ್ಧವಾಗಿದೆ. ನಾವು ಉದ್ಯಮಿಗಳಿಗಾಗಿಯೇ ಇದ್ದೇವೆ. ನೀವು ಸಲ್ಲಿಸಿರುವ ಬೇಡಿಕೆಗಳನ್ನು ಪರಿಶೀಲಿಸುತ್ತೇವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

'ಕೈಗಾರಿಕೆಗಳನ್ನು ಬೆಂಗಳೂರಿನಿಂದಾಚೆಗೆ ಕೊಂಡೊಯ್ಯಬೇಕಿದೆ. ಕಾರ್ಮಿಕರ ಲಭ್ಯತೆ, ವಿದ್ಯುತ್ ಮತ್ತು ನೀರು ಪೂರೈಕೆ, ರಸ್ತೆ ಸಂಪರ್ಕ ಸೇರಿ ಎಲ್ಲದಕ್ಕೂ ಸಂಬಂಧಿಸಿದಂತೆ ನೀವೇ ಕೂತು ಒಂದು ಸೂತ್ರ ಮತ್ತು ಸಾಧ್ಯತೆಗಳನ್ನು ಸಿದ್ದಪಡಿಸಿಕೊಂಡು ಬನ್ನಿ. ಅವುಗಳನ್ನು ಪರಿಶೀಲಿಸಿ, ಪರಸ್ಪರ ಚರ್ಚಿಸಿ ಅಂತಿಮ ರೂಪುರೇಷೆ ಸಿದ್ದಪಡಿಸೋಣ. ಸಿದ್ದರಾಮಯ್ಯ ಅವರ ಸರ್ಕಾರ ನಿಮ್ಮ ಜತೆಗೆ ಇದೆ. ನೀವೂ ನಮ್ಮೊಂದಿಗೆ ನಿಲ್ಲಬೇಕು' ಎಂದು ಹೇಳಿದರು.

'ಸದ್ಯ ನಿರಾಳ; ಎಸೆತ ಸುಧಾರಣೆಯತ್ತ ಚಿತ್ತ'

90 ಮೀ. ಗಡಿ ದಾಟಿದ ಖುಷಿಯಲ್ಲಿ ನೀರಜ್ ಚೋಪ್ರಾ

ದೋಹಾ (ಪಿಟಿಐ): '90 ಮೀಟರ್ ದೂರ ಜಾವೆಲಿನ್ ಎಸೆಯುವ ದೀರ್ಘ ಕಾಲದ ಗುರಿಯನ್ನು ಈಡೇರಿಸಿ ಕೊಂಡಿರುವ ಭಾರತದ ಜಾವೆಲಿನ್ ತಾರೆ ನೀರಜ್ ಚೋಪ್ರಾ ಈಗ ನಿರಾಳರಾಗಿದ್ದಾರೆ. ಮುಂದಿನ ಕೂಟಗಳಲ್ಲಿ ತಮ್ಮ ಎಸೆತಗಳನ್ನು ಇನ್ನಷ್ಟು ಸುಧಾರಿಸುವತ್ತ ಚಿತ್ತ ಹರಿಸಿದ್ದಾರೆ.

ದೋಹಾದಲ್ಲಿ ಶುಕ್ರವಾರ ರಾತ್ರಿ ನಡೆದ ಡೈಮಂಡ್ ಲೀಗ್ ಕೂಟದಲ್ಲಿ ನೀರಜ್ ಜಾವೆಲಿನ್ ಅನ್ನು 90.23 ಮೀಟರ್ ದೂರ ಎಸೆದು, ವೈಯಕ್ತಿಕ ಶ್ರೇಷ್ಠ ಪ್ರದರ್ಶನ ಮೆರೆದಿದ್ದರು. 89.94 ಮೀಟರ್ ಅವರ ಈ ಹಿಂದಿನ ಶ್ರೇಷ್ಠ ಸಾಧನೆಯಾಗಿತ್ತು. ನೀರಜ್ ಬಹಳ ಕಾಲದಿಂದ 90 ಮೀಟರ್ ದೂರ ಈಟಿ ಎಸೆಯಲು ಪ್ರಯತ್ನಿಸುತ್ತಿದ್ದರು. ಆದರೆ, ಯಶಸ್ಸು ಕಂಡಿರಲಿಲ್ಲ. ಆದರೆ, ಸುಹೀಮ್ ಬಿನ್ ಹಮದ್ ಕ್ರೀಡಾಂಗಣದಲ್ಲಿ ಅವರ ಕನಸು ನನಸಾಗಿದೆ.

ಈ ಸಾಧನೆಯ ಹೊರತಾಗಿಯೂ ನೀರಜ್ ಇಲ್ಲಿ ಎರಡನೇ ಸ್ಥಾನ ಪಡೆದರು. ಜರ್ಮನಿಯ ಜೂಲಿಯನ್ ವೆಬರ್ ಅಂತಿಮ ಯತ್ನದಲ್ಲಿ 91.06 ಮೀ. ದೂರ ಎಸೆದು ಅಗ್ರಸ್ಥಾನ ಪಡೆದರು. ಮಾಜಿ ವಿಶ್ವ ಚಾಂಪಿಯನ್, ಗ್ರೆನೆಡಾದ ಆಂಡರ್ಸನ್ ಪೀಟರ್ಸ್ (85.64 ಮೀ.) ಮೂರನೇ ಸ್ಥಾನ ಪಡೆದರು.

'ಕೆಲವು ವರ್ಷಗಳಿಂದ ನನ್ನನ್ನು ಕಾಡುತ್ತಿದ್ದ ತೊಡೆಸಂದಿನ ನೋವು ಶಮನವಾಗಿರುವುದರಿಂದ ಈ ಸಾಧನೆ ಸಾಧ್ಯವಾಗಿದೆ. ವರ್ಷಾಂತ್ಯದಲ್ಲಿ ನಡೆಯುವ ವಿಶ್ವ ಚಾಂಪಿಯನ್‌ಷಿಪ್‌ವರೆಗಿನ ಕೂಟಗಳಲ್ಲಿ 90 ಮೀಟರ್ ದೂರ ಎಸೆಯುವ ಆತ್ಮವಿಶ್ವಾಸ ಮೂಡಿದೆ' ಎಂದು 27 ವರ್ಷ ವಯಸ್ಸಿನ ನೀರಜ್ ಸ್ಪರ್ಧೆಯ ನಂತರ ಪ್ರತಿಕ್ರಿಯಿಸಿದ್ದಾರೆ.

ಹಲವು ಬಾರಿಯ ಒಲಿಂಪಿಕ್ ಚಾಂಪಿಯನ್ ಯಾನ್ ಝೆಲೆಜ್ನಿ ಪ್ರಭಾವವನ್ನು ಶ್ಲಾಘಿಸಿದ ನೀರಜ್, 'ನಾವು ಈ ವರ್ಷದ ಫೆಬ್ರುವರಿಯಲ್ಲಿ ಒಟ್ಟಿಗೆ ಕೆಲಸ ಆರಂಭಿಸಿದೆವು. ಈ ಅವಧಿಯಲ್ಲಿ ಸಾಕಷ್ಟು ಹೊಸ ವಿಚಾರಗಳನ್ನು ಕಲಿತಿದ್ದೇನೆ. ಇನ್ನೂ ಕೆಲವು ಅಂಶಗಳ ಮೇಲೆ ಒಟ್ಟಾಗಿ ಕೆಲಸ ಮಾಡುತ್ತೇವೆ' ಎಂದು ಹೇಳಿದರು.

ಜೆಕ್ ರಿಪಬ್ಲಿಕ್‌ನ ಝೆಲೆಜ್ನಿ ಅವರನ್ನು ನೀರಜ್ ತಮ್ಮ ವೈಯಕ್ತಿಕ ಕೋಚ್ ಆಗಿ ಕಳೆದ ನವೆಂಬರ್‌ನಲ್ಲಿ ನೇಮಿಸಿಕೊಂಡಿದ್ದರು. ಜಾವೆಲಿನ್‌ನಲ್ಲಿ ವಿಶ್ವದಾಖಲೆಯನ್ನು (98.48 ಮೀ) ಹೊಂದಿರುವ ಝೆಲೆಜ್ನಿ ಸಾಮಾನ್ಯವಾಗಿ ಡೈಮಂಡ್ ಲೀಗ್‌ಗಳಿಗೆ ಹಾಜರಾಗುವುದಿಲ್ಲ. ಆದರೆ, ದೋಹಾದಲ್ಲಿ ಚೋಪ್ರಾ ಅವರೊಂದಿಗೆ ಕಾಣಿಸಿಕೊಂಡು, ವಿಶೇಷ ಕ್ಷಣಕ್ಕೆ ಸಾಕ್ಷಿಯಾದರು.

ಹರಿಯಾಣದ ನೀರಜ್ ಅವರು ಸೆಪ್ಟೆಂಬರ್ 13ರಿಂದ 21ರವರೆಗೆ ಟೋಕಿಯೊದಲ್ಲಿ ನಡೆಯಲಿರುವ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಉಳಿಸಿಕೊಳ್ಳುವ ಛಲದಲ್ಲಿದ್ದಾರೆ.

ಪ್ರಧಾನಿ ಅಭಿನಂದನೆ: 'ಜಾವೆಲಿನ್ ಅನ್ನು 90.23 ಮೀಟರ್ ದೂರ ಎಸೆದು, ವೈಯಕ್ತಿಕ ಶ್ರೇಷ್ಠ ಸಾಧನೆ ಮಾಡಿರುವ ನೀರಜ್ ಚೋಪ್ರಾ ಅವರಿಗೆ ಅಭಿನಂದನೆಗಳು. ಇದು ಅವರ ಬದ್ಧತೆ, ಶಿಸ್ತು ಮತ್ತು ಉತ್ಸಾಹದ ಫಲಿತಾಂಶವಾಗಿದೆ. ಅವರ ಸಾಧನೆಗೆ ದೇಶ ಹೆಮ್ಮೆಪಡುತ್ತದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.



90 ಮೀಟರ್ ಗಡಿ ದಾಟಿದ ಸಂಭ್ರಮದಲ್ಲಿ ನೀರಜ್ ಚೋಪ್ರಾ ಎಕ್ಸ್ ಚಿತ್ರ

'ನೀಟ್‌–ಯುಜಿ' ಫಲಿತಾಂಶ ಪ್ರಕಟಕ್ಕೆ ಮದ್ರಾಸ್ ಹೈಕೋರ್ಟ್ ತಡೆ

ಚೆನ್ನೈ (ಪಿಟಿಐ): ಪರೀಕ್ಷಾ ಕೇಂದ್ರದಲ್ಲಿ ವಿದ್ಯುತ್ ಪೂರೈಕೆ ಸ್ಥಗಿತಗೊಂಡಿದ್ದರಿಂದ ತೊಂದರೆ ಅನುಭವಿಸಿದ್ದಾಗಿ ಕೆಲ ವಿದ್ಯಾರ್ಥಿಗಳು ಸಲ್ಲಿಸಿದ ಅರ್ಜಿ ವಿಚಾರಣೆ ನಡೆಸಿದ ಮದ್ರಾಸ್ ಹೈಕೋರ್ಟ್, 'ನೀಟ್‌–ಯುಜಿ 2025' ಫಲಿತಾಂಶ ಪ್ರಕಟಿಸದಂತೆ ಮಧ್ಯಂತರ ತಡೆ ನೀಡಿದೆ.



ನ್ಯಾಯಮೂರ್ತಿ ವಿ.ಲಕ್ಷ್ಮೀ ನಾರಾಯಣನ್ ಅವರು ಮಧ್ಯಂತರ ತಡೆ ನೀಡಿ ಶುಕ್ರವಾರ ಆದೇಶಿಸಿದ್ದು, ವಿಚಾರಣೆಯನ್ನು ಜೂನ್ 2ಕ್ಕೆ ಮುಂದೂಡಿದ್ದಾರೆ.

ಚೆನ್ನೈನ ಆವಡಿಯಲ್ಲಿರುವ ಪಿ.ಎಂ ಶ್ರೀ ಕೇಂದ್ರೀಯ ವಿದ್ಯಾಲಯ (ಸಿಆರ್‌ಪಿಎಫ್)ದಲ್ಲಿನ ಪರೀಕ್ಷಾ ಕೇಂದ್ರದಲ್ಲಿ ಮೇ 4ರಂದು ಮಧ್ಯಾಹ್ನ 3ರಿಂದ 4.15ರ ವರೆಗೆ 'ನೀಟ್‌–ಯುಜಿ' ನಡೆಯಿತು. ಈ ವೇಳೆ, ಭಾರಿ ಮತ್ತು ಬಿರುಗಾಳಿ ಪರಿಣಾಮ ವಿದ್ಯುತ್ ಪೂರೈಕೆ ಸ್ಥಗಿತಗೊಂಡು, ಪರೀಕ್ಷೆ ಬರೆಯಲು ಕಷ್ಟವಾಯಿತು' ಎಂದು 13 ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ.

'ಪರೀಕ್ಷಾ ಕೇಂದ್ರದಲ್ಲಿ ಜನರೇಟರ್ ಅಥವಾ ಇನ್‌ವರ್ಟರ್‌ನಂತಹ ಪರ್ಯಾಯ ವ್ಯವಸ್ಥೆ ಇರಲಿಲ್ಲ. ಉತ್ತಮ ಬೆಳಕು ಇಲ್ಲದ ಕಾರಣ, ನಿಗದಿತ ಸ್ಥಳದಿಂದ ಬೇರೆಡೆ ಕುಳಿತು ಪರೀಕ್ಷೆ ಬರೆಯಬೇಕಾಯಿತು. ಇಷ್ಟೊಂದು ಅಡಚಣೆ ಉಂಟಾಗಿದ್ದರೂ, ನಮಗೆ ಹೆಚ್ಚುವರಿ ಸಮಯ ನೀಡಲಿಲ್ಲ. ಹೀಗಾಗಿ, ಪರೀಕ್ಷೆ ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ' ಎಂದೂ ಅರ್ಜಿಯಲ್ಲಿ ಹೇಳಿದ್ದಾರೆ.

ಸರ್ಕಾರಿ ಆಸ್ಪತ್ರೆಗಳಲ್ಲಿ ಜನೌಷಧ ಕೇಂದ್ರ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಆಸ್ಪತ್ರೆಗಳಲ್ಲಿ ಇನ್ನು ಮುಂದೆ ಜನೌಷಧ ಕೇಂದ್ರಗಳ ಪ್ರಾರಂಭಕ್ಕೆ ಅನುಮೋದನೆ ನೀಡದಿರಲು ನಿರ್ಧರಿಸಿರುವ ಆರೋಗ್ಯ ಇಲಾಖೆ, ಈಗಾಗಲೇ ಸರ್ಕಾರಿ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೇಂದ್ರಗಳ ಸ್ಥಗಿತಕ್ಕೆ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದೆ.

ಈ ಬಗ್ಗೆ ಇಲಾಖೆ ಆದೇಶ ಹೊರಡಿಸಿದೆ. ಸದ್ಯ 31 ಜನೌಷಧ ಕೇಂದ್ರಗಳ ಪ್ರಾರಂಭಕ್ಕೆ ಅರ್ಜಿಗಳು ಆಯುಕ್ತರ ಹಂತದಲ್ಲಿ ಬಾಕಿ ಉಳಿದಿವೆ. ರೋಗಿಗಳು ಯಾವುದೇ ಔಷಧವನ್ನು ಆಸ್ಪತ್ರೆಯ ಹೊರಗೆ ಖರೀದಿಸದಂತೆ ನೋಡಿಕೊಳ್ಳುವುದು ಸರ್ಕಾರದ ಆದ್ಯತೆಯಾಗಿದೆ. ಆದ್ದರಿಂದ ಸರ್ಕಾರಿ ಆಸ್ಪತ್ರೆಗಳಲ್ಲಿ ಜನೌಷಧ ಕೇಂದ್ರಗಳ ಹಂಚಿಕೆಯನ್ನು ಸ್ಥಗಿತಗೊಳಿಸಲು, ಅನುಮೋದನೆಗೆ ಬಾಕಿ ಇರುವ ಅರ್ಜಿಗಳನ್ನು ತಿರಸ್ಕರಿಸಲು ಆದೇಶದಲ್ಲಿ ತಿಳಿಸಲಾಗಿದೆ.

ಭಾರತೀಯ ಔಷಧ ಮಂಡಳಿಯು (ಬಿಪಿಪಿಐ) ಜನೌಷಧ ಕೇಂದ್ರಗಳಿಗೆ ನೋಡಲ್ ಸಂಸ್ಥೆಯಾಗಿದೆ. ಸದ್ಯ ಇಲಾಖೆ ವ್ಯಾಪ್ತಿಯ ಸರ್ಕಾರಿ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಜನೌಷಧ ಕೇಂದ್ರಗಳನ್ನು ಸ್ಥಗಿತಗೊಳಿಸಲು, ಒಪ್ಪಂದದ ನಿಯಮಗಳ ಅನುಸಾರ ಕ್ರಮ ಕೈಗೊಳ್ಳಬೇಕು ಎಂದು ಹೇಳಲಾಗಿದೆ.

ಜನೌಷಧ ಖರೀದಿಸಲು ಕರ್ನಾಟಕ ರಾಜ್ಯ ಔಷಧ ಸರಬರಾಜು ನಿಗಮವು (ಕೆಎಸ್‌ಎಂಎಸ್‌ಸಿಎಲ್) ಬಿಪಿಪಿಐಗೆ ವಿಶೇಷ ದರ ಗೊತ್ತುಪಡಿಸಲು ಸೂಚಿಸಿದೆ. ಕೇಂದ್ರಗಳ ಸ್ಥಗಿತಕ್ಕೆ ಪರ್ಯಾಯವಾಗಿ, ಆಸ್ಪತ್ರೆಗಳು ಬಿಪಿಪಿಐ ಇಂದ ಔಷಧಗಳನ್ನು ಖರೀದಿಸಿ ರೋಗಿಗಳಿಗೆ ಉಚಿತವಾಗಿ ವಿತರಿಸಲು ಕ್ರಮವಹಿಸಬೇಕು ಎಂದು ತಿಳಿಸಲಾಗಿದೆ.

ಸರ್ಕಾರಿ ಆಸ್ಪತ್ರೆಗಳ ಹೊರಗೆ ಜನೌಷಧ ಕೇಂದ್ರಗಳ ಸ್ಥಾಪನೆಯು ಆರೋಗ್ಯ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ. ಅಲ್ಲಿನ ಕೇಂದ್ರಗಳನ್ನು ಮುಂದುವರಿಸಬಹುದಾಗಿದೆ ಎಂದು ಹೇಳಲಾಗಿದೆ.

ಪಿಕೆಎಲ್: ಪ್ರಮುಖರ ಉಳಿಸಿಕೊಂಡ ಮುಂಬಾ

ಮುಂಬೈ (ಪಿಟಿಐ): ಪ್ರೊ ಕಬಡ್ಡಿ ಲೀಗ್‌ನಲ್ಲಿ ಆಡಲಿರುವ ಯು ಮುಂಬಾ ತಂಡ, 12ನೇ ಆವೃತ್ತಿಗೆ ಕಳೆದ ಆವೃತ್ತಿಯಲ್ಲಿ ಆಡಿದ್ದ ತಂಡದ ಬಹುತೇಕ ಪ್ರಮುಖರನ್ನು ಉಳಿಸಿಕೊಂಡಿದೆ. ರೈಟ್‌ಕವರ್ ಡಿಫೆಂಡರ್ ಸುನೀಲ್ ಕುಮಾರ್ ನಾಯಕರಾಗಿ ಮುಂದುವರಿಯಲಿದ್ದಾರೆ.

ಸುನೀಲ್ ಪಿಕೆಎಲ್ ಇತಿಹಾಸದ ಅತಿ ಯಶಸ್ವಿ ನಾಯಕರೆನಿಸಿದ್ದಾರೆ. ಅವರ ಜೊತೆ ಕಳೆದ ಋತುವಿನ ಶೋಧ ಎನಿಸಿರುವ ರಾಘವ್ ಅವರೂ ರೀಟೆನ್ ಆಗಿದ್ದಾರೆ. ಕಳೆದ ಬಾರಿ 'ಅನ್‌ಸೋಲ್ಡ್' ಆಗಿದ್ದ ಅವರು ಬದಲಿ ಆಟಗಾರನಾಗಿ ಮುಂಬಾ ತಂಡ ಸೇರಿಕೊಂಡಿದ್ದರು.

ಈ ಬಾರಿಯ ಪಿಕೆಎಲ್ ಹರಾಜು ಮೇ 31 ರಿಂದ ಜೂನ್ 1ರವರೆಗೆ ನಡೆಯಲಿದೆ. ರಕ್ಷಣೆ ಆಟಗಾರರಾದ ಲೋಕೇಶ್ ಘೋಸ್ಲಿ, ದೀಪಕ್ ಕುಂದು ಮತ್ತು ಸನ್ನಿ ಅವರು ಅಜಿತ್ ಜೊತೆ ಉಳಿಸಿಕೊಂಡ ಎನ್‌ವೈಪಿ (ನ್ಯೂ ಯಂಗ್ ಪ್ಲೇಯರ್ಸ್) ಆಟಗಾರರಲ್ಲಿ ಒಳಗೊಂಡಿದ್ದಾರೆ.

ಮುಂಬೈ ಕಳೆದ ವರ್ಷ ಪ್ಲೇಆಫ್‌ನಲ್ಲಿ ಆಡಿತ್ತು.

ಪುಟಿನ್– ಝೆಲೆನ್‌ಸ್ಕಿ ಮಾತುಕತೆ ಬಗ್ಗೆ ರಷ್ಯಾ ಹೇಳಿಕೆ

'ಮೊದಲು ಒಪ್ಪಂದ; ನಂತರ ಭೇಟಿ'

ಕೀವ್ (ಎಎಫ್‌ಪಿ): ರಷ್ಯಾ ಮತ್ತು ಉಕ್ರೇನ್ ಕದನ ವಿರಾಮ ಒಪ್ಪಂದಕ್ಕೆ ಬಂದ ನಂತರವಷ್ಟೇ ವ್ಲಾದಿಮಿರ್ ಪುಟಿನ್ ಮತ್ತು ವೊಲೊಡಿಮಿರ್ ಝೆಲೆನ್‌ಸ್ಕಿ ನಡುವೆ ಭೇಟಿ ಸಾಧ್ಯ ಎಂದು ಪುಟಿನ್ ಆಡಳಿತ ಕಚೇರಿ ಕ್ರೆಮ್ಲಿನ್ ಶನಿವಾರ ಹೇಳಿದೆ.

ಉಭಯ ದೇಶಗಳ ಸಂಧಾನಕಾರರ ನಡುವೆ ಬೆಳಿಗ್ಗೆ ನಡೆದ ಮಾತುಕತೆಯೂ ಕದನ ವಿರಾಮ ಒಪ್ಪಂದಕ್ಕೆ ಬರುವಲ್ಲಿ ಸಫಲತೆ ಕಾಣಲಿಲ್ಲ. ಮೂರು ವರ್ಷಗಳಿಂದ ನಡೆಯುತ್ತಿರುವ ಯುದ್ಧವನ್ನು ಕೊನೆಗೊಳಿಸುವ ನಿಟ್ಟಿನಲ್ಲಿ ಟರ್ಕಿಯ ಮಧ್ಯಸ್ಥಿಕೆಯಲ್ಲಿ ಇಸ್ತಾಂಬುಲ್‌ನಲ್ಲಿ ಶುಕ್ರವಾರ ಮೊದಲ ಬಾರಿಗೆ ಆರಂಭವಾದ ಮಾತುಕತೆ ಸುಮಾರು 90 ನಿಮಿಷ ನಡೆದಿತ್ತು. ಮೊದಲ ದಿನದ ಮಾತುಕತೆಯಲ್ಲಿ ಉಭಯ ರಾಷ್ಟ್ರಗಳು ತಲಾ ಸಾವಿರ ಯುದ್ಧ ಕೈದಿಗಳನ್ನು ವಿನಿಮಯ ಮಾಡಿಕೊಳ್ಳುವ ಒಪ್ಪಂದ ಮಾಡಿಕೊಂಡಿವೆ.

'ಮಾತುಕತೆಯ ಮುಂದಿನ ಹಂತವು ಝೆಲೆನ್‌ಸ್ಕಿ ಮತ್ತು ಪುಟಿನ್ ನಡುವಿನ ಸಭೆಯಾಗಿರುತ್ತದೆ ಎಂದು ಉಕ್ರೇನ್‌ನ ಮುಖ್ಯ ಸಂಧಾನಕಾರ, ರಕ್ಷಣಾ ಸಚಿವ ರುಸ್ತೆಮ್ ಉಮರೋವ್ ಹೇಳಿರುವುದನ್ನು ಗಮನಿಸಿದ್ದೇವೆ. ನಾವು ಇದನ್ನು ಸಾಧ್ಯವೆಂದು ಪರಿಗಣಿಸುತ್ತೇವೆ. ಆದರೆ, ಅದು ಉಭಯತ್ರರ ನಡುವೆ ಕೆಲವೊಂದು ವಿಷಯಗಳಲ್ಲಿ ಒಪ್ಪಂದ ಏರ್ಪಟ್ಟ ಬಳಿಕವೇ ಸಾಧ್ಯ' ಎಂದು ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೋವ್ ಶನಿವಾರ ಟರ್ಕಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಮೊದಲು ಯುದ್ಧ ಕೈದಿಗಳ ವಿನಿಮಯವನ್ನು ಪೂರ್ಣಗೊಳಿಸಬೇಕು. ಮುಂದಿನ ಸುತ್ತಿನ ಮಾತುಕತೆಯನ್ನು ನಿಗದಿಪಡಿಸುವ ಮೊದಲು ಎರಡೂ ಕಡೆಯವರು ಕದನ ವಿರಾಮದ ಕುರಿತು ತಮ್ಮ ನಿಲುವು ಸ್ಪಷ್ಟಪಡಿಸಬೇಕಿದೆ. ಸದ್ಯಕ್ಕೆ, ನಿಯೋಗಗಳು ಶುಕ್ರವಾರ ಒಪ್ಪಿಕೊಂಡಿರುವುದನ್ನು ನಾವು ಅನುಷ್ಠಾನಕ್ಕೆ ತರಬೇಕಿದೆ. ತಲಾ ಒಂದು ಸಾವಿರ ಯುದ್ಧ ಕೈದಿಗಳ ವಿನಿಮಯ ಪೂರ್ಣಗೊಳಿಸುವುದು ಆದ್ಯತೆಯಾಗಿದೆ' ಎಂದು ಹೇಳಿದರು.

'ಶುಕ್ರವಾರ ನಡೆದ ಮಾತುಕತೆಯಲ್ಲಿ ಕದನ ವಿರಾಮ ಒಪ್ಪಂದಕ್ಕೆ ಬರುವ ಅವಕಾಶವಿತ್ತು. ಆದರೆ, ರಷ್ಯಾ ನಮ್ಮ ನೆಲದಲ್ಲಿ ಹತ್ಯೆಗಳನ್ನು ಮುಂದುವರಿಸುವ ಅವಕಾಶವನ್ನು ಮಾತ್ರ ಉಳಿಸಿಕೊಂಡಿದೆ' ಎಂದು ಝೆಲೆನ್‌ಸ್ಕಿ ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಮಾಡಿದ್ದಾರೆ.

> **ಹೆಚ್ಚು ಅಧಿಕಾರವಿಲ್ಲದ, ದುರ್ಬಲ ಮತ್ತು ಸಿದ್ಧತೆ ಇಲ್ಲದ ರಷ್ಯಾದ ನಿಯೋಗವನ್ನು ಇಸ್ತಾಂಬುಲ್‌ನಲ್ಲಿ ಎಲ್ಲರೂ ನೋಡಿದರು. ಇದು ಬದಲಾಗಬೇಕು**
> **ವೊಲೊಡಿಮಿರ್ ಝೆಲೆನ್‌ಸ್ಕಿ,** ಉಕ್ರೇನ್ ಅಧ್ಯಕ್ಷ

> **ಬೇಷರತ್ ಕದನ ವಿರಾಮ ನಿರಾಕರಿಸಿದರೆ ರಷ್ಯಾದ ಮೇಲೆ ಮತ್ತಷ್ಟು ನಿರ್ಬಂಧ ವಿಧಿಸಲು ಐರೋಪ್ಯ ರಾಷ್ಟ್ರಗಳು ಅಮೆರಿಕ ಜತೆಗೆ ಸಮನ್ವಯ ಸಾಧಿಸುತ್ತಿವೆ**
> **ಎಮಾನ್ಯುಯೆಲ್ ಮ್ಯಾಕ್ರನ್,** ಫ್ರಾನ್ಸ್ ಅಧ್ಯಕ್ಷ

ರಷ್ಯಾ ಡ್ರೋನ್ ದಾಳಿ: 9 ಸಾವು

ಕೀವ್ (ಎಪಿ): ರಷ್ಯಾ ಹಾರಿಸಿದ ಡ್ರೋನ್ ಉಕ್ರೇನ್‌ನ ಈಶಾನ್ಯ ಸುಮಿ ಪ್ರದೇಶದಲ್ಲಿ ಪ್ರಯಾಣಿಕ ಬಸ್‌ಗೆ ಅಪ್ಪಳಿಸಿ 9 ಜನರು ಮೃತಪಟ್ಟಿದ್ದಾರೆ. ರಷ್ಯಾ–ಉಕ್ರೇನ್ ತಮ್ಮ ಮೊದಲ ಕದನವಿರಾಮ ಮಾತುಕತೆ ನಡೆಸಿದ ಕೆಲವೇ ಗಂಟೆಗಳಲ್ಲಿ ಈ ದಾಳಿ ನಡೆದಿದೆ.

ರಷ್ಯಾ– ಉಕ್ರೇನ್ ಗಡಿಯಿಂದ 10 ಕಿ.ಮೀ ದೂರದಲ್ಲಿರುವ ಬಿಲೊಪಿಲಿಯಾ ನಗರದಲ್ಲಿ ದಾಳಿ ನಡೆದಿದೆ. ಉಕ್ರೇನ್ ಪೊಲೀಸರು ಘಟನೆಯ ಫೋಟೊಗಳನ್ನು ಬಿಡುಗಡೆ ಮಾಡಿದ್ದಾರೆ. ಘಟನೆ ಕುರಿತು ರಷ್ಯಾ ಈವರೆಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ನೆರವಿನ ನಿರೀಕ್ಷೆಯಲ್ಲಿ ಹೈಜಂಪ್ ಅಥ್ಲೀಟ್

ಜಾಗತಿಕ ವಿಶ್ವವಿದ್ಯಾಲಯಗಳ ಕ್ರೀಡಾಕೂಟಕ್ಕೆ ಪಲ್ಲವಿ ಆಯ್ಕೆ

• ಮಲ್ಲಿಕಾರ್ಜುನ ನಾಲವಾರ

ಕಲಬುರಗಿ: ಜರ್ಮನಿಯಲ್ಲಿ ಜುಲೈ 16 ರಿಂದ ನಡೆಯುವ ಜಾಗತಿಕ ವಿಶ್ವವಿದ್ಯಾಲಯಗಳ ಕ್ರೀಡಾಕೂಟದ ಹೈಜಂಪ್ ಸ್ಪರ್ಧೆಗೆ ಆಯ್ಕೆಯಾಗಿರುವ ವಿದ್ಯಾರ್ಥಿನಿ ಪಲ್ಲವಿ ಪಾಟೀಲ ಅವರಿಗೆ ಮಂಗಳೂರು ವಿಶ್ವವಿದ್ಯಾಲಯದಿಂದ ಆರ್ಥಿಕ ನೆರವು ದೊರೆಯದ ಕಾರಣ ಕ್ರೀಡಾಕೂಟಕ್ಕೆ ತೆರಳಲು ಪರದಾಡುವಂತಾಗಿದೆ.

ಅಥ್ಲೆಟಿಕ್ಸ್‌ನಲ್ಲಿ ಮಂಗಳೂರು ವಿವಿ ವ್ಯಾಪ್ತಿಯ 12 ವಿದ್ಯಾರ್ಥಿಗಳು ಭಾರತವನ್ನು ಪ್ರತಿನಿಧಿಸಲು ಆಯ್ಕೆಯಾಗಿದ್ದಾರೆ. ಉಡುಪಿಯ ತೆಂಕನಿಡಿಯೂರು ಸರ್ಕಾರಿ ಸ್ನಾತಕೋತ್ತರ ಕೇಂದ್ರದ ಎಂಎ ವಿದ್ಯಾರ್ಥಿನಿ ಪಲ್ಲವಿ ಹಾಗೂ ಆಳ್ವಾಸ್‌ನ 11 ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ. ಆಳ್ವಾಸ್ ಸಂಸ್ಥೆಯು ತನ್ನ ವಿದ್ಯಾರ್ಥಿಗಳನ್ನು ಕಳುಹಿಸಲು ಸಜ್ಜಾಗಿದೆ. ಆದರೆ, ಪಲ್ಲವಿ ಅವರಿಗೆ ಅಗತ್ಯ ಹಣಕಾಸಿನ ನೆರವು ಕೊಡಲು ಆಗುವುದಿಲ್ಲ ಎಂದು ಮಂಗಳೂರು ವಿವಿ ಕೈಚೆಲ್ಲಿದೆ. ಹೀಗಾಗಿ ಜರ್ಮನಿಗೆ ತೆರಳಿ ಉತ್ತಮ ಸಾಧನೆಯ ಬಯಕೆಯಲ್ಲಿದ್ದ ಈ ಅಥ್ಲೀಟ್ ಆತಂಕಕ್ಕೆ ಒಳಗಾಗಿದ್ದಾರೆ.



ಪಲ್ಲವಿ ಪಾಟೀಲ

2023ರಲ್ಲಿ ಉತ್ತರ ಪ್ರದೇಶದ ಲಖನೌದಲ್ಲಿ ನಡೆದ ಖೇಲೊ ಇಂಡಿಯಾ ಕ್ರೀಡಾಕೂಟದ ಹೈಜಂಪ್‌ನಲ್ಲಿ ಚಿನ್ನದ ಪದಕ ಗೆದ್ದಿದ್ದ ಪಲ್ಲವಿ, ರಾಷ್ಟ್ರಮಟ್ಟದ ಇತರೆ ಸ್ಪರ್ಧೆಗಳಲ್ಲಿ ನಾಲ್ಕು ಬೆಳ್ಳಿ ಪದಕ ಪಡೆದಿದ್ದಾರೆ. ರಾಜ್ಯಮಟ್ಟದ ಸ್ಪರ್ಧೆಗಳಲ್ಲಿಯೂ 15 ಚಿನ್ನದ ಪದಕಗಳನ್ನು ಗಳಿಸಿದ್ದಾರೆ. ಅಂತರ ರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ಪ್ರತಿನಿಧಿಸುವ ಆಸೆಗೆ ಈಗ ಹಣದ ಕೊರತೆ ಅಡ್ಡಿಯಾಗಿದೆ.

'ಪ್ರಯಾಣದ ವೆಚ್ಚ, ವೀಸಾ, ನೋಂದಣಿ ಶುಲ್ಕ ಸೇರಿ ₹2.50 ಲಕ್ಷ ಬೇಕಾಗುತ್ತದೆ. ವಿಶ್ವವಿದ್ಯಾಲಯದವರು ನೀನೇ ಹಣ ಖರ್ಚು ಮಾಡಿ ಹೋಗುವಂತೆ ಹೇಳಿದ್ದಾರೆ. ನನ್ನ ತಂದೆಯ ಬಳಿ ಅಷ್ಟೊಂದು ಹಣವಿಲ್ಲ. ಮೇ 19ರ ಒಳಗೆ ಹಣ ಕಟ್ಟದೆ ಇದ್ದರೆ ಅವಕಾಶದಿಂದ ವಂಚಿತಗೊಳ್ಳುತ್ತೇನೆ. ಇಷ್ಟು ದಿನದ ಪರಿಶ್ರಮ ವ್ಯರ್ಥವಾಗುತ್ತದೆ' ಎಂದು ಪಲ್ಲವಿ ಅಲವತ್ತುಕೊಂಡರು.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯೆ ನೀಡಿದ ಮಂಗಳೂರು ವಿವಿಯ ಕುಲಪತಿ ಪ್ರೊ.ಪಿ.ಎಲ್. ಧರ್ಮ, 'ನನಗೆ ಈ ಬಗ್ಗೆ ಮಾಹಿತಿ ಬಂದಿಲ್ಲ. ಕಾಲೇಜಿನ ಪ್ರಾಂಶುಪಾಲರು ಪತ್ರ ಬರೆದರೆ ಅನುದಾನ ಕೊಡುವ ಬಗ್ಗೆ ಸಿಂಡಿಕೇಟ್ ಸಭೆಯ ಮುಂದೆ ಇರಿಸಬೇಕಾಗುತ್ತದೆ. ನಮ್ಮ ಬಳಿ ವಿದ್ಯಾರ್ಥಿನಿಯನ್ನು ಜರ್ಮನಿಗೆ ಕಳಿಸುವಷ್ಟು ಅನುದಾನ ಇಲ್ಲ. ಸಿಬ್ಬಂದಿಗೆ ಸಂಬಳವನ್ನೇ ಸರಿಯಾಗಿ ಕೊಡಲು ಆಗುತ್ತಿಲ್ಲ' ಎಂದು ಅಳಲು ತೋಡಿಕೊಂಡರು.

ಸಹಾಯ ಮಾಡಲು ಇಚ್ಛಿಸುವವರು ಮೊ: 9945069125 ಸಂಪರ್ಕಿಸಬಹುದು.

ಗುಂಡಣ್ಣ



25 ವರ್ಷಗಳ ಹಿಂದೆ — ಗುರುವಾರ, 18-5-2000

● **175 ತಾಲ್ಲೂಕುಗಳಿಗೆ ಇಂಟರ್‌ನೆಟ್**

ಬೆಂಗಳೂರು, ಮೇ 17– ರಾಜ್ಯದ ಎಲ್ಲ ಭಾಗಗಳಿಗೆ ಇಂಟರ್‌ನೆಟ್ ಸೇವೆಯನ್ನು ವಿಸ್ತರಿಸಲು ಕರ್ನಾಟಕ ದೂರಸಂಪರ್ಕ ವೃತ್ತವು 175 ತಾಲ್ಲೂಕು ಕೇಂದ್ರಗಳಲ್ಲಿ ಈ ವರ್ಷವೇ 'ಸೈಬರ್ ಡಾಬ'ಗಳನ್ನು ಆರಂಭಿಸಲಿದೆ.

'ಕಳೆದ ವರ್ಷ 3.60 ಲಕ್ಷ ದೂರವಾಣಿ ಸಂಪರ್ಕ ಕಲ್ಪಿಸುವ ಗುರಿಯನ್ನು ಸಾಧಿಸಲಾಗಿದೆ. ಈ ವರ್ಷ 4.20 ಲಕ್ಷ ದೂರವಾಣಿ ಸಂಪರ್ಕ ನೀಡುವ ಗುರಿ ಇಲಾಖೆ ಇರಿಸಿಕೊಂಡಿದೆ' ಎಂದು 'ವಿಶ್ವ ದೂರಸಂಪರ್ಕ ದಿನ'ದ ಅಂಗವಾಗಿ ಏರ್ಪಡಿಸಿದ್ದ 'ಸಂಚಾರ ಶ್ರೀ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕರ್ನಾಟಕ ದೂರಸಂಪರ್ಕ ವೃತ್ತದ ಪ್ರಧಾನ ವ್ಯವಸ್ಥಾಪಕ ಟಿ. ರಾಮಮೂರ್ತಿ ತಿಳಿಸಿದರು.

50 ವರ್ಷಗಳ ಹಿಂದೆ — ಭಾನುವಾರ, 18-5-1975

● **ವಿಮಾನ ಸಂಪರ್ಕ: ಭಾರತದ ಸೂಚನೆ ಪಾಕ್ ಪರಿಶೀಲನೆ**

ನವದೆಹಲಿ, ಮೇ 17– ಭಾರತ ಮತ್ತು ಪಾಕಿಸ್ತಾನದ ನಡುವೆ ವಿಮಾನಯಾನ ಸಂಪರ್ಕ ಹಾಗೂ ಪರಸ್ಪರ ರಾಷ್ಟ್ರಗಳ ವಾಯುಪ್ರದೇಶದಲ್ಲಿ ವಿಮಾನಗಳ ಸಂಚಾರ ಪುನರಾರಂಭಿಸುವ ಬಗ್ಗೆ ಭಾರತವು ಪಾಕಿಸ್ತಾನಿ ನಿಯೋಗಕ್ಕೆ ಸಲಹೆಗಳನ್ನು ನೀಡಿದೆ.

● **ಜನತೆ ಆಂದೋಲನಕ್ಕೆ ಕರ್ನಾಟಕ ಸೂಕ್ತ: ಜೆ.ಪಿ ವಿಶ್ಲೇಷಣೆ**

ಬೆಂಗಳೂರು, ಮೇ 17– ಜನತಾ ಹಾಗೂ ಯುವ ಆಂದೋಲನವನ್ನು ಆರಂಭಿಸುವುದಕ್ಕೆ ಕರ್ನಾಟಕ ಅತ್ಯಂತ ಸೂಕ್ತವಾಗಿದೆ ಎಂದು ಸರ್ವೋದಯ ನಾಯಕ ಜಯಪ್ರಕಾಶ್ ನಾರಾಯಣ್ ಇಂದು ಇಲ್ಲಿ ಹೇಳಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಮೇ 18, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣ ಪಂಚಮಿ ಗಂ. 5-58 **ನಕ್ಷತ್ರ:** ಉತ್ತರಾಷಾಢ ಗಂ. 18-53 **ಯೋಗ:** ಶುಭ ಗಂ. 06-43 **ಕರಣ:** ತೈತಿಲ ಗಂ. 5-58, ವೃಷಭ ಮಾಸದ 04 ನೇ ದಿನ.
ರಾಹುಕಾಲ: ಸಾಯಂಕಾಲ 04-30 – 06-00
ಸೂರ್ಯೋದಯ: 06-07 **ಸೂರ್ಯಾಸ್ತ:** 06-46
ಮುಸ್ಲಿಂ ದಿನಾಂಕ: 19 ಜುಲ್ಕಾಯದ್
ಅದೃಷ್ಟ ಸಂಖ್ಯೆ: 4, 10

ಮೇಷ: ಪ್ರತಿಷ್ಠಿತ ಪದವಿಗಾಗಿ ಸಮಬಲದ ಹೋರಾಟ ನಡೆಸುವಿರಿ. ಭಾವನೆಗಳನ್ನು ಆತ್ಮೀಯರಲ್ಲಿ ಹಂಚಿಕೊಳ್ಳಲು ಸೂಕ್ತ ಸಮಯ. ರಿಯಲ್ ಎಸ್ಟೇಟ್ ವ್ಯವಹಾರ ನಡೆಸುವವರಿಗೆ ಅಧಿಕ ಕಮಿಷನ್ ದೊರೆಯಲಿದೆ.

ವೃಷಭ: ಮಕ್ಕಳ ಕೆಲವೊಂದು ವಿಚಾರಗಳು ಮಾನಸಿಕ ಸ್ಥಿತಿಯನ್ನು ಕೆಡಿಸಲಿವೆ. ತಪ್ಪು ಮಾಡುವುದು ಮಕ್ಕಳ ಸ್ವಾಭಾವಿಕ ಗುಣ. ಹಾಗಾಗಿ, ಮಕ್ಕಳನ್ನು ಅತಿಯಾಗಿ ಶಿಕ್ಷಿಸಬೇಡಿ. ವಿವಾಹ ಸಂಬಂಧದ ಮಾತುಕತೆ ಫಲಕಾರಿಯಾಗುವುದು.

ಮಿಥುನ: ಇಂದಿನ ಕೆಲಸಗಳಿಗೆ ಆತ್ಮಸ್ಥೈರ್ಯ ಬಹಳ ಅಗತ್ಯ. ಸಹೋದ್ಯೋಗಿಗಳ ಯಾವುದೇ ತರಹದ ಒತ್ತಡಕ್ಕೆ ಮಣಿಯದೆ ಕೆಲಸದಲ್ಲಿ ಮುನ್ನುಗ್ಗಿ. ಜಯ ನಿಮ್ಮಂತಯೇ ಆಗಲಿದೆ.

ಕರ್ಕಾಟಕ: ಸಹೋದ್ಯೋಗಿಯೊಬ್ಬರು ಉತ್ತಮ ಸಲಹೆ ನೀಡಲಿದ್ದು, ಅವರ ಅನುಭವಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲಿದ್ದಾರೆ. ಹೃದಯದ ಮಾತಿನಂತೆ ನಡೆದುಕೊಳ್ಳುವುದು ಅತಿ ಮುಖ್ಯ.

ಸಿಂಹ: ಇತರರು ನಿಮ್ಮ ಸಮಯ ಕೇಳುತ್ತಿರುವುದರಿಂದ ಸ್ವಂತ ಕೆಲಸಗಳು ನಿಧಾನಗತಿಯಲ್ಲಿ ಸಾಗಲಿವೆ. ಪರೋಪಕಾರವೇ ಇಂದಿನ ಮುಖ್ಯಕೆಲಸವಾಗುವುದು. ಸಮಾಜದಲ್ಲಿ ಹೆಸರು ಗಳಿಸಲು ಪೂರಕ ವಾತಾವರಣ ಮೂಡಿ ಬರಲಿದೆ.

ಕನ್ಯಾ: ವೃತ್ತಿ ಜೀವನವನ್ನು ಗಂಭೀರವಾಗಿ ಪರಿಗಣಿಸುವಿರಿ. ಏಜೆನ್ಸಿಯಂತಹ ವ್ಯವಹಾರ ಆರಂಭಿಸಲು ಸೂಕ್ತ ಸ್ಥಳದ ಹುಡುಕಾಟ ನಡೆಸುವಿರಿ. ವಾಸದ ಕಟ್ಟಡದ ದುರಸ್ತಿ ಕಾರ್ಯ ಅನಿವಾರ್ಯವಾಗಲಿದೆ.

ತುಲಾ: ಭಾವನಾತ್ಮಕ ಆಲೋಚನೆಗಳನ್ನು ಬದಿಗೆ ಸರಿಸಿ, ವಾಸ್ತವದತ್ತ ಗಮನ ಹರಿಸಲು ಇದು ಸೂಕ್ತವಾದ ಸಮಯವಾಗಿದೆ. ಬಂಗಾರದಂತಹ ಬೆಲೆಬಾಳುವ ವಸ್ತುಗಳನ್ನು ಜಾಗ್ರತೆಯಿಂದ ಇಟ್ಟುಕೊಳ್ಳಿ.

ವೃಶ್ಚಿಕ: ಅಪರೂಪದ ವ್ಯಕ್ತಿಯೊಬ್ಬರನ್ನು ಭೇಟಿಯಾಗುವ ಸಂದರ್ಭ ಒದಗಿ ಬರಲಿದೆ. ಉದ್ಯೋಗ, ವ್ಯವಹಾರಗಳಲ್ಲಿ ಸಿಂಹಾವಲೋಕನದ ಅಗತ್ಯವಿದೆ. ಗೃಹ ನಿರ್ಮಾಣದ ಯೋಚನೆಯನ್ನು ಕಾರ್ಯರೂಪಕ್ಕೆ ತರಲು ಯತ್ನಿಸಿ.

ಧನು: ಒಣ ಪ್ರತಿಷ್ಠೆಯ ಮಾತುಗಾರಿಕೆಯಿಂದಾಗಿ ಸಹೋದರರ ನಡುವೆ ಕಲಹ ಉಂಟಾಗಬಹುದು. ಹಲವಾರು ವಿಚಾರಗಳಲ್ಲಿ ತೊಂದರೆ ಕಂಡುಬಂದರೂ ಆಂಜನೇಯನ ಆರಾಧನೆಯಿಂದ ಎಲ್ಲ ಸಮಸ್ಯೆಗಳು ಪರಿಹಾರವಾಗಲಿವೆ.

ಮಕರ: ಉದ್ದೇಶಿತ ಕೆಲಸಗಳಿಗೆ ಮೋಡಕವಿದಂತೆ ಆಗಲಿದೆ. ವೈಯಕ್ತಿಕವಾಗಿ ಹಾಗೂ ಸಮಾಜದಲ್ಲಿ ನೀವು ಅಪೇಕ್ಷಿಸಿದ ಪ್ರಗತಿಯನ್ನು ಸಾಧಿಸುವಿರಿ. ಸೋದರ ಮಾವನ ಆರೋಗ್ಯ ಸುಧಾರಿಸಲಿದೆ.

ಕುಂಭ: ತೋಟಗಾರಿಕಾ ಬೆಳೆಗಳಿಂದ ಉತ್ತಮ ಆದಾಯ ಸಿಗಲಿದ್ದು, ಬೆಳೆಯ ವಿಸ್ತರಣೆಯ ಬಗ್ಗೆ ಯೋಚಿಸುವಿರಿ. ಮಕ್ಕಳ ದೈಹಿಕ ಬೆಳವಣಿಗೆಯ ಬಗ್ಗೆ ವೈದ್ಯರನ್ನು ಸಂದರ್ಶಿಸಬೇಕಾಗುವುದು. ಜೀರ್ಣಾಂಗ ಸಮಸ್ಯೆ ಕಾಡಬಹುದು.


ಮೀನ: ಹಿತಶತ್ರುಗಳಿಂದ ಪೀಡೆಯು ಹೆಚ್ಚಾಗಿ, ಗುರಿ ಸಾಧನೆಯ ಮಾರ್ಗಕ್ಕೆ ಅಡ್ಡಗಲ್ಲಾಗುವರು. ಸ್ನೇಹಿತರೊಬ್ಬರ ಆರೋಗ್ಯ ವಿಚಾರಿಸಲು ಆಸ್ಪತ್ರೆಗೆ ಹೋಗುವ ಸಂಭವ ಬರಬಹುದು. ನಿಯಮ ಪಾಲನೆಯನ್ನು ಅಭ್ಯಾಸಿಸಿಕೊಳ್ಳಿರಿ.

ಪದಬಂಧ 6046

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಒಡನಾಟವನ್ನು ಹೀಗೂ ಹೇಳುತ್ತಾರೆ (4)
3.ಬಹುಕಾಲ ಇರುವಂಥದ್ದು (4)
4.ಪ್ರತ್ಯೇಕವಾಗಿ ತೆಗೆದಿರಿಸಿದ ವಸ್ತು (3)
5.ಅಪೂರ್ವವೂ ಆಗಿರುವ ವಿರಳತೆ (4)
7.ಕರು ಸುರಿಸಿದ ಅಶ್ರು ಕಾಣಿಸಿತೇ? (3)
9.ಆ ದಿವಸ ತಂದಿರುವ ಕಾಳುಕಡ್ಡಿ (3)
10.ರಾಣೀವಾಸ ಇಲ್ಲದೆ (3)
11.ಓದು ಬರಹ ಬಾರದವರಿಗಾಗಿ ಬರೆದುಕೊಟ್ಟದ್ದು (3)
13.ವೃಕ್ಷದ ಹತ್ತಿರ ಸಿಕ್ಕಿರುವ ಪಚ್ಚೆ (4)
14.ಗಾಳಿ ಬೆಳಕು ಬರುವುದಕ್ಕೆ ಮಾಡಿರುವ ಕಂಡಿ (3)
15.ಕೊನೆಗೆ ವಿಕ್ರಯಿಸಿದ್ದಕ್ಕೇ ಈ ಅಸ್ತವ್ಯಸ್ತತೆ! (4)
16.ಯತಿಗಳು ಬಳಸುವ ನೀರಿನ ಪಾತ್ರೆ (4)

ಮೇಲಿಂದ ಕೆಳಕ್ಕೆ
2.ಹತ್ತಿರಕ್ಕೊಂದು ಪರ್ಯಾಯ ಪದ (3)
3.ಬಾಗಿಲನ್ನು ಭದ್ರ ಪಡಿಸುವ ಕೊಂಡಿ (3)
6.ಬೇರೆಯವರನ್ನು ಅವಲಂಬಿಸಿರುವುದು (5)
8.ದುಃಖಾಂತವಾದ ಪ್ರಹಸನ (5)
12.ಹಡಗನ್ನು ಬಂದರಿನಲ್ಲಿ ನಿಲ್ಲಿಸಲು ಬಳಸುವ ಸಾಧನ (3)
13.ನೊಣ ಇಲ್ಲದೆ (3)



6045ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕರ್ಣಧಾರ 3.ಮಹಿಷ
5.ಸುದಾಮ 7.ಉಯಿಲು
8.ವಿರಹತಾಪ 11.ಸಾರಣೆ
12.ಧಿಮಾಕು 15.ನಗರ
16.ಖಡ್ಗಧಾರೆ

ಮೇಲಿಂದ ಕೆಳಕ್ಕೆ:
1.ಕಡಸು 2.ರತ್ನ
3.ಮಡಿಲು 4.ಷರಬತ್ತು
6.ಮನವಿ 7.ಉದಾಹರಣೆ
9.ಪರಿಧಿ 10.ಪ್ರಹಸನ
11.ಸಾವಿರ 13.ಕುದುರೆ
14.ನಖ

ಸುಡೊಕು 6430

2			1				8	
						5		9
8		3			9		1	
3		9	5		1			
	6						4	
5		1	6		8			2
	7			3		2		4
4		5					6	
	8		4	6		3		1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6429 ಸುಡೊಕು

4	7	5	3	9	8	2	6	1
1	2	9	6	4	7	5	8	3
3	6	8	5	1	2	4	9	7
9	5	2	7	8	1	3	4	6
6	4	1	9	5	3	8	7	2
8	3	7	2	6	4	1	5	9
7	1	6	4	3	5	9	2	8
5	9	3	8	2	6	7	1	4
2	8	4	1	7	9	6	3	5

ಆರ್‌ಸಿಬಿ– ಕೆಕೆಆರ್ ಪಂದ್ಯಕ್ಕೆ ವರುಣನ ಅಡ್ಡಿ • ಪ್ರೇಕ್ಷಕರ ಗ್ಯಾಲರಿಯಲ್ಲಿ ಶ್ವೇತವರ್ಣದ ಅಲೆ

ನಿಲ್ಲದ ಮಳೆ, ತಣಿಯದ ಉತ್ಸಾಹ

• ಗಿರೀಶ ದೊಡ್ಡಮನಿ



ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಿದ ವಿರಾಟ್ ಕೊಹ್ಲಿ ಅವರಿಗೆ ಅಭಿಮಾನಿಗಳು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ಆರ್‌ಸಿಬಿ ಹಾಗೂ ಕೆಕೆಆರ್ ತಂಡಗಳ ನಡುವಿನ ಪಂದ್ಯದ ವೇಳೆ ಬಿಳಿಬಣ್ಣದ ಟೀಶರ್ಟ್ ಧರಿಸಿ ಗೌರವ ಸಲ್ಲಿಸಿದರು

ಪ್ರಜಾವಾಣಿ ಚಿತ್ರ: ಕೃಷ್ಣ ಕುಮಾರ್ ಪಿ.ಎಸ್.

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದ ಪ್ರೇಕ್ಷಕರ ಗ್ಯಾಲರಿಯಲ್ಲಿ ಶನಿವಾರ ಕೆಂಪು ವರ್ಣದ ಅಲೆ ಇರಲಿಲ್ಲ. ಆದರೆ ಅಚ್ಚ ಬಿಳಿ ಬಣ್ಣ ಪಸರಿಸಿತ್ತು. ಶ್ವೇತವರ್ಣದ ಪೋಷಾಕುಗಳ ಮೇಲೆ 'ಹದಿನೆಂಟು' ಎಂಬ ಸಂಖ್ಯೆ ಫಳಗುಟ್ಟುತ್ತಿತ್ತು.

ಆದರೆ ಆ ಪೋಷಾಕುಗಳನ್ನು ತೊಟ್ಟು ಬಂದಿದ್ದ ಸಾವಿರಾರು ಕ್ರಿಕೆಟ್ ಪ್ರಿಯರಿಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಕೋಲ್ಕತ್ತ ನೈಟ್ ರೈಡರ್ಸ್ ನಡುವಣ ಐಪಿಎಲ್ ಪಂದ್ಯವನ್ನು ಕಣ್ತುಂಬಿಕೊಳ್ಳುವ ಅವಕಾಶವನ್ನು ಮಳೆರಾಯ ನೀಡಲಿಲ್ಲ. ಇದರಿಂದಾಗಿ ಪಂದ್ಯ ರದ್ದಾಯಿತು. ಉಭಯ ತಂಡಗಳಿಗೂ ತಲಾ ಒಂದು ಅಂಕ ನೀಡಲಾಯಿತು. ಇದರೊಂದಿಗೆ ಕೋಲ್ಕತ್ತ ತಂಡಕ್ಕೆ ಪ್ಲೇ ಆಫ್ ಪ್ರವೇಶಿಸಲು ಇದ್ದ ಸಣ್ಣ ಅವಕಾಶವೂ ಕೊಚ್ಚಿ ಹೋಯಿತು. ಆತಿಥೇಯ ತಂಡವು ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಶನಿವಾರ ಸಂಜೆ 6 ಗಂಟೆಯ ಸುಮಾರಿಗೆ ಶುರುವಾದ ಮಳೆಯಿಂದಾಗಿ ರಾತ್ರಿ 10 ಗಂಟೆ ದಾಟಿದರೂ ಬರುತ್ತಲೇ ಇತ್ತು. ಒಮ್ಮೆ ಜೋರಾಗಿ, ಮತ್ತೊಮ್ಮೆ ಮೆಲ್ಲಗೆ ಸುರಿಯುತ್ತಲೇ ಇತ್ತು. ಆದರೆ ಸಂಪೂರ್ಣವಾಗಿ ವಿರಮಿಸಲೇ ಇಲ್ಲ. ಇದರಿಂದಾಗಿ ಟಾಸ್ ಕೂಡ ಸಾಧ್ಯವಾಗಲಿಲ್ಲ. ಪಿಚ್ ಮೇಲೆ ಹಾಕಿದ್ದ ಹೊದಿಕೆಯನ್ನು ತೆಗೆಯಲಿಲ್ಲ. ಉಭಯ ತಂಡಗಳ ಆಟಗಾರರು ಡ್ರೆಸ್ಸಿಂಗ್ ರೂಮ್‌ನಲ್ಲಿ ಹರಟೆ ಹೊಡೆಯುತ್ತ ಕೂತಿದ್ದರು.

ಆಗೊಮ್ಮೆ, ಈಗೊಮ್ಮೆ ಮೈದಾನದ ದೊಡ್ಡ ಪರದೆಯಲ್ಲಿ ಅವರನ್ನು ತೋರಿಸಿದಾಗಲೆಲ್ಲ ಅಭಿಮಾನಿಗಳು ಕೇಕೆ ಹಾಕಿ ಸಂಭ್ರಮಿಸುತ್ತಿದ್ದರು. ಡಿ.ಜೆ. ಸಂಗೀತ ನಿರಂತರವಾಗಿ ಮೊಳಗುತ್ತಿತ್ತು.

ಭಾರತ ಮತ್ತು ಪಾಕಿಸ್ತಾನ ಸೇನಾ ಸಂಘರ್ಷದ ಕಾರಣದಿಂದ ಸುಮಾರು ಎಂಟು ದಿನಗಳಿಂದ ಐಪಿಎಲ್ ಸ್ಥಗಿತವಾಗಿತ್ತು. ಆರ್‌ಸಿಬಿ ಮತ್ತು ಕೆಕೆಆರ್ ಪಂದ್ಯವು ಐಪಿಎಲ್ ಪುನರಾರಂಭದ ಮೊದಲ ಹಣಾಹಣಿಯೂ ಆಗಿತ್ತು. ಈ ಪಂದ್ಯದಲ್ಲಿ ಆರ್‌ಸಿಬಿ ಜಯಿಸಿದರೆ ಪ್ಲೇಆಫ್ ಖಚಿತವಾಗುತ್ತಿತ್ತು. ತಂಡಕ್ಕೆ ಇನ್ನೆರಡು ಪಂದ್ಯಗಳು ಬಾಕಿಯಿದ್ದು ಗುರಿ ಕಷ್ಟವೇನಿಲ್ಲ.

ಆದರೆ ಎಲ್ಲಕ್ಕಿಂತ ಮುಖ್ಯವಾಗಿ ಅಭಿಮಾನಿಗಳು ಇಲ್ಲಿ ಕಿಕ್ಕಿರಿದು ಸೇರಿದ್ದು ತಮ್ಮ ನೆಚ್ಚಿನ ವಿರಾಟ್ ಕೊಹ್ಲಿಗಾಗಿ. ಈಚೆಗಷ್ಟೇ ಕೊಹ್ಲಿ ಟೆಸ್ಟ್ ಮಾದರಿಗೆ ನಿವೃತ್ತಿ ಘೋಷಿಸಿದ್ದರು.

ಐಪಿಎಲ್

ಈ ದಿಗ್ಗಜ ಆಟಗಾರನಿಗೆ ಬೆಂಗಳೂರು ಒಂದು ರೀತಿಯಲ್ಲಿ ತವರು ಮನೆಯೇ ಆಗಿದೆ. 18 ವರ್ಷಗಳಿಂದ ಅವರು ಆರ್‌ಸಿಬಿಯಲ್ಲಿ ಆಡುತ್ತಿದ್ದಾರೆ. ಅವರಿಗೆ ಅಪಾರ ಸಂಖ್ಯೆಯ ಅಭಿಮಾನಿಗಳು ಇಲ್ಲಿದ್ದಾರೆ.

ಆದ್ದರಿಂದಾಗಿ ವಿರಾಟ್ ಅವರಿಗೆ ಅಭಿನಂದನೆ ಸಲ್ಲಿಸಲು ಆರ್‌ಸಿಬಿ ಅಭಿಮಾನಿಗಳು ಬಿಳಿ ಪೋಷಾಕು ತೊಟ್ಟು ಬಂದಿದ್ದರು. ಜೆರ್ಸಿಯ ಹಿಂಭಾಗದಲ್ಲಿ 'ಎಂಡ್ ಆಫ್ ಎನ್ ಎರಾ' (ಒಂದು ಯುಗಾಂತ್ಯ) ಎಂಬ ಒಕ್ಕಣೆಯೂ ಇತ್ತು. ಕೆಲವು ಅಭಿಮಾನಿಗಳು ಬ್ಯಾನರ್‌ಗಳನ್ನೂ ಮಾಡಿಸಿಕೊಂಡು ಬಂದಿದ್ದರು. ಆದರೆ ಮಳೆ ನಿಲ್ಲಲಿಲ್ಲ, ಪಂದ್ಯ ಆರಂಭವಾಗಲಿಲ್ಲ. ಪ್ರೇಕ್ಷಕರ ಗ್ಯಾಲರಿಯಲ್ಲಿದ್ದ ಬಹುತೇಕರ ಉತ್ಸಾಹವೂ ಕಡಿಮೆಯಾಗಲಿಲ್ಲ. ಮಳೆ, ಚಳಿಗಾಳಿಯನ್ನೂ ಲೆಕ್ಕಿಸದೇ ಹಾಜರಿದ್ದರು.

ಐಪಿಎಲ್: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
ರಾಯಲ್ ಚಾಲೆಂಜರ್ಸ್ ಬೆಂಗಳೂರು	12	8	3	17	0.482
ಗುಜರಾತ್ ಟೈಟನ್ಸ್	11	8	3	16	0.793
ಪಂಜಾಬ್ ಕಿಂಗ್ಸ್	11	7	3	15	0.376
ಮುಂಬೈ ಇಂಡಿಯನ್ಸ್	12	7	5	14	1.156
ಡೆಲ್ಲಿ ಕ್ಯಾಪಿಟಲ್ಸ್	11	6	4	13	0.362
ಕೋಲ್ಕತ್ತ ನೈಟ್ ರೈಡರ್ಸ್	13	5	6	12	0.193
ಲಖನೌ ಸೂಪರ್ ಜೈಂಟ್ಸ್	11	5	6	10	-0.469
ಸನ್‌ರೈಸರ್ಸ್ ಹೈದರಾಬಾದ್	11	3	7	7	-1.192
ರಾಜಸ್ಥಾನ ರಾಯಲ್ಸ್	12	3	9	6	-0.718
ಚೆನ್ನೈ ಸೂಪರ್ ಕಿಂಗ್ಸ್	12	3	9	6	-0.992

ಚೆಸ್: ಕರ್ನಾಟಕದ ಅವನಿ ಚಾಂಪಿಯನ್

ಮುಂಬೈ (ಪಿಟಿಐ): ಕರ್ನಾಟಕದ ಬಾಲಕಿ ಅವನಿ ಆಚಾರ್ಯ ಉಡುಪಿ ಅವರು ಅಖಿಲ ಭಾರತ ಚೆಸ್ ಮಾಸ್ಟರ್ಸ್ ಫಿಡೆ ರೇಟೆಡ್ ಕ್ಲಾಸಿಕಲ್ ಚೆಸ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡರು. ಶನಿವಾರ ಮುಕ್ತಾಯಗೊಂಡ ಈ ಟೂರ್ನಿಯಲ್ಲಿ ಅವನಿ ಎಂಟು ಸುತ್ತುಗಳಿಂದ ಏಳು ಅಂಕ ಸಂಗ್ರಹಿಸಿ ಅಜೇಯರಾಗುಳಿದರು.

ಮಹಾರಾಷ್ಟ್ರದ ಮಯೂರೇಶ್ ಪಾರ್ಕರ್ ಕೂಡ ಏಳು ಅಂಕ ಸಂಗ್ರಹಿಸಿದರೂ ಕಡಿಮೆ ಟೈಬ್ರೇಕ್‌ನಿಂದಾಗಿ ಎರಡನೇ ಸ್ಥಾನ ಪಡೆಯಬೇಕಾಯಿತು. ಅವನಿ 36.5 ಮತ್ತು ಮಯೂರೇಶ್ 32 ಟೈಬ್ರೇಕ್ ಅಂಕ ಹೊಂದಿದ್ದರು.


1669ರ ರೇಟಿಂಗ್ ಹೊಂದಿರುವ 20 ವರ್ಷ ವಯಸ್ಸಿನ ಅವನಿ ₹30,000 ಬಹುಮಾನ ಪಡೆದರೆ, ಮಯೂರೇಶ್ ₹20,000 ಬಹುಮಾನ ಪಡೆದರು.

ಕೊನೆಯ ಸುತ್ತಿನಲ್ಲಿ ಅವನಿ, ದರ್ಶ್ ಶೆಟ್ಟಿ (6.5) ವಿರುದ್ಧ ಜಯಗಳಿಸಿದರೆ, ಮಯೂರೇಶ್, ಯಶ್ ಕಪಾಡಿ (6.5) ವಿರುದ್ಧ ಗೆಲುವು ಸಾಧಿಸಿದರು. ವೆಂಕಟ್ ರಾಯಾನ್ಶ್ (6.5), ಓಂ ಗಾಡಾ (6.5) ಜೊತೆ ಡ್ರಾ ಮಾಡಿಕೊಂಡರು.



ಪ್ಲೇ ಆಫ್ ಮೇಲೆ ಕಣ್ಣಿಟ್ಟಿರುವ ಶ್ರೇಯಸ್ ಬಳಗ

ಜೈಪುರದಲ್ಲಿ 'ಕಿಂಗ್' ಆಗುವುದೇ ಪಂಜಾಬ್?



ಪಂಜಾಬ್ ಕಿಂಗ್ಸ್ ತಂಡದ ನಾಯಕ ಶ್ರೇಯಸ್ ಅಯ್ಯರ್



ರಾಜಸ್ಥಾನ ರಾಯಲ್ಸ್ ತಂಡದ ವೈಭವ್ ಸೂರ್ಯವಂಶಿ

ಜೈಪುರ (ಪಿಟಿಐ): ಪ್ಲೇ ಆಫ್ ಪ್ರವೇಶ ಖಚಿತಪಡಿಸಿಕೊಳ್ಳುವ ಛಲದಲ್ಲಿರುವ ಪಂಜಾಬ್ ಕಿಂಗ್ಸ್ ತಂಡವು ಭಾನುವಾರ ರಾಜಸ್ಥಾನ ರಾಯಲ್ಸ್ ಎದುರು ಕಣಕ್ಕಿಳಿಯಲಿದೆ.

ಮೇ 8ರಂದು ಧರ್ಮಶಾಲಾದಲ್ಲಿ ಪಂಜಾಬ್ ಕಿಂಗ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ನಡುವಣ ಪಂದ್ಯವನ್ನು ಅರ್ಧಕ್ಕೆ ಸ್ಥಗಿತಗೊಳಿಸಲಾಗಿತ್ತು. ಭಾರತ ಮತ್ತು ಪಾಕಿಸ್ತಾನ ಸೇನಾ ಸಂಘರ್ಷದ ಕಾರಣ 'ಬ್ಲ್ಯಾಕ್‌ಔಟ್' ಘೋಷಿಸಿದ್ದರಿಂದ ಪಂದ್ಯ ಕೂಡ ನಿಂತಿತ್ತು.

ಒಂದು ವಾರದ ಬಿಡುವಿನ ನಂತರ ಐಪಿಎಲ್ ಶುರುವಾಗಿದೆ. ಆದರೆ ಪಂಜಾಬ್ ತಂಡವು ತನ್ನ ತವರು ತಾಣಗಳಾದ ಚಂಡೀಗಡ ಮತ್ತು ಧರ್ಮಶಾಲಾದಲ್ಲಿ ಇನ್ನುಳಿದಿರುವ ಪಂದ್ಯಗಳನ್ನು ಆಡುತ್ತಿಲ್ಲ. ಜೈಪುರದಲ್ಲಿಯೇ ಉಳಿದೆಲ್ಲ ಪಂದ್ಯಗಳನ್ನು ಆಡುತ್ತಿದೆ.

ಆತಿಥೇಯ ರಾಜಸ್ಥಾನ ರಾಯಲ್ಸ್ ತಂಡವು ಈಗಾಗಲೇ ಪ್ಲೇ ಆಫ್ ಹಾದಿಯಿಂದ ಹೊರಬಿದ್ದಾಗಿದೆ. ತಂಡದಲ್ಲಿರುವ 14 ವರ್ಷದ ಬಾಲಪ್ರತಿಭೆ ವೈಭವ್ ಸೂರ್ಯವಂಶಿ ಅವರ ಆಟದ ಮೇಲೆ ಎಲ್ಲರ ನೋಟ ನೆಟ್ಟಿದೆ. ವೈಭವ್ ಟೂರ್ನಿಯಲ್ಲಿ ಈಗಾಗಲೇ ಒಂದು ಶತಕ ಹೊಡೆದು ಗಮನ ಸೆಳೆದಿದ್ದಾರೆ.


ಆದರೆ ಶ್ರೇಯಸ್ ಅಯ್ಯರ್ ನಾಯಕತ್ವದ ಪಂಜಾಬ್ ತಂಡವು 11 ಪಂದ್ಯಗಳಿಂದ 15 ಅಂಕ ಗಳಿಸಿದೆ. ಬಿಡುವಿನ ಸಂದರ್ಭದಲ್ಲಿ ತಮ್ಮ ತವರಿಗೆ ತೆರಳಿದ್ದ ಕೆಲವು ವಿದೇಶಿ ಆಟಗಾರರು ಮರಳದ ಕಾರಣ ಪಂಜಾಬ್ ತಂಡದ ಸಂಯೋಜನೆಯಲ್ಲಿ ಕೆಲವು ಬದಲಾವಣೆಗಳಾಗುವ ಸಾಧ್ಯತೆ ಇದೆ. ಪ್ರಮುಖವಾಗಿ ಆಸ್ಟ್ರೇಲಿಯಾದ ಮಾರ್ಕಸ್ ಸ್ಟೋಯಿನಿಸ್ ಮತ್ತು ಜೋಶ್ ಇಂಗ್ಲಿಸ್ ಅವರು ರಾಜಸ್ಥಾನ ಎದುರಿನ ಪಂದ್ಯಕ್ಕೆ ಲಭ್ಯರಿಲ್ಲ. ನಂತರದ ಪಂದ್ಯದಲ್ಲಿ ಅವರು ಆಡುವರು. ಇದರಿಂದಾಗಿ ಬ್ಯಾಟಿಂಗ್ ವಿಭಾಗದಲ್ಲಿ ಬದಲಾವಣೆ ಅಗತ್ಯವಾಗಿದೆ.

ತಂಡದ ಬ್ಯಾಟಿಂಗ್ ವಿಭಾಗವು ಉತ್ತಮವಾಗಿದೆ. ಶ್ರೇಯಸ್, ಪ್ರಿಯಾಂಶ್ ಆರ್ಯ, ಪ್ರಭಸಿಮ್ರನ್ ಸಿಂಗ್ ಮತ್ತು ನೇಹಲ್ ವಧೇರಾ ಉತ್ತಮ ಲಯದಲ್ಲಿದ್ದಾರೆ. ರಾಜಸ್ಥಾನ ವೇಗಿ ಜೋಫ್ರಾ ಆರ್ಚರ್ ಅವರನ್ನು ಎದುರಿಸುವ ಸವಾಲು ಬ್ಯಾಟರ್‌ಗಳ ಮುಂದಿದೆ.

ವೇಗಿ, ದಕ್ಷಿಣ ಆಫ್ರಿಕಾದ ಮಾರ್ಕೊ ಯಾನ್ಸೆನ್ ಅವರು ಲಭ್ಯರಿಲ್ಲ. 11 ವಿಕೆಟ್ ಪಡೆದಿರುವ ಮಾರ್ಕೊ ಪರಿಣಾಮಕಾರಿ ಬೌಲರ್ ಎನಿಸಿದ್ದಾರೆ. ನ್ಯೂಜಿಲೆಂಡ್ ವೇಗಿ ಕೈಲ್ ಜೆಮಿಸನ್, ಎಡಗೈವೇಗಿ ಅರ್ಷದೀಪ್ ಸಿಂಗ್ ಹಾಗೂ ಲೆಗ್‌ಸ್ಪಿನ್ನರ್ ಯಜುವೇಂದ್ರ ಚಾಹಲ್ (14 ವಿಕೆಟ್) ಅವರು ತಂಡಕ್ಕೆ ಜಯದ ಕಾಣಿಕೆ ನೀಡಲು ಸಮರ್ಥರಾಗಿದ್ದಾರೆ.

ಪಂದ್ಯ ಆರಂಭ: ಮಧ್ಯಾಹ್ನ 3.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಡೆಲ್ಲಿಗೆ ಇಂದು ಜಿಟಿ ಸವಾಲು





ಶುಭಮನ್ ಗಿಲ್ ಅಕ್ಷರ್ ಪಟೇಲ್

ನವದೆಹಲಿ (ಪಿಟಿಐ): ಹೋದ ವಾರದ ಮಧ್ಯದಲ್ಲಿ ಧರ್ಮಶಾಲಾದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡವು, ಪಂಜಾಬ್ ಕಿಂಗ್ಸ್ ವಿರುದ್ಧ ಆಡುವಾಗ ಪಂದ್ಯ ಅರ್ಧದಲ್ಲೇ 'ಬ್ಲ್ಯಾಕ್‌ಔಟ್' ಆಗಿ ಸ್ಥಗಿತಗೊಂಡಿತ್ತು. ಆದರೆ ಅದಕ್ಕೆ ಮೊದಲಿನ ಕೆಲವು ಪಂದ್ಯಗಳಿಂದಲೇ ಪರದಾಡುತ್ತಿರುವ ಡೆಲ್ಲಿ ತಂಡವು ಭಾನುವಾರ ನಡೆಯುವ ಐಪಿಎಲ್ ಪಂದ್ಯದಲ್ಲಿ ಪ್ರಬಲ ಗುಜರಾತ್ ಟೈಟನ್ಸ್ ತಂಡವನ್ನು ಎದುರಿಸಲಿದ್ದು ಪ್ಲೇ ಆಫ್ ಆಸೆಗೆ ಜೀವ ನೀಡುವ ವಿಶ್ವಾಸದಲ್ಲಿದೆ.

ಲೀಗ್ ಪುನರಾರಂಭ ಆದರೂ ಡೆಲ್ಲಿ ತಂಡದ ಕೆಲವು ಆಟಗಾರರು ಬಂದಿಲ್ಲ. ಅಕ್ಷರ್ ಪಟೇಲ್ ನೇತೃತ್ವದ ತಂಡ 11 ಪಂದ್ಯಗಳಿಂದ 13 ಅಂಕ ಪಡೆದಿದೆ. ಕೊನೆಯ ಐದು ಪಂದ್ಯಗಳಲ್ಲಿ ಮೂರು ಸೋತಿದೆ. ಒಂದು ಮಳೆಯ ಪಾಲಾಗಿತ್ತು. ಈಗ ಪ್ರಮುಖ ವೇಗದ ಬೌಲಿಂಗ್ ಅಸ್ತ್ರ ಆಸ್ಟ್ರೇಲಿಯಾದ ಮಿಚೆಲ್ ಸ್ಟಾರ್ಕ್ ಅಲಭ್ಯರಾಗಿರುವುದು ತಂಡಕ್ಕೆ ಚಿಂತೆ ಮೂಡಿಸಿದೆ. ಅವರ ಬದಲು ಬಾಂಗ್ಲಾದೇಶದ ವೇಗಿ ಮುಸ್ತಫಿಝುರ್ ರಹಮಾನ್ ತಂಡ ಸೇರಿಕೊಂಡಿದ್ದಾರೆ. ಅವರು ಐಪಿಎಲ್‌ನ ಅನುಭವಿ ಬೌಲರ್ ಆಗಿದ್ದು 7.84ರ ಇಕಾನಮಿಯಲ್ಲಿ 38 ವಿಕೆಟ್‌ಗಳನ್ನು ಪಡೆದಿದ್ದಾರೆ.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಈ ಬಾರಿ ಡೆಲ್ಲಿ ತಂಡದ ಸಾಧನೆ ಕಳಪೆಯಾಗಿದೆ. ಕೇವಲ ಒಂದೇ ಗೆಲುವು ಪಡೆದಿದೆ. ಅದೂ ಸೂಪರ್ ಓವರ್‌ನಲ್ಲಿ. ತಂಡದ ಬೌಲಿಂಗ್ ಪರಿಣಾಮಕಾರಿಯಾಗಿಲ್ಲ. ವೇಗದ ಬೌಲರ್‌ಗಳಾದ ದುಷ್ಮಂತ ಚಮೀರ ಮತ್ತು ಮುಕೇಶ್ ಕುಮಾರ್ ಪರದಾಡುತ್ತಿದ್ದಾರೆ. ಹೀಗಾಗಿ ಮುಸ್ತಫಿಝುರ್ ಪಾತ್ರ ಪ್ರಮುಖವಾಗಲಿದೆ.

ಬ್ಯಾಟರ್‌ಗಳಿಂದ ಸ್ಥಿರ ಪ್ರದರ್ಶನ ಬರಬೇಕಾಗಿದೆ. ಮೊದಲ ಪಂದ್ಯದಲ್ಲಿ ಮಿಂಚಿದ ನಂತರ ಕರುಣ್ ನಾಯರ್ ಸ್ಥಿರ ಪ್ರದರ್ಶನ ನೀಡಿಲ್ಲ. ಫಾಫ್ ಡುಪ್ಲೆಸಿ, ಅಭಿಷೇಕ್ ಪೊರೆಲ್ ಉತ್ತಮ ಆರಂಭದ ಲಾಭ ಪಡೆಯುತ್ತಿಲ್ಲ. ಹೀಗಾಗಿ ಅನುಭವಿ ಕೆ.ಎಲ್.ರಾಹುಲ್ ಅವರ ಮೇಲೆ ಹೆಚ್ಚಿನ ಹೊಣೆಯಿದೆ.

ಇನ್ನೊಂದೆಡೆ, ಬಟ್ಲರ್ ಮತ್ತು ರಬಾಡ ಅವರು ಮರಳಿರುವ ಕಾರಣ ಗುಜರಾತ್ ಉತ್ಸಾಹದಿಂದ ಇದೆ. ನಾಯಕ ಶುಭಮನ್ ಗಿಲ್, ಬಿ.ಸಾಯಿ ಸುದರ್ಶನ್, ಬಟ್ಲರ್ ಅವರು ತಂಡದ ಬ್ಯಾಟಿಂಗ್ ಆಧಾರಸ್ತಂಭ ಎನಿಸಿದ್ದಾರೆ.

ಬೌಲಿಂಗ್‌ನಲ್ಲಿ ಪ್ರಸಿದ್ಧ ಕೃಷ್ಣ (20 ವಿಕೆಟ್) ಲೀಗ್‌ನ ಯಶಸ್ವಿ ಬೌಲರ್ ಎನಿಸಿದ್ದಾರೆ. ಮೊಹಮ್ಮದ್ ಸಿರಾಜ್, ಎಡಗೈ ಸ್ಪಿನ್ನರ್ ಸಾಯಿಕಿಶೋರ್ ಅವರೂ ಪ್ರಮುಖ ಪಾತ್ರ ವಹಿಸಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30.



ಸೆಮಿಫೈನಲ್‌ಗೆ ಭಾಂಬ್ರಿ–ಗ್ಯಾಲವೆ

ನವದೆಹಲಿ (ಪಿಟಿಐ): ಭಾರತದ ಯುಕಿ ಭಾಂಬ್ರಿ ಮತ್ತು ಅವರ ಅಮೆರಿಕದ ಜೊತೆಗಾರ ರಾಬರ್ಟ್ ಗ್ಯಾಲವೆ ಅವರು ಫ್ರಾನ್ಸ್‌ನ ಬೋರ್ಡೌನಲ್ಲಿ ನಡೆಯುತ್ತಿರುವ ಬೋರ್ಡೌ ಚಾಲೆಂಜರ್ ಟೂರ್ನಿಯ ಡಬಲ್ಸ್ ಸೆಮಿಫೈನಲ್ ತಲುಪಿದ್ದಾರೆ.

ಶನಿವಾರ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ, ಎರಡನೇ ಶ್ರೇಯಾಂಕದ ಇಂಡೊ–ಅಮೆರಿಕನ್ ಜೋಡಿ 7–5, 6–3 ರಿಂದ ಆತಿಥೇಯ ಫ್ರಾನ್ಸ್‌ನ ಹಾಲಿಸ್– ಅಲ್ಬನೊ ಒಲಿವೆಟ್ಟಿ ಜೋಡಿಯನ್ನು ಸೋಲಿಸಿತು. ಪಂದ್ಯ 68 ನಿಮಿಷಗಳ ಕಾಲ ನಡೆಯಿತು.

ಯುಕಿ ಮತ್ತು ಗ್ಯಾಲವೆ ಜೋಡಿ ಮುಂದಿನ ಪಂದ್ಯದಲ್ಲಿ ಮೂರನೇ ಶ್ರೇಯಾಂಕ ಪಡೆದಿರುವ ಬ್ರೆಜಿಲ್‌ನ ರಫೇಲ್ ಮಾಟೊಸ್– ಮಾರ್ಸೆಲೊ ಮೆಲೊ ಜೋಡಿಯನ್ನು ಎದುರಿಸಲಿದೆ.

ಭಾರತದ ಇತರ ಆಟಗಾರರು ನಿರ್ಗಮಿಸಿದರು. ಎನ್.ಶ್ರೀರಾಮ್ ಬಾಲಾಜಿ ಮತ್ತು ಮೆಕ್ಸಿಕೊದ ಜೊತೆಗಾರ ಮಿಗೆಲ್ ರೆಯೆಸ್–ವೆಲರೆ ಅವರು ಕ್ವಾರ್ಟರ್‌ಫೈನಲ್‌ನಲ್ಲಿ ಹೊರಬಿದ್ದರು. ಸುಮಿತ್ ನಗಾಲ್ ಸಿಂಗಲ್ಸ್ ಮೊದಲ ಸುತ್ತಿನಲ್ಲೇ ಸೋಲನುಭವಿಸಿದ್ದರು.

ಸ್ಯಾಫ್ ಫುಟ್‌ಬಾಲ್ ಫೈನಲ್: ಭಾರತಕ್ಕೆ ಬಾಂಗ್ಲಾ ಸವಾಲು

ಯುಪಿಯಾ (ಅರುಣಚಾಲ ಪ್ರದೇಶ), (ಪಿಟಿಐ): ಗೆಲುವಿನ ನಾಗಾಲೋಟದಲ್ಲಿರುವ ಭಾರತ ತಂಡವು ಭಾನುವಾರ ನಡೆಯಲಿರುವ ಸ್ಯಾಫ್ 19 ವರ್ಷದೊಳಗಿನವರ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ ಬಾಂಗ್ಲಾದೇಶ ವಿರುದ್ಧ ಗೆಲ್ಲುವ ನೆಚ್ಚಿನ ತಂಡವಾಗಿದೆ.

ಭಾರತ ಗುಂಪು ಹಂತದಲ್ಲಿ ಲಂಕಾ ತಂಡದ ಮೇಲೆ 8–0 ಯಿಂದ, ನೇಪಾಳ ತಂಡದ ಮೇಲೆ 4–0ಯಿಂದ ಮತ್ತು ಸೆಮಿಫೈನಲ್‌ನಲ್ಲಿ ಮಾಲ್ಡೀವ್ಸ್ ತಂಡದ ಮೇಲೆ 3–0 ಯಿಂದ ಜಯಗಳಿಸಿ ಆತ್ಮವಿಶ್ವಾಸದಲ್ಲಿದೆ. ಭಾನುವಾರದ ಫೈನಲ್ ಗೆದ್ದರೆ, ಭಾರತ ಪುರುಷರ ವಿಭಾಗದಲ್ಲಿ ಹತ್ತನೇ ಬಾರಿ ಸ್ಯಾಫ್ ಟೂರ್ನಿಯ ಕಿರೀಟ ಧರಿಸಿದಂತಾಗುತ್ತದೆ.

ಭಾರತ 15 ವರ್ಷ, 16 ವರ್ಷ, 17 ವರ್ಷದೊಳಗಿನವರ ವಿಭಾಗದಲ್ಲಿ ತಲಾ ಎರಡು ಬಾರಿ ಪ್ರಶಸ್ತಿ ಗೆದ್ದಿದೆ. 18, 19 ಮತ್ತು 20 ವರ್ಷದೊಳಗಿನವರ ವಿಭಾಗದಲ್ಲಿ ತಲಾ ಒಮ್ಮೆ ಚಾಂಪಿಯನ್ ಆಗಿದೆ. ಹೆಡ್ ಕೋಚ್ ಬಿಬ್ಲಿಯಾನೊ ಫೆರ್ನಾಂಡಿಸ್ ಮಾರ್ಗದರ್ಶನದಲ್ಲಿ ಮೂರು ಬಾರಿ ಪ್ರಶಸ್ತಿ ಗೆದ್ದುಕೊಂಡಿದೆ. ಭಾರತ ಮತ್ತು ಬಾಂಗ್ಲಾದೇಶ ತಂಡಗಳು ಸ್ಯಾಫ್ ಟೂರ್ನಿಗಳ ಫೈನಲ್‌ನಲ್ಲಿ ನಾಲ್ಕು ಬಾರಿ ಎದುರಾಳಿಗಳಾಗಿವೆ.



ಬಿಬ್ಲಿಯಾನೊ

'ನಾವು ಪಿಚ್‌ನಲ್ಲಿ ನಮ್ಮಿಂದಾದಷ್ಟು ಉತ್ತಮ ಪ್ರದರ್ಶನ ನೀಡುತ್ತೇವೆ. ಕಳೆದ ಮೂರು ಪಂದ್ಯಗಳ ರೀತಿ ಫೈನಲ್‌ನಲ್ಲೂ ಪ್ರೇಕ್ಷಕರಿಗೆ ಮೋಸವಾಗುವುದಿಲ್ಲ' ಎಂದು ಫೆರ್ನಾಂಡಿಸ್ ಹೇಳಿದರು.

ಇಂಡಿಯನ್ ಗ್ರ್ಯಾನ್‌ಪ್ರಿ 2: ಕುಜೂರ್‌ಗೆ ಡಬಲ್ ಚಿನ್ನ

ಅನಿಮೇಶ್ ವೇಗದ ಓಟಗಾರ



ಅನಿಮೇಶ್ ಕುಜೂರ್

ತಿರುವನಂತಪುರ (ಪಿಟಿಐ): ಒಡಿಶಾದ ಅನಿಮೇಶ್ ಕುಜೂರ್ ಅವರು ಶನಿವಾರ ಇಲ್ಲಿ ನಡೆದ ಇಂಡಿಯನ್ ಗ್ರ್ಯಾನ್‌ಪ್ರಿ 2 ಕೂಟದಲ್ಲಿ ಪುರುಷರ 100 ಮೀಟರ್ ಮತ್ತು 200 ಮೀಟರ್ ಓಟದಲ್ಲಿ ಚಿನ್ನ ಗೆದ್ದು, ವೇಗದ ಓಟಗಾರನಾಗಿ ಹೊರಹೊಮ್ಮಿದರು.

21 ವರ್ಷ ವಯಸ್ಸಿನ ಕುಜೂರ್ 100 ಮೀ. (ರೇಸ್ ಎ) ದೂರದ ಗುರಿಯನ್ನು 10.31 ಸೆಕೆಂಡುಗಳಲ್ಲಿ ತಲುಪಿದರು. 200 ಮೀ. ಓಟದಲ್ಲಿ ರಾಷ್ಟ್ರೀಯ ದಾಖಲೆ (20.40ಸೆ) ಹೊಂದಿರುವ ಅವರು (ರೇಸ್ ಡಿ) 20.55 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಡಬಲ್ ಚಿನ್ನ ಗೆದ್ದರು.

ಕರ್ನಾಟಕದ ಧನುಷ್ ಕೆ. (10.90ಸೆ) ಮತ್ತು ಆರ್ಯನ್ ಮನೋಜ್ (10.79ಸೆ) ಅವರು ಕ್ರಮವಾಗಿ ಪುರುಷರ 100 ಮೀ ರೇಸ್ ಬಿ ಮತ್ತು ರೇಸ್ ಸಿ ನಲ್ಲಿ ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು. ನಿಖಿಲ್ ಎಸ್. ಪುರುಷರ 400 ಮೀ (ರೇಸ್ ಎ) ನಲ್ಲಿ ಕಂಚಿನ ಪದಕ ಗೆದ್ದರು.

ಫಲಿತಾಂಶ: ಪುರುಷರು: 100 ಮೀ (ರೇಸ್ ಎ): ಅನಿಮೇಶ್ ಕುಜೂರ್ (ಒಡಿಶಾ, 10.31 ಸೆ)–1, ಲಾಲು ಪ್ರಸಾದ್ ಭೋಯಿ (ಒಡಿಶಾ)–2, ದೊಂಡಪತಿ ಎಂ. (ಒಡಿಶಾ)–3. ರೇಸ್ ಬಿ: ಮೊಹಮ್ಮದ್ ಎಚ್. (ಕೇರಳ, 10.83 ಸೆ)–1, ಧನುಷ್ ಕೆ. (ಕರ್ನಾಟಕ)–2, ಧೀರಜ್ ಕೆ (ಆರ್ಮಿ)–3. ರೇಸ್ ಸಿ: ಅಭಿನಾಶ್ ಸಾಹು (ಒಡಿಶಾ, 10.74 ಸೆ)–1, ಆರ್ಯನ್ ಮನೋಜ್ (ಕರ್ನಾಟಕ)–2, ಅಜಿನ್ ಆರ್ (ಕೇರಳ)–3. 200 ಮೀ. (ರೇಸ್ ಡಿ): ಅನಿಮೇಶ್ ಕುಜೂರ್ (20.55 ಸೆ)–1, ವಿಶಾಲ್ ಟಿ.ಕೆ. (ಎನ್‌ಸಿಒಇ ತಿರುವನಂತಪುರ)–2, ರಾಗುಲ್ ಕುಮಾರ್ ಜಿ (ತಮಿಳುನಾಡು)–3. 400 ಮೀ (ರೇಸ್ ಎ): ನವಪ್ರೀತ್ ಸಿಂಗ್ (ದೆಹಲಿ, 48.69 ಸೆ)–1, ಸಜ್ಜನ್ ಮಿಶ್ರಾ (ಆರ್ಮಿ)–2, ನಿಖಿಲ್ ಎಸ್ (ಕರ್ನಾಟಕ)–3.

ಮಹಿಳೆಯರು: 100 ಮೀ (ರೇಸ್ ಎ): ಶತಾಕ್ಷಿ ರೈ (ಬಿಹಾರ್, 11.91 ಸೆ)–1, ಕೀರ್ತನಾ ಎಸ್. (ಕರ್ನಾಟಕ)–2, ಪ್ರಿಯಾ ಚೌಹಾಣ್ (ದೆಹಲಿ)–3. (ರೇಸ್ ಬಿ): ಅಭಿನಯಾ ರಾಜರಾಜನ್ (ಎನ್‌ಸಿಒಇ ತಿರುವನಂತಪುರ, 11.55 ಸೆ)–1, ಸ್ನೇಹಾ ಎಸ್.ಎಸ್. (ಕರ್ನಾಟಕ)–2, ನಿತ್ಯ ಗಂಧೆ (ತೆಲಂಗಾಣ)–3. 800 ಮೀ: ಲಕ್ಷ್ಮಿಪ್ರಿಯಾ ಎ. ಕಿಸಾನ್ (ಒಡಿಶಾ, 2ನಿ. 09.10 ಸೆ)–1, ವಿಜಯಕುಮಾರಿ ಜಿ.ಕೆ (ಕರ್ನಾಟಕ)–2, ಪ್ರಿಸ್ಸಿಲ್ಲಾ ಡೇನಿಯಲ್ (ಎನ್‌ಸಿಒಇ ತಿರುವನಂತಪುರ)–3. 400 ಮೀ. ಹರ್ಡಲ್ಸ್: ವಿದ್ಯಾ ರಾಮರಾಜ್ (ತಮಿಳುನಾಡು, 57.45 ಸೆ)–1, ಅನು ಆರ್. (ಕೇರಳ)–2, ದೀಕ್ಷಿತಾ ಆರ್. (ಕರ್ನಾಟಕ)–3.

ವಿಶ್ವ ಟಿಟಿ: ಶ್ರೀಜಾಗೆ ಸೋಲು, ಭಾರತದ ಇತರರು ಮುನ್ನಡೆ



ಶ್ರೀಜಾ ಆಕುಲ

ದೋಹಾ (ಪಿಟಿಐ): ಭಾರತದ ಅಗ್ರ ಆಟಗಾರ್ತಿ ಶ್ರೀಜಾ ಆಕುಲ ಅವರು ವಿಶ್ವ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್ ಮಹಿಳಾ ಸಿಂಗಲ್ಸ್ ಮೊದಲ ಸುತ್ತಿನಲ್ಲೇ ಸೋಲನುಭವಿಸಿದರು. ಆದರೆ ಭಾರತದ ಇತರ ಸ್ಪರ್ಧಿಗಳು ಯಶಸ್ಸು ಕಂಡರು. ದಿಯಾ ಚಿತಾಳೆ ಮತ್ತು ಮಾನುಷ್ ಶಾ ಅವರು ಶನಿವಾರ ಎರಡನೇ ಸುತ್ತಿಗೆ ಮುನ್ನಡೆದರು.

ಇವರ ಜೊತೆಗೆ ಮುಖರ್ಜಿದ್ವಯರಾದ ಐಹಿಕಾ ಮತ್ತು ಸುತೀರ್ಥ ಜೋಡಿ, ದಿಯಾ ಮತ್ತು ಯಶಸ್ವಿನಿ ಘೋರ್ಪಡೆ ಜೋಡಿ ಮಹಿಳಾ ಡಬಲ್ಸ್‌ನಲ್ಲಿ ಮೊದಲ ಸುತ್ತನ್ನು ಯಶಸ್ವಿಯಾಗಿ ದಾಟಿತು. ಪುರುಷರ ಡಬಲ್ಸ್‌ನಲ್ಲಿ ಮಾನವ್ ಠಕ್ಕರ್ ಮತ್ತು ಮಾನುಷ್ ಸಹಾ ಮುನ್ನಡೆದರು.

ಲಯಕ್ಕೆ ಪರದಾಡಿದ ಆಕುಲ 1–4 ರಿಂದ (11–9, 8–11, 6–11, 5–11, 2-11) ಥಾಯ್ಲೆಂಡ್‌ನ ಸುತಾಸಿನಿ ಸೆವೆಟ್ಟಬಟ್ ಅವರಿಗೆ ಮಣಿದರು. ಸುತಾಸಿನಿ ವಿಶ್ವ ಕ್ರಮಾಂಕದಲ್ಲಿ 84ನೇ ಸ್ಥಾನದಲ್ಲಿದ್ದು ಕೇವಲ 33 ನಿಮಿಷಗಳಲ್ಲಿ ಗೆಲುವು ಕಂಡರು.

ಏಷ್ಯನ್ ಗೇಮ್ಸ್ ಪದಕ ವಿಜೇತರಾದ ಐಹಿಕಾ– ಸುತೀರ್ಥ ಮಹಿಳಾ ಡಬಲ್ಸ್‌ನಲ್ಲಿ 3–2 ರಿಂದ (4–11, 11–9, 10–12, 11–9, 11–7) ಟರ್ಕಿಯ ಓಜ್ಗೆ ಯಿಲ್ಮಾಝ್– ಈಸ್ ಹರಾಕ್ ಜೋಡಿಯನ್ನು ಸೋಲಿಸಿತು. ದಿಯಾ– ಯಶಸ್ವಿನಿ ಜೋಡಿ 9–11, 11–2, 11–9, 11–8 ರಿಂದ ಉಜ್ಬೇಕಿಸ್ತಾನದ ಮೆಗ್ದೀವಾ– ಎರ್ಕೆಬಯೇವಾ ಜೋಡಿಯನ್ನು ಹಿಮ್ಮೆಟ್ಟಿಸಿತು.

ಠಕ್ಕರ್– ಮಾನುಷ್ ಶಾ ಜೋಡಿ 11–7, 11–8, 11–6 ರಲ್ಲಿ ಸ್ಲೊವೇನಿಯಾದ ಡೆನಿ ಕೊಝುಲ್– ಪೀಟರ್ ಹ್ರಿಬರ್ ವಿರುದ್ಧ ಗೆಲುವು ಸಾಧಿಸಿತು.

ಶಾ ನಂತರ ಪುರುಷರ ಸಿಂಗಲ್ಸ್‌ನಲ್ಲಿ 4–2 ರಿಂದ (11–6, 2–11, 11–7, 11–6, 5–11, 11–6) ಪೋರ್ಚುಗಲ್‌ನ ತಿಯಾಗೊ ಅಪೊಲೊನಿಯ ಎದುರು ಜಯಗಳಿಸಿದರು.



ಭಾನುವಾರ, ಮೇ 18, 2025 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ


ಓದುಗರ ಗಮನಕ್ಕೆ

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ.


ಮಣ್ಣಿನ ಮಗ ಭಾರತಾಂಬೆಯ ಹೆಮ್ಮೆಯ ಪುತ್ರ
ರಾಷ್ಟ್ರದ 11ನೇ ಪ್ರಧಾನಮಂತ್ರಿಗಳು ಜಾತ್ಯಾತೀತ ಜನತಾದಳ
(ಜೆ..ಡಿ.ಎಸ್) ರಾಷ್ಟ್ರೀಯ ಅಧ್ಯಕ್ಷರಾದ
ಸನ್ಮಾನ್ಯ
ಶ್ರೀ ಹೆಚ್.ಡಿ ದೇವೇಗೌಡ
ದಿನಾಂಕ: 18-05-2025
ಅಪ್ಪಾಜಿ ರವರಿಗೆ
92 ನೇ ವರ್ಷದ
ಜನ್ಮದಿನದ ಶುಭಾಶಯಗಳು
ಕನ್ನಡಿಗರ ಅಕ್ಕರೆಯ ಮಣ್ಣಿನಮಗ, ಭಾರತದ ನೆಚ್ಚಿನ ಭೂಮಿಪುತ್ರ, ಹಳ್ಳಿಯಿಂದ ದಿಲ್ಲಿಯವರೆಗೂ ಬೆಳೆದು ನಿಂತ ಮಹಾನ್ ನಾಯಕರು ಶ್ರೀ ದೇವೇಗೌಡರು.
ಕರ್ನಾಟಕವಷ್ಟೇ ಅಲ್ಲ, ರಾಷ್ಟ್ರಮಟ್ಟದಲ್ಲಿಯೂ ಜ್ವಲಂತ ನೀರಾವರಿ ಬಿಕ್ಕಟ್ಟುಗಳನ್ನು ಪರಿಹರಿಸಿದ ಕಾವೇರಿ ಮಾತೆಯ ಮುದ್ದಿನ ಮಗನಾದ ಅಪ್ಪಾಜಿ ಅವರು ಇನ್ನೂ ಧೀರ್ಘಕಾಲ ಆಯುರಾರೋಗ್ಯದಿಂದ ಬಾಳಿಬದುಕಿ, ನಮಗೆ, ಈ ರಾಷ್ಟ್ರ ಮತ್ತು ರಾಜ್ಯದ ಶ್ರೇಯೋಭಿವೃದ್ಧಿಗೆ ಮಾರ್ಗದರ್ಶನ ನೀಡಲಿ, ಅವರ ಆಶೀರ್ವಾದ ಎಂದೆಂದಿಗೂ ನಮ್ಮ ಮೇಲಿರಲಿ ಎಂದು ಹೃದಯಪೂರ್ವಕವಾಗಿ ಪ್ರಾರ್ಥಿಸುತ್ತೇವೆ.
ಜೈ ಕರ್ನಾಟಕ ಜೈ ಹಿಂದ್
ಶುಭಕೋರುವವರು
ಶ್ರೀ ಟಿ.ಎನ್. ಜವರಾಯಿಗೌಡರು
ಮಾನ್ಯ ವಿಧಾನ ಪರಿಷತ್ ಸದಸ್ಯರು ಕರ್ನಾಟಕ
ಮತ್ತು ಯಶವಂತಪುರ ವಿದಾನಸಭಾ ಕ್ಷೇತ್ರದ ಜೆಡಿಎಸ್ ಪಕ್ಷದ
ಎಲ್ಲಾ ಗೌರವಾನ್ವಿತ ಮುಖಂಡರು, ಕಾರ್ಯಕರ್ತರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರತಿಕ್ರಿಯೆ



‘ಆಪರೇಷನ್ ಸಿಂಧೂರ’ ಭಾಗವಾಗಿ ಭಯೋತ್ಪಾದಕರ ಮೂಲಸೌಕರ್ಯಗಳನ್ನು ಗುರಿಯಾಗಿಸುವ ಬಗ್ಗೆ ಪಾಕಿಸ್ತಾನಕ್ಕೆ ಮುಂಚಿತವಾಗಿ ಮಾಹಿತಿ ನೀಡಿರುವುದು ಅಪರಾಧ. ಈ ರೀತಿ ಮಾಹಿತಿ ನೀಡಲು ಯಾರು ಅನುಮೋದನೆ ಕೊಟ್ಟದ್ದು?

ರಾಹುಲ್ ಗಾಂಧಿ, ಲೋಕಸಭೆ ವಿಪಕ್ಷದ ನಾಯಕ

(ವಿದೇಶಾಂಗ ಸಚಿವ ಎಸ್. ಜೈಶಂಕರ್ ವಿಡಿಯೊ ಹೇಳಿಕೆಗೆ ಪ್ರತಿಕ್ರಿಯೆ)

ಎಂಎಸ್ಎಂಇ: ನಾನಾ ಸಮಸ್ಯೆ

ರಾಜ್ಯದಲ್ಲಿ ಎಂಎಸ್ಎಂಇ ಚಿತ್ರಣ

17.48 ಲಕ್ಷ ಉದ್ಯಮ್ ನೋಂದಣಿ ಆ್ಯಪ್‌ನಲ್ಲಿ ನೋಂದಣಿ ಮಾಡಿದ ಎಂಎಸ್ಎಂಇಗಳು

17.09 ಲಕ್ಷ ಅತಿ ಸಣ್ಣ ಉದ್ಯಮಗಳು

35,906 ಸಣ್ಣ ಉದ್ಯಮಗಳು

2,941 ಮಧ್ಯಮ ಗಾತ್ರದ ಉದ್ಯಮಗಳು

1.68 ಕೋಟಿ ಎಂಎಸ್ಎಂಇಗಳು ರಾಜ್ಯದಲ್ಲಿ ಸೃಷ್ಟಿಸಿರುವ ಉದ್ಯೋಗಗಳು (2024ರ ಡಿಸೆಂಬರ್ 31ರವರೆಗೆ)

ಒಳನೋಟ

• ಸೂರ್ಯನಾರಾಯಣ ವಿ.



ಬೆಂಗಳೂರಿನ ಜಿಗಣಿ ಕೈಗಾರಿಕಾ ಪ್ರದೇಶದಲ್ಲಿ ಕಾಮಗಾರಿಗಳಿಂದಾಗಿ ಸಾರ್ವಜನಿಕರು ವಾಹನ ಚಲಾಯಿಸಲು ಪರದಾಡುತ್ತಿರುವುದು ಚಿತ್ರ / ಆನೇಕಲ್ ಶಿವಣ್ಣ

ಬೆಂಗಳೂರು: ‘ಕರ್ನಾಟಕದ ಆರ್ಥಿಕ ಬೆಳವಣಿಗೆಯಲ್ಲಿ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳು (ಎಂಎಸ್ಎಂಇ) ಪ್ರಮುಖ ಪಾತ್ರವಹಿಸುತ್ತಿವೆ. ನಿರುದ್ಯೋಗದ ಪ್ರಮಾಣ ತಗ್ಗಿಸುವಲ್ಲಿ ಇವುಗಳ ಕೊಡುಗೆ ಹಿರಿದು. ಲಕ್ಷಾಂತರ ಉದ್ಯೋಗಿಗಳಿಗೆ ಕೆಲಸ ನೀಡುವ ಮೂಲಕ ಅವರ ಕುಟುಂಬಗಳ ಬದುಕಿಗೆ ಭದ್ರತೆ ನೀಡಿವೆ. ಆದರೆ, ಈ ವಲಯ ಹಲವು ಸಮಸ್ಯೆಗಳಿಂದ ನರಳುತ್ತಿದೆ’

– ಹೀಗೆಂದವರು ರಾಜ್ಯದ ಕೈಗಾರಿಕೆಗಳನ್ನು ಪ್ರತಿನಿಧಿಸುವ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಅಧ್ಯಕ್ಷ ಎಂ.ಜಿ.ಬಾಲಕೃಷ್ಣ.

‘ನಾನು 25 ವರ್ಷಗಳಿಂದ ಬೆಂಗಳೂರಿನ ಪೀಣ್ಯಾ ಕೈಗಾರಿಕಾ ಪ್ರದೇಶದಲ್ಲಿ ತಯಾರಿಕಾ ಘಟಕವನ್ನು ನಡೆಸುತ್ತಿದ್ದೇನೆ. ಈ ಪ್ರದೇಶದಲ್ಲಿ 10 ಸಾವಿರ ಕೈಗಾರಿಕೆಗಳಿವೆ. ಇಂದಿಗೂ ಅಲ್ಲಿ ಮೂಲಸೌಕರ್ಯ ಇಲ್ಲ. ಸುಸಜ್ಜಿತ ರಸ್ತೆ ಇಲ್ಲ. ಚರಂಡಿ ವ್ಯವಸ್ಥೆಯಿಲ್ಲ. ಬೀದಿದೀಪದ ವ್ಯವಸ್ಥೆಯೂ ಇಲ್ಲ’


– ಇದು ಉದ್ಯಮಿ ಮುರಳೀಕೃಷ್ಣ ಅವರ ಮಾತು.

ಈ ಮಾತು ಆರ್ಥಿಕತೆ ಹಾಗೂ ಉದ್ಯೋಗ ಸೃಷ್ಟಿಯಲ್ಲಿ ಮಹತ್ವದ ಕೊಡುಗೆ ನೀಡುತ್ತಿರುವ ಎಂಎಸ್ಎಂಇ ವಲಯ ಎದುರಿಸುತ್ತಿರುವ ಸವಾಲುಗಳನ್ನು ಸ್ಪಷ್ಟವಾಗಿ ಬಿಂಬಿಸುತ್ತವೆ. ಹಲವು ಸಮಸ್ಯೆಗಳ ಕಾರಣಕ್ಕೆ ಆರ್ಥಿಕವಾಗಿ ಸದೃಢವಿಲ್ಲದ ಸಣ್ಣ ಹಾಗೂ ಮಧ್ಯಮ ಉದ್ದಿಮೆಗಳು ಮುಚ್ಚುವ ಹಂತಕ್ಕೆ ತಲುಪಿವೆ. ಇದು ಒಟ್ಟಾರೆಯಾಗಿ ರಾಜ್ಯದಲ್ಲಿ ಎಂಎಸ್ಎಂಇ ಬೆಳವಣಿಗೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತಿದೆ ಎನ್ನುವುದು ಈ ವಲಯದ ಉದ್ಯಮಿಗಳ ಅಳಲು.

ದೇಶದ ಒಟ್ಟು ಆಂತರಿಕ ಉತ್ಪನ್ನದಲ್ಲಿ (ಜಿಡಿಪಿ) ಎಂಎಸ್ಎಂಇಗಳ ಕೊಡುಗೆ ಶೇ 30ರಷ್ಟಿದೆ. ಒಟ್ಟಾರೆ ರಫ್ತಿನಲ್ಲಿ ಎಂಎಸ್ಎಂಇ ಉತ್ಪನ್ನಗಳ ರಫ್ತಿನ ಪ್ರಮಾಣ ಶೇ 46 ರಷ್ಟಿದೆ. ರಾಜ್ಯದ ಆದಾಯಕ್ಕೆ ಕೈಗಾರಿಕೆಗಳ ಕೊಡುಗೆ ಶೇ 20.15ರಷ್ಟು ಇದ್ದು, ಇದರಲ್ಲಿ ಎಂಎಸ್ಎಂಇಗಳ ಕೊಡುಗೆ ಗಣನೀಯವಾಗಿದೆ. ಆದರೆ, ಕೈಗಾರಿಕಾ ಪ್ರದೇಶ-ಗಳಲ್ಲಿ ಮೂಲಸೌಕರ್ಯಗಳ ಕೊರತೆ, ಸಕಾಲದಲ್ಲಿ ಸಿಗದ ಹಣಕಾಸಿನ ಸೌಲಭ್ಯ, ಕುಶಲ ಕಾರ್ಮಿಕರ ಕೊರತೆ, ನಿರ್ವಹಣಾ ವೆಚ್ಚ ಅಧಿಕವಾಗಿರುವುದು, ಉದ್ದಿಮೆಗಳು ಟೈರ್-1 ನಗರಗಳನ್ನು ಕೇಂದ್ರಿತ-ವಾಗಿರುವುದು ಸೇರಿದಂತೆ ಹಲವು ಸಮಸ್ಯೆಗಳು ಎಂಎಸ್ಎಂಇ ವಲಯದ ಬೆಳವಣಿಗೆಗೆ ಅಡ್ಡಗಾಲು ಹಾಕುತ್ತಿವೆ. ಎಂಎಸ್ಎಂಇಗಳಿಗೆ ಉತ್ತೇಜನ ನೀಡುವುದಕ್ಕಾಗಿ ಸರ್ಕಾರಗಳು ವಿವಿಧ ಪ್ರೋತ್ಸಾಹಕ ಕಾರ್ಯಕ್ರಮಗಳನ್ನು ರೂಪಿಸಿವೆ.

6ನೇ ಪುಟ ನೋಡಿ


ಚರ್ಚಿಸಿ ಸೂಕ್ತ ತೀರ್ಮಾನ



ರಾಜ್ಯದಲ್ಲಿ ಎಂಎಸ್ಎಂಇ ವಲಯದಲ್ಲಿ ಹಲವು ತೊಂದರೆಗಳಿರುವುದು ಗಮನದಲ್ಲಿದೆ. ದೊಡ್ಡ ಉದ್ಯಮಕ್ಕೆ ಬ್ಯಾಂಕ್‌ಗಳು ಮನೆ ತನಕ ಹೋಗಿ ಸಾಲ ನೀಡುತ್ತವೆ. ಆದರೆ, ಸಣ್ಣ ಕೈಗಾರಿಕೆಗಳಿಗೆ ಬ್ಯಾಂಕುಗಳು ಸಾಲ ನೀಡುತ್ತಿಲ್ಲ. ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು

ಶರಣಬಸಪ್ಪ ದರ್ಶನಾಪುರ, ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ಯಮಗಳ ಇಲಾಖೆ ಸಚಿವ

‘ಅವಶ್ಯಕತೆಗೆ ತಕ್ಕಂತೆ ಸಾಲ ಸೌಲಭ್ಯ ಬೇಕು’



ರಾಜ್ಯದಲ್ಲಿ ವಿಶೇಷವಾಗಿ ಟೈರ್-2 ಮತ್ತು ಟೈರ್-3 ನಗರಗಳಲ್ಲಿ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಸಾಲ ಪಡೆಯಲು ಹರಸಾಹಸ ಪಡಬೇಕಾದ ಪರಿಸ್ಥಿತಿ ಇದೆ. ಹಣಕಾಸು ಸಂಸ್ಥೆಗಳ ಕಠಿಣ ಅಡಮಾನ ನಿಯಮಗಳು ಮತ್ತು ಸೀಮಿತ ಆರ್ಥಿಕ ಸಾಕ್ಷರತೆಯಿಂದಾಗಿ ಉದ್ಯಮಗಳು ತೊಂದರೆ ಎದುರಿಸುತ್ತಿವೆ. ಎಂಎಸ್ಎಂಇಗಳ ಅಗತ್ಯಗಳಿಗೆ ಅನುಸಾರ ಸಾಲ ಸೌಲಭ್ಯವನ್ನು ಕಲ್ಪಿಸುವ ನಿಟ್ಟಿನಲ್ಲಿ ಹಣಕಾಸು ಸಂಸ್ಥೆಗಳು ನೀತಿಗಳನ್ನು ರೂಪಿಸಬೇಕು. ಇದರೊಂದಿಗೆ, ಗ್ರಾಮೀಣ ಪ್ರದೇಶಗಳಲ್ಲಿ ಅತಿಸಣ್ಣ ಮತ್ತು ಸಣ್ಣ ಕೈಗಾರಿಕೆಗಳಿಗೆ ವಿಧಿಸುತ್ತಿರುವ ಬಡ್ಡಿ ದರ, ನಿರ್ವಹಣಾ ಶುಲ್ಕ ಮತ್ತು ನವೀಕರಣ ಶುಲ್ಕಗಳು ದುಬಾರಿಯಾಗಿದ್ದು, ಇದು ಉದ್ಯಮಿಗಳಿಗೆ ಆರ್ಥಿಕವಾಗಿ ಹೆಚ್ಚಿನ ಹೊರೆ ಉಂಟುಮಾಡುತ್ತಿದೆ. ಈ ಶುಲ್ಕಗಳನ್ನು ಕನಿಷ್ಠ ಮಟ್ಟಕ್ಕೆ ನಿಗದಿಪಡಿಸಿದರೆ ಅನುಕೂಲವಾಗುತ್ತದೆ.

ಎಂ.ಜಿ.ರಾಜಗೋಪಾಲ್, ಕಾಸಿಯಾ ಅಧ್ಯಕ್ಷ



ತುರ್ತು ಭೂಸ್ಪರ್ಶ

ಉಸಿರಾಟದ ಸಮಸ್ಯೆಯಿಂದ ಬಳಲುತ್ತಿದ್ದ ವ್ಯಕ್ತಿಯೊಬ್ಬರನ್ನು ರಕ್ಷಿಸಲು ತೆರಳಿದ್ದ ಏಮ್ಸ್‌ನ ‘ಸಂಜೀವಿನಿ’ ಹೆಲಿ ಆಂಬುಲೆನ್ಸ್‌ನಲ್ಲಿ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡು ಉತ್ತರಾಖಂಡದ ರುದ್ರಪ್ರಯಾಗದಲ್ಲಿನ ಹೆಲಿಪ್ಯಾಡ್‌ನ ಹತ್ತಿರದಲ್ಲಿಯೇ ಶನಿವಾರ ತುರ್ತು ಭೂಸ್ಪರ್ಶ ಮಾಡಿತು. ಈ ವೇಳೆ ಹೆಲಿಕಾಪ್ಟರ್‌ನ ಹಿಂಭಾಗವು ಮುರಿದು ಬಿದ್ದಿತು. ಹೆಲಿಕಾಪ್ಟರ್‌ನಲ್ಲಿದ್ದ ಇಬ್ಬರು ವೈದ್ಯರು, ಪೈಲಟ್ ಸುರಕ್ಷಿತವಾಗಿ ಪಾರಾದರು

–ಪಿಟಿಐ ಚಿತ್ರ

ವೈದ್ಯರ ಕೊರತೆ ನೀಗಿಸಲು ವೈದ್ಯಕೀಯ ಶಿಕ್ಷಣ ಇಲಾಖೆ ಕ್ರಮ

ತಜ್ಞ ವೈದ್ಯರ ನಿವೃತ್ತಿ ವಯಸ್ಸು 65ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಜ್ಞ ವೈದ್ಯರ ಕೊರತೆ ನೀಗಿಸಲು ಮುಂದಾಗಿರುವ ವೈದ್ಯಕೀಯ ಶಿಕ್ಷಣ ಇಲಾಖೆ, ಸೂಪರ್ ಸ್ಪೆಷಾಲಿಟಿ ವೈದ್ಯರ ನಿವೃತ್ತಿ ವಯಸ್ಸನ್ನು 60 ವರ್ಷದಿಂದ 65ಕ್ಕೆ ಹೆಚ್ಚಿಸಿ ಆದೇಶ ಹೊರಡಿಸಿದೆ.

ಇಲಾಖೆಯಡಿ 22 ಸ್ವಾಯತ್ತ ವೈದ್ಯಕೀಯ ಕಾಲೇಜುಗಳು ಹಾಗೂ 10 ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು ಕಾರ್ಯ ನಿರ್ವಹಿಸುತ್ತಿವೆ. ಈ ಸಂಸ್ಥೆಗಳಲ್ಲಿ ಒಟ್ಟು 508 ಸೂಪರ್ ಸ್ಪೆಷಾಲಿಟಿ ಹುದ್ದೆಗಳು ಮಂಜೂರಾಗಿದ್ದು, 232 ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ. 276 ಹುದ್ದೆಗಳು ಖಾಲಿಯಿವೆ. ರಾಜ್ಯದಲ್ಲಿ ಸೂಪರ್ ಸ್ಪೆಷಾಲಿಟಿ ವೈದ್ಯರ ಕೊರತೆಯಿಂದ, ವೈದ್ಯಕೀಯ ವಿದ್ಯಾರ್ಥಿಗಳಿಗೆ ಬೋಧನೆ ಹಾಗೂ



ರೋಗಿಗಳಿಗೆ ಚಿಕಿತ್ಸೆ ನೀಡುವಲ್ಲಿ ಸಮಸ್ಯೆ ಆಗುತ್ತಿದೆ. ಆದ್ದರಿಂದ ತಜ್ಞ ವೈದ್ಯರ ವಯೋ ನಿವೃತ್ತಿ ವಯಸ್ಸನ್ನು 65ಕ್ಕೆ ಏರಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಇಲಾಖೆಯು ರಾಜ್ಯದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳನ್ನು ಸ್ಥಾಪಿಸುವ ಸಂಬಂಧ ಡಾ.ಸಿ.ಎನ್. ಮಂಜುನಾಥ್ ಅವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿತ್ತು. ಈ ಸಮಿತಿಯು ಸೂಪರ್ ಸ್ಪೆಷಾಲಿಟಿ ವೈದ್ಯರ ವಯೋ ನಿವೃತ್ತಿ ವಯಸ್ಸನ್ನು ಹೆಚ್ಚಿಸಲು ಶಿಫಾರಸು ಮಾಡಿತ್ತು.

ಸೂಪರ್ ಸ್ಪೆಷಾಲಿಟಿ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 232 ತಜ್ಞ ವೈದ್ಯರಲ್ಲಿ, 34 ಮಂದಿ ಪ್ರಸಕ್ತ ಸಾಲಿನಲ್ಲಿ 60 ವರ್ಷ ಪೂರ್ಣಗೊಳಿಸುತ್ತಿದ್ದಾರೆ. ಈ ವೈದ್ಯರನ್ನು ಹಾಲಿ ವೇತನ ಶ್ರೇಣಿಯಲ್ಲಿಯೇ ನಿವೃತ್ತಿ ಹೊಂದುವವರೆಗೆ ಮುಂದುವರಿಸಬೇಕು ಎಂದು ತಿಳಿಸಲಾಗಿದೆ.

ಕಾರ್ಯನಿರತ ವೈದ್ಯರು ಸೂಪರ್ ಸ್ಪೆಷಾಲಿಟಿ ಕೋರ್ಸ್ ಅನ್ನು ಪೂರ್ಣಗೊಳಿಸುವ ವೇಳೆಗೆ 40ರಿಂದ 45 ವರ್ಷಗಳನ್ನು ದಾಟಿರುತ್ತಾರೆ.

6ನೇ ಪುಟ ನೋಡಿ

ಕಾರ್ಯಾಗಾರ ಆಯೋಜಿಸಲು ಸಿಬಿಎಸ್‌ಇ ಸೂಚನೆ

ಶಾಲೆಗಳಲ್ಲಿರಲಿ ‘ಮಧುಮೇಹ ಫಲಕ’



13% 4 ವರ್ಷದಿಂದ 10 ವರ್ಷದ ಒಳಗಿನ ಮಕ್ಕಳು ಸೇವಿಸುತ್ತಿರುವ ಆಹಾರದಲ್ಲಿರುವ ಸಕ್ಕರೆ ಪ್ರಮಾಣ

15% 11 ವರ್ಷದಿಂದ 18 ವರ್ಷದ ಒಳಗಿನ ಮಕ್ಕಳು ಸೇವಿಸುತ್ತಿರುವ ಆಹಾರದಲ್ಲಿರುವ ಸಕ್ಕರೆ ಪ್ರಮಾಣ

5% 4ವರ್ಷದಿಂದ 18 ವರ್ಷದ ಒಳಗಿನ ಮಕ್ಕಳು ಸೇವಿಸುವ ಆಹಾರದಲ್ಲಿ ಇರಬೇಕಾದ ಸಕ್ಕರೆ ಪ್ರಮಾಣ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ (ಪಿಟಿಐ): ‘ಸಕ್ಕರೆ ಅಂಶವಿರುವ ಆಹಾರ ಪದಾರ್ಥಗಳನ್ನು ಕಡಿಮೆ ಪ್ರಮಾಣದಲ್ಲಿ ಸೇವಿಸುವಂತೆ ಮಕ್ಕಳಲ್ಲಿ ಜಾಗೃತಿ ಮೂಡಿಸಲು ‘ಮಧುಮೇಹ ಫಲಕ’ಗಳನ್ನು ಸ್ಥಾಪಿಸಬೇಕು’ ಎಂದು ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯು (ಸಿಬಿಎಸ್‌ಇ) ತನ್ನೆಲ್ಲಾ ಶಾಲೆಗಳಿಗೆ ಸೂಚಿಸಿದೆ.



‘ಟೈಪ್ 2 ಮಧುಮೇಹವು ಸಾಮಾನ್ಯವಾಗಿ ವಯಸ್ಕರಲ್ಲಿ ಕಾಣಿಸಿಕೊಳ್ಳುತ್ತದೆ. ಆದರೆ, ಕಳೆದ ದಶಕದಿಂದ ಈ ವಿಧದ ಮಧುಮೇಹವು ಸಣ್ಣ ಮಕ್ಕಳಲ್ಲಿ ಗಣನೀಯ ಸಂಖ್ಯೆಯಲ್ಲಿ ಕಾಣಿಸಿಕೊಳ್ಳಲು ಆರಂಭಿಸಿದೆ. ಈ ಕಾರಣಕ್ಕಾಗಿ ಫಲಕವನ್ನು ಸ್ಥಾಪಿಸಬೇಕು’ ಎಂದು ಮೇ 14ರಂದು ಹೊರಡಿಸಿರುವ ಸುತ್ತೋಲೆಯಲ್ಲಿ ಸಿಬಿಎಸ್‌ಇ ಹೇಳಿದೆ. ‘ಈ ಬಗ್ಗೆ ಶಾಲೆಗಳಲ್ಲಿ ವಿಚಾರ ಸಂಕಿರಣಗಳನ್ನು, ಕಾರ್ಯಾಗಾರಗಳನ್ನು ಆಯೋಜಿಸಬೇಕು’ ಎಂದೂ ಹೇಳಿದೆ.

6ನೇ ಪುಟ ನೋಡಿ

ಫಲಕದಲ್ಲಿ ಏನಿರಬೇಕು?

- ಸಕ್ಕರೆ ಅಂಶವಿರುವ ಆಹಾರ ಪದಾರ್ಥಗಳ ಸೇವನೆಯಿಂದ ಉಂಟಾಗುವ ಆರೋಗ್ಯ ಸಮಸ್ಯೆಗಳ ಬಗ್ಗೆ ಫಲಕದಲ್ಲಿ ಮಾಹಿತಿಗಳನ್ನು ನೀಡಿ ಮಕ್ಕಳಲ್ಲಿ ಜಾಗೃತಿ ಮೂಡಿಸಬೇಕು
- ನಿತ್ಯದ ಆಹಾರ ಸೇವನೆಯಲ್ಲಿ ಸಕ್ಕರೆ ಪ್ರಮಾಣ ಎಷ್ಟಿರಬೇಕು, ನಾವು ನಿತ್ಯ ಸೇವಿಸುವ ಆಹಾರದಲ್ಲಿ ಎಷ್ಟು ಸಕ್ಕರೆ ಪ್ರಮಾಣವಿದೆ (ಕುರುಕಲು ತಿಂಡಿ, ತಂಪು ಪಾನೀಯವನ್ನೂ ಸೇರಿಸಿ) ಎಂಬೆಲ್ಲಾ ಮಾಹಿತಿಗಳನ್ನು ಫಲಕದಲ್ಲಿ ನೀಡಬೇಕು
- ಆರೋಗ್ಯಪೂರ್ಣ ಆಹಾರ ಪದ್ಧತಿ ಹೇಗಿರಬೇಕು, ಉತ್ತಮ ಆಹಾರ ಸೇವನೆಯಿಂದಾಗುವ ಲಾಭಗಳ ಬಗ್ಗೆ ಬರಹಗಳನ್ನು ಫಲಕದಲ್ಲಿ ಬರೆದು, ಮಕ್ಕಳಲ್ಲಿ ಅರಿವು ಮೂಡಿಸಬೇಕು

ಮದುವೆ ಮಂಟಪದಲ್ಲಿ ವರ ಹಠಾತ್ ಸಾವು

ಪ್ರಜಾವಾಣಿ ವಾರ್ತೆ

ಜಮಖಂಡಿ (ಬಾಗಲಕೋಟೆ ಜಿಲ್ಲೆ): ನಗರದ ನಂದಿಕೇಶ್ವರ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ಶನಿವಾರ ವಧುವಿಗೆ ತಾಳಿ ಕಟ್ಟಿ ಅಕ್ಷತೆ ಹಾಕಿ, ವೇದಿಕೆಯನ್ನೇರಿ ಚಿತ್ರ ತೆಗೆಸಿಕೊಳ್ಳುವ ವೇಳೆ ವರ ಕುಸಿದು ಬಿದ್ದು, ಮೃತಪಟ್ಟಿದ್ದಾರೆ.



ಪ್ರವೀಣ ಕುರಣಿ

ಜಮಖಂಡಿ ತಾಲ್ಲೂಕಿನ ಕುಂಬಾರಹಳ್ಳ ಗ್ರಾಮದ, ರಾಜ್ಯ ಸೈಕ್ಲಿಂಗ್ ಫೆಡರೇಶನ್ ಸಂಘಟನೆಯ ಕಾರ್ಯದರ್ಶಿ ಶ್ರೀಶೈಲ ಕುರಣಿ ಅವರ ಹಿರಿಯ ಪುತ್ರ ಪ್ರವೀಣ ಕುರಣಿ (22) ಮೃತರು. ಅವರು ಮನೆಯಲ್ಲಿ ಕಂಪ್ಯೂಟರ್ ಕೆಲಸ ಮಾಡುತ್ತಿದ್ದರು. ಅವರಿಗೆ ತಂದೆ, ತಾಯಿ, ಸಹೋದರ ಮತ್ತು ಸಹೋದರಿ ಮತ್ತು ಪತ್ನಿ ಇದ್ದಾರೆ.

‘ಶುಕ್ರವಾರ ರಾತ್ರಿ ಅರಿಸಿನ ಕಾರ್ಯಕ್ರಮದಲ್ಲಿ ಎಲ್ಲರೂ ಸಂಭ್ರಮಿಸಿದ್ದರು.

6ನೇ ಪುಟ ನೋಡಿ

ಭಾರತದ ದಾಳಿ: ಒಪ್ಪಿಕೊಂಡ ಷರೀಫ್

ನೂರ್ ಖಾನ್ ವಾಯುನೆಲೆಗೆ ಹಾನಿಯಾಗಿದೆ: ಪಾಕಿಸ್ತಾನದ ಪ್ರಧಾನಿ ಮಾಹಿತಿ

ಪ್ರಜಾವಾಣಿ ವಾರ್ತೆ


ನವದೆಹಲಿ: ಭಾರತವು ಪಾಕಿಸ್ತಾನದ ನೂರ್ ಖಾನ್ ವಾಯುನೆಲೆ ಮತ್ತು ಇತರ ಸ್ಥಳಗಳ ಮೇಲೆ ದಾಳಿ ನಡೆಸಿರುವುದನ್ನು ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಅವರು ಇದೇ ಮೊದಲ ಬಾರಿ ಒಪ್ಪಿಕೊಂಡಿದ್ದಾರೆ.

ಇಸ್ಲಾಮಾಬಾದ್‌ನಲ್ಲಿ ನಡೆದ ಸಮಾರಂಭದಲ್ಲಿ ಮಾತನಾಡಿದ ಷರೀಫ್, ಸೇನೆಯ ಮುಖ್ಯಸ್ಥ ಜನರಲ್ ಸೈಯದ್ ಆಸಿಮ್ ಮುನೀರ್ ಅವರು ಭಾರತದ ದಾಳಿ ಬಗ್ಗೆ ತಮಗೆ ಮಾಹಿತಿ ನೀಡಿರುವುದರ ವಿವರಗಳನ್ನು ಬಹಿರಂಗಪಡಿಸಿದ್ದಾರೆ.

‘ಮೇ 9 ಮತ್ತು 10ರ ಮಧ್ಯರಾತ್ರಿ 2.30ಕ್ಕೆ ಆಸಿಮ್ ಮುನೀರ್ ಅವರು ನನಗೆ ಕರೆ ಮಾಡಿ ಭಾರತವು ಖಂಡಾಂತರ ಕ್ಷಿಪಣೆಗಳನ್ನು ಉಡಾಯಿಸಿರುವ ಮಾಹಿತಿ ನೀಡಿದರು. ಒಂದು ಕ್ಷಿಪಣೆ ನೂರ್ ಖಾನ್ ವಾಯುನೆಲೆಗೆ ಅಪ್ಪಳಿಸಿದೆ ಮತ್ತು ಇತರ ಕ್ಷಿಪಣೆಗಳು ಬೇರೆ ಪ್ರದೇಶಗಳನ್ನು ಹಾನಿಗೊಳಿಸಿರುವುದಾಗಿ ತಿಳಿಸಿದರು’ ಎಂದು ಷರೀಫ್ ಅವರು ಭಾಷಣದಲ್ಲಿ ಹೇಳಿರುವುದಾಗಿ ‘ಎಎನ್‌ಐ’ ಶನಿವಾರ ವರದಿ ಮಾಡಿದೆ.

ಮುಖ್ಯಾಂಶಗಳು

- ಮೇ 9–10ರ ಮಧ್ಯರಾತ್ರಿ ಕ್ಷಿಪಣೆ ದಾಳಿ
- ದಾಳಿ ಬಗ್ಗೆ ಪಾಕ್ ಪ್ರಧಾನಿಗೆ ಮಾಹಿತಿ ನೀಡಿದ ಸೇನಾ ಮುಖ್ಯಸ್ಥ
- ಭಾಷಣದಲ್ಲಿ ಬಹಿರಂಗ ಹೇಳಿಕೆ ನೀಡಿದ ಷರೀಫ್



ಶೆಹಬಾಜ್ ಷರೀಫ್

ರಾವಲ್ಪಿಂಡಿ ಮತ್ತು ಇಸ್ಲಾಮಾಬಾದ್ ಮಧ್ಯೆ ಇರುವ ನೂರ್ ಖಾನ್ ವಾಯುನೆಲೆ ಪಾಕಿಸ್ತಾನದ ಪ್ರಮುಖ ಯುದ್ಧತಂತ್ರ ಸೌಲಭ್ಯಗಳಲ್ಲಿ ಒಂದು ಎನಿಸಿಕೊಂಡಿದೆ.

‘ಭಾರತವು ನೂರ್ ಖಾನ್ ವಾಯುನೆಲೆ ಮೇಲೆ ಬಾಂಬ್ ದಾಳಿ ನಡೆಸಿದೆ ಎಂದು ತಿಳಿಸಲು ಜನರಲ್ ಆಸಿಮ್ ಮುನೀರ್ ಮಧ್ಯರಾತ್ರಿ ಕರೆ ಮಾಡಿರುವುದನ್ನು ಶೆಹಬಾಜ್ ಷರೀಫ್ ಸ್ವತಃ ಒಪ್ಪಿಕೊಂಡಿದ್ದಾರೆ. ಭಾರತದ ದಾಳಿಯ ಸುದ್ದಿ ತಿಳಿದು ಪಾಕಿಸ್ತಾನದ ಪ್ರಧಾನಿ ಮಧ್ಯರಾತ್ರಿ ಎಚ್ಚರಗೊಂಡಿದ್ದಾರೆ. ‘ಆಪರೇಷನ್ ಸಿಂಧೂರ’ ಕಾರ್ಯಾಚರಣೆಯ ಪ್ರಮಾಣ ಮತ್ತು ನಿಖರತೆಯನ್ನು ಅದು ಹೇಳುತ್ತದೆ’ ಎಂದು ಬಿಜೆಪಿ ವಕ್ತಾರ ಅಮಿತ್ ಮಾಳವೀಯ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ. ಪಾಕ್ ಪ್ರಧಾನಿ ಭಾಷಣದ ವಿಡಿಯೊ ತುಣುಕನ್ನು ಅವರು ಹಂಚಿಕೊಂಡಿದ್ದಾರೆ.

ಪಹಲ್ಗಾಮ್ ದಾಳಿಗೆ ಪ್ರತ್ಯುತ್ತರವಾಗಿ ಭಾರತದ ಸಶಸ್ತ್ರ ಪಡೆಗಳು ಪಾಕಿಸ್ತಾನದಲ್ಲಿರುವ ಭಯೋತ್ಪಾದಕರ ತಾಣಗಳನ್ನು ಗುರಿಯಾಗಿಸಿ ಮೇ 7ರಂದು ‘ಆಪರೇಷನ್ ಸಿಂಧೂರ’ ನಡೆಸಲಾಗಿತ್ತು. ಆ ಬಳಿಕ ಉಭಯ ದೇಶಗಳ ನಡುವೆ ಸೇನಾ ಸಂಘರ್ಷ ಏರ್ಪಟ್ಟಿತ್ತು. ಪಾಕಿಸ್ತಾನದ ಡ್ರೋನ್ ದಾಳಿಗೆ ಪ್ರತಿಯಾಗಿ ಭಾರತದ ಸೇನೆ ಆ ದೇಶದ ಸೇನಾನೆಲೆಗಳನ್ನು ಗುರಿಯಾಗಿಸಿ ತಿರುಗೇಟು ನೀಡಿತ್ತು.

‘ಆಪರೇಷನ್ ಸಿಂಧೂರ’ ಕಾರ್ಯಾಚರಣೆಯಲ್ಲಿ ಭಾರತವು ‘ಬ್ರಹ್ಮೋಸ್’ ಸೂಪರ್‌ಸಾನಿಕ್ ಕ್ಷಿಪಣೆ ಬಳಸಿರುವುದರನ್ನು ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಶುಕ್ರವಾರ ದೃಢಪಡಿಸಿದ್ದರು.



ಭಾರತದ ದಾಳಿಯಿಂದ ನೂರ್‌ಖಾನ್ ವಾಯುನೆಲೆ ಹಾನಿಗೊಂಡ ಚಿತ್ರ

ಮಾವು: ಮನೆಯೇ ಮಾರುಕಟ್ಟೆ

‘ಕೊಪ್ಪಳ ಕೇಸರ್’ ಖರೀದಿಗೆ ಹೊರರಾಜ್ಯ ವ್ಯಾಪಾರಿಗಳ ಮೊಕ್ಕಾಂ

• ಪ್ರಮೋದ ಕುಲಕರ್ಣಿ

ಕೊಪ್ಪಳ: ವರ್ಷಪೂರ್ತಿ ಮರಗಳನ್ನು ಪೋಷಣೆ ಮಾಡಿ ಹೆಚ್ಚು ಲಾಭಕ್ಕಾಗಿ ಕಾಯುತ್ತಿದ್ದ ಜಿಲ್ಲೆಯ ಮಾವು ಬೆಳೆಗಾರರಿಗೆ ಮನೆಯಂಗಳದಲ್ಲಿಯೇ ಮಾರುಕಟ್ಟೆ ಲಭಿಸಿದೆ. ‘ಕೊಪ್ಪಳ ಕೇಸರ್’ ತಳಿಯ ಹಣ್ಣುಗಳನ್ನು ಖರೀದಿಸಲು ಹೊರರಾಜ್ಯಗಳ ವ್ಯಾಪಾರಿಗಳು 2-3 ತಿಂಗಳಿಂದ ಜಿಲ್ಲೆಯಲ್ಲಿಯೇ ಮೊಕ್ಕಾಂ ಹೂಡಿದ್ದಾರೆ.

ರಾಜ್ಯದ ತೋಟಗಾರಿಕಾ ಕ್ಷೇತ್ರದ ಹಬ್ ಆಗಿ ಬೆಳೆಯುತ್ತಿರುವ ಜಿಲ್ಲೆಯಲ್ಲಿ ಆರು ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತಿದೆ. ಈ ಬಾರಿ ನಾಲ್ಕೂವರೆ ಸಾವಿರ ಹೆಕ್ಟೇರ್‌ನಲ್ಲಿ ಅಂದಾಜು 40 ಸಾವಿರ ಮೆಟ್ರಿಕ್ ಟನ್‌ನಷ್ಟು ಫಸಲು ಬಂದಿದೆ. ಬಣ್ಣ ಹಾಗೂ ರುಚಿಗೆ ಹೆಸರಾದ ಕೊಪ್ಪಳ ಕೇಸರ್ ತಳಿಯೇ ಶೇ 90ರಷ್ಟಿದೆ. ಇನ್ನುಳಿದ ಪ್ರದೇಶದಲ್ಲಿ ದಶಹರಿ, ಬೆನೆಶಾನ್, ಸಿಂಧೂರಿ ತಳಿಯ ಹಣ್ಣುಗಳನ್ನು ಬೆಳೆಯಲಾಗಿದೆ.

ಮರಗಳು ಹೂ ಬಿಟ್ಟಾಗಲೇ ನೆರೆಯ ಸಿಂಧನೂರು, ಮಾನ್ವಿ, ಲಿಂಗಸೂಗೂರು, ಹೊಸಪೇಟೆ ಹಾಗೂ ಗದಗದ ಭಜಂತ್ರಿ ಸಮುದಾಯದ ಜನ ತೋಟಗಳನ್ನು ಗುತ್ತಿಗೆ ಪಡೆದು ರೈತರಿಗೆ ಹಣ ಪಾವತಿಸಿದ್ದಾರೆ. ಗುತ್ತಿಗೆ ಪಡೆದವರು ತಾವು ರೈತರಿಗೆ ನೀಡಿದ ಹಣಕ್ಕಿಂತಲೂ ದುಪ್ಪಟ್ಟು ಲಾಭ ಗಳಿಸುತ್ತಿದ್ದಾರೆ. ಮಹಾರಾಷ್ಟ್ರ, ನವದೆಹಲಿ, ಪಶ್ಚಿಮ ಬಂಗಾಳ, ಛತ್ತೀಸಗಢ, ಜಾರ್ಖಂಡ್ ಹಾಗೂ ಹರಿಯಾಣ ರಾಜ್ಯಗಳಿಂದ ಜಿಲ್ಲೆಗೆ ಬಂದಿರುವ ವ್ಯಾಪಾರಿಗಳಿಗೆ ಮಾರಾಟ ಮಾಡಿ ರಾಜ್ಯದ ವ್ಯಾಪಾರಿಗಳು ಕೂಡ ಬಂಪರ್ ಲಾಭ ಪಡೆದಿದ್ದಾರೆ.

ಕೊಪ್ಪಳ ತಾಲ್ಲೂಕಿನ ಕಲ್ಲ ತಾವರಗೇರಾ ಗ್ರಾಮದಲ್ಲಿ ಶಾಂತಮ್ಮ ಹಿರೇಮಠ ಹಾಗೂ ಅವರ ಮಗ ಮಂಜುನಾಥ ಆರೂವರೆ ಎಕರೆಯಲ್ಲಿ ‘ಕೊಪ್ಪಳ ಕೇಸರ್’ ಬೆಳೆದಿದ್ದು, ಗಿಡಗಳು ಹೂ ಬಿಟ್ಟಾಗಲೇ ಸ್ಥಳೀಯ ವ್ಯಾಪಾರಿಗಳು ₹11 ಲಕ್ಷಕ್ಕೆ ತೋಟ ಗುತ್ತಿಗೆ ಪಡೆದಿದ್ದು ಇದಕ್ಕೊಂದು ನಿದರ್ಶನ.

6ನೇ ಪುಟ ನೋಡಿ



ಕೊಪ್ಪಳದಲ್ಲಿ ಬೆಳೆದ ಮಾವಿನ ಹಣ್ಣುಗಳು

ಆರೂವರೆ ಎಕರೆಯಲ್ಲಿ ಮಾವು ಬೆಳೆಯಲು ₹2.5 ಲಕ್ಷ ಖರ್ಚು ಮಾಡಿದ್ದೇನೆ. ಅದಕ್ಕಿಂತ ಮೂರು ಪಟ್ಟು ಹೆಚ್ಚು ಲಾಭ ಲಭಿಸಿದ್ದು, ನಮ್ಮನ್ನು ಆರ್ಥಿಕ ಸಬಲರನ್ನಾಗಿ ಮಾಡಿದೆ

ಮಂಜುನಾಥ, ಕೊಪ್ಪಳದ ರೈತ

ಹೊರರಾಜ್ಯಗಳ ವ್ಯಾಪಾರಿಗಳು ಸ್ಥಳೀಯರ ನೆರವಿನಿಂದ ಮಾವಿನ ತೋಟಗಳನ್ನು ಗುತ್ತಿಗೆ ಪಡೆಯುತ್ತಿದ್ದಾರೆ. ರೈತರಿಗೆ ಮನೆ ಅಂಗಳದಲ್ಲೇ ಮಾರುಕಟ್ಟೆ ಲಭಿಸುತ್ತಿದೆ

ಕೃಷ್ಣ ಸಿ. ಉಕ್ಕುಂದ, ಉಪನಿರ್ದೇಶಕ, ತೋಟಗಾರಿಕಾ ಇಲಾಖೆ, ಕೊಪ್ಪಳ

ಮಾಹಿತಿ ಅಪ್ಲೋಡ್ ಮಾಡಲು ಬೇಕು ಕನಿಷ್ಠ 1 ರಿಂದ 2 ಗಂಟೆ

ಜಾತಿ ಸಮೀಕ್ಷೆ: ಬೆಂಬಿಡದ ತಾಂತ್ರಿಕ ಸಮಸ್ಯೆ

• ಚಂದ್ರಕಾಂತ ಮಸಾನಿ

ರಾಯಚೂರು: ಒಳಮೀಸಲಾತಿ ಕಲ್ಪಿಸುವ ಉದ್ದೇಶದಿಂದ ಪರಿಶಿಷ್ಟ ಜಾತಿ ಪಟ್ಟಿಯಲ್ಲಿನ 101 ಜಾತಿಗಳ ದತ್ತಾಂಶ ಸಂಗ್ರಹಕ್ಕೆ ಸಮೀಕ್ಷೆ ನಡೆಸಿರುವ ಗಣತಿದಾರರು ಈಗಲೂ ಕೆಲವು ತಾಂತ್ರಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಗಣತಿದಾರರಿಗೆ ಸುಲಭವಾಗಿ ಆ್ಯಪ್‌ನಲ್ಲಿ ಮಾಹಿತಿ ಅಪ್ಲೋಡ್ ಮಾಡಲು ಸಾಧ್ಯವಾಗುತ್ತಿಲ್ಲ.

ಅವಿಭಕ್ತ ಕುಟುಂಬಗಳು ಇರುವಲ್ಲಿ ಹೆಚ್ಚು ಸಮಸ್ಯೆ ಕಾಣಿಸಿಕೊಳ್ಳುತ್ತಿದೆ. ಕುಟುಂಬದ ಯಜಮಾನನ ಆಧಾರ್ ಸಂಖ್ಯೆ ಹಾಗೂ ಪಡಿತರ ಚೀಟಿ ಸಂಖ್ಯೆ ಉಲ್ಲೇಖಿಸಿ ನೋಂದಣಿ ಮಾಡಿಕೊಳ್ಳುವಾಗಲೇ ಕೆಲವೊಮ್ಮೆ ಮೃತಪಟ್ಟಿದ್ದಾರೆ ಎನ್ನುವ ಸಂದೇಶ ಬರುತ್ತಿದೆ. ಮಾಹಿತಿ ಕೊಡುವ ವ್ಯಕ್ತಿಯನ್ನೇ ‘ನೀವು ಬದುಕಿದ್ದೀರಾ’ ಎಂದು ಕೇಳುವಂಥ ಸ್ಥಿತಿ ಸೃಷ್ಟಿಯಾಗುತ್ತಿದೆ.

ಕುಟುಂಬದ ಸದಸ್ಯರ ಆಧಾರ ಸಂಖ್ಯೆ ಸರಿಯಾಗಿದ್ದರೂ ಆ್ಯಪ್‌ನಲ್ಲಿ ಕೆಲವೊಮ್ಮೆ ಎರಡೆರಡು ಬಾರಿ ಕಾಣಿಸಿಕೊಳ್ಳುತ್ತಿದೆ. ಒಂದನ್ನು ಡಿಲಿಟ್ ಮಾಡಲು ಹೋದರೆ, ಎರಡೂ ಡಿಲಿಟ್ ಆಗುತ್ತಿವೆ. ಹೀಗಾಗಿ ಗಣತಿದಾರರು ಒಂದೇ ವ್ಯಕ್ತಿಯ ಮಾಹಿತಿಯನ್ನು ಎರಡು ಬಾರಿ ತುಂಬಬೇಕಾಗಿದೆ.

ಮುಖ್ಯಾಂಶಗಳು

- ಜಿಲ್ಲೆಯಲ್ಲಿ 1,853 ಗಣತಿದಾರರ ನೇಮಕ
- 7 ನೋಡಲ್ ಅಧಿಕಾರಿ, 200 ಮೇಲ್ವಿಚಾರಕರು
- 42 ಪ್ರಶ್ನೆ ಕೇಳಲು 20 ನಿಮಿಷ ನಿಗದಿ

ಒಂದು ಕುಟುಂಬದ ಮಾಹಿತಿ ಅಪ್‌ಲೋಡ್ ಮಾಡಲು ಕನಿಷ್ಠ 20 ನಿಮಿಷ ಬೇಕು. ಪ್ರತಿ ದಿನ 15ರಿಂದ 20ರಷ್ಟು ಕುಟುಂಬಗಳ ಗಣತಿ ಕಾರ್ಯ ಮಾಡುತ್ತಿದ್ದೇವೆ

ಎಂ.ಎಂ.ಹಿರೇಮಠ, ಗಣತಿದಾರ, ಮಾನ್ವಿ

ಒಂದೇ ಕುಟುಂಬಕ್ಕೆ ಸೇರಿದ ಸದಸ್ಯರ ಆಧಾರ್ ಕಾರ್ಡ್‌ಗಳಲ್ಲಿ ಬೇರೆ ಬೇರೆ ಮೊಬೈಲ್ ನಂಬರ್‌ಗಳು ಇವೆ. ಕೆಲ ಮೊಬೈಲ್ ನಂಬರ್‌ಗಳು ಚಾಲ್ತಿಯಲ್ಲಿ ಇಲ್ಲ. ಕೆಲವು ನಂಬರ್‌ಗಳು ಬದಲಾಗಿವೆ. ಆಧಾರ್ ಕೇಂದ್ರಕ್ಕೆ ಹೋಗಿ ನಂಬರ್‌ಗಳನ್ನು ಬದಲು ಮಾಡಿಸಿದ್ದರೂ ಆಧಾರ್‌ನಲ್ಲಿ ನಂಬರ್ ಬದಲಾಗಿರುವು ದಿಲ್ಲ. ಒಟಿಪಿ ಹಾಕದೇ ಲಾಗಿನ್ ಆಗುವುದಿಲ್ಲ. ಹೀಗಾಗಿ ಮಾಹಿತಿ ಅಪ್‌ಲೋಡ್ ಮಾಡಲು ಸಾಧ್ಯವಾಗುತ್ತಿಲ್ಲ.

ಕೆಲ ಗಣತಿದಾರರಿಗೆ ಸರಿಯಾಗಿ ಅಪ್ಲೋಡ್ ಮಾಡಲು ಬರುತ್ತಿಲ್ಲ. ಹೊಸ ಆ್ಯಪ್ ಬಳಸುತ್ತಿದ್ದರೂ ಗಣತಿದಾರರಿಗೆ ಇನ್ನೂ ಹೊಂದಿಕೊಳ್ಳಲು ಸಾಧ್ಯವಾಗಿಲ್ಲ. ಗಣತಿದಾರರಿಗೆ 150ರಿಂದ 200 ಮನೆಗಳನ್ನು ನಿಗದಿಪಡಿಸಲಾಗಿದೆ. ನೆಟ್‌ವರ್ಕ್ ಹಾಗೂ ತಾಂತ್ರಿಕ ಸಮಸ್ಯೆಯಿಂದ ಆ್ಯಪ್‌ನಲ್ಲಿ ಅಪ್ಲೋಡ್ ಮಾಡಲು ಕನಿಷ್ಠ 1 ಗಂಟೆಯಿಂದ 2 ಗಂಟೆ ಸಮಯ ತಗಲುತ್ತಿದೆ. ಹೀಗಾಗಿ ಆಧಾರ್ ಕಾರ್ಡ್‌ಗಳ ನಕಲು ಪ್ರತಿಯನ್ನು ತೆಗೆದುಕೊಂಡು ಮತಗಟ್ಟೆಗೆ ಬರುವಂತೆ ಹೇಳಿ ಹೋಗುತ್ತಿದ್ದಾರೆ.

‘ಜಿಲ್ಲೆಯಲ್ಲಿ ವಿಪರೀತ ಬಿಸಿಲು ಇದೆ. ನಡುಗಡ್ಡೆ ಗ್ರಾಮಗಳಿಗೆ ಹೋಗಿ ಬರಲು ಸರಿಯಾದ ಸಾರಿಗೆ ಸಂಪರ್ಕವಿಲ್ಲ. ಮನೆ ಮನೆಗೂ ತೆರಳಿ ಸಮೀಕ್ಷೆ ಮಾಡಲೇಬೇಕಾಗಿದೆ. ಮಧ್ಯ ವಯಸ್ಕರು ಬಿಸಿಲಿನಿಂದ ಬಳಲಿ ಹೆಚ್ಚು ಸಮಸ್ಯೆ ಅನುಭವಿಸುತ್ತಿದ್ದಾರೆ’ ಎನ್ನುತ್ತಾರೆ ಗಣತಿ ಕಾರ್ಯದಲ್ಲಿ ತೊಡಗಿರುವ ರಾಯಚೂರು ತಾಲ್ಲೂಕಿನ ಶಿಕ್ಷಕರು.

‘ಲಿಂಗಸುಗೂರು ತಾಲ್ಲೂಕಿನ ಗುರುಗುಂಟಾ ಹೋಬಳಿ ವ್ಯಾಪ್ತಿಯ ಕೆನಾಲ್ ಕ್ರಾಸ್ ಗ್ರಾಮದಲ್ಲಿ ಜಾತಿ ಸಮೀಕ್ಷೆಗೆ ನೆಟ್‌ವರ್ಕ್ ಸಮಸ್ಯೆಯಾಗಿದೆ. ಆಫ್‌ಲೈನ್‌ನಲ್ಲಿ ಮಾಹಿತಿ ಕಲೆ ಹಾಕಿ ನೆಟ್‌ವರ್ಕ್ ಇರುವ ಕಡೆಗೆ ಬಂದು ಪೂರ್ಣ ಮಾಹಿತಿ ಅಪ್‌ಲೋಡ್ ಮಾಡುತ್ತಿರುವ ಕಾರಣ ಸಮೀಕ್ಷೆ ನಿಧಾನಗತಿಯಲ್ಲಿ ಸಾಗಿದೆ. ಕುಟುಂಬದ ಮುಖ್ಯಸ್ಥರು ಪರಿಶಿಷ್ಟ ಜಾತಿಯವರಿ-ದ್ದರೂ ಪಡಿತರ ಚೀಟಿಯಲ್ಲಿ ಪರಿಶಿಷ್ಟ ಪಂಗಡ ಎಂದು ತೋರಿಸುತ್ತಿರುವ ಕಾರಣ ಗೊಂದಲ ಉಂಟಾಗಿದೆ. ತಹಶೀಲ್ದಾರ್ ಗಮನಕ್ಕೆ ತಂದು ಸಮಸ್ಯೆ ಬಗೆಹರಿಸುವಂತೆ ಕೋರಲಾಗಿದೆ’ ಎಂದು ಸಮೀಕ್ಷೆ ಕಾರ್ಯದ ಮೇಲ್ವಿಚಾರಕ ನಾಗಪ್ಪ ಜಿ. ಹೇಳುತ್ತಾರೆ.

‘2011ರ ಜನಗಣತಿ ಪ್ರಕಾರ ಜಿಲ್ಲೆಯಲ್ಲಿ 73 ಸಾವಿರ ಪರಿಶಿಷ್ಟರ ಕುಟುಂಬಗಳಿದ್ದವು. ಜಿಲ್ಲೆಯಲ್ಲಿ 82 ಸಾವಿರ ಕುಟುಂಬಗಳ ಸಮೀಕ್ಷೆ ಮುಗಿದಿದೆ. ಜಿಲ್ಲೆಯಲ್ಲಿ ಒಟ್ಟು 86 ಸಾವಿರ ಕುಟುಂಬಗಳು ಇರಬಹುದು. ಮನೆ ಮನೆಗೆ ತೆರಳಿ ಸಮೀಕ್ಷೆ ನಡೆಸಿ ದಾಖಲೆ ಮಾಡಿಕೊಳ್ಳಲಾಗುತ್ತಿದೆ’ ಎನ್ನುತ್ತಾರೆ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಚಿದಾನಂದ.

‘ಎರಡನೇ ಹಂತದಲ್ಲಿ ಮೇ 19ರಿಂದ 28ರವರೆಗೆ ಶಿಬಿರ ನಡೆಯಲಿದೆ. ಅಲ್ಲಿ ನೋಂದಣಿಗೆ ಅವಕಾಶ ಇದೆ. ಮೂರನೇ ಹಂತದಲ್ಲಿ ಸ್ವಯಂ ದೃಢೀಕರಣ ಸಲ್ಲಿಕೆಗೆ ಮೇ 28ರವರೆಗೆ ಅವಕಾಶ ಕಲ್ಪಿಸಲಾಗಿದೆ. ಹೀಗಾಗಿ ಸಮೀಕ್ಷೆಯಿಂದ ಒಂದು ಕುಟುಂಬವೂ ಹೊರಗುಳಿಯದು’ ಎಂದು ಹೇಳಿದರು.



ರಾಯಚೂರಿನ ಆಸ್ಕಿಹಾಳದಲ್ಲಿ ಜಾತಿ ಸಮೀಕ್ಷೆ ಕಾರ್ಯದಲ್ಲಿ ತೊಡಗಿರುವ ಗಣತಿದಾರರು ಹಾಗೂ ಅಧಿಕಾರಿಗಳು

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 18 ಮೇ 2025









ಆಪರೇಷನ್ ಮಹಿಷ ಬಂಧನ

ಚಿತ್ರ–ಬರಹ: ಸ್ವರೂಪ್ ಕೊಟ್ಟೂರು

‘ಲೋ ಬೇಗ ಬರ್ರೋ, ಎಷ್ಟೊತ್ತು ಮಾಡ್ತಿರಿ. ಲೇಟ್ ಮಾಡಿದ್ರೆ ಅದು ಇವತ್ತೂ ನಮ್ ಕೈಗೆ ಸಿಗಲ್ಲ. ಬೆಳೆಯನ್ನೆಲ್ಲ ಹಾಳ್ ಮಾಡ್ತಿದೆ. ಹಗ್ಗ ತಗಡ್ರೋ. ಇದನ್ನ ಇವತ್ತು ಯಾವ್ ಕಾರಣಕ್ಕೂ ಬಿಡಬಾರ್ದ್...’ ಹೀಗೆ ಒಂದಿಬ್ಬರು ಊರ ಜನರನ್ನೆಲ್ಲ ಒಂದೇ ಉಸಿರಿನಲ್ಲಿ ಕೂಗಿ ಕೂಗಿ ಕರೆಯುತ್ತಾ ಒಂದೆಡೆ ಕಲೆ ಹಾಕುತ್ತಿದ್ದರು. ಜನರೂ ಕೈಯಲ್ಲಿ ಹಗ್ಗ, ದೊಣ್ಣೆ ಹಿಡಿದು ಉರುಪು, ತರಾತುರಿಯಲ್ಲಿ ಗುಂಪು ಗುಂಪಾಗಿ ಹೊರಟು ಒಂದೆಡೆ ಜಮಾವಣೆ ಆಗುತ್ತಿದ್ದರು. ಅರೆಗಳಿಗೆಯಲ್ಲಿ ಎಲ್ಲರೂ ಕೈಯಲ್ಲಿ ಹಗ್ಗ, ದೊಣ್ಣೆ ಹಿಡಿದು ಗುಂಪು ಗುಂಪಾಗಿ ಹೊರಟೇ ಬಿಟ್ಟರು. ‘ಕರಡಿ ಅಪ್ಪಿತಪ್ಪಿ ಇವರ ಕೈಗೆ ಸಿಕ್ಕಿರಬೇಕು. ಅದಕ್ಕಾಗಿ ಇವರೆಲ್ಲ ತಯಾರಿ ಮಾಡಿಕೊಂಡು ಆವೇಶ, ಆವೇಗದಲ್ಲಿ ಹೊರಟ್ಟಿದ್ದಾರೆ’ ಎಂದುಕೊಂಡು ಹಿಂಬಾಲಿಸಿದೆ. ದೂರದಿಂದಲೇ ಬೆಳೆಯ ಕಡು ಹಸಿರಿನ ಮಧ್ಯೆ ಕಡು ಕಪ್ಪು, ಬಲವಾದ ಆಕೃತಿಯೊಂದು ಕಂಡಿತು. ಅದು ಪಕ್ಕಾ ಕರಡಿಯೇ ಇರಬೇಕೆಂಬ ಊಹೆ ಮತ್ತಷ್ಟು ಬಲವಾಯಿತು. ಆದರೆ ಹತ್ತಿರ ಹೋಗಿ ನೋಡಿದರೆ ಅದು ಕೋಣ.

ಹಳ್ಳಿಗಳಲ್ಲಿ ದೇವರ ಹೆಸರಿನಲ್ಲಿ ಕೋಣ ಬಿಡುವ ಸಂಪ್ರದಾಯವಿದೆ. ಹೀಗೆ ಬಿಟ್ಟ ಕೋಣ ಆ ಹಳ್ಳಿಯಲ್ಲಿ ಮಾತ್ರವಲ್ಲದೇ ಸುತ್ತ ಹತ್ತೂರಲ್ಲಿ ಓಡಾಡಿಕೊಂಡು, ಚೆನ್ನಾಗಿ ಮೇಯ್ದುಕೊಂಡು ಇರುತ್ತದೆ. ಅದು ರೈತರ ಹೊಲಗಳಿಗೆ ನುಗ್ಗಿ ಬೆಳೆಯನ್ನು ತಿಂದು ಹಾಕುತ್ತದೆ. ಆದರೆ ರೈತರು ಉಳಿದ ಜಾನುವಾರುಗಳನ್ನು ಹೊಡೆದು ಓಡಿಸುವಂತೆ ಇದನ್ನು ಹೊಡೆದೋಡಿಸದೇ ಕೇವಲ ಬೆದರಿಸುತ್ತಾರಷ್ಟೆ. ದೇವರ ಕೋಣ ಹೊಲದಲ್ಲಿ ಹಾದು ಹೋದರೆ ಅದೃಷ್ಟ, ಬೆಳೆ ತಿಂದರೆ ಫಸಲು ವೃದ್ಧಿಸುತ್ತದೆ ಎನ್ನುವ ನಂಬಿಕೆ ಇದಕ್ಕೆ ಕಾರಣ. ಆದ್ದರಿಂದ ಮನಸೋ ಇಚ್ಛೆ ಓಡಾಡಿಕೊಂಡು, ಸಿಕ್ಕಿದ್ದನ್ನೆಲ್ಲಾ ತಿಂದು ಕೊಬ್ಬಿ ಬೆಳೆಯುವ ಕೋಣ ಕೆಲವೊಮ್ಮೆ ಅಪಾಯಕಾರಿಯೂ ಆಗಿಬಿಡುತ್ತದೆ. ಸಿಕ್ಕ ಸಿಕ್ಕವರನ್ನು ತಿವಿಯುತ್ತಾ, ಹೊಲಗಳಲ್ಲಿ ದಾಂದಲೆ ಮಾಡುತ್ತದೆ. ಇಂತಹ ಪುಂಡಾಟಿಕೆಯಿಂದ ಬೇಸತ್ತವರು ಅದನ್ನು ಕಟ್ಟಿ ಹಾಕಿ ಸಂಬಂಧಿಸಿದ ಹಳ್ಳಿಯವರಿಗೆ ವಿಷಯ ಮುಟ್ಟಿಸುತ್ತಾರೆ.

ಸಾಹಸಿಗಳಿಗೆ ಮಾತ್ರ...

ಕೋಣ ಕಟ್ಟಿ ಹಾಕುವುದೆಂದರೆ ಸುಲಭವಲ್ಲ. ಅದಕ್ಕೆ ಗುಂಡಿಗೆ ಇರಬೇಕು. ಕೊಬ್ಬಿದ ಕೋಣ ಅಷ್ಟು ಸುಲಭವಾಗಿ ಬಗ್ಗುವುದಿಲ್ಲ. ಅದನ್ನು ಕಟ್ಟಿ ಹಾಕುವಾಗ ಒದೆ ತಿಂದು, ಇರಿತ, ತುಳಿತಕ್ಕೆ ಒಳಗಾದವರು ಅನೇಕರಿದ್ದಾರೆ. ಅದಕ್ಕಾಗಿ ಕೋಣ ಕಟ್ಟಿ ಹಾಕಲು ಶಕ್ತಿಯ ಜೊತೆಗೆ ಯುಕ್ತಿಯೂ ಬೇಕು. ಕೋಣ ಹಿಡಿಯುವ ಸುದ್ದಿ ಶರವೇಗದಲ್ಲಿ ಹಳ್ಳಿಯಲ್ಲಿ ಹಬ್ಬಿ ಅದು ಇರುವಲ್ಲಿಗೆ ನೂರಾರು ಜನ ಕ್ಷಣದಲ್ಲಿ ಸೇರುತ್ತಾರೆ. ಹೀಗೆ ಸೇರಿದವರಲ್ಲಿ ಅದನ್ನು ಹಿಡಿಯಲು ಬಂದವರಿಗಿಂತ ಕಾರ್ಯಾಚರಣೆಯ ರೋಚಕ ಕ್ಷಣಗಳನ್ನು ಕಣ್ಣು ತುಂಬಿಕೊಳ್ಳಲು ಬಂದವರೇ ಹೆಚ್ಚು. ಜನ ಸಾಗರವೇ ಇದ್ದರೂ ಕೆಲವೊಮ್ಮೆ ಕೋಣ ಹಿಡಿಯಲು ಮುಂದಾಗುವವರ ಸಂಖ್ಯೆ ಒಂದಂಕಿಯೂ ದಾಟುವುದಿಲ್ಲ! ಹೀಗಾಗಿ ಈ ಕೆಲಸಕ್ಕೆ ಕೆಲವೊಂದಿಷ್ಟು ನುರಿತ, ಧೈರ್ಯದಿಂದ ಮುನ್ನುಗ್ಗುವ ಸಾಹಸಿಗಳು ಅವಶ್ಯ. ಅಂತಹ ಧೈರ್ಯಶಾಲಿಗಳ ಮುಂದಾಳತ್ವದಲ್ಲಿ ಗುಂಡಿಗೆ ಇದ್ದವರು ‘ಆಪರೇಷನ್ ಮಹಿಷ’ ತಂಡ ಸೇರುತ್ತಾರೆ.

‘ಮೂಗು ದಾರ’ ಇಲ್ಲದ ಕೋಣ ಸಂಪೂರ್ಣ ಸ್ವಾತಂತ್ರ್ಯವನ್ನು ಅನುಭವಿಸಿರುತ್ತದೆ. ಬೇಲಿ, ಬೆಳೆ ಯಾವುದನ್ನೂ ಲೆಕ್ಕಿಸದೇ ಮಾಡುವ ಪುಂಡಾಟಿಕೆ, ಹಾದಿಬೀದಿಯಲ್ಲಿ ಸೊಕ್ಕಿ ಓಡಾಡುತ್ತಾ, ಅಬಾಲವೃದ್ಧರಾದಿಯಾಗಿ ಎಲ್ಲರ ಮೇಲೆ ಏರಿ ಬರುವ ಮೂಲಕ ಜನರಲ್ಲಿ ದಿಗಿಲು ಹುಟ್ಟಿಸುತ್ತದೆ. ಭವಿಷ್ಯದಲ್ಲಿ ಬಲಿತ ಕೋಣದ ಇಂತಹ ವಿಲಕ್ಷಣ ವರ್ತನೆಯನ್ನು ಅಂದಾಜಿಸಿಯೇ ಅಂಕುಶ ಹಾಕಲು ಮೂಗುದಾರದ ಬದಲು ಮೊದಲೇ ಕಾಲಿಗೆ ಕಬ್ಬಿಣದ ಸೆಳ್ಳು ಹಾಕಲಾಗುತ್ತದೆ. ಆಗ ಕೋಣ ಸದಾ ಅಳುಕಿಗೆ ಒಳಗಾಗಿ ಅಂಕೆಯಲ್ಲಿ ಇರುತ್ತದೆ.

ದೇವರ ಕೋಣಕ್ಕೆ ಒಂದು ಗುರುತು ಇದ್ದೇ ಇರುತ್ತದೆ. ಜಾತ್ರೆ ಮುಗಿದ ನಂತರ ದೇವಿಗೆ ಕೋಣದ ಮರಿ ಬಿಡಲು ಭಕ್ತರು ತುದಿಗಾಲಲ್ಲಿ ನಿಂತಿರುತ್ತಾರೆ.

5ನೇ ಪುಟಕ್ಕೆ...



ಕೋಣದ ಕಾಲಿನಲ್ಲಿ ಕಬ್ಬಿಣದ ಸೆಳ್ಳು

ಸೇವಂತಿಗೆ ಹೊಲದಾಗ ನಕ್ಷತ್ರಗಳ ತೋರಣ!

ಈ ಭಾಗದ ಸೇವಂತಿಗೆ ಬೆಳೆಗಾರರು ರಾತ್ರಿ ತಾವೂ ನಿದ್ದೆ ಮಾಡುವುದಿಲ್ಲ, ಸೇವಂತಿಗೆ ಗಿಡಗಳಿಗೂ ನಿದ್ದೆ ಮಾಡಲು ಬಿಡುವುದಿಲ್ಲ! ಏಕೆಂದರೆ, ಅವು ನಿದ್ದೆ ಮಾಡಿದರೆ, ತಮ್ಮ ಬದುಕು ಸಂಕಷ್ಟಕ್ಕೆ ಸಿಲುಕುತ್ತದೆ ಎನ್ನುವ ಆತಂಕ. ಇದಕ್ಕಾಗಿ ಅವರು ಕಂಡುಕೊಂಡ ಪರಿಹಾರ ಕುತೂಹಲಕಾರಿಯಾಗಿದೆ



ಹೊಲದಲ್ಲಿ ಸೇವಂತಿಗೆ ಹೂಗಳ ಆರೈಕೆ...

ಡಿ.ಎಂ.ಕುರ್ಕೆ ಪ್ರಶಾಂತ್

‘ಅಲ್ನೋಡಿ... ನಮ್ಮೂರ ಸುತ್ತ ರಾತ್ರಿ ನಕ್ಷತ್ರಗಳು ಭೂಮಿಗೆ ಬರುತ್ತವೆ’–ಚಿಕ್ಕಬಳ್ಳಾಪುರ ತಾಲ್ಲೂಕಿನ ಮಂಚನಬಲೆಯ ಸ್ನೇಹಿತರೊಬ್ಬರು ಹೊರವಲಯಕ್ಕೆ ಕರೆದೊಯ್ದು ಕೈ ತೋರಿದ ಕಡೆಗೆ ತಿರುಗಿದರೆ, ಅವರ ಮಾತು ನಿಜ ಅನಿಸಿತು!

‘ಅಲ್ಲಿಗೆ ಹೋಗೋಣ’ ಎಂದೆ ನಾನು. ಅವರು ಮುಂದೆ ಹೆಜ್ಜೆ ಹಾಕಿದರು, ನಾನು ಅವರನ್ನೇ ಹಿಂಬಾಲಿಸಿದೆ. ‘ಆ ಹೊಲದಲ್ಲಷ್ಟೇ ನಕ್ಷತ್ರಗಳು ಆಗಸದಿಂದ ಧರೆಗಿಳಿದಿರಲಿಲ್ಲ, ಸುತ್ತಲಿನ ಹತ್ತಾರು ಹೊಲಗಳಿಗೂ ಇಳಿದಿದ್ದವು. ಮೈಕೊಡವಿ ಮೇಲೆದ್ದು ಫಳ ಫಳನೆ ಹೊಳೆಯುತ್ತಿದ್ದವು. ಎತ್ತ ನೋಡಿದರೂ ವ್ಹಾ! ಎಂದು ಉದ್ಗಾರ ಹೊರಡಿಸುವಷ್ಟು ನಕ್ಷತ್ರಗಳ ತೋರಣ.

ಅಚ್ಚರಿ, ಕುತೂಹಲದಿಂದ ಹೊಲ ತಲುಪಿದಾಗ ಭೂಮಿಗೆ ಬಿದ್ದಿರುವವು ನಕ್ಷತ್ರಗಳಲ್ಲ, ಹೊಲದಲ್ಲಿ ನೇತಾಡುತ್ತಿರುವ ವಿದ್ಯುತ್ ಬಲ್ಬ್‌ಗಳು ಎನ್ನುವುದು ಸ್ಪಷ್ಟವಾಯಿತು.

ಹೀಗೆ ಹೊಲದಿಂದ ಹೊಲಕ್ಕೆ ಬೆಳಕಿನ ಚಿತ್ತಾರವನ್ನು ಕಣ್ತುಂಬಿಕೊಳ್ಳುತ್ತ ಹೋದಾಗ ತಲುಪಿದ್ದು ಗುಂಡ್ಲಗುರ್ಕಿ ಗ್ರಾಮವನ್ನು. ಈ ಗ್ರಾಮದ ಹೊರವಲಯದಲ್ಲಿ ಎತ್ತ ನೋಡಿದರೂ ವಿದ್ಯುತ್ ಬೆಳಕಿನ ಸೊಬಗು. ಇಡೀ ಹೊಲಕ್ಕೆ ಬಲ್ಬ್‌ಗಳನ್ನು ತೂಗು ಬಿಡಲಾಗಿತ್ತು! ಅದು ಹೇಗೆ ಕಾಣಿಸುತ್ತಿತ್ತು ಎಂದರೆ, ಗ್ರಾಮ ದೇವತೆಯ ಹಬ್ಬಕ್ಕೆ ವಿದ್ಯುದ್ದೀಪಾಲಂಕಾರ ಮಾಡಿದಂತೆ.

ಬೆಳಕಿನ ಚಿತ್ತಾರವನ್ನು ಮೊಗೆದು ಮೊಗೆದು ಕಣ್ಣಿಗೆ ತುಂಬಿಕೊಳ್ಳುತ್ತಿದ್ದಾಗ, ‘ಇಲ್ಲಿಗೆ ಏಕೆ ಬಂದಿರಿ?, ಏನಾಗಬೇಕಿತ್ತು?’ ಎನ್ನುವ ಧ್ವನಿಯೊಂದು ಕೇಳಿಸಿತು. ಅದು ಗುಂಡ್ಲಗುರ್ಕಿ ಗ್ರಾಮದ ಯುವ ರೈತ ಚೇತನ್ ಅವರದು. ‘ಫಳ ಫಳನೆ ಹೊಳೆಯುತ್ತಿದ್ದ ಹೊಲದತ್ತ ಕೈ ತೋರುತ್ತಿದ್ದಂತೆ’, ‘ಓ, ಬಲ್ಬ್ ನೋಡಲು ಬಂದಿದ್ದೀರಾ’ ಎಂದು ಕಣ್ಣರಳಿಸಿದ ಅವರು, ‘ಚಳಿಗಾಲದಲ್ಲಿ ಬಂದಿದ್ದರೆ ಇನ್ನೂ ಚೆಂದಾಗಿ ಕಾಣಿಸುತ್ತಿತ್ತು. ಆ ಎತ್ತರದಲ್ಲಿ ನಿಂತು ನೋಡಿದ್ದರೆ ಇನ್ನೂ ಖುಷಿ ಆಗುತ್ತಿತ್ತು. ಈಗ ಅಲ್ಲೊಂದು ಇಲ್ಲೊಂದು ಹೊಲದಲ್ಲಿ ಮಾತ್ರ ಇದೆ’ ಎಂದರು.

‘ಏಕೆ ಹೀಗೆ ವಿದ್ಯುತ್ ಬೆಳಕು ಹಾಯಿಸಿದ್ದೀರಿ, ಯಾವ ಗಿಡ...?’ ಹೀಗೆ ನಮ್ಮ ಪ್ರಶ್ನೆಗಳು, ಕುತೂಹಲ, ಕಾತರವನ್ನು ಗಮನಿಸಿದ ಚೇತನ್, ಸೇವಂತಿಗೆ ಹೂ ಬೆಳೆ ಹಾಗೂ ಅದಕ್ಕೆ ವಿದ್ಯುತ್ ಬೆಳಕು ಹಾಯಿಸುವ ಗುಟ್ಟನ್ನು ಹೇಳುತ್ತಾ ಹೋದರು.

‘ಸಾಮಂತಿಗೆ (ಸೇವಂತಿಗೆ) ಇಡೀ ರಾತ್ರಿ ನಿದ್ದೆ ಮಾಡಿದರೆ ನಮ್ಮ ಬದುಕು ಹಾಳಾಗುತ್ತದೆ. ಸಾಮಂತಿಗೆ ಗಿಡಗಳ ಬೆಳವಣಿಗೆಗೆ ಮತ್ತು ಹೂವಿನ ಇಳುವರಿಗಾಗಿ ವಿದ್ಯುತ್ ಬಲ್ಬ್‌ಗಳನ್ನು ಹೊಲಗಳಲ್ಲಿ ಅಳವಡಿಸುತ್ತೇವೆ. ವಿಶೇಷವಾಗಿ ಚಳಿಗಾಲದಲ್ಲಿ, ಮಂಜು ಬೀಳುವ ನವೆಂಬರ್‌ನಿಂದ ಮಾರ್ಚ್‌ವರೆಗೆ ಗಿಡಗಳಿಗೆ ಬೆಳಕು ಬೇಕೇ ಬೇಕು. ಗಿಡಗಳು ಬೆಳಿಗ್ಗೆ ಎಚ್ಚರವಾಗಿರುತ್ತವೆ. ರಾತ್ರಿ ನಿದ್ದೆಗೆ ಜಾರುತ್ತವೆ. ಇಡೀ ರಾತ್ರಿ ನಿದ್ದೆ ಮಾಡಬಾರದು ಎಂದು ನಾಲ್ಕು ತಾಸು ಬೆಳಕು ನೀಡುತ್ತೇವೆ. ಸಾಮಂತಿಗೆ ಗಿಡಗಳು ನಿದ್ದೆ ಮಾಡಿದರೆ ಇಳುವರಿ ಕಡಿಮೆ ಆಗುತ್ತದೆ’ ಎಂದು ಚೇತನ್ ಸಹಜವಾಗಿಯೇ ಹೇಳಿದರು.

4ನೇ ಪುಟಕ್ಕೆ...



ಶಿಡ್ಲಘಟ್ಟ ತಾಲ್ಲೂಕಿನ ಹಿತ್ತಲಹಳ್ಳಿಯ ಹೊಲದಲ್ಲಿ ಸೇವಂತಿಗೆ ಹೂವಿಗೆ ವಿದ್ಯುತ್ ಬೆಳಕು

ಚಿತ್ರಗಳು: ಡಿ.ಜಿ. ಮಲ್ಲಿಕಾರ್ಜುನ್

ಕೀಟಗಳ ಬದುಕಿನಲ್ಲಿ ವ್ಯತ್ಯಾಸ

‘ಸೇವಂತಿಗೆ ಹೂ ಬೆಳೆಗೆ ಬೆಳಕಿನ ವ್ಯವಸ್ಥೆ ಮಾಡುವುದರಿಂದ ಇತರ ಬೆಳೆಗಳ ಮೇಲೆ ಅಥವಾ ಕೀಟಗಳ ಜೀವನ ಚಕ್ರದ ಮೇಲೆ ಯಾವ ರೀತಿಯಲ್ಲಿ ಪರಿಣಾಮವಾಗುತ್ತದೆ ಎಂದು ಇಲ್ಲಿಯವರೆಗೂ ಯಾರೂ ವೈಜ್ಞಾನಿಕವಾಗಿ ಅಧ್ಯಯನ ನಡೆಸಿಲ್ಲ. ಆದರೆ ಖಚಿತವಾಗಿ ಹುಳುಗಳು, ಕೀಟಗಳ ಜೀವನ ಚಕ್ರದ ಮೇಲೆ ವ್ಯತಿರಿಕ್ತ ಪರಿಣಾಮಗಳು ಆಗುತ್ತವೆ’ ಎಂದು ಚಿಂತಾಮಣಿ ತಾಲ್ಲೂಕಿನ ಕುರುಬೂರಿನ ಕೃಷಿ ಮತ್ತು ರೇಷ್ಮೆ ವಿಶ್ವವಿದ್ಯಾಲಯದ ಕೀಟವಿಜ್ಞಾನಿ ಮಂಜುನಾಥ್ ಹೇಳುತ್ತಾರೆ.

ಬೆಳಿಗ್ಗೆ ಮತ್ತು ರಾತ್ರಿ ಸಕ್ರಿಯವಾಗಿರುವ ಕೀಟಗಳು ಇವೆ. ರಾತ್ರಿ ಸಕ್ರಿಯವಾಗಿರುವ ಕೀಟಗಳಿಗೆ ರಾತ್ರಿಯೂ ಬೆಳಕು ಇದ್ದರೆ ಅವುಗಳ ಜೀವನ ಚಕ್ರಕ್ಕೆ ಖಂಡಿತ ತೊಂದರೆ ಆಗುತ್ತದೆ. ವರ್ತನೆ, ಚಲನವಲನಗಳಲ್ಲಿ ವ್ಯತ್ಯಾಸವಾಗುತ್ತದೆ. ಅವುಗಳ ಸಂತಾನೋತ್ಪತ್ತಿಯ ಮೇಲೆ ಖಂಡಿತ ಪರಿಣಾಮ ಬೀರುತ್ತದೆ ಎನ್ನುತ್ತಾರೆ.

ಹಳೆಯ ತಂತ್ರ

‘ಚಿಕ್ಕಬಳ್ಳಾಪುರವಷ್ಟೇ ಅಲ್ಲ ರಾಜ್ಯದ ಎಲ್ಲೆಡೆ ಸೇವಂತಿಗೆ ಗಿಡಗಳ ಬೆಳವಣಿಗೆಗೆ ಮತ್ತು ಉತ್ತಮ ಫಸಲಿಗಾಗಿ ಬೆಳಕು ಹಾಯಿಸಲಾಗುತ್ತದೆ. ನಾವು ಪದವಿ ವ್ಯಾಸಂಗ ಮಾಡುವಾಗಲೇ ಈ ತಂತ್ರದ ಬಗ್ಗೆ ಪಠ್ಯದಲ್ಲಿ ಮಾಹಿತಿ ಇತ್ತು’ ಎಂದು ಚಿಕ್ಕಬಳ್ಳಾಪುರ ತೋಟಗಾರಿಕೆ ಇಲಾಖೆ ಉಪನಿರ್ದೇಶಕಿ ಗಾಯತ್ರಿ ಹೇಳಿದರು.

ಕೃತಕ ಬೆಳಕು ನೀಡುವ ಮೂಲಕ ಉತ್ಪಾದನೆ ಉತ್ತಮಗೊಳಿಸಬಹುದು. ಜಿಲ್ಲೆಯಲ್ಲಿ ಈಗ ದೊಡ್ಡ ಪ್ರಮಾಣದಲ್ಲಿ ಸೇವಂತಿಗೆ ಬೆಳೆಯಲಾಗುತ್ತಿದೆ. ಬೆಳಕು ಹಾಯಿಸುವ ಮಾದರಿಯನ್ನು ಎಲ್ಲರೂ ಅನುಸರಿಸುತ್ತಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಹೊಸ ಟ್ರೆಂಡ್‌ನ ಸ್ವರಪಾನ

ಮೈಸೂರಿನ ಸಂಗೀತಾಸಕ್ತರಲ್ಲಿ ಹಾಡುವ, ಕುಣಿಯುವ, ಅಭಿನಯಿಸುವ ಅಭಿಲಾಷೆಯನ್ನು ‘ಸ್ವರಪಾನ’ ನನಸು ಮಾಡುತ್ತಿದೆ. ಎಂದೋ ಕೇಳಿದ ಇಷ್ಟದ ಹಾಡಿಗೆ ದನಿಗೂಡಿಸಿ ‘ಗೋಷ್ಠಿ’ ನಡೆಸುತ್ತಿದ್ದಾರೆ. ಕಳೆದ ವರ್ಷಾಂತ್ಯದಲ್ಲಿ ಆರಂಭವಾದ ಸ್ವರಪಾನದ ಸಂಗೀತಯಾನಕ್ಕೆ ಐದು ಮಾಸ ತುಂಬಿದೆ. ಹಾಡುಗಾರರು, ವಾದ್ಯ ನುಡಿಸುವವರ ಸಂಖ್ಯೆ ಸಾವಿರವಾಗಿದೆ.



ಸಾಗರ್ ಸಿಂಹ ಅವರ ‘ಸ್ವರಪಾನ’ ಸಂಗೀತ ತಂಡ.

ಮೋಹನ್ ಕುಮಾರ ಸಿ.

ಅದು ಮೈಸೂರಿನ ವಿಜಯನಗರದ ಸಾವಯವ ಕೃಷಿಕರ ಭಾನುವಾರ ಸಂತೆ. ಸೊಪ್ಪು ಮಾರುವವರ ಜೊತೆಗಿನ ಚೌಕಾಸಿಯೊಡನೆ ‘ಸ್ವರಪಾನ’ದ ಹಾಡುಗಾರರ ಹಾಡು ಆರಂಭವಾಗುತ್ತದೆ. ಹಾಡಿನಲ್ಲಿ ಗಾಯಕರು ಪೋಣಿಸಿದ ತರಾವರಿ ಸೊಪ್ಪುಗಳು ಎಲ್ಲರ ನಾಲಿಗೆಯಲ್ಲೂ ನಲಿಯುತ್ತವೆ. ಸೊಪ್ಪುಕೊಳ್ಳಲು ಬಂದವರು ಸ್ವರಕ್ಕೆ ದನಿ ಸೇರಿಸಿ ಸ್ವರಪಾನಿಗಳಾಗುತ್ತಾರೆ. ಇಡೀ ಸಂತೆ ಸಂಗೀತ ಕಛೇರಿಯಂತೆ ನಾದಲೋಕವಾಗುತ್ತದೆ.

‘ಎಲ್ಲಿಂದಲೋ ಬಂದವರು’ ದನಿಗೆ ದನಿಯಾಗುವ ಈ ಕಥನಕ್ಕೆ ಸಾಮಾಜಿಕ ಮಾಧ್ಯಮಗಳಲ್ಲಿ ಸಂಗೀತ ಕೇಳುಗರು ಮಾರು ಹೋಗಿದ್ದಾರೆ. ‘ಆಹಾ! ನಮ್ಮೂರಿನಲ್ಲೂ ಇಂಥ ಪ್ರಯೋಗ ನಡೆಸಿಬನ್ನಿ’ ಎಂದು ಆಹ್ವಾನಿಸುತ್ತಿದ್ದಾರೆ.

ಈ ‘ಸ್ವರಪಾನ’ವನ್ನು ಸುರಿದುಕೊಡುತ್ತಿರುವವರು ಸಾಗರ್ ಸಿಂಹ. ಬಾಸ್ಕೆಟ್‌ಬಾಲ್, ಬ್ಯಾಡ್ಮಿಂಟನ್, ಚೆಸ್ ಮತ್ತು ಈಜುಪಟುವಾಗಿದ್ದ ಸಾಗರ್ ಪಿಯುಸಿ ಓದುತ್ತಿದ್ದಾಗ ಸಂಗೀತ ಸಾಗರಕ್ಕೆ ಧುಮುಕಿದ್ದೂ ಆಕಸ್ಮಿಕವೇ. ಇದೀಗ ಶಾರದಾ ವಿಲಾಸ ಕಾಲೇಜಿನಲ್ಲಿ ಜೈವಿಕ ತಂತ್ರಜ್ಞಾನದ ಬಿ.ಎಸ್ಸಿ ಓದುತ್ತಿದ್ದಾರೆ. ಓದಿನ ಜೊತೆಗೆ ‘ಸ್ವರಪಾನ’ ಸಂಗೀತ ತಂಡ ಕಟ್ಟಿದ್ದಾರೆ. ಇಲ್ಲಿ ಹಾಡಲು ಬರುವ ಎಲ್ಲರೂ ಸದಸ್ಯರೇ.

ಕೆನಡಾಕ್ಕೆ ವಾಪಸ್ ಹೋಗಲಿಲ್ಲ

ಪಿಯುಸಿ ನಂತರ 2021ರ ‘ಸರಿಗಮಪ’ ರಿಯಾಲಿಟಿ ಶೋನಲ್ಲಿ ಸಾಗರ್ ಹಾಡುತ್ತಿದ್ದಾಗ, ಮನೋವಿಜ್ಞಾನ–ಜೀವವಿಜ್ಞಾನದ ಮಿಳಿತದ ‘ಬಿಹೇವಿಯರಲ್ ನ್ಯೂರಾಲಜಿ’ ಕೋರ್ಸ್ ಮಾಡಲು ಕೆನಡಾಕ್ಕೆ ಹೋಗುವ ಅವಕಾಶ ಸಿಕ್ಕಿತು. ಒಂದೂವರೆ ವರ್ಷ ಓದಿದ ನಂತರ ರಜೆಗೆಂದು ಮೈಸೂರಿಗೆ ಬಂದಿದ್ದಾಗ ‘ಅಕಾಡೆಮಿಕ್ ಅಧ್ಯಯನವಷ್ಟೇ ಮುಖ್ಯವಲ್ಲ’ ಎಂದೆನಿಸಿ ವಾಪಸಾಗುವ ಟಿಕೆಟ್ ರದ್ದು ಮಾಡಿ ಇಲ್ಲೇ ಉಳಿದರು.

ಮುರಿದು ಕಟ್ಟಿ

ಸಂಗೀತವೆಂದರೆ ಕಬ್ಬಿಣದ ಕಡಲೆ. ಶಾಸ್ತ್ರೀಯ ಸಂಗೀತ ಗೊತ್ತಿರಬೇಕು. ತರಗತಿಗಳಿಗೆ ಹೋಗಿ ವರ್ಷಾನುಗಟ್ಟಲೆ ಅಭ್ಯಾಸ ಮಾಡಬೇಕೆಂಬ ಭಾವನೆ ಇದೆ. ತರಗತಿಗೆ ಹೋಗಿ ಕಲಿಯಬೇಕೆಂಬುದೇ ಅವರಿಗೆ ಇಷ್ಟವಾಗುತ್ತಿರಲಿಲ್ಲ. ಪಿಯುಸಿ ಓದುವಾಗ ‘ಸರಿಗಮಪ’ ರಿಯಾಲಿಟಿ ಶೋನಲ್ಲಿ ಹಾಡುತ್ತಿದ್ದ ಟಿ.ಎಂ.ವೈಷ್ಣವಿ ಅವರು ಸಂಗೀತ ಕಲಿಯುತ್ತಿದ್ದ ಶಾಲೆ ಬಗ್ಗೆ ಅವರಿಗೆ ಕುತೂಹಲ ಉಂಟಾಯಿತು. ನಂತರ ಸುಗಮ ಸಂಗೀತ ಗಾಯಕಿ ಸುನೀತಾ ಚಂದ್ರಕುಮಾರ್ ಅವರ ‘ರಘುಲೀಲಾ ಸಂಗೀತ ಶಾಲೆ’ಗೆ ಸೇರಿಕೊಂಡರು. ಜೊತೆಯಲ್ಲಿ ಗಿಟಾರ್ ಸ್ವಕಲಿಕೆಯನ್ನೂ ಆರಂಭಿಸಿದರು. ತರಗತಿಗೆ ಹೋಗಿ ಕಲಿಯುವ ಪದ್ಧತಿಯನ್ನು ಮುರಿದುಕಟ್ಟುವ ಮೊಳಕೆಯೂ ಅಲ್ಲೇ ಮೊಳೆತಿತ್ತು.

‘ಕ್ರೀಡೆಗಳ ಜೊತೆಗೆ ಸಂಗೀತವೂ ಇರಲಿ ಎಂದು ಸುನೀತಾ ಅವರ ಶಾಲೆಗೆ ಹೋಗಿದ್ದಷ್ಟೇ. ಅವರು ಸಂಗೀತದ ಸೂಕ್ಷ್ಮತೆ ಕಲಿಸಿದರು. ಅವರು ಕಲಿಸುವ ವಿಧಾನ, ತಂತ್ರ, ಶೈಲಿ ಇಷ್ಟವಾಯಿತು. ಅವರಿಂದ ಕಲಿತ ಸಂಗೀತವನ್ನು ನಾನೂ ಹೇಳಿಕೊಡುವ ಅಭಿಲಾಷೆ ಹುಟ್ಟಿದಾಗ ‘ಸ್ವರಪಾನ’ ಎಂಬ ಪದವೂ ಕಾಕತಾಳೀಯವಾಗಿ ಮನದಲ್ಲಿ ಸುಳಿಯಿತು. ಕೂಡಲೇ ಸಂಗೀತ ಶಾಲೆ ಆರಂಭಿಸಿದೆ. ಅದನ್ನು ಜನರ ಬಳಿಗೆ ತೆಗೆದುಕೊಂಡು ಹೋಗಿದ್ದೇನೆ’ ಎಂದು ಸಾಗರ್ ಹೇಳಿದರು.

3ನೇ ಪುಟಕ್ಕೆ...



ಬುಲ್ ಬುಲ್ ಹಕ್ಕಿಯ ಬಾಣಂತನ

ಜಯಶಂಕರ ಶರ್ಮ ತಮ್ಮ ಮನೆಯ ತಾರಸಿಯಲ್ಲಿ ಕಂಡ ಹಕ್ಕಿ ಗೂಡನ್ನು ಕಿತ್ತು ಬಿಸಾಡಲಿಲ್ಲ. ಬದಲಿಗೆ ಅದರೊಳಗಿದ್ದ ಮೊಟ್ಟೆಗಳು ಮರಿಯಾಗಿ ಹೊರಗೆ ಹಾರುವವರೆಗೂ ಸಂರಕ್ಷಿಸಿದರು...

ಪ. ರಾಮಕೃಷ್ಣ ಶಾಸ್ತ್ರಿ

ಬೆಳ್ತಂಗಡಿ ತಾಲ್ಲೂಕಿನ ಮೇಲ್ಲಂತ ಬೆಟ್ಟು ಗ್ರಾಮದ ಜಯಶಂಕರ ಶರ್ಮ ಅವರು ಹಲಸಿನಹಣ್ಣುಗಳನ್ನು ಮರದಿಂದ ಪೆಟ್ಟಾಗದ ಹಾಗೆ ಇಳಿಸುವುದಕ್ಕಾಗಿ ಪೇಟೆಯಿಂದ ತಂದ ಹಗ್ಗಗಳನ್ನು ತಾರಸಿಯ ಕೊಂಡಿಗೆ ನೇತು ಹಾಕಿದ್ದರು. ಒಂದು ದಿನ ಕೆಲಸಗಾರ ಶರಣಪ್ಪ ಅವರಿಗೆ ಹಗ್ಗಗಳನ್ನು ಬಿಡಿಸಿ ತರಲು ಹೇಳಿದರು. ಹಗ್ಗದ ಬಳಿಗೆ ಹೋದ ಶರಣಪ್ಪ ಹಾಗೆಯೇ ಓಡಿಬಂದರು. 'ಯಜಮಾನರೇ, ಹಗ್ಗ ತೆಗೆಯೋಕಾಗಲ್ಲ. ಅದರಲ್ಲಿ ಗೂಡಿದೆ. ಗೂಡಿನಲ್ಲಿ ಎರಡು ಮೊಟ್ಟೆಗಳಿವೆ. ಹಕ್ಕಿಯದ್ದು ಅಂತ ಕಾಣುತ್ತೆ' ಎಂದರು.

ಶರ್ಮ ಅವರು ಗೂಡಿನ ಬಳಿಗೆ ಹೋಗಿ ನೋಡಿದಾಗ ಕಡ್ಡಿಗಳನ್ನು ವರ್ತುಲಾಕಾರವಾಗಿ ಒಂದಕ್ಕೊಂದು ನಾಜೂಕಿನಿಂದ ಹೆಣೆದು ತಯಾರಾದ ಗೂಡು ಕಾಣಿಸಿತು. ಮುಷ್ಟಿಗಾತ್ರದ ಹಕ್ಕಿಯೊಂದು ಮೊಟ್ಟೆಗಳ ಮೇಲೆ ಬೆಚ್ಚಗೆ ಕುಳಿತು ಕಾವು ಕೊಡುತ್ತಿತ್ತು. ಬಳಿಗೆ ಹೋದರೂ ಭಯದಿಂದ ರೆಕ್ಕೆ ಬಡಿಯಲಿಲ್ಲ. ಎದ್ದು ಓಡಲಿಲ್ಲ. ಹೌದು, ಅನೇಕ ಪಕ್ಷಿಗಳು ಜನವಸತಿ ಬಳಿಯೇ ಗೂಡು ಕಟ್ಟಿ ಮೊಟ್ಟೆಯಿಡಲು ಬಯಸುತ್ತವೆ. ಹಾವು, ಗಿಡುಗದಂತಹ ಹಗೆಗಳು ಅಲ್ಲಿ ಬಾಧಿಸುವುದು ವಿರಳ ಎಂಬುದು ಅವಕ್ಕೂ ಗೊತ್ತಿದೆ ಎಂದು ಪಕ್ಷಿತಜ್ಞ ಸಲೀಂ ಅಲಿ ಹೇಳಿದ ಮಾತು ಅವರಿಗೆ ನೆನಪಾಯಿತು.

ಶರ್ಮ ಅವರು ತಮ್ಮ ಗೆಳೆಯ, ನಿವೃತ್ತ ಪ್ರಾಂಶುಪಾಲ ಉದಯಚಂದ್ರರಿಗೆ ಕರೆ ಮಾಡಿ ಹಕ್ಕಿಯೊಂದು ಮನೆಯ ತಾರಸಿ ಕೆಳಗೆ ಮೊಟ್ಟೆಯಿಟ್ಟ ವಿಚಾರ ತಿಳಿಸಿದರು. ಉದಯಚಂದ್ರ ಅವರ ಹಕ್ಕಿಯ ಬಣ್ಣ, ಆಕಾರ ಹೇಗಿದೆ ಎಂದು ಕೇಳಿ 'ಎತ್ತರದ ಮೊನಚಾದ ಜುಟ್ಟು ತಲೆಯಲ್ಲಿದ್ದರೆ ಅದು ಕೆಂಪು ಬುಲ್ ಬುಲ್ ಹಕ್ಕಿ. ಹೊಟ್ಟೆ ತಿಳಿ ಬಿಳಿ ಬಣ್ಣ, ಪಕ್ಕದ ಭಾಗಗಳು ನಸು ಕಂದು ವರ್ಣ, ಎದೆ ಮೇಲೆ ಭುಜದ ಮಟ್ಟದಲ್ಲಿ ಚಾಚಿಕೊಂಡಿರುವ ಗಾಢ ಕಪ್ಪು ಬಣ್ಣ, ಕೊಕ್ಕಿನ ಬುಡದಿಂದ ಕುತ್ತಿಗೆ ಕಡೆಗೆ ಮೀಸೆಯಂತೆ ಕಾಣುವ ಕೆಂಪುರೇಖೆ ಇರುತ್ತದೆ' ಎಂದು ಎಲ್ಲ ಲಕ್ಷಣಗಳನ್ನು ವಿವರಿಸಿದರು.

ಈ ಹಕ್ಕಿಗಳಲ್ಲಿ ಕೆಲವು ಜಾತಿಗಳಿವೆ. ಗಾತ್ರದಲ್ಲಿ ಇದಕ್ಕಿಂತ ಚಿಕ್ಕದು, ಕೆಂಪು ಕಿವಿ ಬುಲ್ ಬುಲ್. ತಲೆಯಲ್ಲಿ ಜುಟ್ಟು ಚಿಕ್ಕದೇ. ಬಿಳಿ ಪೃಷ್ಠ, ಕಪ್ಪು ತಲೆ ಹೊಂದಿದೆ. ಹಿಮಾಲಯನ್ ಬುಲ್ ಬುಲ್ ಕಪ್ಪು ಗಂಟಲು ಮತ್ತು ತಲೆ, ಹಳದಿ ಕೆನ್ನೆ ಹೊಂದಿದೆ ಎಂದು ಇನ್ನಷ್ಟು ವಿವರಗಳನ್ನೂ ಅವರು ನೀಡಿದರು.



ಮೊಟ್ಟೆಯೊಡೆದು ಮರಿಯಾದಾಗ



ಹಕ್ಕಿ ಮರಿಗಳು

ಆ ಮೇಲೆ ಹಾವು, ಬೆಕ್ಕು ಇತ್ಯಾದಿ ಬರದಂತೆ ಕಾವಲು ಕಾಯುವ ಕೆಲಸ ಶರ್ಮ ಅವರದಾಯಿತು. ಆಗ ಕಾವು ಕೊಡುವ ಹಕ್ಕಿಗಿಂತ ಕೊಂಚ ದೊಡ್ಡದಿರುವ ಇನ್ನೊಂದು ಹಕ್ಕಿ ಬಂದು ಹಗ್ಗದ ಮೇಲು ಭಾಗದಲ್ಲಿ ಕುಳಿತು ಪೃಷ್ಠವನ್ನು ಕುಣಿಸುತ್ತ 'ಕುಟುಂಕ್.. ಕುಟುಂಕ್..' ಎಂಬ ದನಿಯಲ್ಲಿ ಏನೋ ಹೇಳಿದೆ. ಕಾವು ಕೊಡುವ ಹಕ್ಕಿ ಎದ್ದು ಪರ್ರನೆ ಹೊರಗೆ ಹಾರಿದಾಗ ಆ ಹಕ್ಕಿ ಮೊಟ್ಟೆ ಮೇಲೆ ಕುಳಿತಿತು. ಗಂಡು ಹಕ್ಕಿ ಕೌಟುಂಬಿಕ ಜವಾಬ್ದಾರಿಯನ್ನು ಹೊರುವ ಪರಿ ಇದು. ಗಂಡು ಹಕ್ಕಿ ಆರಿಸಿ ತಂದ ಕಡ್ಡಿಗಳನ್ನು ಕೊಕ್ಕಿನಿಂದ ಹೆಣೆದು ಚಂದದಗೂಡು ಕಟ್ಟುವುದು ಹೆಣ್ಣು ಹಕ್ಕಿ. ಸರತಿ ಪ್ರಕಾರ ಮೊಟ್ಟೆಗೆ ಕಾವು ಕೊಡುತ್ತ ಹೆಣ್ಣಿಗೂ ಹಸಿವು ನೀಗಿಸಿಕೊಂಡು ಬರಲು ಅವಕಾಶ ನೀಡುವ ಗಂಡು ಹಕ್ಕಿ ಯಾರು ಬಂದರೂ ನನಗೆ ಭಯವಿಲ್ಲ ಎಂಬಂತೆ ಕ್ಯಾಮರಾದತ್ತವೇ ನೋಡುತ್ತ ಕುಳಿತಿತ್ತು.

ಹತ್ತು ದಿವಸಗಳಾದಾಗ ಗೂಡೊಳಗೆ ಬದಲಾವಣೆ ಗೋಚರಿಸಿತು. ಮೊಟ್ಟೆಗಳು ಒಡೆದು ಎರಡು ಮರಿಗಳು ಕಾಣಿಸಿದವು. ಮೈಯಲ್ಲಿ ರೋಮವಿಲ್ಲ. ಆಗಾಗ ಕೆಂಪಗಿನ ಬಾಯಿ ತೆರೆದು ಆಹಾರ ನಿರೀಕ್ಷಿಸುತ್ತಿದ್ದವು. ಸರತಿ ಪ್ರಕಾರ ಹಕ್ಕಿಗಳು ಹೊರಗೆ ಹೋಗಿ ಆಹಾರ ತಂದು ಮರಿಗಳಿಗೆ ಕೊಡುತ್ತಿದ್ದವು.

ದಿನ ಕಳೆಯುತ್ತಿದ್ದಂತೆ ಮರಿಗಳು ಕಣ್ತೆರೆದವು. ಗಾತ್ರ ದೊಡ್ಡದಾಗುತ್ತಾ ಬಂದಿತು. ಮೈಯಲ್ಲಿ ಕೂದಲು ಹುಟ್ಟಿತು. ಆಹಾರ ತಿನ್ನುವ ಪ್ರಮಾಣವೂ ಹೆಚ್ಚಾಯಿತು. ಹೆಚ್ಚೆಚ್ಚು ಸಲ ಎರಡೂ ಹಕ್ಕಿಗಳು ಆಹಾರ ಹೊತ್ತು ತಂದು ಕೊಡುತ್ತಿದ್ದವು. ತಾಯಿ ಹಕ್ಕಿ ಮೇಲುಭಾಗದಲ್ಲಿ ಸಣ್ಣಗೆ ಹಾರುವಾಗ ಈ ಮರಿಗಳು ಗೂಡಿನಿಂದ ಸ್ವಲ್ಪ ಮೇಲಕ್ಕೆ ಎಗರಿ ಎಗರಿ ಹಾರಲು ಪ್ರಯತ್ನಿಸುತ್ತಿದ್ದವು. ಒಂದೆರಡು ದಿನಗಳಲ್ಲಿ ತಾಯಿಯ ಜೊತೆಗೆ ಗೂಡಿನಿಂದ ಹೊರಗೂ ಹಾರಿ ಹೋಗಿ ಮರಳಿ ಬಂದವು.

ತಿಂಗಳು ಕಳೆಯಿತು. ಶರ್ಮ ಅವರು ಗಮನಿಸುತ್ತಲೇ ಇದ್ದರು. ಒಂದು ದಿನ ಬೆಳಗ್ಗೆ ಗೂಡಿನಿಂದ ಕೊಂಚ ಮೇಲಕ್ಕೆ ಹಗ್ಗದ ಮೇಲೆ ಪೃಷ್ಠ ಕುಣಿಸಿಕೊಂಡು ಕುಳಿತಿರುವ ತಾಯಿ ಹಕ್ಕಿ ದನಿಯಲ್ಲೇ ಏನೋ ಸಂಜ್ಞೆ ಮಾಡಿತು. ಅಷ್ಟೇ ಸಾಕು ಎಂಬಂತೆ ಮರಿಗಳೆರಡೂ ರೆಕ್ಕೆ ಹರಡಿಕೊಂಡು ಗೂಡಿನಿಂದ ಮೇಲೆದ್ದು ಹೊರಗೆ ಹಾರಿ ಹೋದವು. ತಾಯಿ ಅದನ್ನು ಹಿಂಬಾಲಿಸಲಿಲ್ಲ, ಮತ್ತೆ ಮರಿಗಳು ಗೂಡಿಗೆ ಮರಳಲೇ ಇಲ್ಲ.

ಇಷ್ಟು ದಿನ ಅವುಗಳ ಬಾಣಂತನದ ಜವಾಬ್ದಾರಿ ಹೊತ್ತಿದ್ದ ಶರ್ಮ ಅವರ ಮುಖದಲ್ಲಿ ಮಂದಹಾಸ ಮೂಡಿತು.

ಪಟ್ಟೇದಂಚಿನ ಸೀರೆ ಪುನರ್‌ಜೀವನವಾದಾಗ...

ರಶ್ಮಿ ಎಸ್

ಪಟ್ಟೇದಂಚಿನ ಸೀರಿಯುಟ್ಟು ಪಟ್ಟಕ್ಕ ಏರ‍್ಯಾಳ ಗೌರಿ, ಮಾವ ಉಡಿಸಿದ ಸೀರಿಯುಟ್ಟು ಮದುಮಗಳು ಆಗ್ಯಾಳ ಗೌರಿ

ಹೀಗೆ ಹಾಡು ಹೇಳುವಾಗ ಸೋದರ ಮಾವ ತಂದಿರುವ ಸೀರೆ ಉಡಿಸುವ ಸಂಪ್ರದಾಯ ಉತ್ತರ ಕರ್ನಾಟಕದ ಮದುವೆಗಳಲ್ಲಿದೆ.

ಪಟ್ಟೇದಂಚಿನ ಸೀರೆ ಕೈಮಗ್ಗದಲ್ಲಿ ನೇಯಲಾಗುತ್ತಿತ್ತು. ಕಡುಕೆಂಪು ಬಣ್ಣದ ಕುಂಕುಮದ ಒಡಲು, ಅರಿಸಿಣ ಬಣ್ಣದ ಅಂಚು, ಅದರೊಳಗೆ ಮತ್ತೆ ಕೆಂಬಣ್ಣದ ಪಟ್ಟಿ, ಸಣ್ಣೆಳೆಯ ಚೌಕಡಿಗಳಿರುವ ಸೀರೆ ಇದು. ಅರಿಸಿಣ–ಕುಂಕುಮ ಸೌಭಾಗ್ಯದ ಲಕ್ಷಣ ಆದ್ರ ಚೌಕಡಿಗಳು ಮನಿಯನ್ನ, ಮನಿತನದ ಗೌರವ ಹೊದ್ದು ನಡೀಬೇಕು ಅಂತ್ಹೇಳ್ತಿತ್ತು.

ಹತ್ತನೇ ಶತಮಾನದಿಂದ ಲಿಂಗಾಯತ ಸಮುದಾಯದ ಹೆಣ್ಣುಮಕ್ಕಳ ಅಸ್ಮಿತೆಯಂತಿದ್ದ ಈ ಸೀರೆ, ಸಹಸ್ರಮಾನದಿಂದ ಈಚೆಗೆ ಮಾಯವಾಗಿತ್ತು. ಆದರೆ ಇದೀಗ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತನ್ನ ಛಾಪನ್ನು ಒತ್ತಿದೆ.

ಕಾರಣ, ಇವನ್ನು ಎರಡೂ ಬದಿಯಲ್ಲಿ ಉಡಬಹುದು. ಶತಮಾನಗಳ ಕಾಲ ಈ ಸೀರೆ ಬಾಳಿಕೆ ಬರುತ್ತದೆ. ಬಣ್ಣ ಮಾಸುವುದಿಲ್ಲ. ಚರ್ಮಕ್ಕೆ ಹಿತವಾಗಿರುತ್ತದೆ. ಮೈಗಂಟಿಕೊಂಡು, ಉಡುವ, ಒಪ್ಪ ಓರಣ ಮಾಡುವ ಗೊಡವೆಯೇ ಇರುವುದಿಲ್ಲ. ಈ ಸೀರೆಗಳಿಗೆ ಗೊತ್ತು, ನೀರೆಯರ ಮೈಗುಣ.

ಈಗ ಪಟ್ಟೇದಂಚಿನ ಸೀರೆ, ಗೋಮಿ ತೆನಿ ಸೀರೆ, ಗಾಡಿದಡಿ ಸೀರೆ... ಹೀಗೆ ಒಂದೆರಡಲ್ಲ 14 ಬಗೆಯ ಸಾಂಪ್ರದಾಯಿಕ ನೇಯ್ಗೆಯ ಬಗೆಗಳನ್ನು ಪುನರುಜ್ಜೀವನಗೊಳಿಸಲಾಯಿತು.

ಅರೆರೆ ಇರಿ, ಈ ಕತೆಯೇ ಪುನರುಜ್ಜೀವನದ್ದು. 'ಪುನರ್‌ಜೀವನ' ಎಂಬ ಸಂಸ್ಥೆಯದ್ದು. ಈ ಸಂಸ್ಥೆಯನ್ನು ಹುಟ್ಟುಹಾಕಿದ್ದು ಹೇಮಲತಾ ಜೈನ್ ಎಂಬ ಜವಳಿ ತಜ್ಞೆ. ಅಮೆರಿಕದಲ್ಲಿ ನೈಜ ಬಣ್ಣಗಳ ಕುರಿತು ಸಂಶೋಧನೆ ಮಾಡುತ್ತಿದ್ದ ಹೇಮಲತಾ ಜೈನ್ ಅವರಿಗೆ ಬಣ್ಣಗಳು ಸೆಳೆದು ತಂದಿದ್ದು ಕರ್ನಾಟಕದ ಗದಗ ಜಿಲ್ಲೆಯ ಗಜೇಂದ್ರಗಢಕ್ಕೆ.

ಜನರ ಆಡುಮಾತಿನಲ್ಲಿ 'ಗಢ' ಎಂದು ಕರೆಯಲಾಗುವ ಈ ಊರಿನಲ್ಲಿ ಲಗಾಯ್ತಿನಿಂದಲೂ ಬಟ್ಟೆಗೆ ಬಣ್ಣ ಹಾಕುವ ಕೆಲಸ ಮಾಡಲಾಗುತ್ತದೆ. ಅಳಿಯದ ಬಣ್ಣ, ಗಾಢ ಬಣ್ಣಗಳನ್ನು ಮಗ್ಗದ ನೂಲಿಗೆ ಹಾಕಿ ಕೊಡುವ 'ರಂಗರೇಜಿ'ಗಳ ಗಲ್ಲಿಗಳೇ ಈ ಊರಲ್ಲಿದ್ದವು. ಇವನ್ನೇ ಹುಡುಕಿಕೊಂಡು ಬಂದಾಗ, ನಗರೀಕರಣದ ಪರಿಣಾಮ ಎಂಬಂತೆ, ಮಗ್ಗಗಳೇ ಕಡಿಮೆಯಾಗಿದ್ದವು. ಕೈ ಮಗ್ಗಗಳೆಲ್ಲ ಮೂಲೆಗುಂಪಾಗಿದ್ದವು.

ನೈಜ ಬಣ್ಣಗಳ ಬಗ್ಗೆ ಹುಡುಕಲು ಹೋದ ಹೇಮಲತಾ ಅಲ್ಲಿಯ ಸಾಂಪ್ರದಾಯಿಕ ನೇಯ್ಗೆ ಸೀರೆಗಳತ್ತ ಇನ್ನಷ್ಟು ಆಕರ್ಷಿತರಾದರು. ಪಟ್ಟೇದ ಅಂಚಿನ ಸೀರೆಗಳ ಬಗ್ಗೆ ದಾಖಲೆಗಳನ್ನು ಹುಡುಕತೊಡಗಿದರು. ಬಣ್ಣಕ್ಕೆ ಬಂದವರು, ಇಲ್ಲಿಯ ನೇಕಾರಿಕೆಯ ಪರಂಪರೆಯನ್ನು ಪುನರುಜ್ಜೀವನಗೊಳಿಸಲು ಕಟಿಬದ್ಧರಾದರು.

ಇಲ್ಲಿಯ ಗೋಮಿತೆನಿ (ಗೋಧಿ ತೆನೆಯ ಚಿತ್ತಾರ ಇರುವ ಅಂಚುಗಳಿರುತ್ತವೆ) ಹುಬ್ಬಳ್ಳಿ ಅಥವಾ ಗಾಡಿದಡಿ ಹುಬ್ಬಳ್ಳಿ ಗದುಗಿನ ನಡುವೆ ಹೊಸತಾಗಿ ರೈಲು ಶುರುವಾದಾಗ, ನೇಕಾರರು ರೈಲು ಹಳಿ ಮತ್ತು ಗಾಲಿಗಳ ಚಿತ್ರದ ದಡಿ ತಯಾರಿಸಿದರು. ಇದು ಗಾಡಿದಡಿಯಾಗಿ ಬದಲಾಯಿತು. ಆನೆಯ ಚಿತ್ತಾರ ಬಾಗಲಕೋಟೆಯಿಂದ ಜನಪ್ರಿಯವಾದರೆ, ನವಲಗುಂದದಿಂದ ನವಿಲಿನ ಚಿತ್ತಾರ. ಜೊತೆಗೆ ರುದ್ರಾಕ್ಷಿಯ ಚಿತ್ತಾರಗಳ ಖಣಗಳು ಬಂದಂತೆ ಅಂಚುಗಳಲ್ಲಿಯೂ ಬಂದವು. ಆನೆ ಹೆಜ್ಜೆಯ ಚಿತ್ರಗಳ ಸೀರೆಗಳೂ ಬಂದವು.





ಶತಮಾನದ ಸೀರೆ...

ಪಟ್ಟೇದಂಚು ಸೀರೆಯ ಮಾದರಿ ಹುಡುಕುವಾಗ ಸವದತ್ತಿಯತ್ತ ಹೇಮಾ ಪಯಣ ಬೆಳೆಸಿದರು. ಅಲ್ಲಿದ್ದ ದೇವದಾಸಿ ಒಬ್ಬರ ಬಳಿ ಪಟ್ಟೇದಂಚಿನ ಸೀರೆ ಇತ್ತು. ಅಧ್ಯಯನಕ್ಕೆ ಕೇಳಿದಾಗ, ದೇವಿ ಉಡುಗೆ ಇದು, ಯಾರಿಗೂ ಕೊಡಲಾರೆ ಎಂದು ನಿರಾಕರಿಸಿದರು. ಆಗ ಒಂದೆರಡು ಎಳೆಗಳನ್ನು ಬಿಡಿಸಿ ತಂದ ಹೇಮಾ, ಆ ಎಳೆಯನ್ನು ಪ್ರಯೋಗಾಲಕ್ಕೆಯ ಕಳುಹಿಸಿದರು. ಸುಟ್ಟು ನೋಡಿದರು. ಆ ಎಳೆ ಒಂದೆರಡಲ್ಲ, 200 ವರ್ಷಗಳ ಇತಿಹಾಸವನ್ನೇ ಹೊಂದಿತ್ತು. ಪರಿಶುದ್ಧ ಹತ್ತಿಯ ಎಳೆಯಿಂದ ಮಾಡಿದ ಈ ಎಳೆಯ ಬಣ್ಣ, ಬಾಳಿಕೆಗಳು ಇವರ ಕಣ್ಣರಳಿಸುವಂತೆ ಮಾಡಿದ್ದವು.

ಗಜೇಂದ್ರ ಗಢದ ಬಡ ನೇಕಾರರ ಮನೆಗೆ ಹೋದಾಗ, ಇವರು ಬೆಂಗಳೂರಿನವರು ಇವರಿಗೇನು ಗೊತ್ತು ನಮ್ಮ ಕಷ್ಟ ಎಂಬಂತೆ ಕಾಣಲಾಗುತ್ತಿತ್ತು. ಆದರೆ ಅವರಿಗೆ ನೂಲು, ಕಚ್ಚಾ ವಸ್ತುಗಳನ್ನು ನೀಡಿ ಮಗ್ಗಗಳನ್ನು ಆರಂಭಿಸಲು ಪ್ರೋತ್ಸಾಹಿಸಲಾಯಿತು. ಮತ್ತೆ ಮಗ್ಗಗಳ 'ಡಕ್‌ಡಕ್ ಡಕ್ ಡಕ್' ಸದ್ದು ಲಯಬದ್ಧವಾಗಿ ಕೇಳಿಸತೊಡಗಿದಾಗ ಪರಂಪರೆಯೊಂದು ಮತ್ತೊಮ್ಮೆ ಆರಂಭವಾಯಿತು.

ಮೊದಲು ಅಲ್ಲೊಂದು, ಇಲ್ಲೊಂದು ಕಾರ್ಯನಿರ್ವಹಿಸುತ್ತಿದ್ದ ಕೈಮಗ್ಗಗಳು ಇದೀಗ ನೂರಾರು ಆಗಿವೆ. ನೂರಾರು ಜನ ಮಹಿಳೆಯರು ತರಬೇತಿ ಪಡೆದಿದ್ದಾರೆ. 'ಪುನರ್‌ಜೀವನ' ಸಂಸ್ಥೆಯೊಂದಿಗೆ ಅಜಮಾಸು 80 ಜನ ನೇಕಾರರು ಕೈಜೋಡಿಸಿದ್ದಾರೆ. ಒಂದೊಂದು ಸೀರೆಗೆ ₹250–1,350 ರ ವರೆಗೂ ಕೂಲಿ ಪಡೆಯುತ್ತಿದ್ದಾರೆ.

ಭಾರತೀಯ ಕರಕುಶಲ ಮಂಡಳಿ (ಇಂಡಿಯನ್ ಕ್ರಾಫ್ಟ್ ಕೌನ್ಸಿಲ್) ನ ಮಾನ್ಯತೆ ಸಿಕ್ಕ ನಂತರ ಉತ್ತರ ಕರ್ನಾಟಕದ ನೇಕಾರಿಕೆಯ ಸೀರೆಗಳು, ಅರೆ ಹೊಲಿದ ಕುಬಸಗಳು, ಕೈಚೀಲಗಳು, ಸ್ಟೋಲ್‌ಗಳು ಜನರ ಮನ ಸೆಳೆಯುತ್ತಿವೆ.

ಇದೆಲ್ಲವೂ ಸಾಧ್ಯವಾಗಿದ್ದು 2015ರಲ್ಲಿ 'ಪುನರ್‌ಜೀವನ' ಸಂಸ್ಥೆ ಆರಂಭವಾದಾಗಿನಿಂದ. ರಸೂಲ್ ಸಾಬ್ ಅವರು ಒಂದು ಮಗ್ಗದಿಂದ ಶುರುಮಾಡಿದ್ದರು. ಇದೀಗ ಎಂಟಕ್ಕೂ ಹೆಚ್ಚು ಮಗ್ಗಗಳಿವೆ. ಯಾವ ಜಾತಿ ಬೇಧವಿಲ್ಲದೆ ನೂಲಿನೆಳೆಗಳನ್ನು ನೇಯುತ್ತ, ಕರ್ನಾಟಕದ ಜವಳಿ ಪರಂಪರೆಯ ಹಿರಿಮೆಯನ್ನು 'ಪುನರ್ ಜೀವನ' ಸಂಸ್ಥೆ, ಹೇಮಲತಾ ಜೈನ್ ಎತ್ತಿ ಹಿಡಿಯುತ್ತಿದ್ದಾರೆ.



ಹೇಮಲತಾ ಜೈನ್



ಕುಕ್ಕರಹಳ್ಳಿ ಕೆರೆಯ ಆವರಣದ ಕುಟೀರದಲ್ಲಿ ಗಾಯನಾಭ್ಯಾಸ

ಹೊಸ ಟ್ರೆಂಡ್‌ನ ಸ್ವರಪಾನ

2ನೇ ಪುಟದಿಂದ...

ವೇದಿಕೆ ನಿರ್ಮಿಸಿ ಸ್ವರಪಾನಿಗರನ್ನು ಕರೆಯಬೇಕೆಂಬುದೇನಿಲ್ಲ. ನಿಂತ ಸ್ಥಳವೇ ವೇದಿಕೆ. ಸಾರ್ವಜನಿಕ ಸ್ಥಳಗಳಲ್ಲಿ ಒಬ್ಬರೇ ಎಷ್ಟು ಚೆನ್ನಾಗಿ ಹಾಡಿದರೂ ಜನರು ಆಕರ್ಷಿತರಾಗುವುದು ಕಡಿಮೆ. ಆದರೆ, ಎಂದೋ ಕೇಳಿದ ಹಾಡನ್ನು ಹತ್ತಾರು ಮಂದಿ ಸುಶ್ರಾವ್ಯವಾಗಿ ಒಟ್ಟಾಗಿ ದಿಢೀರ್ ಎಂದು ಹಾಡಿದಾಗ ಎಲ್ಲರ ಗಮನ ಸೆಳೆಯುತ್ತದೆ. ನೋಡುವವರ ತಲೆಯಲ್ಲೂ ಯಾರು ಯಾವ ರೀತಿ ಹಾಡುತ್ತಿದ್ದಾರೆ? ಅಭ್ಯಾಸ ನಡೆಸಿದ್ದಾರಾ? ಎಂಬ ಪ್ರಶ್ನೆ ಸುಳಿಯುತ್ತದೆ. ತಾವೂ ದನಿ ಸೇರಿಸಬೇಕೆಂಬ ಮನಸ್ಸಾಗುತ್ತದೆ. ಒಟ್ಟಾಗಿ ಹಾಡುವುದರಿಂದ ಸಂಕೋಚವೂ ಮಾಯವಾಗುತ್ತದೆ. ಇದೇ 'ಫ್ಲ್ಯಾಶ್ ಮಾಬ್' ತಂತ್ರವನ್ನು ಸಾಗರ್ ಮಾಡಿದ್ದಾರೆ.

'ಸಂಗೀತ ಜ್ಞಾನ ಎಲ್ಲರಲ್ಲೂ ಇದೆ. ಹಾಡಲು ವಯಸ್ಸು, ಕೌಶಲದ ಮಿತಿ ಎಂಬುದಿಲ್ಲ. ನನಗೆ 75 ವರ್ಷ. ನಾನೂ ಹಾಡಬಹುದೇನಪ್ಪ? ನಾನು ನಿಮ್ಮ ತಂಡದೊಂದಿಗೆ ಬರಬಹುದಾ? ಎಂದು ಒಬ್ಬರು ಕೇಳಿದ್ದರು. 8 ವರ್ಷದವರಿಂದ 80 ವರ್ಷದವರೆಗಿನವರು ಸ್ವರಪಾನದ ಹಾಡುಗಳಿಗೆ ಉಸಿರು ಸೇರಿಸಿದ್ದಾರೆ. ಸಂಗೀತ ಯಾರೋ ಕೆಲವರದ್ದು ಮಾತ್ರವಲ್ಲ. ಅದು ಎಲ್ಲರದ್ದು. ನಾವು ಬರೀ ಕೇಳುಗರಲ್ಲ, ನಮಗೂ ಹಾಡುವ ಪ್ರತಿಭೆಯಿದೆ ಎಂಬ ಆತ್ಮವಿಶ್ವಾಸ ತೋರುವುದಕ್ಕೆ ಸಿದ್ಧವಾದ ವೇದಿಕೆ ಸ್ವರಪಾನ' ಎನ್ನುತ್ತಾರೆ ಸಾಗರ್.

'ಸ್ವರಪಾನ ಸ್ಕೂಲ್ ಆಫ್ ಮ್ಯೂಸಿಕ್' ಆರಂಭಿಸಿರುವ ಅವರು, ಸಂಗೀತವನ್ನು ಶಿಸ್ತಿನಿಂದ ಕಲಿಯುವವರಿಗೆ ತರಗತಿಗಳ ಆಯ್ಕೆ ನೀಡಿದ್ದಾರೆ. ಕಲಿಯುವ ಶಿಸ್ತು ಬರಲು ₹ 300ಕ್ಕೆ ನೋಂದಣಿ ಶುಲ್ಕ ವಿಧಿಸುತ್ತಾರೆ. ಎರಡು ತಿಂಗಳು ಪ್ರತಿ ಶುಕ್ರವಾರ ಮತ್ತು ಶನಿವಾರ ಒಂದು ಹಾಡನ್ನು ಹೇಳಿಕೊಡುತ್ತಾರೆ. ಭಾನುವಾರ ಅದೇ ಹಾಡನ್ನು ಸಾರ್ವಜನಿಕ ಸ್ಥಳಗಳಲ್ಲಿ ಒಟ್ಟಾಗಿ ಹಾಡಬೇಕು. 'ಸಂಗೀತ ಬರುವುದಿಲ್ಲ' ಎಂಬುದನ್ನು ಎಲ್ಲರ ತಲೆಯೊಳಗೆ ತೆಗೆಯುವುದೇ ಅವರ ಗುರಿಯಾಗಿದೆ. ತರಗತಿಗೆ ಬಾರದೇ ತಂಡದಲ್ಲಿ ಸಕ್ರಿಯ ಸದಸ್ಯರಾಗಿ ಕೆಲಸ ಮಾಡುವ, ಹಾಡುವ ಅವಕಾಶವನ್ನೂ ನೀಡಿದ್ದಾರೆ.

ಚಿಕ್ಕಮ್ಮ ಸುಧಾ ಅಕ್ಷಂತಲಾ, ಸಹಪಾಠಿಗಳಾದ ಜಿ.ವಿ.ಸುರಭಿ, ಅನುಷಾ ಶಾಖ್ಯ, ಸಂಗೀತಾ, ಅನಘಾ, ಸ್ನೇಹಾ, ಪರಿಣೀತ, ಪ್ರಣವ್, ಮನೋಜ್, ಏಬೆಲ್ ಮೊದಲಾದವರು ತಂಡದ ಪ್ರಮುಖ ಸದಸ್ಯರಾಗಿದ್ದಾರೆ. ಹಾಡುವ ಸ್ಥಳಗಳನ್ನು ಗೊತ್ತು ಮಾಡುವುದು, ಜಾಲತಾಣಗಳ ನಿರ್ವಹಣೆ, ವಿಡಿಯೊ ಚಿತ್ರೀಕರಣ, ಹೊಸ ಸದಸ್ಯರನ್ನು ಒಳಗೊಳ್ಳುವುದು ಸೇರಿದಂತೆ ಎಲ್ಲ ಕೆಲಸವನ್ನು ಹಂಚಿಕೊಂಡು ಸಾಗರ್ ಅವರಿಗೆ ಹೆಗಲಾಗಿದ್ದಾರೆ. ಇವರು ಗಾಯಕರಷ್ಟೇ ಅಲ್ಲ ಸಂಘಟಕರು, ವಾದ್ಯ ನುಡಿಸುವವರೂ ಆಗಿದ್ದಾರೆ.

'ಸ್ವರಪಾನ' ತಂಡವು ಸುಗಮ ಸಂಗೀತ, ಚಲನಚಿತ್ರ ಗೀತೆ, ರಂಗ ಗೀತೆಗಳನ್ನೂ ಹಾಡುತ್ತದೆ. ರಾಜ್‌ಕುಮಾರ್ ಹಾಡಿರುವ 'ಹೊಸಬೆಳಕು ಮೂಡುತಿದೆ' ಮೂಲಕವೇ ತಂಡದ ಸಂಗೀತಯಾನ ಆರಂಭವಾಯಿತು. 'ಗೋವಿಂದ ಮುರಹರ ಗೋವಿಂದ', 'ಗಜವದನ ಹೇರಂಭ' ರಂಗಗೀತೆಗಳನ್ನು ಹಾಡುವ ತಂಡವು, 'ಏನಾಗಲೀ ಮುಂದೆ ಸಾಗು ನೀ', 'ಎಲ್ಲೋ ಜಿನುಗಿರುವ ನೀರು', 'ಕಿವಿ ಮಾತೊಂದು', 'ಈ ಭೂಮಿ ಬಣ್ಣದ ಬುಗುರಿ', 'ಕಾಲವನ್ನು ತಡೆಯೋರು ಯಾರೂ ಇಲ್ಲ', 'ಏ ಶಾರದೆ ದಯೆ ತೋರಿಸು' ಚಿತ್ರಗೀತೆಗಳನ್ನು ಹಾಡಿದೆ.

ಮೈಸೂರು ಸಂಸ್ಥಾನ ಗೀತೆ 'ಕಾಯೌ ಶ್ರೀಗೌರಿ' ಅನ್ನು ಚಾಮುಂಡಿ ಬೆಟ್ಟದಲ್ಲಿ ಹಾಡಿದ್ದು, ಅರಮನೆಯಲ್ಲಿ ನೂರು ಜನರನ್ನು ಸೇರಿಸಿ ಹಾಡಿಸುವ ಆಸೆ ತಂಡಕ್ಕಿದೆ. ಜೂನ್ ಅಂತ್ಯದಲ್ಲಿ 'ಮೈಸೂರು ಮ್ಯೂಸಿಕ್ ಮ್ಯಾರಥಾನ್' ಆಯೋಜಿಸಲು ಸಿದ್ಧತೆ ನಡೆದಿದ್ದು, ಸಾವಿರಕ್ಕೂ ಹೆಚ್ಚು ಹಾಡುಗಾರರು ನಗರದ ವಿವಿಧೆಡೆ ಇಡೀ ದಿನ ಹಾಡುಗಳನ್ನು ಹಾಡಲಿದ್ದಾರೆ. 'ಸ್ವರಪಾನ' ಬ್ಯಾಂಡ್ ಅನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ಯುವ ಕನಸಿದೆ. ಸದ್ಯ ಬೆಂಗಳೂರಿನ ಫೋರಂ ಮಾಲ್‌ನಲ್ಲಿ 'ದಿಢೀರ್ ಗೋಷ್ಠಿ' (ಫ್ಲ್ಯಾಶ್ ಮಾಬ್) ನಡೆಯಲಿದೆ.

ಮುನ್ನೋಟ 18-05-2025 ರಿಂದ 24-05-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ನಿಮ್ಮ ವೆಚ್ಚವನ್ನು ತೂಗಿಸುವಷ್ಟು ಆದಾಯವಿರುತ್ತದೆ. ಸರ್ಕಾರದಿಂದ ಸಿಗಬೇಕಾದ ಎಲ್ಲ ಸೌಲಭ್ಯಗಳು ಸಿಗುತ್ತವೆ. ಗುರುಹಿರಿಯರನ್ನು ಗೌರವಿಸುವಿರಿ. ಇರುವ ಆಸ್ತಿಯನ್ನು ಅಭಿವೃದ್ಧಿಪಡಿಸಲು ಯೋಚಿಸುವಿರಿ. ಮಕ್ಕಳಿಗಾಗಿ ನೀವು ಈಗ ಹಣ ಖರ್ಚು ಮಾಡಬೇಕಾಗುತ್ತದೆ. ಧರ್ಮಕಾರ್ಯಗಳಿಂದ ಸ್ವಲ್ಪ ಆದಾಯವಿರುತ್ತದೆ. ಸಂಗಾತಿಯ ಒಡವೆ, ವಸ್ತುಗಳಿಗಾಗಿ ಸಾಕಷ್ಟು ಹಣ ಖರ್ಚಾಗುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ನಿಮ್ಮದೇ ಆದ ವರ್ಚಸ್ಸನ್ನು ಹೊಂದಲು ಪ್ರಯತ್ನ ಪಡುವಿರಿ. ಆದಾಯವು ನಿಮ್ಮ ನಿರೀಕ್ಷೆಯಷ್ಟಿರುತ್ತದೆ. ಬಂಧುಗಳಿಂದ ಸಿಗಬೇಕಾದ ಸಹಕಾರ ಸಿಗುವುದಿಲ್ಲ. ಭೂಮಿ ವಹಿವಾಟು ನಡೆಸುವ ಮಧ್ಯವರ್ತಿಗಳಿಗೆ ಉತ್ತಮ ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ಶ್ರಮಪಟ್ಟು ಓದಿದಲ್ಲಿ ಮಾತ್ರ ಉತ್ತಮ ಫಲಿತಾಂಶವಿರುತ್ತದೆ. ಸ್ತ್ರೀರೋಗ ತಜ್ಞರಿಗೆ ಹೆಚ್ಚು ಬೇಡಿಕೆ ಇರುತ್ತದೆ. ಸಂಗಾತಿಯಿಂದ ಸಹಕಾರ ಕಡಿಮೆಯಾಗಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಸಮಾಜದಲ್ಲಿ ಗೌರವ ಲಭಿಸುತ್ತದೆ. ಆದಾಯವು ಬಹಳ ಕಡಿಮೆ ಇರುತ್ತದೆ. ಬಂಧುಗಳು ಸಹಾಯ ಮಾಡುವ ರೀತಿಯಲ್ಲಿ ನಟಿಸಿ ನಿಮ್ಮಿಂದ ಖರ್ಚು ಮಾಡಿಸುತ್ತಾರೆ. ವೃತ್ತಿಯಲ್ಲಿ ಹೊಸ ಸ್ಥಾನ ಸಿಗುವ ಸಾಧ್ಯತೆಯಿದೆ. ಫ್ಯಾಶನ್ ಡಿಸೈನಿಂಗ್ ಓದುತ್ತಿರುವವರಿಗೆ ಉತ್ತಮ ಫಲಿತಾಂಶವಿದೆ. ಅವಿವಾಹಿತರಿಗೆ ವಿವಾಹ ಸಂಬಂಧಗಳು ಒದಗಿರಬಹುದು. ನಿಮ್ಮ ತಾಯಿಯ ನಡುವೆ ಮುಸುಕಿನ ಗುದ್ದಾಟವಿರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ನಿರ್ಧಾರಗಳಲ್ಲಿ ದೃಢತೆ ಇರುವುದಿಲ್ಲ. ಸರ್ಕಾರದಿಂದ ನಿಮಗೆ ಸಾಕಷ್ಟು ಆದಾಯವಿರುತ್ತದೆ. ಕೃಷಿಯಿಂದ ಅಷ್ಟು ಲಾಭವಿರುವುದಿಲ್ಲ. ಉದರ ಸಂಬಂಧಿ ದೋಷಗಳು ಕೆಲವರನ್ನು ಈಗ ಕಾಡಬಹುದು. ಪ್ರೀತಿ, ಪ್ರೇಮದಲ್ಲಿ ಯಶಸ್ಸು ದೊರೆಯುತ್ತದೆ. ಹಿರಿಯರ ನಡುವೆ ಹೆಚ್ಚು ಅನುಬಂಧ ಬೆಳೆಯುತ್ತದೆ. ವೃತ್ತಿಯಲ್ಲಿ ಬಹಳ ಬುದ್ಧಿವಂತಿಕೆಯಿಂದ ನಡೆದುಕೊಂಡು ಉನ್ನತ ಸ್ಥಾನ ಪಡೆಯುವಿರಿ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಹೆಚ್ಚು ಹುಮ್ಮಸ್ಸಿನಿಂದ ಕೆಲಸ ಮಾಡುವಿರಿ. ಆದಾಯವು ಕಡಿಮೆ ಇರುತ್ತದೆ. ಕೃಷಿಯಲ್ಲಿ ಲಾಭಕ್ಕಿಂತ ನಷ್ಟವಾಗಬಹುದು. ಹಣಕಾಸಿನ ಸಂಸ್ಥೆಯನ್ನು ನಡೆಸುತ್ತಿರುವವರಿಗೆ ಸ್ವಲ್ಪ ಲಾಭವಿರುತ್ತದೆ. ಶೀತ ಅಥವಾ ತಲೆನೋವು ಕೆಲವರಲ್ಲಿ ಕಾಣಿಸಬಹುದು. ಸಂಗಾತಿಯ ವ್ಯವಹಾರಗಳಿಂದ ಕಿರಿಕಿರಿಯಾಗಬಹುದು. ಗಣಿಗಾರಿಕೆ ಮಾಡುವವರಿಗೆ ಲಾಭ ಹೆಚ್ಚುತ್ತದೆ. ಹಿರಿಯರಿಂದ ವ್ಯಾಪಾರಕ್ಕೆ ಬಂಡವಾಳ ಸಿಗುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಯಾವುದೇ ಕೆಲಸಗಳಲ್ಲೂ ಶ್ರದ್ಧೆ ಇರುವುದಿಲ್ಲ. ಆದಾಯವು ಮಧ್ಯಮಗತಿಯಲ್ಲಿ ಇರುತ್ತದೆ. ಬಂಧುಗಳಿಂದ ನಿರೀಕ್ಷಿತ ಸಹಕಾರ ದೊರೆಯುತ್ತದೆ. ಈಗ ಸ್ಥಿರಾಸ್ತಿ ಮಾಡಿಕೊಳ್ಳುವ ಯೋಗವಿದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಮಕ್ಕಳ ಬಗ್ಗೆ ಒಳ್ಳೆಯ ವಾರ್ತೆಗಳನ್ನು ಕೇಳುವಿರಿ. ನಿಮ್ಮ ಶತ್ರುಗಳನ್ನು ಮಿತ್ರರನ್ನಾಗಿ ಮಾಡಿಕೊಳ್ಳುವ ಅವಕಾಶ ಒದಗಿ ಬರುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಬಹಳ ಆಲಸೀತನ ನಿಮ್ಮಲ್ಲಿ ಇರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಆಸ್ತಿಯನ್ನು ಮಾಡಿಕೊಳ್ಳುವ ಯೋಗ ನಿಮಗಿದೆ. ಮೆಕ್ಯಾನಿಕಲ್ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರಗತಿ ಇರುತ್ತದೆ. ಸಂಗಾತಿಯ ಜತೆಗೂಡಿ ಮಾಡಿದ ವ್ಯವಹಾರಗಳಲ್ಲಿ ಲಾಭವಿರುತ್ತದೆ. ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಅನಿರೀಕ್ಷಿತ ಪ್ರಗತಿ ಇರುತ್ತದೆ. ವೃತ್ತಿಯಲ್ಲಿ ನಿರೀಕ್ಷಿತ ಪ್ರಗತಿ ಇರುವುದಿಲ್ಲ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಸಹೋದರಿಯರ ಸಹಕಾರ ದೊರೆಯುತ್ತದೆ. ನವೀನ ರೀತಿಯ ಕೃಷಿಯನ್ನು ಮಾಡಲು ಉತ್ಸುಕರಾಗುವಿರಿ. ಏರೋಸ್ಪೇಸ್ ಎಂಜಿನಿಯರಿಂಗ್ ಮಾಡುತ್ತಿರುವವರಿಗೆ ಪ್ರಗತಿ ಇದೆ. ಗಣಿಗಾರಿಕೆ ಮಾಡುವವರಿಗೆ ತೊಡಕುಗಳು ಎದುರಾಗಬಹುದು. ಸಂಗಾತಿಯು ಹೆಚ್ಚು ಜವಾಬ್ದಾರಿ ತೆಗೆದುಕೊಂಡು ಕುಟುಂಬವನ್ನು ನಡೆಸುವರು.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ನಿಮ್ಮ ವಿರುದ್ಧ ಕೆಲಸ ಮಾಡುತ್ತಿದ್ದ ಶತ್ರುಗಳು ಈಗ ನಿಮ್ಮ ಪರವಾಗಿ ಕೆಲಸ ಮಾಡುವರು. ಆಭರಣ ವ್ಯಾಪಾರಿಗಳಿಗೆ ವಿದೇಶದಲ್ಲಿ ವ್ಯವಹಾರ ವಿಸ್ತರಿಸುವ ಯೋಗವಿದೆ. ಕಣ್ಣಿನ ದೋಷವಿರುವವರು ಹೆಚ್ಚು ಎಚ್ಚರವಹಿಸಿ. ಅವಿವಾಹಿತರಿಗೆ ವಿವಾಹ ಸಂಬಂಧಗಳು ಒದಗುವ ಯೋಗವಿದೆ. ಕೃಷಿ ಸಂಬಂಧಿ ಹೈನುಗಾರಿಕೆ ನಿಮಗೆ ಲಾಭ ತರುತ್ತದೆ. ತಲೆನೋವು ಇರುವವರು ಎಚ್ಚರ ವಹಿಸಿ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ವಾರದ ಆರಂಭ ಸ್ವಲ್ಪ ಆನಂದದಾಯಕವಾಗಿರುತ್ತದೆ. ಆದಾಯದಲ್ಲಿ ಚೇತರಿಕೆ ಇರುತ್ತದೆ. ವಿದೇಶಕ್ಕೆ ತೆರಳಬೇಕೆನ್ನುವವರಿಗೆ ಪರಿಚಿತರು ಸಾಕಷ್ಟು ಸಹಾಯ ಮಾಡುವರು. ವ್ಯಾಪಾರ ವ್ಯವಹಾರಗಳಲ್ಲಿ ಸ್ವಲ್ಪ ಪ್ರಗತಿಯನ್ನು ಕಾಣಬಹುದು. ಕೆಲವರಿಗೆ ಪಿತ್ತವಿಕಾರಗಳಾಗಬಹುದು. ಹೈನುಗಾರಿಕೆಯಲ್ಲಿ ಸಂಶೋಧನೆ ಮಾಡುವವರಿಗೆ ಸಾಕಷ್ಟು ಅಭಿವೃದ್ಧಿ ಇರುತ್ತದೆ. ಸರ್ಕಾರಿ ಕೆಲಸಗಳಲ್ಲಿ ನಿಧಾನ ಗತಿ ಇದ್ದರೂ ಕೆಲಸಗಳಾಗುತ್ತವೆ. ಧಾರ್ಮಿಕ ಕಾರ್ಯಗಳಿಂದ ಸಾಕಷ್ಟು ಜನಪ್ರಿಯರಾಗುವಿರಿ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಹಿರಿಯರು ತಮ್ಮ ಸ್ವಂತಿಕೆಯನ್ನು ಉಳಿಸಿಕೊಳ್ಳುವರು. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ವಿದೇಶಿ ವ್ಯವಹಾರಗಳಿಂದ ಹೆಚ್ಚು ಆದಾಯವನ್ನು ಕಾಣಬಹುದು. ಸ್ನೇಹಿತರೊಡನೆ ಮಾಡುವ ವ್ಯವಹಾರಗಳು ಸ್ವಲ್ಪ ಲಾಭ ಕೊಡುತ್ತದೆ. ಸರ್ಕಾರಿ ಸಂಸ್ಥೆಗಳಿಂದ ಆಸ್ತಿ ಪಡೆಯುವ ಯೋಗವಿದೆ. ವಿದ್ಯಾರ್ಥಿಗಳಿಗೆ ನಿರೀಕ್ಷೆಗೆ ಮೀರಿದ ಯಶಸ್ಸು ದೊರೆಯುತ್ತದೆ. ಹರಿತವಾದ ಆಯುಧಗಳನ್ನು ಬಳಸುವಾಗ ಎಚ್ಚರವಿರಲಿ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ನೀವು ನಿಮ್ಮದೇ ಆಲೋಚನೆಯಲ್ಲಿ ಮುಳುಗಿರುವಿರಿ. ಬುದ್ಧಿವಂತಿಕೆಯಿಂದ ಈಗ ಆದಾಯವನ್ನು ಹೆಚ್ಚು ಮಾಡಿಕೊಳ್ಳುವಿರಿ. ಬಣ್ಣದ ಮಾತನಾಡಿ ಜನರನ್ನು ನಂಬಿಸುವಿರಿ. ಬಂಧುಗಳ ಸಹಕಾರದಿಂದ ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಅನುಕೂಲ ಮಾಡಿಕೊಳ್ಳುವಿರಿ. ವಿದೇಶಿ ವ್ಯವಹಾರದಲ್ಲಿ ನಿರೀಕ್ಷಿತ ಲಾಭವಿರುತ್ತದೆ. ಉದ್ಯೋಗದಲ್ಲಿ ಹಿರಿಯ ಅಧಿಕಾರಿಗಳು ನಿಮ್ಮನ್ನು ಸ್ವಲ್ಪ ಹೆಚ್ಚು ಗಮನಿಸುವರು.

ಪದಬಂಧ 2892



ಮೇಲಿನಿಂದ ಕೆಳಕ್ಕೆ

1. ಮತ್ತೇರಿದ ಮದನ ಸುಂದರಿ, ಬೇಲೂರಿನ ಶಿಲಾಬಾಲಿಕೆ 4
2. ಉಬ್ಬುತಗ್ಗುಗಳಿಲ್ಲದ ನೆಲ 4
3. ದ್ರವದಲ್ಲಿ ಲೀನಗೊಳಿಸು 4
4. ಇತರರ ಬಾಣಗಳ ಆಸರೆ ಪಡೆದ ವ್ಯಾಸ ಪಿತ 4
6. ಎಲ್ಲಮ್ಮನ ತೀರ್ಥ ಕ್ಷೇತ್ರ 4
8. ಸದಾ ಜಗಳ ನಡೆಯುವ ಮನೆ 5
10. ಒಂದಿಷ್ಟೂ ಆಚೆ ಈಚೆ ಹೋಗದೆ 5
11. ಕೃತಕವಾದದ್ದು; ಅಸ್ವಾಭಾವಿಕ 3
12. ಕಾರದ ಸಮಜಾಯಿಷಿ 3
16. ನಿಜವನ್ನೇ ಪಾಲಿಸಿ ಪರೀಕ್ಷಿಸಿದ ಕಾಲ 4
17. ಆಗಮನದಿಂದಾದ ಮಿಲನ 4
18. ಸಮನಾದದ್ದು ಇಲ್ಲವೇ ಇಲ್ಲ, ಅದನ್ನು ಮೀರಿದ್ದು 4
19. ಕೆನ್ನೆಗೆ ಮತ್ತೆ ಮತ್ತೆ ಏಟು ಬಿದ್ದ ಸದ್ದು 4
20. ಕೊನೆಯವರೆಗೂ ಹೊಡೆದಾಟ 4

ಎಡದಿಂದ ಬಲಕ್ಕೆ

1. ಅಂತರಂಗದ ಉತ್ಸಾಹದ ಲವಲವಿಕೆ 4
3. ಇದು ತೀವ್ರವಾದ ಮುನಿಸು 4
5. ರಾಷ್ಟ್ರ ರಾಷ್ಟ್ರಗಳ ನಡುವೆ ನಡೆವ ದೊಡ್ಡ ಯುದ್ಧ 5
7. ಚಪ್ಪಾಳೆ ತಟ್ಟಿ ಕಾಗೆ ಹಾರಿಸಿದಂತೆ ನಡೆದ ಘಟನೆ 4
9. ಒಳ್ಳೆಯ ಚಿಂತನೆಯ ವಿಷಯ 4
11. ಕಾರ್ತಿಕೇಯನ ನಕ್ಷತ್ರ 3
13. ಕಗ್ಗತ್ತಲ ವರ್ಣಿಸುವ ಮಧ್ಯದಿರುಳು 4
14. ಕೊನೆಗೂ ಸಿಗುವ ಲಕ್ಷ್ಮೀ ಪ್ರಿಯ ಪತಿ 4
15. ಸತ್ಯವನ್ನು ನಂಬಿ ಹರಿಶ್ಚಂದ್ರ ಕಾದ ಜಾಗ 3
17. ಒಟ್ಟಿಗೆ ನೆಲಸುವುದು ದೋಷಕ್ಕೆ ಕಾರಣ 4
19. ಜಾತಕದಲ್ಲಿ ಸೂರ್ಯನಾಳುವ ಸಮಯ 4
21. ವರ್ಣಮಯ ಮೃಗ ಹಿಡಿದಿರುವ ಶಿವ 5
22. ಇವಳು ಸಾಧಾರಣ ಅಭಿನೇತ್ರಿಯಲ್ಲ ಬೃಹತ್ತಾಗಿ ಬೆಳೆದವಳು 4
23. ಇತರರಿಗಾಗಿ ತೊಳಲಾಟ ಒದ್ದಾಟ 4

ಪದಬಂಧ ಉತ್ತರ -2891

ಮೇಲಿಂದ ಕೆಳಕ್ಕೆ

1. ಯುವಜನತೆ 2.ನತಮಸ್ತಕ 3.ಸಾರಜನಕ 4.ನದಿಬಯಲು 5.ಜಟಕಾ 7.ಸುಪ್ರಜ 12.ರಸಿಕ 14.ನಿವೃತ್ತಿ 15.ರಾಮತಾರಕ 16.ಶ್ರೀಧರ 17.ರಜತಾಚಲ 18.ಪುನರಾರಂಭ 19.ಗೆಲುವ 20.ಮಕರಗಣ

ಎಡದಿಂದ ಬಲಕ್ಕೆ

1.ಯುದ್ಧವಿಮಾನ 3.ಸಾಧುಸಜ್ಜನ 5.ಜನುಮ 6.ಜಯಿಸು 8.ನಗಾಟ 9.ಸ್ತವನ 10.ಪ್ರಳಯ 11.ಕಾರಕ 13.ಕನಿಜ 16.ಶ್ರೀಕರ 18.ಪುತ್ತಿಗೆ 21.ಮತಾಂಧ 22.ಜವಾನ 23.ಲುಬ್ಧಕ 24.ರಕ್ಷಿತಾ 25.ರಾಘವ 26.ಕರಕಮಲ 27.ಭರಯಹರಣ

ಸಂವೇದನಾಶೀಲ ಲೇಖಕ ದೇವನೂರ ಮಹಾದೇವ ಅವರು ಆಗಾಗ ಬರೆದ ಬರಹ, ವಿಚಾರ, ವಿಮರ್ಶೆ, ಇತ್ಯಾದಿಗಳನ್ನು ರಂಗಪಠ್ಯವಾಗಿಸಿಕೊಂಡು 'ಎದೆಗೆ ಬಿದ್ದ ಅಕ್ಷರ' ನಾಟಕ ರಂಗದ ಮೇಲೆ ಬಂದಿದೆ. ಅನುಭವಿ ನಿರ್ದೇಶಕ ಸಿ.ಬಸವಲಿಂಗಯ್ಯ ಅವರು ಈ ಪಠ್ಯವನ್ನು ಯಶಸ್ವಿಯಾಗಿ ರಂಗಭೂಮಿಗೆ ತಂದಿದ್ದಾರೆ.



ರಂಗದಲ್ಲಿ ಎದೆಗೆ ಬಿದ್ದ ಅಕ್ಷರ

ರಾಜಪ್ಪ ದಳವಾಯಿ

ದೇವನೂರ ಮಹಾದೇವ ಅವರು ಆಗಾಗ ಪ್ರತಿಕ್ರಿಯಿಸಿದ ವಿಚಾರ, ವಿಮರ್ಶೆ, ಕತೆಗಳ ಮುಖೇನ ಸಮಕಾಲೀನ ಭಾರತಕ್ಕೆ ಸ್ಪಂದಿಸಿದ ಚಿಂತನೆಯ ಸಾರ 'ಎದೆಗೆ ಬಿದ್ದ ಅಕ್ಷರ'. ಇದೊಂದು ಬಿಡಿ ಲೇಖನ ಸಂಕಲನ. ಅದರೊಳಗೆ ಮಾನವೀಯ ಮಿಡಿತದ ವಿಚಾರ, ಹಲವು ಕತೆಗಳೊಂದಿಗೆ ಸೃಜನಗೊಂಡಿವೆ. ಅಂಥ ಕಥನಗಳನ್ನು ಪ್ರಸಿದ್ಧ ರಂಗಕರ್ಮಿ ಸಿ.ಬಸವಲಿಂಗಯ್ಯ ರಂಗಕ್ಕೆ ತಂದಿದ್ದಾರೆ. ಬಸವಲಿಂಗಯ್ಯ ಸದಾ ಹೊಸ ಹೊಸ ರಂಗಕೃತಿಗಳನ್ನು ಶೋಧಿಸುತ್ತಿರುತ್ತಾರೆ. ಅವರ ಒಂದೊಂದು ನಾಟಕವೂ ಒಂದೊಂದು ಹೊಸ ರಂಗಕಥನವಾಗಿರುತ್ತವೆ. 'ಎದೆಗೆ ಬಿದ್ದ ಅಕ್ಷರ' ಅಂಥ ಮತ್ತೊಂದು ಪ್ರಧಾನ ರಂಗಪಠ್ಯ. ಶೋಧನಾತ್ಮಕ ನಿರ್ದೇಶಕ ಹೇಗೆ ಹೊಸ ಪಠ್ಯಗಳನ್ನು ಕಟ್ಟಬಲ್ಲ ಎಂಬುದಕ್ಕೆ ಈ ನಾಟಕ ಅತ್ಯುತ್ತಮ ಉದಾಹರಣೆಯಾಗಿದೆ.

ಮಹಾದೇವ ಅವರ ಚಿಂತನೆ ಕಳೆದ ಅರ್ಧ ಶತಮಾನ ಕಾಲದ್ದು. ತಮ್ಮ ಅಶೋಕಪುರಂ ಜೀವನದಿಂದ ಇಲ್ಲಿವರೆಗೆ ಕಂಡುಂಡ ಅವಮಾನ, ನೋವು, ನಲಿವು, ಪ್ರೀತಿ ಎಲ್ಲವೂ ಒಂದು ಮಹಾ ಜೀವನದಂತೆ ಸಾಗಿ ಕ್ರೂರವಾದ ವ್ಯವಸ್ಥೆಗೆ ವ್ಯಂಗ್ಯ, ಮೌನ, ಸಂಕಟಗಳ ಮೂಲಕ ಕೊಟ್ಟ ಉತ್ತರದಂತಿದೆ. ಮನೆಮಂಚಮ್ಮನಂಥ ಊರ ದೇವತೆಯಿಂದಿಡಿದು ಎಲ್ಲವೂ ಸಮಾನತೆಯ ಆಶಯದತ್ತ ಚಲಿಸುವ ದಲಿತ ಜಗತ್ತು ಪ್ರತ್ಯೇಕಗೊಳ್ಳದೆ ಊರು-ಕೇರಿ ಒಂದಾಗಬೇಕಾದ ಒಂದು ಹೊಸ ಸಮೀಕರಣದ ವ್ಯಾಕರಣವನ್ನು ನಾಟಕ ಮಂಡಿಸುತ್ತದೆ. ಕತೆಯಯೊಳಗೆ ಮಹಾದೇವ ನಾಟಕವನ್ನು ಸೃಜಿಸಿರುತ್ತಾರೆ ಎಂಬುದಕ್ಕೆ ಈ ರಂಗ ಪ್ರಯೋಗ ಅತ್ಯುತ್ತಮ ನಿದರ್ಶನ.

ನಾಟಕ ಎಲ್ಲಿದೆ? ಬಹುಶಃ ಮನಸ್ಸನ್ನು ಆರ್ದ್ರಗೊಳಿಸುವಲ್ಲಿ ಮಾತ್ರ ನಾಟಕವಿರುತ್ತದೆ. ಜಗತ್ತಿಗೆ ಸೃಜನಶೀಲ ಬರಹಗಾರ ಪ್ರತಿಕ್ರಿಯಿಸಬೇಕಾದ ರೀತಿಯೇ ಹೀಗೆ ಎಂಬ ಮಾದರಿಯನ್ನು ಈ ನಾಟಕ ತೋರುತ್ತದೆ. ತುಂಬಾ ಕಾಠಿಣ್ಯ ಎನಿಸುವುದು ಅಸಮಾನತೆ. ಭಾರತವೆಂಬ ಒಡೆದ ಮನೆಯ ಸಾಂಸ್ಕೃತಿಕ ನಾಯಕರು ಯಾರು? ಯಾರು? ಎಲ್ಲಿದ್ದಾರೆ? ಎಂಬ ಪೊಲಿಟಿಕಲ್ ಫಿಲಾಸಫಿಯನ್ನು ಅಂತಿಮವಾಗಿ ಮಂಡಿಸಿದರೂ ಸುತ್ತಮುತ್ತ ಇರುವ ದೌರ್ಜನ್ಯ, ಶೋಷಣೆ, ಅಸಮಾನತೆಗಳಿಗೆ ಮನಮಿಡಿಯುವುದು–ಇತಿಯೋಪಿಯಾದ ಹಸಿವು, ಕೈಲ್ವಿನ್‌ನಂಥ ಫೋಟೊಗ್ರಾಫರ್‌ನ ಯಶಸ್ಸು ಮತ್ತು ದುರಂತ ನೆನಪಿಸಿ ಆ ನೊಣ ಮುತ್ತಿದ ಮಕ್ಕಳು ಕಾಡುವ ಬಗೆ, ಕ್ಷಾಮ ಹಸಿವಿಗಿಂತ ಯುದ್ಧದಲ್ಲಿ ಮಡಿವ ಜನರ ಸಂಖ್ಯೆ, ಯುದ್ಧೋನ್ಮಾದದ ಬಗೆಗಿನ ವ್ಯಾಖ್ಯಾನ-ಈ ನಾಟಕದೊಳಗೆ ನೂರಾರು ಕತೆಗಳಿವೆ. ಗಂಡಭೇರುಂಡ ಪಕ್ಷಿಯ ಕತೆ, ಹುಲಿ, ಮಂಗ, ಮನುಷ್ಯರಲ್ಲಿ ಅಪಾಯಕಾರಿ ಯಾರು? ದೇವರು, ದೇವಾಲಯ, ಸಂವಿಧಾನ–ಗಾಂಧಿ, ಅಂಬೇಡ್ಕರ್, ಲೋಹಿಯಾರಂತೆಯೇ ಶ್ರೀಕೃಷ್ಣ ಆಲನಹಳ್ಳಿ, ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಪ್ರೊ.ಎಂ.ಡಿ. ನಂಜುಂಡಸ್ವಾಮಿ, ಪಿ. ಲಂಕೇಶ್, ಯು.ಆರ್. ಅನಂತಮೂರ್ತಿ, ಎಲ್.ಬಸವರಾಜು ಅವರನ್ನು ಗ್ರಹಿಸಿಕೊಂಡ ಬಗ್ಗೆ ಮುಂತಾಗಿ ಮುಂತಾಗಿ. 'ಎದೆಗೆ ಬಿದ್ದ ಅಕ್ಷರ' ಇಂಥ ಇನ್ನೂ ಹತ್ತು ನಾಟಕಗಳಾಗುವ ಸಾಮಗ್ರಿಯ ಕೃತಿ.

ಆಯ್ದ ಕೆಲವು ಘಟನೆ ಮತ್ತು ವಿಚಾರಗಳನ್ನು ನಾಟಕ ಮಾಡಲಾಗಿದೆ. ನಟರಾಜ ಬೂದಾಳು ಮತ್ತು ಸಂತೋಷ ನಾಯಕ್ ಆರ್. ಅವರು ಈ ರಂಗಪಠ್ಯವನ್ನು ತಯಾರಿಸಿದ್ದಾರೆ. ಬಸವಲಿಂಗಯ್ಯ ಈಗಾಗಲೆ ಮಹಾದೇವ ಅವರ 'ಕುಸುಮಬಾಲೆ', 'ದ್ಯಾವನೂರು' ನಾಟಕಗಳನ್ನು ನಿರ್ದೇಶಿಸಿದ್ದಾರೆ.

'ಕುಸುಮಬಾಲೆ' ಒಂದು ಲೆಜೆಂಡರಿ ನಾಟಕ. ಸಿಜಿಕೆ 'ಒಡಲಾಳ'ವನ್ನು ಲೆಜೆಂಡರಿ ಮಾಡಿದಂತೆ, ಆ ಮೂಲಕ ಮೇರು ನಟಿ ಉಮಾಶ್ರೀಯನ್ನು ರೂಪಿಸಿದ ಸಾಕವ್ವ. 'ಕುಸುಮಬಾಲೆ' ರಂಗಾಯಣ ಮೈಸೂರಿನ ಪ್ರತಿಷ್ಠಿತ ನಾಟಕ. 'ದ್ಯಾವನೂರು' ನೀನಾಸಂಗೆ ಬಸವಲಿಂಗಯ್ಯ ನಿರ್ದೇಶಿಸಿದ ನಾಟಕ ಎಚ್. ಜನಾರ್ದನ (ಜನ್ನಿ) ದೇವನೂರರ ಕತೆಗಳ ಗುಚ್ಛ 'ಸಂಬಂಜ ಅನ್ನದು ದೊಡ್ಡುಕನ' ಎಂಬ ನಾಟಕ ನಿರ್ದೇಶಿಸಿದಿದ್ದರು. ಬಹಳ ಹಿಂದೆ 'ಮಾರಿಕೊಂಡವರು', 'ಡಾಂಬರು ಬಂದುದು' ಮುಂತಾದ ಕತೆಗಳು ನಾಟಕಗಳಾಗಿದ್ದವು. ಕನ್ನಡ ರಂಗಭೂಮಿ ಮಹಾದೇವ ಅವರನ್ನು ಮುಖ್ಯ ನಾಟಕಕಾರನೆಂದೇ ಗ್ರಹಿಸಿದಂತಿದೆ. ಅವರ ಕತೆಗಳೂ, ಕಾದಂಬರಿಗಳೂ ಈ ಹಿಂದೆ ನಾಟಕ ಆಗಿವೆ ಅಥವಾ ರಂಗಕೃತಿಗಳಾಗಿವೆ. ಈಗ ಅವರ ವಿಚಾರ ಕೃತಿ ಕೂಡ ರಂಗಕೃತಿಯಾಗಿದೆ. ಇದು ಕನ್ನಡ ರಂಗಭೂಮಿಯ ಪ್ರಯೋಗಶೀಲತೆಗೆ ಸಾಕ್ಷಿ. ಹಾಗೆಯೇ ದೇವನೂರರ ಬರಹಕ್ಕಿರುವ ಶಕ್ತಿ ಕೂಡ.

'ಎದೆಗೆ ಬಿದ್ದ ಅಕ್ಷರ' ಕೇವಲ ಶಿಕ್ಷಣದ ಸಾಧ್ಯತೆಯಲ್ಲ. ಅದು ಚಿಂತನೆಯ ದಾರಿ. ನಾವು ಯಾವ ದಾರಿಯಲ್ಲಿ ನಡೆಯಬೇಕು? ಜೀವನ ಸರಿಯಾಗುವ ಬಗೆ ಯಾವುದು? ಮುಂತಾದ ವಿಚಾರಗಳೂ ಇಲ್ಲಿ ಅನಾವರಣಗೊಂಡಿವೆ. ಶೋಷಿಸುವವನನ್ನು ಎಚ್ಚರಿಸುವ, ಶೋಷಣೆಗೆ ತುತ್ತಾದವರಿಗೆ ಮರುಗುವ ಕೇಡನ್ನು ಸೃಜಿಸಿದ ಕೇಡಿಗ ಮನಸ್ಸುಗಳನ್ನು ಪ್ರಶ್ನಿಸುವ, ಮೂಲಭೂತವಾದವೆಂಬುದು ತನ್ನ ಹತಾರಗಳನ್ನು ಹೇಗೆ ಸೃಷ್ಟಿಸಿಕೊಳ್ಳುತ್ತದೆಂಬ ಆವರಣವನ್ನು ಅರ್ಥೈಸುವ ನೆಲೆಗಳು ಇಲ್ಲಿ ಮುಖ್ಯವೆನಿಸುತ್ತವೆ. ಸಂವಿಧಾನ-ದಲಿತರ ಕೇರಿ-ಶಿಕ್ಷಣ-ಅಸಮಾನತೆ-ಸಮಾನತೆಯತ್ತ ನಡೆವ ನಡಿಗೆ, ನಮ್ಮ ನಡುವಿನ ಲೆಜೆಂಡರಿ ವ್ಯಕ್ತಿತ್ವಗಳು ಸಾಮಾಜಿಕ ರಾಜಕೀಯವಾಗಿ ವಿಶಿಷ್ಟ ಎನ್ನುವ ರೀತಿ ರಂಗದಲ್ಲಿ ಅನಾವರಣಗೊಂಡಿವೆ.

ಕಾವಲುಮನೆ ಎಂಬ ಸಂಸ್ಥೆ ಈ ನಾಟಕವನ್ನು ಪ್ರಾಯೋಜನೆ ಮಾಡಿದೆ. ವಿಚಾರಗಳು ಗಹನವಾದವು; ಕತೆಗಳು ಮನಕರಗಿಸುತ್ತವೆ ಆ ಮೂಲಕ ಎಚ್ಚರಿಸುತ್ತವೆ. ಕತೆ ಮತ್ತು ನಾಟಕದ ಮೀಮಾಂಸೆಯೂ ಈ ನಾಟಕದಲ್ಲಿ ಚೆನ್ನಾಗಿ ಚರ್ಚಿತವಾಗಿದೆ. ಮಧ್ಯವಯಸ್ಸಿನ, ಬೇರೆ ಬೇರೆ ಕ್ಷೇತ್ರದ ನಟ ನಟಿಯರಿಗೆ ಈ ನಾಟಕ ಕಲಿಸಿರುವುದು ಬಸವಲಿಂಗಯ್ಯನವರ ಹೊಸ ಸವಾಲೇ ಆಗಿದೆ. ನುರಿತ ನಟ ನಟಿಯರಲ್ಲದಿದ್ದರೂ ಹೊಸಬರೇ ಹೊಸ ನಾಟಕವನ್ನು ಮಂಡಿಸುತ್ತಿರುವುದು ವಿಶೇಷ. ನಾಟಕಕ್ಕಿರುವ ಶಕ್ತಿಯನ್ನು ಅದು ಅರ್ಥಪೂರ್ಣವಾಗಿ ನಮಗೆ ತೋರುತ್ತದೆ.

ವಿಚಾರಶೀಲತೆಯೇ ನಾಟಕವಾಗಿರುವ ಒಂದು ಅಚ್ಚರಿಯನ್ನು ಪ್ರೇಕ್ಷಕನ ದೃಷ್ಟಿಯಿಂದ ಗಮನಿಸಿದಾಗ ಪ್ರೇಕ್ಷಕ ಇದುವರೆಗೂ ಚರ್ವಿತ ಚರ್ವಣ ನಾಟಕ ನೋಡಿದಂತೆ ಇದನ್ನು ನೋಡಲಾಗದು. ಶೋಷಕ-ಶೋಷಿತರ ನಡುವೆ ನಾವೆಲ್ಲಿದ್ದೇವೆ? ಎಂಬ ಪ್ರಮುಖ ಪ್ರಶ್ನೆಯನ್ನು ನಾವೆಲ್ಲ ಎದುರಿಸಲೇಬೇಕಾಗುತ್ತದೆ. ಬಹುಶಃ ರಂಗಭೂಮಿ ಮಾಡಬೇಕಾದುದೇ ಈ ಕೆಲಸವನ್ನು. ಕೆಲವು ವಿಷಯಗಳನ್ನು ಅರ್ಥೈಸದಿದ್ದರೂ ಅರ್ಥವಾಗಿರುತ್ತದೆ. ಮುಂದಿನ ಪ್ರಯೋಗಗಳಲ್ಲಿ ಬಂಧ ಇನ್ನಷ್ಟು ಬಿಗಿಯಾಗಬಲ್ಲದು. ಇದೊಂದು ಮುಖ್ಯವಾದ ರಂಗ ಪ್ರಯೋಗ. ಸಮಕಾಲೀನ ಕನ್ನಡ ರಂಗಭೂಮಿಯ ಸತ್ವಯುತವಾದ ಪ್ರಯೋಗವಾಗಿದೆ.



ನಾಟಕದ ದೃಶ್ಯ
ಚಿತ್ರಗಳು: ಸಾಯಿ ಲೋಕೇಶ್

ಸೇವಂತಿಗೆ ಹೊಲದಾಗ ನಕ್ಷತ್ರಗಳ ತೋರಣ!



ಚಿಕ್ಕಬಳ್ಳಾಪುರ ತಾಲ್ಲೂಕಿನ ಗುಂಡ್ಲಗುರ್ಕಿಯ ಹೊಲದಲ್ಲಿ ಚೆಲ್ಲಿದ ಬೆಳಕು ಚಿತ್ರ: ಬಿ.ಆರ್.ಮಂಜುನಾಥ್

2ನೇ ಪುಟದಿಂದ...

'ಮಂಜು ಮತ್ತು ಚಳಿಯಿಂದ ಗಿಡಗಳು ಮರಗಟ್ಟುತ್ತವೆ. ಕುಡಿಗಳು ಸರಿಯಾಗಿ ಬೆಳೆಯುವುದಿಲ್ಲ. ನಾವು ಹೇಗೆ ಚಳಿಯಲ್ಲಿ ಮುದುಡುತ್ತೇವೆಯೋ, ಅದೇ ರೀತಿಯಲ್ಲಿ ಅವು ಮುದುಡುತ್ತವೆ. ಗಿಡಗಳು ದೃಢವಾದ ನಂತರ ಬೆಳಕು ತೆಗೆಯುತ್ತೇವೆ' ಎಂದು ಗಿಡ ಬೆಳೆದು ಹೂ ಅರಳುವ ಬಗೆಯನ್ನು ವಿವರಿಸಿದರು.

ಸೇವಂತಿಗೆ ಗಡ್ಡೆಯನ್ನು ನಾಟಿ ಮಾಡಿದ ಸುಮಾರು ಎಂಟು ದಿನಕ್ಕೆ ಅದರ ಬೇರು ಭೂಮಿಯನ್ನು ಅಪ್ಪಿಕೊಳ್ಳುತ್ತದೆ. ಅದು ಗಡ್ಡೆ ಗಿಡವಾಗುವ ಹೊತ್ತು. ಈ ಸಮಯದಲ್ಲಿ ಗಿಡದ ಆರೈಕೆ ಅತ್ಯಮೂಲ್ಯ. ಗಿಡಕ್ಕೆ ಎಂಟು ದಿನವಾದಾಗ ಪ್ರಕಾಶಮಾನ ಬೆಳಕು ನೀಡಬೇಕು. ಈ ಕಾರಣದಿಂದ ರೈತರು ಸೇವಂತಿಗೆ ನಾಟಿ ಮಾಡಿದ ಹೊಲಗಳಿಗೆ ವಿದ್ಯುತ್ ಬಲ್ಬ್‌ಗಳನ್ನು ಅಳವಡಿಸುತ್ತಾರೆ. ಹೀಗೆ ಸತತವಾಗಿ ಹದಿನೈದು ದಿನ ಬೆಳಕು ಕೊಡುತ್ತಾರೆ.

'ವಿದ್ಯುತ್ ಬೆಳಕು ಹಾಯಿಸಿದರೆ ಒಂದು ಎಕರೆ ಹೊಲದಲ್ಲಿ ಮೂರು ತಿಂಗಳಲ್ಲಿ ಎರಡರಿಂದ ಎರಡೂವರೆ ಟನ್ ಹೂವು ಪಡೆಯಬಹುದು. ಬೆಳಕು ನೀಡದಿದ್ದರೆ ಗಿಡಗಳು ದೃಢವಾಗುವುದಿಲ್ಲ. ಉತ್ತಮ ಇಳುವರಿ ಬರುವುದಿಲ್ಲ. ನಷ್ಟವಾಗುತ್ತದೆ. 8*8ರ ಅಳತೆಯಂತೆ ಒಂದು ಎಕರೆಗೆ ಸರಾಸರಿ 300 ಬಲ್ಬ್‌ಗಳನ್ನು ಅಳವಡಿಸಿದ್ದೇವೆ. ಎಂಟು ವರ್ಷದಿಂದ ಬಲ್ಬ್‌ಗಳನ್ನು ಅಳವಡಿಸಿ ಸಾಮಂತಿಗೆ ಬೆಳೆಯುತ್ತಿದ್ದೇವೆ' ಎಂದು ಹೇಳುವುದನ್ನು ಮರೆಯಲಿಲ್ಲ.

ಚಳಿಗಾಲದಲ್ಲಿ ಚಿತ್ತಾರ

ಚಳಿಗಾಲದ ದಿನಗಳಲ್ಲಿ ಚಿಕ್ಕಬಳ್ಳಾಪುರದ ಸೇವಂತಿಗೆ ಹೊಲಗಳಲ್ಲಿ ಈ ವಿದ್ಯುತ್ ದೀಪಗಳ ಸರಮಾಲೆಯ ಚಿತ್ತಾರವನ್ನು ಕಣ್ತುಂಬಿಕೊಂಡು ಆನಂದಿಸಬಹುದು. ವಿಶೇಷವಾಗಿ ಮಂಚನಬಲೆ ದಾಟಿ ದಿಬ್ಬೂರು ಮಾರ್ಗದಲ್ಲಿ ಸಾಗಿದರೆ ಗುಂಡ್ಲಗುರ್ಕಿ ಸುತ್ತ ನಡೆದಷ್ಟೂ ದೂರ ಬೆಳಕಿನ ದೃಶ್ಯಗಳು ಕಾಣಸುತ್ತವೆ. ಒಂದೆಡೆಯೇ ಹತ್ತಾರು ಎಕರೆ ಹೊಲಗಳಲ್ಲಿ ಈ ಚಿತ್ರಣ ಕಾಣುತ್ತದೆ.

ಪುರದಗಡ್ಡೆ, ಸೊಪ್ಪಹಳ್ಳಿ, ದೇವಸ್ಥಾನ ಹೊಸಹಳ್ಳಿ, ಕತ್ತರಿಗುಪ್ಪೆ, ಮರಳಕುಂಟೆ, ಅಂಗರೇಖನಹಳ್ಳಿ, ಚೀಮನಹಳ್ಳಿ, ಹಿರೇನಹಳ್ಳಿ, ಮಂಚನಬಲೆ, ಮರಸನಹಳ್ಳಿ.. ಹೀಗೆ ಹಲವು ಗ್ರಾಮಗಳ ಹೊಲಗಳಲ್ಲಿ ಈ ವಿದ್ಯುತ್ ಬೆಳಕಿನ ವೈಭವವಿದೆ.

ಬೇಸಿಗೆಯ ದಿನಗಳಲ್ಲಿ ಬಿಸಿಲು ಹೆಚ್ಚಿರುವ ಕಾರಣ ಬೆಳಕಿನ ವ್ಯವಸ್ಥೆ ಅಗತ್ಯ ಬೀಳುವುದಿಲ್ಲ. ಬೇಸಿಗೆಯಲ್ಲಿ ಎರಡು ಬೆಳೆ ತೆಗೆಯುವ ರೈತರು ಮಾತ್ರ ಬೆಳಕಿನ ವ್ಯವಸ್ಥೆ ಮಾಡುತ್ತಾರೆ. ಮಳೆಗಾಲದಲ್ಲಿ ಗಿಡಗಳ ಕುಡಿಗಳಿಗೆ ಮಳೆ ನೀರು ತಾಕುವುದರಿಂದ ಗಿಡಗಳು ಸಹಜವಾಗಿಯೇ ದೃಢವಾಗುತ್ತವೆ. ಮಳೆಗಾಲದಲ್ಲಿ ವಿದ್ಯುತ್ ಬೆಳಕನ್ನು ಹಾಯಿಸುವುದಿಲ್ಲ.



ವಿದ್ಯುತ್ ಬೆಳಕಿನ ವ್ಯವಸ್ಥೆ ಮಾಡುತ್ತಿರುವ ರೈತ

ಟನ್‌ಗಟ್ಟಲೇ ಸೇವಂತಿಗೆ...

ರಾಜ್ಯದಲ್ಲಿ ಅತಿ ಹೆಚ್ಚು ಸೇವಂತಿಗೆ ಹೂ ಬೆಳೆಯುತ್ತಿರುವ ತಾಲ್ಲೂಕುಗಳನ್ನು ಪಟ್ಟಿ ಮಾಡಿದರೆ, ಬಯಲು ಸೀಮೆಯ ಚಿಕ್ಕಬಳ್ಳಾಪುರ ಮೊದಲ ಐದರೊಳಗೆ ಖಚಿತವಾಗಿ ಹೆಸರು ಪಡೆದಿರುತ್ತದೆ. ಇಲ್ಲಿ ಸೆಂಟ್ ಯೆಲ್ಲೋ, ಸೆಂಟ್ ವೈಟ್, ಐಶ್ವರ್ಯಾ-2, ಮುಸುಕಿನ ವೈಟ್, ಸುವರ್ಣ, ಅತಿಥಿ ಗೋಲ್ಡ್–ಹೀಗೆ ನಾನಾ ನಮೂನೆಯ ತಳಿಗಳಿವೆ.

ಚಿಕ್ಕಬಳ್ಳಾಪುರದ ಸೇವಂತಿಗೆ ಘಮಲು ಹೊರ ರಾಜ್ಯಗಳಿಗೂ ಪಸರಿಸಿದೆ. ಕೇರಳ, ಆಂಧ್ರ ಪ್ರದೇಶ, ತೆಲಂಗಾಣಕ್ಕೂ ಹೂ ರವಾನೆ ಆಗುತ್ತದೆ. ಚಿಕ್ಕಬಳ್ಳಾಪುರದ ಹೂ ಮಾರುಕಟ್ಟೆಯಲ್ಲಿ ನಿತ್ಯ ಹತ್ತು ಟನ್‌ಗೂ ಹೆಚ್ಚು ಸೇವಂತಿಗೆ ಹೂ ಆವಕ ಆಗುತ್ತದೆ. ಇಷ್ಟೇ ಪ್ರಮಾಣ ಹೂ ನಿತ್ಯ ಹೈದರಾಬಾದ್‌ನತ್ತಲೂ ರವಾನೆ ಆಗುತ್ತದೆ. ಮಾರುಕಟ್ಟೆಗೆ ಬರುವಷ್ಟೇ ಹೂ, ಹೊರಗೂ ವಹಿವಾಟು ಆಗುತ್ತದೆ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 3,900 ಹೆಕ್ಟೇರ್ ಪ್ರದೇಶದಲ್ಲಿ ಸೇವಂತಿಗೆ ಬೆಳೆಯಲಾಗುತ್ತಿದೆ.

ಸೇವಂತಿಗೆ ಹೂವಿನ ದರ ಹಾವು ಏಣಿ ಆಟದಂತೆ. ನಿತ್ಯವೂ ಬದಲಾವಣೆ ಆಗುತ್ತದೆ. ಮಾರುಕಟ್ಟೆಯ ಏರಿಳಿತಗಳು, ಹವಾಮಾನ ವೈಪರೀತ್ಯ, ಶ್ರಾವಣ, ಕಾರ್ತಿಕ ಮಾಸಗಳು ಸೇವಂತಿಗೆ ಇಳುವರಿ ಮತ್ತು ದರದ ನಿರ್ಧಾರದಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಸದ್ಯ ಒಂದು ಕೆ.ಜಿ ಸೆಂಟ್ ಯೆಲ್ಲೊ ಸೇವಂತಿಗೆ ದರ ₹ 100 ರಿಂದ ₹ 150 ಇದೆ. ಕೆಲವು ಸಮಯದಲ್ಲಿ ಕೆ.ಜಿ ಹೂವು ₹ 10ಕ್ಕೂ ಖರೀದಿಸುವವರು ಇರುವುದಿಲ್ಲ. ರಾತ್ರಿ ನಿದ್ದೆಗೆಟ್ಟು ಬೆಳೆದ ಬೆಳೆ ರಸ್ತೆಗೆ ಬೀಳುತ್ತದೆ.

ಸೇವಂತಿಗೆ ಗಿಡಗಳಿಗಷ್ಟೇ ಅಲ್ಲ, ಅದರ ಗಡ್ಡೆಗೆ ಬೆಳಕಿನ ಆರೈಕೆ ಅಗತ್ಯ. ಗಡ್ಡೆಯನ್ನು ನಾಟಿ ಮಾಡುವ ಮುನ್ನ ನರ್ಸರಿಗಳಲ್ಲಿಯೂ ಬಲ್ಬ್‌ಗಳನ್ನು ಅಳವಡಿಸಿ ಆರೈಕೆ ಮಾಡಲಾಗುತ್ತದೆ. ಸೇವಂತಿಗೆ ಮೂರು ತಿಂಗಳ ಬೆಳೆ. ಒಂದು ಎಕರೆಗೆ ಸರಾಸರಿ ₹ 3 ಸಾವಿರದಿಂದ ₹ 4 ಸಾವಿರವರೆಗೆ ವಿದ್ಯುತ್ ಶುಲ್ಕ ಬರುತ್ತದೆ. ಚಳಿಗಾಲದ ರಾತ್ರಿಗಳಲ್ಲಿ ಬೆಸ್ಕಾಂ ವಿದ್ಯುತ್ ಸ್ಥಗಿತಗೊಳಿಸಿದರೆ, ಬೆಳೆಗಾರರು ಬೀದಿಗಿಳಿಯುತ್ತಾರೆ.

'ವಿದ್ಯುತ್ ಬೆಳಕಿನ ವ್ಯವಸ್ಥೆ ಅಳವಡಿಸಲು ರೈತರು ಬೆಸ್ಕಾಂನಿಂದ ತಾತ್ಕಾಲಿಕವಾಗಿ ಅನುಮತಿ ಪಡೆಯಬೇಕು. ಇದಕ್ಕೆ ಠೇವಣಿ ಸಹ ಪಾವತಿಸಬೇಕು' ಎನ್ನುತ್ತಾರೆ ಚಿಕ್ಕಬಳ್ಳಾಪುರ ಬೆಸ್ಕಾಂ ಕಾರ್ಯನಿರ್ವಾಹಕ ಎಂಜಿನಿಯರ್ ರಮೇಶ್.

'ಗುಡಿಬಂಡೆ, ಚಿಕ್ಕಬಳ್ಳಾಪುರ ಮತ್ತು ಮಂಚೇನಹಳ್ಳಿ ತಾಲ್ಲೂಕಿನ ಗರಿಷ್ಠ ಇನ್ನೂರು ರೈತರು ಜಿಲ್ಲೆಯಲ್ಲಿ ಚಳಗಾಲದಲ್ಲಿ ಅನುಮತಿ ಪಡೆಯುವರು. ಮನೆಗಳು, ಅಂಗಡಿಗಳಿಗೆ ಒಂದು ಯೂನಿಟ್ ವಿದ್ಯುತ್‌ಗೆ ₹ 7 ಶುಲ್ಕ ವಿಧಿಸಲಾಗುತ್ತದೆ. ತಾತ್ಕಾಲಿಕ ಅನುಮತಿ ಪಡೆಯುವವರಿಗೆ ಒಂದು ಯೂನಿಟ್‌ಗೆ ₹ 12 ಶುಲ್ಕ ವಿಧಿಸುತ್ತೇವೆ. ಹೂ ಬೆಳೆಗಾರರಿಗೆ ತಾತ್ಕಾಲಿಕ ಅನುಮತಿ ನೀಡಲು ಮಾತ್ರ ಸಾಧ್ಯ' ಎಂದು ಹೇಳಿದರು.

ಸ್ಥಳೀಯ ಹೂ ಬೆಳೆಗಾರರಿಗೆ ಇದು ಗಿಡಗಳನ್ನು ದಷ್ಟಪುಷ್ಟವಾಗಿ ಬೆಳೆಸುವ ಅನಿವಾರ್ಯ ಮತ್ತು ಅಗತ್ಯ ಮಾರ್ಗ. ಹೊರಗಿನವರಿಗೆ 'ಅಬ್ಬಾ! ಎಂಥ ಚೆಂದ' ಎಂದು ಖುಷಿಪಡುವ ಸಮಯ. ಚೇತನ್ ಮಾತಿಗೆ ಕಿವಿಯಾಗಿದ್ದ ನಾನು ಮತ್ತು ಸ್ನೇಹಿತ ಇಬ್ಬರೂ ಮುಂದೆ ಮುಂದೆ ಸಾಗುತ್ತಿದ್ದವು. ಬೆಳಕಿನ ಸರಮಾಲೆಯನ್ನು ಮತ್ತೆ ಮತ್ತೆ ಕಣ್ತುಂಬಿಕೊಳ್ಳುತ್ತಾ.

ಮೊದಲ ಓದು

ಸಾಮಾನ್ಯರ 'ಅಸಾಮಾನ್ಯ' ಚಿತ್ರಗಳು

ಚಳವಳಿ, ಸಾಹಿತ್ಯ, ರಂಗಭೂಮಿ, ಸಿನಿಮಾ ರಂಗದಲ್ಲಿ ದಶಕಗಳಿಂದ ತೊಡಗಿಕೊಂಡಿರುವ ಕೋಟಿಗಾನಹಳ್ಳಿ ರಾಮಯ್ಯ ಅವರ ದೀರ್ಘಕಾಲದ ಬರಹಗಳನ್ನು ಕೆ.ಪಿ. ಲಕ್ಷ್ಮಣ್ ಸಂಪಾದಿಸಿದ್ದಾರೆ. ರಾಮಯ್ಯ ಅವರು ದಲಿತ ಸಂಘರ್ಷ ಸಮಿತಿಯ ಆರಂಭ ಕಾಲದಿಂದಲೂ ಅದರ ಭಾಗವಾಗಿದ್ದವರು. ಜಾತಿ ದೌರ್ಜನ್ಯ, ಅತ್ಯಾಚಾರದ ಅಮಾನವೀಯ ಘಟನೆಗಳು ನಡೆದ ಸಂದರ್ಭದಲ್ಲೆಲ್ಲ ಬೀದಿಗಿಳಿದು ಪ್ರತಿಭಟಿಸಿದವರು. ಹೋರಾಟದ ಭಾಗವಾಗಿ ಹಾಡುಗಳನ್ನು ಬರೆದು ಸಾಂಸ್ಕೃತಿಕ ಪ್ರತಿರೋಧ ದಾಖಲಿಸಿದವರು.

'ಸೂಫಿ ನಾಡು' ಕೋಲಾರದಲ್ಲಿ ರಾಮಯ್ಯ 'ಆದಿಮ'ದ ಮೂಲಕ ಹಲವು ಪ್ರಯೋಗಗಳನ್ನು ಮಾಡಿದರು. 'ಆದಿಮ' ಸಾಂಸ್ಕೃತಿಕ ಕೇಂದ್ರದ ಅನುಭವಗಳು, ಉಸ್ಮಾನ್ ತಾತನ ದರ್ಗಾ, ಬೆಟ್ಟ ಮತ್ತು ಅದಕ್ಕೆ ಅಂಟಿಕೊಂಡ ಊರು, ಕೇರಿ, ಶಾಲೆಗಳ ಜನರೊಂದಿಗೆ ಲೇಖಕರ ಒಡನಾಟದ ಚಿತ್ರಗಳು ಇದರಲ್ಲಿವೆ. ವಿಚಿತ್ರ ಹಾಗೂ ವಿಶಿಷ್ಟ ವ್ಯಕ್ತಿತ್ವದ ಸಾಮಾನ್ಯರ 'ಅಸಾಮಾನ್ಯ' ಚಿತ್ರಣ ಇರುವ ಸಂಕಲನಕ್ಕೆ 'ದರ್ಗಾ ಮಾಳದ ಚಿತ್ರಗಳು' ಎಂಬ ಹೆಸರಿಟ್ಟಿರುವುದು ಔಚಿತ್ಯಪೂರ್ಣವಾಗಿದೆ. ಸಾಹಿತ್ಯ, ರಂಗಭೂಮಿ, ಸಮಾಜಕ್ಕೆ ಸಂಬಂಧಿಸಿದ ವೈವಿಧ್ಯಮಯವಾದ 41 ಲೇಖನಗಳನ್ನು ಈ ಕೃತಿ ಒಳಗೊಂಡಿದೆ. ಲೇಖನಗಳು ಬಿಡಿ ಚಿತ್ರಗಳ ಮೂಲಕ ಸಮುದಾಯದ ಸಂಸ್ಕೃತಿಯನ್ನು ಕಟ್ಟಿಕೊಡುತ್ತವೆ.


ಆತ್ಮಾವಲೋಕನದಂತೆ ಕಾಣಿಸುವ ಇಲ್ಲಿನ ಲೇಖನಗಳಲ್ಲಿ ಸಾಂಸ್ಕೃತಿಕ ವಿಮರ್ಶೆಯೂ ಇದೆ. ಅನೇಕ ಚಾರಿತ್ರಿಕ ಮಹತ್ವದ ಘಟನೆಗಳಿಗೆ ಸೃಜನಶೀಲ ಚಿಂತನೆಯ ಆಯಾಮವನ್ನೂ ನೀಡಲಾಗಿದೆ. ಸಾಮಾನ್ಯರಲ್ಲಿ ಇರಬಹುದಾದ ಅಸಾಮಾನ್ಯ ವ್ಯಕ್ತಿತ್ವ, ಹುಡುಕಾಟವನ್ನು ಲಘುವಾದ ಧಾಟಿಯಲ್ಲಿ ಓದುಗರಿಗೆ ದಾಟಿಸಿದ್ದಾರೆ. ರಾಮಯ್ಯ ಅವರ ಕಥನಗಳು ಭಿನ್ನವೂ ಅಪೂರ್ವವೂ ಆಗಿವೆ.



ಪು: 188
₹275


ದರ್ಗಾ ಮಾಳದ ಚಿತ್ರಗಳು
ಸಂ: ಕೆ.ಪಿ. ಲಕ್ಷ್ಮಣ್
ಪ್ರ: ಆಕೃತಿ ಪುಸ್ತಕ, ಬೆಂಗಳೂರು
ಸಂ: 080- 23409479

ಮಕ್ಕಳ ಓದಿಗಾಗಿ ಚಿತ್ರ ಪುಸ್ತಕಗಳು



ಪು: 50
₹215

ನದಿ ನದಿ ಎಲ್ಲಿ ಹೋತು
ಲೇ: ಲಲಿತಾ ಕೆ. ಹೊಸಪ್ಯಾಟಿ
ಪ್ರ: ಅವ್ಯಕ್ತ ಪ್ರಕಾಶನ
ಸಂ: 8792693438



ಪು: 20
₹80

ಗೊಗ್ಗಯ್ಯ ಎಲ್ಲಿ
ಲೇ: ಕೊಳ್ಳೇಗಾಲ ಶರ್ಮ
ಪ್ರ: ಪ್ರಥಮ್ ಬುಕ್ಸ್
prathambooks.org

ಅತ್ಯಾಕರ್ಷಕ ಚಿತ್ರಗಳಿರುವ ಹೊಳೆಯುವ ನುಣುಪುಳ್ಳ ಗ್ಲೇಸ್ಡ್ ಶೀಟಿನ ಪುಸ್ತಕವಿದು. ಸುತ್ತಲ ಕಥನಗಳನ್ನೇ ಕವಿತೆಯ ರೂಪದಲ್ಲಿ, ಮಕ್ಕಳು ಓದಿಕೊಂಡು, ಓಡಾಡಿಕೊಂಡು, ಹಾಡಿಕೊಂಡು ಹೇಳುವಂಥ ಕವಿತೆಗಳು ಇಲ್ಲಿವೆ. ಪ್ರಾಥಮಿಕ ಮಕ್ಕಳು ಸರಾಗವಾಗಿ ಓದಿ, ಅರ್ಥ ಮಾಡಿಕೊಳ್ಳಬಲ್ಲ ಕವಿತೆಗಳು ಇವು. ಪೂರ್ವ ಪ್ರಾಥಮಿಕ ಮಕ್ಕಳಿಗೆ ಚಿತ್ರ ತೋರಿಸಿ, ಬಾಯಿಪಾಠವಾಗಿಸುವಂಥ ಹಾಡುಗಳಿವು. ಮಕ್ಕಳಲ್ಲಿ ಓದುವ ಅಭಿರುಚಿ ಬೆಳೆಸಲು, ಕನ್ನಡದ ಬಗ್ಗೆ ಅಕ್ಕರಾಸ್ಥೆ ಮೂಡಿಸಲು ಪ್ರಕಾಶಕರು ಚಂದದ ಮತ್ತು ಗುಣಮಟ್ಟದ ಮುದ್ರಣದಲ್ಲಿ ಪುಸ್ತಕವನ್ನು ತಂದಿದ್ದಾರೆ. ಅಂತ್ಯಪ್ರಾಸದ ಕವಿತೆಗಳು ಹೆಚ್ಚಾಗಿದ್ದು, ಮಕ್ಕಳನ್ನು ಈಗಲೂ ಸೆಳೆಯುವ ಪ್ರಾಣಿಗಳು, ಪ್ರಕೃತಿಯ ಚಿತ್ರಗಳು ಹೇರಳವಾಗಿವೆ. ನದಿ ನದಿ ಎಲ್ಲಿ ಹೋತು, ಖಲೀಲ್ ಗ್ರಿಬ್ರಾನ್ ಅವರ ರಿವರ್ ಕವಿತೆಯನ್ನು ನೆನಪಿಸುವಂತಿದೆ. ಕನ್ನಡದ ಆಡುಭಾಷೆಯಲ್ಲಿ ಇನ್ನೂ ಆಪ್ತವೆನಿಸುತ್ತದೆ.

ಕೆಲವೇ ಸಾಲುಗಳಲ್ಲಿ ಮುಗಿಯುವ ಈ ಕತೆಗಳಿಗೆ ಅತ್ಯಾಕರ್ಷಕ ಚಿತ್ರಗಳಿವೆ. ಚಿತ್ರಗಳನ್ನು ನೋಡುತ್ತ ಮಕ್ಕಳು ತಮ್ಮದೇ ಆದ ಕತೆಯನ್ನೂ ಕಟ್ಟಬಹುದು. ಮಕ್ಕಳ ಕಲ್ಪನಾಶಕ್ತಿಗೆ ರೆಕ್ಕೆಗಳನ್ನು ನೀಡುತ್ತ, ಪದಕೋಶವನ್ನೂ ವಿಸ್ತರಿಸುವಂಥ ಪುಸ್ತಕಗಳಿವು. ಮಕ್ಕಳನ್ನು ಪುಸ್ತಕ ಲೋಕಕ್ಕೆ ಸೆಳೆಯುವ ಪ್ರಥಮ್ ಬುಕ್ಸ್‌ನ ಈ ಪ್ರಯತ್ನದಲ್ಲಿ ಕನ್ನಡ ಮೂಲದ್ದೇ ಎರಡು ಕತೆಗಳು ಬಂದಿರುವುದು ಕನ್ನಡಿಗರು ಹೆಮ್ಮೆ ಪಡುವ ವಿಷಯ. ಓದಲು ಕಲಿಯಲು ಪ್ರೇರೇಪಿಸಲು ಎರಡನೆಯ ಹಂತದ ಈ ಪುಸ್ತಕಗಳು ಮಕ್ಕಳಿಗೆ ರಜೆಯಲ್ಲಿ ಫೋನು ಬಿಟ್ಟು ಹೊಸದೊಂದು ಕತೆ ಹೆಣೆಯಲೂ ಅನುವು ಮಾಡಿಕೊಡುವಂಥವು. ಮಾತು ಬರುವ, ಓದಲು ಬಾರದ ಮಕ್ಕಳೂ ಕತೆ ಹೇಳಬಹುದು. ಕತೆ ಕೇಳಬಹುದು. ಈ ಕತೆ ಹೇಳುವ–ಕೇಳುವ ಆಟದೊಳು ಮಕ್ಕಳು ಮತ್ತು ಪಾಲಕರ ಬಾಂಧವ್ಯಕ್ಕೆ ಹೊಸ ಹೊಳಹು ಬರಬಹುದು. ಉಣ್ಣಿಸುವಾಗ, ಮಲಗಿಸುವಾಗ ಮೊಬೈಲು ಫೋನು ಬಿಟ್ಟು, ಚಿತ್ರಗಳ ಸಂತೆಯಲ್ಲಿ ಮಕ್ಕಳ ಪದಸಂಪತ್ತನ್ನು ಹೆಚ್ಚಿಸಲು ಈ ಪುಸ್ತಕಗಳು ಓದುಗರ ಮನೆಗೆ ಪ್ರವೇಶ ಪಡೆಯಬಹುದು.

ಗೊಗ್ಗಯ್ಯನ ಹೆಸರು ಹೇಳಿ, ಉಣಿಸುವುದು, ಮಲಗಿಸುವುದು ಸಾಮಾನ್ಯವಾಗಿದೆ. ಆದರೆ ಮಕ್ಕಳು ಗೊಗ್ಗಯ್ಯನ ಬಗ್ಗೆ ಏನು ಯೋಚಿಸುತ್ತಾರೆ ಎಂಬುದು ಗೊಗ್ಗಯ್ಯ ಕತೆ ಪುಸ್ತಕವಾಗಿದೆ. ಅಂಜೂರ, ಅಂಜೂರ ಯಾರ ಅಂಜೂರದಲ್ಲಿ ಪುನುಗು ಬೆಕ್ಕು ಮತ್ತು ಮುಳ್ಳುಹಂದಿಗಳೂ ಅಂಜೂರವನ್ನು ತಿನ್ನುವ ಮಾಹಿತಿಯೊಂದಿಗೆ ಆಸಕ್ತಿಕರ ಕತೆ ನಿರೂಪಿಸಲಾಗಿದೆ.

ಕನ್ನಡವನ್ನು ಸರಾಗವಾಗಿ ಓದಲು ಸರಳವಾಗಿ ಕಲಿಸಬೇಕು ಎನ್ನುವ ಪೋಷಕರಿಗೆ ಈ ಪುಸ್ತಕಗಳು ವರದಾನವಾಗಿವೆ. ವಯೋಮಿತಿಯನ್ನು ಬದಿಗಿರಿಸಿಯೂ ಕನ್ನಡ ಕಲಿಕೆಗಾಗಿ ಕೊಂಡುಕೊಳ್ಳಬೇಕಾದ ಪುಸ್ತಕಗಳಿವು.



ಪು: 20
₹80

ಅಂಜೂರ ಅಂಜೂರ ಯಾರ ಅಂಜೂರ
ಲೇ: ದೀಪಾ ಭಾಸ್ತಿ
ಪ್ರ: ಪ್ರಥಮ್ ಬುಕ್ಸ್
prathambooks.org

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಸಿಂಗಾರಸೊಗ

ಸಿಂಗಾರಸೊಗ (ನಾ). ಪ್ರಣಯದ ಸುಖ

ಕುವೆಂಪು ಅವರು ಪರಸ್ಪರ ಒಲಿದು ಕೂಡಿದ ನಲ್ಲ ನಲ್ಲೆಯರ ಪ್ರಣಯದ ಸುಖವನ್ನು 'ಸಿಂಗಾರಸೊಗ' ಪದದಿಂದ ಹೀಗೆ ಶೃಂಗರಿಸಿದ್ದಾರೆ:

'ಪೆಣ್ಣೊಲಿದ ನಲ್ಲನಿರೆ, ಗಂಡೊಲಿದ ನಲ್ಲೆಯಿರೆ,
ಸಿರಿಬಾಳ್ತೆ ಸಿಂಗಾರ ಸೊಗಕೆ ಹೊಯಿಕೈಯಿಹುದೆ ಪೇಳ್
ಬದುಕಿನಲಿ?'

ವ್ಯಥೆತಿಮಿರ

ವ್ಯಥೆತಿಮಿರ (ನಾ). ಯಾತನೆಯ ಅಂಧಕಾರ

ಶತ್ರುಘ್ನನೊಡನೆ ಅಯೋಧ್ಯೆಗೆ ಬಂದ ಭರತನು ತಾಯಿ ಕೈಕೆಯನ್ನು ನೋಡುತ್ತಾನೆ. ಅವಳಿದ್ದ ಸ್ಥಿತಿಯನ್ನು ಕುವೆಂಪು ಅವರು ವ್ಯಥೆತಿಮಿರ ಪರಿವೃತೆಯೆಂದು ಚಿತ್ರಿಸಿದ್ದಾರೆ. ಅದು ಅವಳ ನೋವು ಬಾಧೆಗಳೊಡನೆ ದುಃಖದಿಂದೊಡಗೂಡಿದ ಕತ್ತಲೆಯಿಂದ ಸುತ್ತುವರಿದಂತಿದ್ದುದನ್ನು ಸಮರ್ಥವಾಗಿ ಧ್ವನಿಸಿದೆ.

'ವ್ಯಥೆತಿಮಿರ ಪರಿವೃತೆಯನಳ್ಕಜದಿನೀಕ್ಷಿಸುತೆ
ಬೆದರದೆಯೆ ಕಂದನಮ್ಮನ ಕಾಲ ಮೇಲುರುಳಿದನ್'.

ಚೈತನ್ಯಧುನಿ

ಚೈತನ್ಯಧುನಿ (ನಾ). ಜೀವಂತಿಕೆಯ ಹೊಳೆ

ಚೈತ್ರೋದಯದ ಕಾಡಿನ ಹೃದಯದಲ್ಲಿ ಮಾಧುರ್ಯದ ಹೊಳೆ ಹರಿಯುತ್ತ ಇಡೀ ಲೋಕದ ಸಸ್ಯ ಹಾಗೂ ಜೀವಸಂಕುಲಕ್ಕೆ ಜೀವ ನೀಡಿ ಪೋಷಿಸುತ್ತದೆ. ಕುವೆಂಪು ಅವರು ಆ ನದಿಯನ್ನು 'ಚೈತನ್ಯಧುನಿ' ಎಂದು ಕರೆದಿದ್ದಾರೆ. 'ನೀರು' ಪದದ ಇನ್ನೊಂದು ಅರ್ಥ 'ಜೀವನ'. ಅದನ್ನು ಅವರು ಹೀಗೆ ಚಿತ್ರಿಸಿದ್ದಾರೆ.

'ಚೈತ್ರೋದಯದ ವಿಪಿನ ಹೃದಯದೊಳ್ ಚೈತನ್ಯ
ಧುನಿಯಾಗಿ ಬೇರು ಬೇರುಗಳಲ್ಲಿ ಕೊಂಬೆಯಲಿ,
ಪರ್ಣ ಪರ್ಣಾಂತರಂಗದಿ, ಮುದ್ದು ಮೊಗ್ಗಿನಲಿ
ಸೌಂದರ್ಯಮೆ ಶರೀರಮಂ ತಾಳ್ದು'


ದನಿಹನಿ

ರಾಮಸೀತೆಯರು ಪಂಚವಟಿಯಲ್ಲಿ ಅಯೋಧ್ಯೆಯನ್ನು ನೆನಪಿಸಿಕೊಳ್ಳುತ್ತ ಸಂಭಾಷಿಸುವರು. ಅವರು ಕೇಳುವ ಕ್ರೌಂಚಪಕ್ಷಿಯ ಇಂಪಾದ ಇಂಚರವನ್ನು ಕುರಿತು ರಾಮ ಹೇಳುವಾಗ, ಅದನ್ನು ಕುವೆಂಪು ಅವರು 'ನ' ಕಾರದ ಒಳಪ್ರಾಸದ 'ದನಿಹನಿ' ಪದದಿಂದ ಬಣ್ಣಿಸಿರುವರು.

'ಆಹಾ!
ನಮ್ಮರಮನೆಯ ತೋಂಟದೊಳ್ ಕುಳಿತು ನಲಿವಂದು
ಈ ತೆರನ ದನಿಹನಿಯ ಸೋನೆಗಿಂತುಟವಲಂ
ಕಿವಿ ತಣಿದೆವಲ್ತೆ?'

ಬಾಲಿ ಸಿವೆಟ್ ಬೆಕ್ಕಿನ ಹಿಕ್ಕೆಯ ಕಾಫಿ ಕತೆ

ನಮ್ಮದೇ ರಾಜ್ಯದ ಕಾಫಿನಾಡಿನವರಾದ ಲೇಖಕಿ, ಬಾಲಿ ಪ್ರವಾಸದ ವೇಳೆ ವಿಶ್ವದ ಅತ್ಯಂತ ದುಬಾರಿ ಮತ್ತು ವಿಶಿಷ್ಟವಾದ ಕಾಫಿಯ ರುಚಿಯನ್ನು ನೋಡಿದ್ದಾರೆ. ಆ ಕಾಫಿ ಬೆಲೆ ಏಕೆ ಅಷ್ಟು ದುಬಾರಿ, ಅದರ ವೈಶಿಷ್ಟ್ಯವೇನು ಎನ್ನುವುದನ್ನು ತಮ್ಮದೇ ಅನುಭವದ ಮೂಲಕ ಸ್ವಾರಸ್ಯಕರವಾಗಿ ಕಟ್ಟಿಕೊಟ್ಟಿದ್ದಾರೆ.





ಲುವಾಕ್ ಕಾಫಿ ಪುಡಿಯ ಪೊಟ್ಟಣ

ಶಾಂತಾ ಜಯಾನಂದ್

ಇತ್ತೀಚೆಗೆ ಇಂಡೊನೇಷ್ಯಾದ ಬಾಲಿ ದ್ವೀಪಕ್ಕೆ ಪ್ರವಾಸ ಹೋಗಿದ್ದೆ. ನಾನು ಕಾಫಿನಾಡಿನವಳಾದ್ದರಿಂದ ಅಲ್ಲಿಯ ಒಂದು ವಿಶಿಷ್ಟ ವಿಶ್ವ ಪ್ರಸಿದ್ಧ ಕಾಫಿಯ ಬಗ್ಗೆ ಹೇಳುತ್ತಿದ್ದೇನೆ.

ನಮ್ಮ ಗೈಡ್ ಬಾಲಿ ದ್ವೀಪದ ಬಗೆಗೆ ಬಹಳಷ್ಟು ವಿಷಯಗಳನ್ನು ವಿವರಿಸುತ್ತಲೇ ಈ ದಿನ ಕಾಫಿ ಪ್ಲಾಂಟೇಶನ್‌ಗೆ ಹೋಗೋಣ ಎಂದಳು. ಸರಿ ಎಂದು ಹೊರಟೆವು. ಇಲ್ಲಿಯ ವಿಶ್ವ ಪ್ರಸಿದ್ಧ ಕಾಫಿಯ ಬಗ್ಗೆ ಓದಿದ್ದು ನೆನಪಿತ್ತು. 'Sariuma Luwak coffee (ಸಾರಿ ಉಮ ಲುವಾಕ್ ಕಾಫಿ) ಎಂಬಲ್ಲಿಗೆ ಹೋದೆವು. ಅದೇನು ದೊಡ್ಡ ಕಾಫಿ ಪ್ಲಾಂಟೇಶನ್ ಅಲ್ಲ. ನಮ್ಮ ಕರ್ನಾಟಕದ ಕಾಫಿನಾಡಿನ ನೂರಾರು ಎಕರೆ ಫ್ಲಾಂಟೇಶನ್ ಕಂಡ ನನಗೆ ಸ್ವಲ್ಪ ಕಾಫಿ ಗಿಡಗಳನ್ನು ಕಂಡು ಆಶ್ಚರ್ಯವಾಯಿತು. ಪ್ರವಾಸಿಗರಿಗೆಂದು ಈ ಲುವಾಕ್ ಕಾಫಿ ತೋರಿಸುವುದಕ್ಕಾಗಿಯೇ ಇರುವ ಸ್ಥಳವಿದ್ದರೂ ಇರಬಹುದು ಅನಿಸಿತು. ಸ್ವಲ್ಪ ಜಾಗದಲ್ಲಿ ದೊಡ್ಡದಾಗಿ ಬೆಳೆದ 'ಅರೇಬಿಕಾ' ಕಾಫಿ ತಳಿಯನ್ನಷ್ಟೇ ನೋಡಿ ಓಹೋ ಎಂದೆವು. ಒಳಗಡೆ ಮರದ ಅಟ್ಟಣಿಗೆಯಲ್ಲಿ ಸಣ್ಣ ಎರಡು ಪಂಜರಗಳಲ್ಲಿ ಸಿವೆಟ್ ಬೆಕ್ಕುಗಳನ್ನು ಇಡಲಾಗಿತ್ತು. ಅವುಗಳಲ್ಲಿ ಒಂದು ಕಡುಗಪ್ಪು ಕಣ್ಣುಗಳನ್ನು ಫಳಫಳಿಸುತ್ತಾ, ನಮ್ಮನ್ನೇ ನೋಡುತ್ತಿದೆಯೇನೋ ಅನಿಸಿತು. ಕಪ್ಪನೆಯ ತುಪ್ಪಳ ಮಿರ ಮಿರನೇ ಮಿಂಚುತ್ತಿತ್ತು. ಗಾತ್ರದಲ್ಲಿ ಬಹಳ ದೊಡ್ಡ ಬೆಕ್ಕಿನ ಗಾತ್ರವೂ ಇರಲಿಲ್ಲ. ಮತ್ತೊಂದು ಸಿವೆಟ್ ಮೈಮುದುಡಿಕೊಂಡು ಮಲಗಿಕೊಂಡಿತ್ತು. ಅಲ್ಲಿಯ ಕಾಫಿ ಪ್ಲಾಂಟೇಶನ್ ಗೈಡ್ ನಮ್ಮೊಂದಿಗೆ ಬಂದು 'ಕಾಫಿ'ಯ ಬಗ್ಗೆ ಬಹಳಷ್ಟು ವಿಷಯಗಳನ್ನು ವಿವರಿಸುತ್ತಿದ್ದಳು. ಸಿವೆಟ್ ಅನ್ನು ಹಣ್ಣಿನ ಕಾಲದಲ್ಲಿ ತೋಟದಲ್ಲಿ ಬಿಡುತ್ತಾರೆ. ಅದು ಚೆನ್ನಾಗಿ ಕೆಂಪಾಗಿ ಹಣ್ಣಾದ ಉತ್ತಮ ಹಣ್ಣುಗಳನ್ನು ಮಾತ್ರ ತಿನ್ನುತ್ತವೆ. ತಿಂದ ನಂತರ ತೋಟದ ಒಳಗಡೆ ಓಡಾಡಿ ಹಿಕ್ಕೆ ಹಾಕುತ್ತವೆ. ನಂತರ ತೋಟದವರು ಅದನ್ನು ಆಯ್ದು ತರುತ್ತಾರೆ. ಅದು ಉಂಡೆ ಉಂಡೆಯಾಗಿ ಕಾಫಿ ಹಣ್ಣುಗಳು, ಕಾಫಿ ಬೀಜಗಳಾಗಿ ಇರುತ್ತವೆ. ನಾವು ಕಾಫಿ ಹಣ್ಣನ್ನು ಪಲ್ಪ್ ಮಾಡಿದಾಗ ಹೇಗಿರುತ್ತದೋ ಹಾಗೆ! ತಿಂದ ಕಾಫಿಯ ಹಣ್ಣು ಸಿವೆಟ್‌ನ ಹೊಟ್ಟೆಯಲ್ಲಿ ಪ್ರೊಸೆಸ್ ಆಗಿ ಕಾಫಿಬೀಜ ಹೊರಬರುತ್ತದೆ. ಅದನ್ನು ಚೆನ್ನಾಗಿ ತೊಳೆದು ಒಣಗಿಸಿ ಹುರಿದು ಪುಡಿಯಾಗಿಸುವ ಸಂಭ್ರಮ ಹೀಗೆ ಎಲ್ಲವನ್ನೂ ವಿವರಿಸುತ್ತಾ ತೋರಿಸಿದರು.


ವಿವಿಧ ಫ್ಲೇವರ್‌ನ ಕಾಫಿಗಳು


ಬಾಲಿಯಲ್ಲಿ ಮಣ್ಣಿನ ಪಾತ್ರೆಯಲ್ಲಿ ಸಾಂಪ್ರದಾಯಿಕ ರೀತಿಯಲ್ಲಿ ಕಾಫಿ ಬೀಜಗಳನ್ನು ಹುರಿಯುತ್ತಿರುವುದು

ನಮ್ಮಲ್ಲಿಯೂ ಕಾಡು ಬೆಕ್ಕು ಬಂದು ಕಾಫಿ ಹಣ್ಣು ತಿಂದು ಹಿಕ್ಕೆ ಹಾಕಿ ಹೋಗಿದೆ ಅಂತ ಅದರ ಉಂಡೆಗಳನ್ನು ಸಂಗ್ರಹಿಸಿ ಇಟ್ಟಿದ್ದನ್ನು ನೋಡಿದ್ದೇನೆ. ಆದರೆ ಇಷ್ಟು ಚಂದವಾಗಿಸಿ ಕಾಫಿ ಪುಡಿ ತಯಾರಿಸುವುದನ್ನು ನಾನಂತು ಕಂಡಿಲ್ಲ. ಇಪ್ಪತ್ತೆರಡು ಬಗೆಯ ಫ್ಲೇವರ್‌ಗಳುಳ್ಳ ಕಾಫಿಯನ್ನು ರುಚಿ ನೋಡಲು ಕೊಡುತ್ತಾರೆ. ಕೋಕೊನಟ್ ಫ್ಲೇವರ್, ಅವಕಾಡೋ ಫ್ಲೇವರ್ ಹೀಗೆ.. ಬಹಳಷ್ಟು ರುಚಿಯ ಕಾಫಿಗಳನ್ನು ನೀಡುತ್ತಾರೆ. ವಿತ್ ಕ್ರೀಮ್, ವಿತ್ ಶುಗರ್, ಬ್ಲಾಕ್ ಕಾಫಿ.. ಹೀಗೆ ಬಹಳಷ್ಟು ಕಾಫಿಗಳ ರುಚಿ ನೋಡಿದೆ. ಯಾಕೋ ನಮ್ಮ ಮನೆಯಲ್ಲಿ ಡಿಕಾಕ್ಷನ್ ಹಾಕಿದಾಗ ಬರುವ ಘಮಲೂ, ನಮ್ಮ ಕಾಫಿಯ ರುಚಿಯೂ ನನಗೆ ದಕ್ಕಲಿಲ್ಲ. ಲೂವಾಕ್ ಕಾಫಿಯ ರುಚಿ ನೋಡಬೇಕೆಂದರೆ ಹಣ ಕೊಟ್ಟೇ ತೆಗೆದುಕೊಳ್ಳಬೇಕು. ನಮ್ಮಲ್ಲಿ ಕೆಲವರು 'ಅಯ್ಯೋ, ಆ ಹಿಕ್ಕೆ ಕಾಫಿ ನಮಗೆ ಬೇಡ' ಎಂದು ಮೂಗು ಮುರಿದರು. ನಾನಂತು ವಿಶ್ವದ ಅತ್ಯಂತ ಪ್ರಸಿದ್ಧ ಅತೀ ದುಬಾರಿ ಬೆಲೆಯ ಕಾಫಿಯ ರುಚಿ ನೋಡಲೇಬೇಕೆಂದು ಕೊಂಡುಕೊಂಡು ವಿತ್ ಶುಗರ್, ವಿತ್ ಕ್ರೀಮ್ ಅಂತ ಹಾಕಿಸಿಕೊಂಡು ತೆಗೆದುಕೊಂಡು ಬಂದೆ. ಸ್ವಲ್ಪ ಸ್ವಲ್ಪವನ್ನೇ ನಾಲಿಗೆಯ ಮೇಲೆ ತಂದುಕೊಂಡು ಮೆಲ್ಲನೇ ರುಚಿ ನೋಡುತ್ತಾ ಕುಡಿದಿದ್ದೆ ಬಂತು, ಆಹಾ ಎನ್ನುವಂತಹ ಪರಿಮಳವೇನಿರಲಿಲ್ಲ. ಆದರೂ ಒಂದು ರೀತಿಯ ವಿಶಿಷ್ಟ ರುಚಿಯನ್ನು ಆಸ್ವಾದಿಸಿದೆ. ಬಹಳ ಸಮಯದ ತನಕ ಅದರ ಕಡು ಸ್ವಾದ ಇಷ್ಟವಾಯಿತೆಂದೇ ಹೇಳಬಹುದು.

ಅಲ್ಲೇ ಒಂದು ಚಿಕ್ಕ ಕಾಫಿ ಪುಡಿಯ ಮಳಿಗೆಯೂ ಇತ್ತು. ಆಕರ್ಷಕ ಪ್ಯಾಕ್‌ಗಳಲ್ಲಿ ಕಾಫಿ ಪುಡಿಯನ್ನು ಹಲವು ಬೆಲೆಗಳಲ್ಲಿ ಮಾರಾಟಕ್ಕೆ ಇಡಲಾಗಿತ್ತು. ನಾನು ಐವತ್ತು ಗ್ರಾಂನ ಎರಡು ಪೊಟ್ಟಣಗಳನ್ನು (ಮೂರು ಸಾವಿರ ನಮ್ಮ ರೂಪಾಯಿಗಳಲ್ಲಿ) ಖರೀದಿಸಿದೆ. ಮನೆಗೆ ಬಂದ ಮೇಲೆ ಅದರ ಕಾಫಿಯನ್ನು ಇನ್ನೂ ತಯಾರಿಸಿಲ್ಲ. ಮಕ್ಕಳು ಮನೆಗೆ ಬಂದಾಗ ಸಿವೆಟ್ ಹಿಕ್ಕೆಯ ವಿಶ್ವದ ಅತ್ಯಂತ ದುಬಾರಿಯ ಕಾಫಿ ತಯಾರಿಸಿಕೊಡಬೇಕು. ಅದಕ್ಕಾಗಿ ಕಾಯುತ್ತಿದ್ದೇನೆ.

ಆಪರೇಷನ್ ಮಹಿಷ ಬಂಧನ

2ನೇ ಪುಟದಿಂದ...

ಹರಕೆ ಹೊತ್ತವರಲ್ಲಿ ಒಮ್ಮತಕ್ಕೆ ಬಂದು ಅಂತಿಮವಾಗಿ ಒಬ್ಬರು ದೇವರಿಗೆ ಕೋಣದ ಮರಿ ಬಿಡುತ್ತಾರೆ. ಕೋಣದ ಮರಿ ಬಿಡುವಾಗ ಇದು ತಮ್ಮೂರಿನ ಕೋಣವೆಂದು ಭವಿಷ್ಯದಲ್ಲಿ ಸುಲಭವಾಗಿ ಗುರುತು ಹಿಡಿಯಲು ಅದಕ್ಕೊಂದು ಗೊತ್ತು ಅಥವಾ ಗುರುತು ಮಾಡುತ್ತಾರೆ (ಈಗೀಗ ಮುರುವು ಹಾಕುತ್ತಾರೆ). ಅದು ಊರೂರು ಅಲೆಯುತ್ತಾ ಹೋಗುತ್ತದೆ. ಹೀಗೆ ಹೋಗಿದ್ದು ಕೆಲವೊಮ್ಮೆ ಎಷ್ಟು ವರ್ಷಗಳು ಕಳೆದರೂ ಪುನಃ ಸ್ವಂತ ಗ್ರಾಮಕ್ಕೆ ಮರಳುವುದೇ ಇಲ್ಲ. ದೇವಿಯ ಜಾತ್ರೆ ಬಂದಾಗಲೇ ಅಂತಹ ಕೋಣಕ್ಕೆ ಹುಡುಕಾಟ ನಡೆಯುತ್ತದೆ. ಆಗ ನೆರವಿಗೆ ಬರುವುದೇ ಈ ಗುಪ್ತ ಗುರುತು.

ಕೋಣಕ್ಕಾಗಿ ಕಾದಾಟ!

ಸ್ವಂತ ಹಳ್ಳಿ ಬಿಟ್ಟು ಹೋದ ಕೋಣ ಒಮ್ಮೊಮ್ಮೆ ಇದ್ದಕ್ಕಿದ್ದಂತೆ ಕಾಣೆಯಾಗಿ ಬಿಡುತ್ತದೆ. ದೇವರಿಗೆ ಕೋಣದ ಮರಿ ಬಿಟ್ಟ ಮರು ಕ್ಷಣದಿಂದಲೇ ಅದರ ಇರುವಿಕೆಯ ಬಗ್ಗೆ ಜನರೂ ಅಷ್ಟಾಗಿ ತಲೆ ಕೆಡಿಸಿಕೊಳ್ಳುವುದಿಲ್ಲ. ದೇವಿ ಜಾತ್ರೆ ಸಮೀಪಿಸುತ್ತಿದ್ದಂತೆ ಆ ಗ್ರಾಮದವರು ಜಾಗೃತರಾಗುತ್ತಾರೆ. ತಮ್ಮ ಊರಿನ ಕೋಣ ಎಲ್ಲಿದೆ ಎಂದು ಹುಡುಕಲು ಮುಂದಾಗುತ್ತಾರೆ. ಜ್ಯೋತಿಷ್ಯ, ಅಂಜನ ಹಾಕಿ ಕೇಳುತ್ತಾರೆ. ಅವರಿವರು ಹೇಳುವ ಸುಳಿವುಗಳಿಗೆ ಕಿವಿ ತೆರೆದುಕೊಳ್ಳುತ್ತಾರೆ. ಅಂತಿಮವಾಗಿ ತಮ್ಮಲ್ಲೇ ಒಂದಿಷ್ಟು ಜನರಿಗೆ ಈ ಕೋಣ ಹುಡುಕಲು ನೇಮಿಸಿ, ದಾರಿ ಖರ್ಚಿಗೆ ದುಡ್ಡು ಕೊಟ್ಟು ಕಳುಹಿಸುತ್ತಾರೆ. ಜೊತೆಗೆ ಪತ್ತೆ ಮಾಡಿದರೆ ಬಹುಮಾನ ನೀಡುವುದಾಗಿಯೂ ಘೋಷಿಸುತ್ತಾರೆ. ಹಾಗೊಹೀಗೂ ಮಾಡಿ ಕೊನೆಗೆ ತಮ್ಮೂರಿನ ಕೋಣವನ್ನು ಪತ್ತೆ ಮಾಡಿ ಬಿಡುತ್ತಾರೆ. ಆಗ ಕೋಣ ಇಷ್ಟು ದಿನ ತಂಗಿದ್ದ ಊರಿನವರು ಇದು ತಮ್ಮೂರಿನ ಕೋಣವೆಂದು ಹುಡುಕಿಕೊಂಡು ಹೋದವರೊಂದಿಗೆ ವಾದಕ್ಕೆ ನಿಲ್ಲುತ್ತಾರೆ. ಅವರ ಮಧ್ಯೆ ಮಾತಿನ ಚಕಮಕಿ ನಡೆಯುತ್ತದೆ. ಕೆಲವೊಮ್ಮೆ ಇಂತಹ ವಾಗ್ವಾದ ಅತಿರೇಕಕ್ಕೆ ಹೋಗಿ ಕುಸ್ತಿಗೂ ಬೀಳುತ್ತಾರೆ. ಎರಡೂ ಊರುಗಳ ಮಧ್ಯೆ ಪಂಚಾಯಿತಿಯೂ, ಆಣೆ ಪ್ರಮಾಣಗಳೂ ನಡೆಯುತ್ತವೆ.

ಸೊಕ್ಕಿದ ಕೋಣಕ್ಕೆ ತಿನ್ನಲು ಏನಾದರೂ ಇಟ್ಟು ಅದು ಒಂದೆಡೆ ನಿಲ್ಲುವಂತೆ ನೋಡಿಕೊಳ್ಳುತ್ತಾರೆ. ಅದು ತಿನ್ನುವುದರಲ್ಲಿ ಮಗ್ನವಾದ ತಕ್ಷಣ ಬಡಿಗೆ, ಹಗ್ಗಗಳನ್ನು ಹಿಡಿದವರು ಅದನ್ನು ಸುತ್ತುವರಿಯುತ್ತಾರೆ. ಅತ್ಯಂತ ಜಾಗರೂಕತೆಯಿಂದ ಕೊಂಬು, ಹಿಂದೆ ಮತ್ತು ಮುಂದಿನ ಎರಡು ಕಾಲುಗಳಿಗೆ ಏಕಕಾಲದಲ್ಲಿ ಹಗ್ಗ ಹಾಕಿ ನೆಲಕ್ಕೆ ಕೆಡವುತ್ತಾರೆ. ಅದು ಬಿಡಿಸಿಕೊಳ್ಳಲು ಕಸರತ್ತು ನಡೆಸುತ್ತದೆ. ಕೋಣ ಮತ್ತು ಹಗ್ಗ ಹಿಡಿದವರ ಮಧ್ಯೆ ಜಗ್ಗಾಟ ಜೋರಾಗಿ ನಡೆಯುತ್ತದೆ. ಕೊನೆಗೆ ಮೂರ್ನಾಲ್ಕು ಬಾರಿ ಕೋಣ ನೆಲಕ್ಕೆ ಬಿದ್ದರೆ ಅದು ಸೋತಂತೆ. ಅದನ್ನು ಸರಕು ಸಾಗಣೆ ವಾಹನಕ್ಕೆ ತುಂಬಿಕೊಂಡು ತಮ್ಮೂರಿಗೆ ಹೊರಡುತ್ತಾರೆ. ಅಲ್ಲಿಗೆ ಆಪರೇಷನ್ ಮಹಿಷಕ್ಕೆ ತೆರೆಬೀಳುತ್ತದೆ.







• ಎಂ.ಎಸ್.ಪೂಜಾರ

ಹಾರಿ ಹೊದ ಪಕ್ಷಿ!

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಗುಂಡ ಚಿತ್ರಕಲೆಯನ್ನು ಹವ್ಯಾಸವನ್ನಾಗಿ ಮಾಡಿಕೊಂಡಿದ್ದ. ತಾನು ಬಿಡಿಸಿದ ಚಿತ್ರಗಳೆಲ್ಲವನ್ನೂ ಫ್ರೇಮ್ ಹಾಕಿ ಗೋಡೆಗೆ ನೇತುಹಾಕುತ್ತಿದ್ದ. ಹೀಗೆ ಒಂದು ದಿನ ಪಕ್ಷಿಯೊಂದರ ಚಿತ್ರಬಿಡಿಸಿ, ಅದಕ್ಕೆ ಫ್ರೇಮ್ ಹಾಕಿಸಿ ಮರದ ಚಿತ್ರದ ಪಕ್ಕವೇ ನೇತುಹಾಕಿದ. ಹೀಗೆ ದಿನ ಉರುಳಿತು. ಒಂದು ದಿನ ಗುಂಡ ಬಂದು ನೋಡಿದಾಗ ಚಿತ್ರದೊಳಗೆ ಪಕ್ಷಿ ಇರಲಿಲ್ಲ. ಆ ಪಕ್ಷಿ ಹಾರಿಹೋಗಿ ಪಕ್ಕದಲ್ಲೇ ಇದ್ದ ಮರದಲ್ಲಿ ಗೂಡು ಕಟ್ಟಿತ್ತು. ಇದನ್ನು ಕಂಡು ಗುಂಡ ಅವಾಕ್ಕಾದ.



ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ನವ	+	ಹಸ	+	ಜೀ	=	
2	ಮನೆ	+	ತರು	+	ಚಿಂ	=	
3	ಮಗ	+	ಸಾರ	+	ಹಾ	=	
4	ಹಣ್ಣು	+	ಕದಿ	+	ಳ	=	
5	ರವಿ	+	ಮನ	+	ಬೇ	=	

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಜೋಡಿ ಪದಗಳಿಗೆ ಪದಪಟ್ಟಿಯಿಂದ ಎರಡಕ್ಷರ ಪದ ಆಯ್ದು ತುಂಬಿ ಜೋಡಿ ಪದಗಳನ್ನು ರಚಿಸಿ.

ಪದ ಪಟ್ಟಿ

ಚಾರ	ಕಾರ	ಕಾರ	ನಯ	ನವ
ತರ	ವಾರ	ವಾಹಿ	ಗೋಲು	ಯಾರ
ಹಾರ	ಹರ	ರಾಧ	ದಾರ	ವಾರ
ಧಾನ	ವಾರ	ಸ್ಥಾನ	ವಾದ	ಬಿಡಿ

1	ಸರ		ಸರ	
2	ಅಭಿ		ಅಭಿ	
3	ಕಾರ		ಕಾರ	
4	ಅಪ		ಅಪ	
5	ಗಡಿ		ಗಡಿ	
6	ಸಮಾ		ಸಮಾ	
7	ಧಾರಾ		ಧಾರಾ	
8	ಗುರು		ಗುರು	
9	ಹರಿ		ಹರಿ	
10	ಪರಿ		ಪರಿ	

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ..


ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಗಣಿತದಲ್ಲಿ ಗರ್ದಿಗಮ್ಮತ್ತು

ಸಂಖ್ಯಾ ಪಿರಮಿಡ್: ತಾರ್ಕಿಕ ಗಣಿತ

ಇಲ್ಲಿ ಕೊಟ್ಟಿರುವ ಸಂಖ್ಯಾ ಪಿರಮಿಡ್‌ನಲ್ಲಿ ಬಿಟ್ಟಿರುವ ಸಂಖ್ಯೆಗಳನ್ನು ನಿಮ್ಮ ತಾರ್ಕಿಕ ಶಕ್ತಿಯಿಂದ ಯೋಚಿಸಿ ತುಂಬಿ. ಕೆಳಗಿನ ಎರಡು ವೃತ್ತಗಳ ಸಂಖ್ಯೆ ಮೊತ್ತ ಅದರ ಮೇಲಿನ ವೃತ್ತದ ಸಂಖ್ಯೆಗೆ ಸಮವಾಗಿರುತ್ತದೆ. ಗಮನಿಸಿ.



ಹುಡುಕಾಟ

ಇಲ್ಲಿ ಕೊಟ್ಟಿರುವ ಪದಪುಂಜಗಳಿಂದ ಒಂದೊಂದು ಅಕ್ಷರ ಆಯ್ಕೆ ಮಾಡಿಕೊಂಡು ಕರ್ನಾಟಕದ ಒಂದು ಪ್ರಸಿದ್ಧ ಪ್ರವಾಸಿ ಸ್ಥಳದ ಹೆಸರನ್ನು ಹುಡುಕಿ.

1	ಜೀವನಜೋಕಾಲಿ
2	ಗಾರುಡಿಗನ ಕೈಚಳಕ
3	ವರ್ಷದ ಜಲಪ್ರಮಾಣ
4	ಭೀಮಬಲದ ಪ್ರದರ್ಶನ
5	ಸಕ್ಕರೆ ಪಾಯಸ
6	ಕಟ್ಟಡ ತಳಪಾಯ

ಸ್ಥಳ:

ಮೋಜಿನ ಇಂಗ್ಲಿಷ್

ಇಲ್ಲಿ ಕೊಟ್ಟಿರುವ CKET ಅಕ್ಷರಗಳ ಹಿಂದೆ ಕೆಲವು ಅಕ್ಷರ ತುಂಬಿ ಅರ್ಥಬದ್ಧ ಪದ ರಚನೆ ಮಾಡಿ..

1		CKET
2		CKET
3		CKET
4		CKET
5		CKET
6		CKET
7		CKET
8		CKET
9		CKET
10		CKET



ಸಣ್ಣಾಟ

1	9T9
2	99

ಇಂಗ್ಲಿಷ್‌ನಲ್ಲಿ ಓದಿನೋಡಿರಿ. ಎರಡೂ ಒಂದೇ ಉಚ್ಚಾರ!



ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: ಪದಸಂಕಲನ:
1.ಕಲಾರಸಿಕ 2.ಮಹಾಭಾರತ
3.ಕಲಾವಿಭಾಗ 4.ಸಹಿಮಾಡಿಸು
5.ನಕಲಿಸಹಿ


ಪದಶೋಧ: ದಿನಕರ ದೇಸಾಯಿ

ಮೋಜಿನ ಇಂಗ್ಲಿಷ್(ಕಾಂಗರೂ ಪದಗಳು):
1.MATHS 2.CANDY
3.FAMILY 4.MASK
5.DINNER 6.KITTLE
7.WISDOM 8.BITTER
9.SORRY 10.SOFT


ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು


ಪ್ರಜ್ವಲ್ ಕೆ.ಸಿ.
ದಾವಣಗೆರೆ


ಗೌತಮಿ ಆರ್. ಟಿ.
ಕೊಪ್ಪಳ


ಕಲಾವತಿ ಎಂ.ಕೆ.
ಕೆ.ಆರ್.ನಗರ


ಮನ್ಸಾರ್ ಬಾತಿ
ಬಾಗಲಕೋಟೆ



ಸೋಹಿತ್ ಕೆ.ಆರ್.
ತುಮಕೂರು


ಅಕ್ಷರ ಜಿ.ಆರ್.
ರಾಮನಗರ



ಕಲಬುರಗಿಯ ನಂದೂರ ಕೈಗಾರಿಕಾ ಪ್ರದೇಶದಲ್ಲಿ ಪ್ಲಾಸ್ಟಿಕ್ ಎಸೆಯುತ್ತಿರುವುದು
ಚಿತ್ರ: ತಾಜುದ್ದೀನ್ ಆಜಾದ್

ಎಂಎಸ್‌ಎಂಇಗಳಿಗೆ ಸರ್ಕಾರ ನೀಡಿದ ಸಹಾಯಧನ



*2024ರ ಡಿಸೆಂಬರ್ 31ರವರೆಗೆ

₹687.38 ಕೋಟಿ 2024–25ರಲ್ಲಿ ಎಂಎಸ್‌ಎಂಇ ವಲಯಕ್ಕೆ ರಾಜ್ಯ ಸರ್ಕಾರ ಮಾಡಿದ ಹಂಚಿಕೆ

₹244.73 ಕೋಟಿ 2024ರ ಡಿಸೆಂಬರ್‌ವರೆಗೆ ವಲಯಕ್ಕೆ ಮಾಡಿದ ವೆಚ್ಚ

ಆಧಾರ: ಕರ್ನಾಟಕ ಆರ್ಥಿಕ ಸಮೀಕ್ಷೆ 2024–25

ವರ್ಗೀಕರಣ ಹೇಗೆ?

ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳ ವರ್ಗೀಕರಣದ ವ್ಯಾಖ್ಯಾನವನ್ನು ಕೇಂದ್ರ ಸರ್ಕಾರ ಇದೇ ಏಪ್ರಿಲ್ 1ರಿಂದ ಅನ್ವಯವಾಗುವಂತೆ ಪರಿಷ್ಕರಿಸಿದೆ ಅದರ ಪ್ರಕಾರ,

- **ಅತಿ ಸಣ್ಣ ಉದ್ಯಮ:** ಘಟಕ ಮತ್ತು ಯಂತ್ರೋಪಕರಣಗಳಿಗಾಗಿ ಹೂಡಿಕೆ ಮಾಡುವ ಮೊತ್ತ ₹2.5 ಕೋಟಿಗಿಂತ ಕಡಿಮೆ ಇದ್ದು, ಉದ್ದಿಮೆಯ ವಾರ್ಷಿಕ ವಹಿವಾಟು ₹10 ಕೋಟಿ ಮೀರದ ಉದ್ಯಮ
- **ಸಣ್ಣ ಉದ್ಯಮ:** ಬಂಡವಾಳ ಹೂಡಿಕೆ ₹25 ಕೋಟಿ ಮತ್ತು ವಾರ್ಷಿಕ ವಹಿವಾಟು ₹100 ಕೋಟಿ ಮೀರದ ಉದ್ಯಮ
- **ಮಧ್ಯಮ ಗಾತ್ರದ ಉದ್ಯಮ:** ಹೂಡಿಕೆ ₹125 ಕೋಟಿ ಮತ್ತು ವಾರ್ಷಿಕ ವಹಿವಾಟು ₹500 ಕೋಟಿ ಮೀರದ ಉದ್ಯಮ



ಎಂಎಸ್‌ಎಂಇ: ವರ್ಷವಾರು ನೋಂದಣಿ ಮತ್ತು ಉದ್ಯೋಗ ಸೃಷ್ಟಿ (ಲಕ್ಷಗಳಲ್ಲಿ)

ವರ್ಷ	ನೋಂದಣಿ	ಉದ್ಯೋಗ
2020-21	1.53	19.64
2021-22	3.10	27.41
2022-23	4.24	36.16
2023-24	5.17	44.80
2024-25*	3.44	39.72


* 2024ರ ಡಿಸೆಂಬರ್ 31ರವರೆಗೆ

ಎಂಎಸ್‌ಎಂಇ ನಾನಾ ಸಮಸ್ಯೆ



ಡಾಂಬರ್ ಕಾಣದ ಬೆಂಗಳೂರಿನ ಪೀಣ್ಯ ಕೈಗಾರಿಕಾ ಪ್ರದೇಶದ ಫೈನ್ ಕಾಂಪ್ ರಸ್ತೆ

ಕನಿಷ್ಠ ವೇತನ ಇನ್ನಷ್ಟು ಹೆಚ್ಚಿಸಬೇಕು



ಭಾರತೀಯ ಕಾರ್ಮಿಕ ಸಂಘಟನೆಯ (ಐಎಲ್‌ಒ) ನಿಯಮ ಮತ್ತು ಸುಪ್ರೀಂ ಕೋರ್ಟ್ ವ್ಯಕ್ತಪಡಿಸಿರುವ ಅಭಿಪ್ರಾಯದ ನಿಯಮಗಳ ಪ್ರಕಾರ, ಕಾರ್ಮಿಕರಿಗೆ ವೈಜ್ಞಾನಿಕವಾದ ಕನಿಷ್ಠ ವೇತನ ನೀಡಬೇಕು. ಪ್ರತಿ ಐದು ವರ್ಷಗಳಿಗೊಮ್ಮೆ ವೇತನವನ್ನು ಪರಿಷ್ಕರಿಸಬೇಕು. ಈ ಹಿಂದೆ 2017ರಲ್ಲಿ ಪರಿಷ್ಕರಣೆ ಆಗಿತ್ತು. ನಿಯಮದ ಪ್ರಕಾರ, 2022ರಲ್ಲಿ ವೇತನ ಪರಿಷ್ಕರಿಸಬೇಕಾಗಿತ್ತು. ಆದರೆ, ಆಗಿರಲಿಲ್ಲ. 2021ರ ಡಿಸೆಂಬರ್‌ನಲ್ಲಿದ್ದ ಗ್ರಾಹಕರ ಬೆಲೆ ಸೂಚ್ಯಂಕದ ಆಧಾರದಲ್ಲಿ ಕನಿಷ್ಠ ವೇತನ ನಿಗದಿ ಮಾಡಬೇಕು ಎಂಬುದು ನಮ್ಮ ಬೇಡಿಕೆ. ಆದರೆ, ಸರ್ಕಾರ ಈಗ ಹೊರಡಿಸಿರುವ ಕರಡು ಅಧಿಸೂಚನೆಯಲ್ಲಿ 2024ರ ಬೆಲೆ ಗ್ರಾಹಕರ ಬೆಲೆ ಸೂಚ್ಯಂಕದ ಆಧಾರದಲ್ಲಿ ಕನಿಷ್ಠ ವೇತನ ನಿಗದಿ ಪಡಿಸಲಾಗಿದೆ. ಅದು ನಮ್ಮ ಬೇಡಿಕೆಗೆ ಸಮನಾಗಿ ಇಲ್ಲ.

ಮೀನಾಕ್ಷಿ ಸುಂದರಂ, ಎಐಸಿಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ

ಕನಿಷ್ಠ ವೇತನ ನಿಗದಿಗೆ ವಿರೋಧ

ರಾಜ್ಯದಲ್ಲಿ ವಿವಿಧ ಉದ್ದಿಮೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಕನಿಷ್ಠ ವೇತನ ದರವನ್ನು ನಿಗದಿ ಮಾಡಿ ರಾಜ್ಯ ಸರ್ಕಾರ ಇತ್ತೀಚೆಗೆ ಕಳೆದ ತಿಂಗಳು ಕರಡು ಅಧಿಸೂಚನೆ ಹೊರಡಿಸಿದ್ದು, ಉದ್ದಿಮೆದಾರರು ಇದನ್ನು ವಿರೋಧಿಸಿದ್ದಾರೆ.

ಸುಪ್ರೀಂಕೋರ್ಟ್ ತೀರ್ಪಿನ ಅನ್ವಯ ಕನಿಷ್ಠ ವೇತನ ಪರಿಷ್ಕರಿಸಲಾಗಿದೆ ಎಂದು ಕಾರ್ಮಿಕ ಇಲಾಖೆ ತಿಳಿಸಿದೆ. ವಲಯವಾರು ಮತ್ತು ಕೌಶಲದ ಆಧಾರದಲ್ಲಿ ಕನಿಷ್ಠ ₹21 ಸಾವಿರದಿಂದ ಗರಿಷ್ಠ ₹31 ಸಾವಿರದವರೆಗೂ ವೇತನ ನಿಗದಿ ಪಡಿಸಲಾಗಿದೆ.

‘ಸಂಕಷ್ಟದಲ್ಲಿರುವ ಎಂಎಸ್‌ಎಂಇಗಳಿಗೆ ಈಗಿನ ದುಬಾರಿ ನಿರ್ವಹಣಾ ವೆಚ್ಚದ ನಡುವೆ ಇಷ್ಟೊಂದು ವೇತನ ನೀಡಲು ಕಷ್ಟ. ಇದರಿಂದ ಇನ್ನಷ್ಟು ಆರ್ಥಿಕ ಹೊರೆ ಬೀಳಲಿದೆ. ಇದಕ್ಕೆ ಪರ್ಯಾಯವಾಗಿ ಸರ್ಕಾರ ಎಂಎಸ್‌ಎಂಇಗಳಿಗೆ ಆರ್ಥಿಕವಾಗಿ ಅನುಕೂಲ ಕಲ್ಪಿಸುವಂತಹ ಕ್ರಮ ಕೈಗೊಳ್ಳಬೇಕು’ ಎಂದು ಉದ್ಯಮಗಳ ಸಂಘಟನೆಗಳು ಒತ್ತಾಯಿಸಿವೆ.

ಒಂದನೇ ಪುಟದಿಂದ...

2024–25ನೇ ಸಾಲಿನ ಬಜೆಟ್‌ನಲ್ಲಿ ಕೇಂದ್ರ ಸರ್ಕಾರವು ಸಾಲ ಖಾತರಿ ಯೋಜನೆ ಘೋಷಿಸಿದ್ದು, ಅದರ ಅಡಿಯಲ್ಲಿ ಎಂಎಸ್‌ಎಂಇ ಉದ್ಯಮಿಗಳಿಗೆ ಯಂತ್ರೋಪಕರಣಗಳಿಗಾಗಿ ಅಡಮಾನ ಇಲ್ಲದೇ ₹100 ಕೋಟಿಯಷ್ಟು ಸಾಲ ಒದಗಿಸಲು ಖಾತರಿ ನೀಡಲಾಗುತ್ತದೆ. ಮುದ್ರಾ ಸಾಲ ವಿಸ್ತರಣೆ ಯೋಜನೆಯು ಒಮ್ಮೆ ಮುದ್ರಾ ಸಾಲ (₹10 ಲಕ್ಷ) ಪಡೆದು ಮರುಪಾವತಿ ಮಾಡಿದ ಉದ್ಯಮಿಗಳಿಗೆ ಈ ಯೋಜನೆ ಮತ್ತೆ ದುಪ್ಪಟ್ಟು ಮೊತ್ತದ (₹20 ಲಕ್ಷ) ಸಾಲ ನೀಡಲು ಅವಕಾಶ ಕಲ್ಪಿಸುತ್ತದೆ. ಈ ವಲಯದಲ್ಲಿ ಹೂಡಿಕೆ ಹೆಚ್ಚು ಮಾಡುವ ಉದ್ದೇಶದಿಂದ ಶೇ 4ರಷ್ಟು ಬಡ್ಡಿಯಲ್ಲಿ ಸಹಾಯಧನವನ್ನೂ ಕೇಂದ್ರ ನೀಡುತ್ತದೆ. ರಾಜ್ಯ ಸರ್ಕಾರ ಕೂಡ ಈ ವಲಯಕ್ಕೆ ಅನುದಾನ ನೀಡುತ್ತಿದೆ. ಹಾಗಿದ್ದರೂ ಸರ್ಕಾರದ, ಬ್ಯಾಂಕುಗಳ ಕಠಿಣ ನಿಯಮಗಳು, ಅಧಿಕಾರಿಗಳ ಉದಾಸೀನ ಧೋರಣೆಯಿಂದಾಗಿ ಯೋಜನೆಗಳು ಪರಿಣಾಮಕಾರಿಯಾಗಿ ಅನುಷ್ಠಾನವಾಗುತ್ತಿಲ್ಲ ಎಂಬುದು ಉದ್ಯಮಿಗಳ ಅನಿಸಿಕೆ.

ಹಣಕಾಸಿನ ನಿರ್ಬಂಧ, ಸಿಗದ ಸಾಲ: ‘ರಾಷ್ಟ್ರ ಮಟ್ಟದಲ್ಲಿ ಎಂಎಸ್‌ಎಂಇಗಳಿಗೆ ಹಣಕಾಸು ಸಂಸ್ಥೆಗಳು ನೀಡುತ್ತಿರುವ ಸಾಲದ ಪ್ರಮಾಣ ಹೆಚ್ಚಾಗಿದೆ. 2023ರ ಅಕ್ಟೋಬರ್ ಹೊತ್ತಿಗೆ ಇದು ₹23.11 ಲಕ್ಷ ಕೋಟಿ ಇದ್ದಿದ್ದರೆ, ಕಳೆದ ವರ್ಷದ ಅಕ್ಟೋಬರ್ ಅಂತ್ಯಕ್ಕೆ ₹26.34 ಲಕ್ಷ ಕೋಟಿಗೆ ಏರಿಕೆಯಾಗಿತ್ತು. ಆದರೆ ಕರ್ನಾಟಕದಲ್ಲಿ ಎಂಎಸ್‌ಎಂಇಗಳಿಗೆ ಸಹಕಾರಿ ಬ್ಯಾಂಕುಗಳು ಹೆಚ್ಚು ಸಾಲ ನೀಡುತ್ತವೆ. ಒಟ್ಟಾರೆ ಸಾಲದಲ್ಲಿ ಈ ಬ್ಯಾಂಕುಗಳ ಪಾಲು ಶೇ 5ರಷ್ಟು ಮಾತ್ರ. ಈ ಅಂಕಿ ಅಂಶಗಳ ಹೊರತಾಗಿಯೂ ಉದ್ಯಮ ಸ್ಥಾಪನೆಗೆ ಬೇಕಾದಷ್ಟು ಸಾಲ ಪಡೆಯಲು ಉದ್ಯಮಿಗಳು ಕಷ್ಟಪಡಬೇಕು. ಸಾಲ ಮಂಜೂರಾದರೂ ಅದು ಸಕಾಲದಲ್ಲಿ ಸಿಗುವುದಿಲ್ಲ’ ಎಂದು ಹೇಳುತ್ತಾರೆ ಎಂ.ಜಿ.ಬಾಲಕೃಷ್ಣ.

ಸಣ್ಣ ಕೈಗಾರಿಕೆಗಳಿಗೆ ಸಾಲ ನೀಡುವ ಬ್ಯಾಂಕ್ ಶಾಖೆಗಳ ಕೊರತೆ ಇದೆ. ಸಾಲಕ್ಕೆ ಹೆಚ್ಚಿನ ಬಡ್ಡಿದರ ವಿಧಿಸಲಾಗುತ್ತಿದೆ. ಸಾಲದ ಅರ್ಜಿ ಪ್ರಕ್ರಿಯೆಗಳು ದೀರ್ಘ ಸಮಯ ತೆಗೆದುಕೊಳ್ಳುತ್ತಿರುವುದು ಸಮಸ್ಯೆಯಾಗಿ ಕಾಡುತ್ತಿದೆ. ಉದ್ದಿಮೆದಾರರು ಮೈಕ್ರೊ ಫೈನಾನ್ಸ್ ಕಂಪನಿಗಳಿಂದಲೂ ಸಾಲ ಪಡೆಯುತ್ತಾರೆ. ಆದರೆ, ಮೈಕ್ರೊಫೈನಾನ್ಸ್ ಮೇಲಿನ ಸರ್ಕಾರದ ಕಠಿಣ ನಿಯಮಗಳು ಸಾಲ ಪಡೆಯುವುದಕ್ಕೆ ಅಡ್ಡಿಯಾಗಿದೆ. ಇವೆಲ್ಲವೂ ಬಂಡವಾಳ ಹರಿಯುವಿಕೆಯನ್ನು ತಡೆಯುತ್ತವೆ ಎಂದು ಹೇಳುತ್ತಾರೆ ಉದ್ಯಮಿಗಳು.

